# ಮಕ್ಕಳ ಹತ್ತು ಕಥೆಗಳು

## ೧. ಭಾಗ್ಯದ ಗಿಣಿ

ಒಂದು ದೇಶದಲ್ಲಿ ರಾಜನಿಗೆ ಒಬ್ಬ ರಾಜಕುಮಾರನಿದ್ದನು. ರಾಜಕುಮಾರ ವಯಸ್ಸಿಗೆ ಬರಲು ವಿವಾಹ ಮಾಡಲು ತಯಾರಿ ನಡೆಸಿದರು. ದೇಶವಿದೇಶಗಳಿಂದ ರಾಜಕುಮಾರಿಯರ ಚಿತ್ರಪಟಗಳನ್ನು ತರಿಸಿದರು. ಆದರೆ ರಾಜಕುಮಾರ ಒಂದೊಂದು ಚಿತ್ರಪಟದಲ್ಲೂ ಕೊಂಕು ತೆಗೆದು ನಿರಾಕರಿಸಿದನು.

ರಾಜಕುಮಾರನ ಮನಸ್ಸಿನಲ್ಲಿ ಬೇರೆಯೇ ಆದ ಆಸೆ ಇದ್ದವು. ಅವನಿಗೆ ಏಳುಮಲ್ಲಿಗೆ ತೂಕದ ರಾಜಕುಮಾರಿಯನ್ನು ಮದುವೆಯಾಗಬೇಕೆಂಬ ಆಸೆ. ಆದರೆ ಅವನಿಗೆ ಅವಳು ಎಲ್ಲಿರುವಳು, ಏನು ಎಂದು ಗೊತ್ತಿರಲಿ. ಇದೇ ಯೋಚನೆಯಲ್ಲಿ ಅರಮನೆಯ ಉದ್ಯಾನವನದಲ್ಲಿ ತಿರುಗಾಡುತ್ತಿರಲು ಒಂದು ಗಿಣಿ ಬಂದು ಅವನ ಹೆಗಲ ಮೇಲೆ ಪ್ರೀತಿಯಿಂದ ಕುಳಿತುಕೊಂಡಿತು. ಮೊದಲೇ ಬೇಸರದಲ್ಲಿದ್ದ ರಾಜಕುಮಾರನಿಗೆ ಹೆಗಲ ಮೇಲೆ ಪ್ರೀತಿಯಿಂದ ಬಂದು ಕೂತ ಗಿಣಿಯನ್ನು ಕಂಡು ಅಂತಃಕರಣ ಉಕ್ಕಿ ಅಳು ಬಂದುಬಿಟ್ಟಿತು. ಕೈಯಿಂದ ಗಿಣಿಯನ್ನು ತೆಗೆದುಕೊಂಡು ಪ್ರೀತಿಯಿಂದ ಸವರುತ್ತಾ ಕಣ್ಣಲ್ಲಿ ನೀರು ಸುರಿಸುತ್ತ "ಗಿಣಿಯೇ ಗಿಣಿಯೇ, ನನ್ನ ಮುದ್ದಿನ ಗಿಣಿಯೇ, ನನಗೆ ಏಳು ಮಲ್ಲಿಗೆ ತೂಕದ ರಾಜಕುಮಾರಿ ಸಿಗುವಳೇ" ಎಂದು ಕೇಳಲುಗಿಣಿಯು ಅತಿಮುದ್ದಿನಿಂದ "ಸಿಕ್ಕುತ್ತಾಳೆ" ಎಂದಿತು. ಗಿಣಿ ಮಾತನಾಡಿದ್ದನ್ನು ನೋಡಿ ಆಶ್ಚರ್ಯದಿಂದ "ಏನಂದೆ?" ಎಂದು, "ಹೌದೆ! ಹಾಗಾದರೆ ಎಲ್ಲಿ? ಯಾವಾಗ?" ಎಂದು ಕೇಳಲು ಗಿಣಿಯು "ಈ ರಾತ್ರಿ ತನ್ನ ಜೊತೆಯಲ್ಲಿ ಬಂದರೆ ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿತು.



ರಾಜಕುಮಾರ ಅರಮನೆಗೆ ಬಂದು ಸ್ನಾನ ಮಾಡಿ ಭೋಜನ ಮುಗಿಸಿ ಉತ್ಸಾಹದಿಂದ ಕುದುರೆಯ ಜೀನನ್ನು ಎಳೆಯಲು ರಾಜಕುಮಾರನ ಹೆಗಲ ಮೇಲೆ ಗಿಣಿ ಅತಿಮುದ್ದಿನಿಂದ ಬಂದು ಕುಳಿತುಕೊಂಡಿತು. ರಾಜರಾಣಿಗೆ ರಾಜಕುಮಾರ ಸಂತೋಷದಿಂದ ಇರುವುದನ್ನು ಕಂಡು ಅತೀವ ಸಂತೋಷ ಪಟ್ಟರು.

ಹೀಗೆ ಕುದುರೆ ಮೇಲೇರಿದ ರಾಜಕುಮಾರ ಏಳು ಹಗಲು - ಏಳು ರಾತ್ರಿ ಎಡಬಿಡದೆ ಗಿಣಿ ಹೇಳಿದ ದಾರಿಯಲ್ಲಿ ಪಯಣಿಸುತ್ತಿದ್ದನು. ಏಳನೇ ದಿನ ಒಂದು ಗೊಂಡಾರಣ್ಯಕ್ಕೆ ಬಂದು ತಲುಪಿದರು. ಗಿಣಿ ರಾಜಕುಮಾರನಿಗೆ ಸ್ನಾನ ಮಾಡಿ ವಿಶ್ರಮಿಸಲು ಹೇಳಿ ತಾನು ಏನಾದರೂ ಹಣ್ಣು ತರುವುದಾಗಿ ಹಾರಿ ಹೋಯಿತು.

ತುಂಬ ದಣಿದ ರಾಜಕುಮಾರ ಹರಿಯುತ್ತಿದ್ದ ನೀರಿನಲ್ಲಿಳಿದು ಸ್ನಾನ ಮಾಡಿ ಹಾಗೇ ಒಂದು ಮರದ ಕೆಳಗೆ ವಿಶ್ರಮಿಸಲು, ಗಿಣಿ ತನ್ನ ಕೊಕ್ಕಿನಿಂದ ಹಣ್ಣುಗಳನ್ನು ತಂದು, "ಇದನ್ನು ತಿನ್ನು. ಇದನ್ನು ತಿಂದರೆ ನಿನಗೆ ಏಳು ಮಲ್ಲಿಗೆ ತೂಕದ ರಾಜಕುಮಾರಿ ಸಿಗುವತನಕ

ಹಸಿವಾಗುವುದಿಲ್ಲ" ಎಂದು ಹೇಳಿತು. ರಾಜಕುಮಾರ ಬಹುಪ್ರೀತಿಯಿಂದ ಗಿಣಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಗಿಣಿ ತಂದ ಹಣ್ಣನ್ನು ತಿಂದನು.

"ನನ್ನ ಮುದ್ದಿನ ಗಿಣಿಯೇ, ಮುಂದೇನು?" ಎಂದು ಕೇಳಲು, "ಅಲ್ಲಿ ನೋಡು, ಏಳು ಬೆಟ್ಟಗಳ ಸಾಲು. ಅಲ್ಲಿ ಭಯಂಕರವಾದ ಕಾಡುಮೃಗಗಳು, ದಟ್ಟ ಗೊಂಡಾರಣ್ಯ, ಅಲ್ಲಿ ಹೋದ ಮನುಷ್ಯರ್ಯಾರೂ ಹಿಂದೆ ಬರಲಾರರು. ಭಯಂಕರವಾದ ರಾಕ್ಷಸರು ಅಲ್ಲಿ ಇದ್ದಾರೆ. ಈ ಏಳು ಬೆಟ್ಟಗಳನ್ನು ಕಾಯುವ ಒಂಟಿ ಕಾಲಿನ ರಾಕ್ಷಸನಿದ್ದಾನೆ. ಅವನ ಕಾಲಿಗೆ ನೂರಾನೆ ಬಲವಿದೆ. ಯಾವ ಮನುಷ್ಯರು ಹೋದರೂ ಮೊದಲು ಅವನಿಗೆ ಆಹಾರವಾಗುತ್ತಾನೆ. ನೀನು ಧೈರ್ಯವಾಗಿ ಅವನ ಬಳಿಗೆ ಹೋಗು. ಅವನು ನಿನ್ನನ್ನು ತಿನ್ನಲಿಕ್ಕೆ ಬರುತ್ತಾನೆ. ನೀನು ಅವನ ಜೊತೆ ಯುದ್ಧ ಮಾಡಬೇಡ. "ನನ್ನನ್ನು ತಿನ್ನು, ನನ್ನನ್ನು ತಿನ್ನು" ಎಂದು ಹೇಳು. ಆಗ ಅವನು "ಹಾಳಾಗಿ ಹೋಗು" ಎನ್ನುತ್ತಾನೆ. ನೀ "ಹೋಗುವುದಿಲ್ಲ" ಎಂದು ಅಲ್ಲಿಯೇ ಕುಳಿತು ಬಿಡು. ಆಗ ಆ ರಾಕ್ಷಸ ತನ್ನ ಒಂಟಿಕಾಲಿನಿಂದ ಒದೆಯುತ್ತಾನೆ. ನೀನು ಏಳು ಬೆಟ್ಟದ ಆಚೆ ಇರುವ ಹುಲ್ಲುಗಾವಲಿನಲ್ಲಿ ಬಿದ್ದಿರುತ್ತೀಯಾ. ನಾನು ಅಲ್ಲಿ ನಿನಗಾಗಿ ಕಾಯುತ್ತಿರುತ್ತೇನೆ. ಅವನು ನಿನ್ನ ತಿನ್ನಲಿಕ್ಕೆ ಬಂದಾಗ 'ತಿನ್ನಬೇಡ' ಎನ್ನಬೇಡ ಹುಷಾರು. " ಎಂದು ಹೇಳಿ ಪುರ್ರೆಂದು ಹಾರಿ ಹೋಗುತ್ತದೆ.

ಬೆಟ್ಟಗಳ ತಪ್ಪಲಿನ ಗುಹೆಯ ಮುಂದೆ ಬಂಡೆಯಂತೆ ಕುಳಿತ ರಾಕ್ಷಸನನ್ನು ನೋಡಿ ರಾಜಕುಮಾರನಿಗೆ ಭಯವಾದರೂ ಧೈರ್ಯ ತಂದುಕೊಂಡು ರಾಕ್ಷಸನ ಮುಂದೆ ಹೋದನು. ಆಗ ತಾನೆ ಯಾವುದೋ ಮಾಂಸವನ್ನು ತಿಂದು ತೇಗಿನ ರಾಕ್ಷಸ ಮರದ ಕೊಂಬೆಯಿಂದ ಹಲ್ಲಿನ ಸಂದಿಯಲ್ಲಿ ಸಿಕ್ಕಿಕೊಂಡದ್ದನ್ನು ತೆಗೆಯುತ್ತಿದ್ದನು. ರಾಜಕುಮಾರನನ್ನು ನೋಡಿ ಕೊಂಬೆಯ ಕೈಸಂದಿಯಲ್ಲಿ ಜಾರಿಸಿ, "ಎಂಥ ಒಳ್ಳೆಯ ಮಾಂಸ, ರಸವತ್ತಾದ ಮಾಂಸ, ನಿನ್ನನ್ನು ನಾನು ತಿನ್ನಲೇಬೇಕು ಬಾ, ಬಾ" ಎಂದ. ತನ್ನ ಒಂಟಿಕಾಲಿನಿಂದ ಇವನತ್ತ ಬರಲು, ರಾಜಕುಮಾರ, "ಓ ಒಂಟಿಕಾಲಿನ ರಾಕ್ಷಸ, ನಾನೇ ಬರುತ್ತೇನೆ. ನನ್ನ ತಿನ್ನು, ತಿಂದು ಸಂತೋಷದಿಂದಿರಲು" ಎನ್ನಲು, "ಛೇ! ನನ್ನ ಕಂಡರೇನೆ ಹೆದರಿ, ಪ್ರಾಣ ವಿಲವಿಲನೆ ಒದ್ದಾಡುತ್ತಿದ್ದ ಮಂದಿ, ಇವನ್ಯಾವನು ತಿನ್ನು, ತಿನ್ನು ಎನ್ನುತ್ತಿರುವನಲ್ಲ. ಮನುಷ್ಯರಾಗಲಿ, ಪ್ರಾಣಿಗಳಾಗಲಿ ಒದ್ದಾಡುತ್ತಾ, ಜೀವ ಭಯದಿಂದ ತಪ್ಪಿಸಿ ಕೊಳ್ಳುವಾಗ ತಿನ್ನುವ ಮಜವೇ ಮಜ. ಈಗ ತಾನೆ ತಿಂದಿದ್ದೇನೆ. ಹಾಳಾಗಿ ಹೋಗಲಿ" ಎಂದು ಮತ್ತೆ ಕುಳಿತುಕೊಳ್ಳಲು ಹೋಗುತ್ತಾನೆ. ರಾಜಕುಮಾರ, "ಓ ಒಂಟಿ ಕಾಲಿನ ರಾಕ್ಷಸ, ನನ್ನ ತಿನ್ನುವುದಿಲ್ಲವೇ? ತಿನ್ನು ಬಾ, ತಿನ್ನು ಬಾ" ಎನ್ನಲು, 'ಇವನ್ಯಾವನು ತಲೆಕೆಟ್ಟವನು?' "ಏಯ್ ಮನುಷ್ಯ ಪ್ರಾಣಿ, ಸುಮ್ಮನೆ ನಿನ್ನ ದಾರಿ ಹಿಡಿದು ಹೋಗು. ಇಲ್ಲದಿದ್ದರೆ. . . "

"ಇಲ್ಲದಿದ್ದರೆ. . . ಇಲ್ಲದಿದ್ದರೆ ಏನು ಮಾಡುತ್ತೀಯಾ? ಮಾಡು, ನಾನಿಲ್ಲೇ ಕೂರುತ್ತೇನೆ. "

"ಬೇಡ, ನನಗೆ ಕೋಪ ಬಂದರೆ ಒದ್ದು ಏಳು ಬೆಟ್ಟಗಳಾಚೆ ಬಿಸಾಡುತ್ತೇನೆ. "

"ನಿನ್ನ ಒಂಟಿ ಕಾಲಿಗೆ ಅಷ್ಟು ಬಲವೇ?" ಎಂದು ವ್ಯಂಗ್ಯದಿಂದ ರಾಜಕುಮಾರ ನಗಲು ಕೋಪದಿಂದ ಬಂದ ರಾಕ್ಷಸ ರಾಜಕುಮಾರನನ್ನು ಒದ್ದನು. ರಾಜಕುಮಾರ ಏಳು ಬೆಟ್ಟಗಳಾಚೆ ಇರುವ ಹುಲ್ಲುಗಾವಲಿನಲ್ಲಿ ಬಿದ್ದನು.

ಅಲ್ಲಿ ರಾಜಕುಮಾರನ ಭಾಗ್ಯದ ಗಿಣಿ ಇವನ ದಾರಿ ಕಾಯುತ್ತಿತ್ತು. ರಾಜಕುಮಾರ ಬಿದ್ದ ತಕ್ಷಣ ಗಿಣಿ ಅವನ ಹೆಗಲ ಮೇಲೇರಿ ಕುಳಿತುಕೊಂಡಿತು. ರಾಜುಕುಮಾರ ಪ್ರೀತಿಯಿಂದ ಅದರ ಮೈದಡವುತ್ತಾ, "ಭಾಗ್ಯದ ಗಿಣಿಯೇ, ಮುಂದೇನು?" ಎನ್ನಲು, " ಈಗ ತಾನೆ ಬಂದಿರುವೆ, ವಿಶ್ರಾಂತಿ ತೆಗೆದುಕೋ. ಮುಂದಿನದನ್ನು ಹೇಳುತ್ತೇನೆ" ಎನ್ನಲು ರಾಜಕುಮಾರನು ಹುಲ್ಲುಗಾವಲಿನ ಮೆತ್ತೆಯಲ್ಲಿ ವಿಶ್ರಾಂತಿ ತೆಗೆದುಕೊಂಡನು.

ಮಾರನೇ ದಿನ ಬೆಳಗಾಗಲು ಗಿಣಿಯು ಬಂದು ರಾಜಕುಮಾರನನ್ನು ಎಚ್ಚರಿಸಿತು. ರಾಜಕುಮಾರನ ಸ್ನಾನ ಮಾಡಿ ಸಿದ್ಧನಾಗಲು ಭಾಗ್ಯದ ಗಿಣಿ ರಾಜಕುಮಾರನಿಗೆ "ಅಲ್ಲಿ ನೋಡು, ಕತ್ತಲೆಯಂತ ಗುಡ್ಡ. ಅದು ಗುಡ್ಡವಲ್ಲ, ಒಂಟಿ ಕಾಲಿನ ರಾಕ್ಷಸನ ಹೆಂಡತಿ. ಇವಳಿಗೆ ಮೂರು ಕಾಲು. ಎದ್ದು ನಡೆದಾಡಲು ಆಗುವುದಿಲ್ಲ. ಎಲ್ಲ ತನ್ನ ನಾಲಿಗೆಯಿಂದ ಸೆಳೆದುಕೊಳ್ಳುತ್ತಾಳೆ. ಕಣ್ಣಿನಿಂದ ಸುಟ್ಟುಬಿಡುತ್ತಾಳೆ. ಆದರೆ

ರಾಕ್ಷಸಿಯಾದರೂ ಅವಳ ಮೃದು ಮಕ್ಕಳು ಬಿಟ್ಟುಹೋದ ಮೇಲೆ 'ಅಮ್ಮ' ಎಂದು ಕರೆದವರನ್ನು ಅವಳು ಏನೂ ಮಾಡಳು. ಆದರೆ ಅವಳ ಹಿಂದೆ ಏಳು ಪಾತಾಳಕ್ಕೆದಾರಿ ತೋರುವ ಬಾವಿಗಳಿದ್ದು ಒಂದಕ್ಕೊಂದು ಅಂಟಿದಂತೆ ಇದೆ. ಬೇರೆ ಕಡೆಯಿಂದ ನೀನು ಬರುವಂತಿಲ್ಲ. ಅದನ್ನು ದಾಟಿಯೇ ಬರಬೇಕು. ಅವಳ ಬಳಿ ಪ್ರೀತಿಯಿಂದ ಹೋಗಿ ಅಸಹ್ಯ, ಭಯ ಬಿಟ್ಟು ಅವಳ ನೆತ್ತಿಯ ಮೇಲೆ ಏರು. ಅವಳ ನೆತ್ತಿ ಜುಟ್ಟನ್ನು ನಿನ್ನ ಧೈರ್ಯವನ್ನೆಲ್ಲ ಬಿಟ್ಟು ಎಳೆ. ಎಷ್ಟೋ ವರ್ಷಗಳಿಂದ ಬಾವಿಯೊಳಗೆ ಬಿದ್ದಿರುವ ಅವಳ ಕೂದಲು ಮೇಲೆ ಬರುತ್ತದೆ. ಆಗ ನಿನ್ನ ಕೈಯಲ್ಲಿದ್ದ ಕೂದಲನ್ನು ಅವಳ ಕೋರೆ ಹಲ್ಲಿಗೆ ಕಟ್ಟು, ನೀನು ಅವಳ ಕೂದಲ ಮೇಲೆ ಏಳು ಬಾವಿಗಳು ದಾಟಿ ನಡೆದು ಬಾ. ಜೊತೆಗೆ ಅವಳ ನಾಲಿಗೆಯನ್ನು ಸೋಂಕಿಸಿಕೊಳ್ಳಬೇಡ. ನಾನು ನಿನಗಾಗಿ ಏಳು ಬಾವಿಯ ಆಚೆ ಬಯಲಲ್ಲಿ ಕಾಯುತ್ತಿರುತ್ತೇನೆ" ಎಂದು ಭಾಗ್ಯದ ಗಿಣಿ ಪುರ್ರೆಂದು ಹಾರಿ ಹೋಯಿತು.

ಎಷ್ಟು ದಿನಗಳಿಂದ ಏಳದೆ ಕುಳಿತಲ್ಲೇ ಕುಳಿತಿದ್ದರಿಂದ ಗಬ್ಬೆಂಬ ವಾಸನೆ ಮೂಗಿಗೆ ಬಡಿಯುತ್ತಿತ್ತು. ನಾಲಿಗೆ ಸದಾ ಚಾಚಿ ಆಹಾರಕ್ಕೆ ಹುಡುಕಾಡುತ್ತಿತ್ತು. ಕಣ್ಣಿನಿಂದ ಬೆಂಕಿಯುಂಡೆಗಳೇ ಉದುರುತ್ತಿದ್ದವು. ಆದರೂ ರಾಜುಕುಮಾರ ಏಳು ಮಲ್ಲಿಗೆ ತೂಕದ ರಾಜಕುಮಾರಿಯ ಆಸೆಯಿಂದ, "ಅಮ್ಮ, ಅಮ್ಮ" ಎಂದು ಕೂಗುತ್ತ ಅವಳ ಹತ್ತಿರ ಹೋಗಲು, ಬೆಂಕಿಯುಗುಳುತ್ತಿದ್ದ ಕಣ್ಗಳು ಮಮತೆಯಿಂದ ಮಾರ್ಪಟ್ಟವು. ಆದರೆ ನಾಲಿಗೆ ಮಾತ್ರ ಸುತ್ತುತ್ತಲೇ ಇತ್ತು. "ಯಾರಪ್ಪ ನೀನು? ಯಾರು ಬೇಕು? ನನ್ನನ್ನು ಯಾಕೆ ಅಮ್ಮ ಎಂದು ಕರೆದೆ? ನನ್ನ ಮಗ ನನ್ನಿಂದ ದೂರಾಗಿ ಬಹಳ ವರ್ಷಗಳಾಯಿತು" ಎನ್ನಲು, "ನಾನಮ್ಮ, ನಿನ್ನ ಹಾಗೆ ಅಮ್ಮನನ್ನು ಹುಡುಕುತ್ತಿದ್ದೇನೆ" ಎಂದು ಹತ್ತಿರ ಹೋಗಿ ಅವಳ ತೊಡೆ ಹತ್ತಿ ತಲೆಯ ಮೇಲೇರಿದನು. "ಓ, ಅಮ್ಮನನ್ನು ಹುಡುಕುತ್ತಿದ್ದೀಯಾ?" ಎಂದು ರಾಕ್ಷಸಿ ನಾಲಿಗೆ ವಿಚಿತ್ರವಾಗಿ ಆಡಿಸುತ್ತ ಸುಮ್ಮನಾದಳು. ತಲೆ ಏರಿದ ರಾಜಕುಮಾರ ಬಾವಿಯಲ್ಲಿ ಅವಳ ಜಡೆಗಟ್ಟಿದ ಕೂದಲು ನಿಮಿರಿ ನಿಂತು ಏಳು ಬಾವಿಗಳಿಗೆ ಹೊದಿಕೆಯಾಯಿತು. ಆ ರಾಕ್ಷಸಿಗಾದರೋ ರಾಜಕುಮಾರ ಮಾಡುವುದೆಲ್ಲ ಹುಡುಗಾಟವೆನಿಸಿ ತನ್ನಷ್ಟಕ್ಕೆ ತಾನೇ ನಗುತ್ತಿದ್ದಳು. ರಾಜಕುಮಾರ ಭಾಗ್ಯದ ಗಿಣಿ ಹೇಳಿದಂತೆ ತಾನು ಹಿಡಿದ ಜುಟ್ಟನ್ನು ಅವಳ ನಾಲಿಗೆಗೆ ಸೋಕಿಸದೆ ರಾಕ್ಷಸಿಯ ಕೋರೆ ಹಲ್ಲಿಗೆ ಕಟ್ಟಿ ಏಳು ಬಾವಿಗಳನ್ನು ದಾಟಿ ಬಯಲಿಗೆ ಬಂದನು.

ಭಾಗ್ಯದ ಗಿಣಿ ಇವನ ಬರುವನ್ನು ಕಾಯುತ್ತಾ ಬಯಲಲ್ಲಿ ಹಾರಾಡುತ್ತಿತ್ತು. ರಾಜಕುಮಾರ ಬಂದುದನ್ನು ನೋಡಿ ಸಂತೋಷದಿಂದ ಅವನ ಹೆಗಲನ್ನು ಏರಿತು. ಅಂದು ರಾಜಕುಮಾರ ಮತ್ತು ಗಿಣಿ ಬಯಲಿನಲ್ಲಿ ವಿಶ್ರಾಂತಿ ಪಡೆದರು.

ಮರುದಿನ ರಾಜಕುಮಾರ ಪ್ರಾತಃವಿಧಿಗಳನ್ನು ಮುಗಿಸಿ, ಭಾಗ್ಯದ ಗಿಣಿಯನ್ನು "ಮುಂದೇನು?" ಎಂದು ಕೇಳಲು, "ಅಲ್ಲಿ ನೋಡು ರಾಜಕುಮಾರ, ಆ ಬಯಲಿನಾಚೆ ಈ ರಾಕ್ಷಸರ ಮಗನಿದ್ದಾನೆ. ಅವನು ಬಹು ಬಲಾಢ್ಯ. ಕಷ್ಟಪಟ್ಟು ಇಲ್ಲೀತನಕ ಬಂದ ಎಷ್ಟೋ ರಾಜಕುಮಾರರನ್ನು ಸೋಲಿಸಿ, ಹಿಂಸಿಸಿ ಭಕ್ಷಿಸಿದ್ದಾನೆ. ನೀನು ಹುಷಾರಾಗಿ ಅವನ ಜೊತೆ ಯುದ್ಧ ಮಾಡಬೇಕು. ಏಕೆಂದರೆ ಅವನು ತನ್ನ ಪ್ರಾಣವನ್ನು ವಿಚಿತ್ರ ರೀತಿಯಲ್ಲಿ ರಕ್ಷಿಸಿಟ್ಟುಕೊಂಡಿದ್ದಾನೆ. ಯುದ್ಧ ಮಾಡುವಾಗ ಅವನು ಬಲಗೈ ಎತ್ತಿದರೆ ಆಗ ಅವನ ಪ್ರಾಣ ಎಡಗೈಯಲ್ಲಿ ಇರುತ್ತದೆ. ಎಡಗಾಲು ಎತ್ತಿದರೆ ಬಲಗಾಲಿನಲ್ಲಿರುತ್ತದೆ. ತನ್ನ ದೇಹದ ಯಾವ ಅಂಗಕ್ಕಾದರೂ ತನ್ನ ಪ್ರಾಣವನ್ನು ಬದಲಾಯಿಸುತ್ತಾನೆ. ಆದರೆ ಎಡದಲ್ಲಿ ಚಲಿಸಿದ ಅಂಗದ ಬಲದಲ್ಲಿ ಅವನ ಜೊತೆ ಯುದ್ಧ ಮಾಡು. ಏಳು ಮಲ್ಲಿಗೆ ತೂಕದ ರಾಜಕುಮಾರಿಯನ್ನು ಕದ್ದು ತಂದು ಬಂಧನದಲ್ಲಿ ಇಟ್ಟಿರುವವನೇ ಇವನು. 'ಮದುವೆ ಮಾಡಿಕೊ' ಎಂದು ಅವಳನ್ನು ದಿನಾ ಪೀಡಿಸುತ್ತಿರುತ್ತಾನೆ. ವಿಜಯಶಾಲಿಯಾಗಿ ಬಾ. ನಾನು ನೋಡು, ಆ ಹಣ್ಣಿನ ಮರದಲ್ಲಿ ಕುಳಿತಿರುತ್ತೇನೆ" ಎಂದು ಪುರ್ರೆಂದು ಹಾರಿ ಹೋಯಿತು.

ಘೋರಾಕಾರದ ರಾಕ್ಷಸ ತನ್ನ ಕೈಗೆ ಸಿಕ್ಕಿದ್ದಲ್ಲವನ್ನೂ ಕಿತ್ತೊಗೆಯುತ್ತಿದ್ದ. ರಾಜಕುಮಾರ ಅವನ ಮುಂದೆ ಹೋಗಿ ನಿಲ್ಲಲು ಆ ರಾಕ್ಷಸ ರಾಜಕುಮಾರಿಯನ್ನು ಮದುವೆಯಾಗಲು ಬಂದವನೆಂದು ಅತಿ ಕೋಪದಿಂದ ಭಯಂಕರವಾಗಿ ಘರ್ಜಿಸುತ್ತ, ರಾಜಕುಮಾರನ ಮೇಲೆ ಯುದ್ಧಕ್ಕೆ ಬಂದನು. ರಾಜಕುಮಾರ ಧೈರ್ಯವಾಗಿ ರಾಕ್ಷಸನ ಜೊತೆ ಹೋರಾಡಿದನು. ರಾಕ್ಷಸನಾದರೋ ಮರಗಳನ್ನೇ ಕಿತ್ತುಕೊಂಡು ರಾಜಕುಮಾರನ ಮೇಲೆ ಎಸೆದನು. ಚಾಕಚಕ್ಯತೆಯಿಂದ ತಪ್ಪಿಸಿಕೊಂಡ ರಾಜಕುಮಾರ, ಮತ್ತೆ ಪಕ್ಕದಲ್ಲಿದ್ದ ಬಂಡೆಯನ್ನು ಎತ್ತಿಕೊಂಡು ರಾಜಕುಮಾರನ ಮೇಲೆ ಹಾಕಲು ಬರಲು, ತಟ್ಟನೆ ರಾಕ್ಷಸನ ಕಾಲುಗಳನ್ನು ತನ್ನ ಖಡ್ಗದಿಂದ ಕತ್ತರಿಸಿದ. ರಾಕ್ಷಸ ಒದ್ದಾಡುತ್ತಾ ಪ್ರಾಣ

ಬಿಟ್ಟನು. ತುಂಬ ಆಯಾಸದಿಂದ ಬಳಲಿದ್ದರೂ ಸಂತೋಷದಿಂದ ಭಾಗ್ಯದ ಗಿಣಿ ಕುಳಿತಿದ್ದ ಮರದ ಕಡೆ ನೋಡಲು, ಅದು ಆಗಲೇ ಇವನ ಬಳಿಗೆ ಹಾರಿ ಬಂದು ಇವನ ಮುಖವನ್ನೆಲ್ಲಾ ತನ್ನ ಕೊಕ್ಕಿನಿಂದ ಪ್ರೀತಿಯಿಂದ ಮುದ್ದಿಸಿತು.

ಗಿಣಿಯು "ರಾಜಕುಮಾರ ತುಂಬಾ ಬಳಲಿದ್ದೀ. ನೋಡು, ಈ ಕೊಳದ ನೀರಿನಲ್ಲಿ ರಾಕ್ಷಸನ ರಕ್ತದಿಂದ ಮಲಿನಗೊಂಡ ನಿನ್ನ ಶರೀರವನ್ನು ತೊಳೆದುಕೋ. ಆ ಹಾಲು ಕೊಳದಲ್ಲಿ ಹೊಟ್ಟೆ ತುಂಬ ಹಾಲು ಕುಡಿ. ಆಮೇಲೆ ಆ ಪುಟ್ಟ ಬೆಟ್ಟದ ಮೇಲಿರುವ ಅರಮನೆಗೆ ಬಾ" ಎಂದು ಅರಮನೆಯತ್ತ ಪುರ್ರೆಂದು ಹಾರಿ ಹೋಯಿತು.

ರಾಜಕುಮಾರ ನೀರಿನ ಕೊಳದಲ್ಲಿ ಸ್ನಾನ ಮಾಡಿ, ಶುಭ್ರನಾಗಿ ಹಾಲಿನ ಕೊಳದಲ್ಲಿ ಹೊಟ್ಟೆ ತುಂಬ ಹಾಲು ಕುಡಿದು ಅರಮನೆಯತ್ತ ನಡೆದನು. ಅರಮನೆಯ ಬಾಗಿಲಲ್ಲಿ ಸೇವಕಿಯರು ರಾಜಕುಮಾರನಿಗೆ ಆರತಿ ಎತ್ತಿ ಒಳಗೆ ಬರಮಾಡಿಕೊಂಡರು. ಆದರೆ ಎಲ್ಲೂ ಭಾಗ್ಯದ ಗಿಣಿಯ ಸುಳಿವೇ ಇಲ್ಲ. ಅವನು ಸುತ್ತಮುತ್ತ ತಡಕಾಡುವ ನೋಟದಿಂದ ನೋಡಿದನು. ಅರಮನೆಯ ಒಳಭಾಗದಲ್ಲಿ ಹಂಸತೂಲಿಕಾ ತಲ್ಪದ ಮೇಲೆ ಏಳು ತೂಕದ ಮಲ್ಲಿಗೆ ರಾಜಕುಮಾರಿ ಕುಳಿತಿದ್ದಳು. ರಾಜಕುಮಾರ ಅವಳ ಅಪೂರ್ವ ಸೌಂದರ್ಯರಾಶಿಯನ್ನು ನೋಡಿ ಮೂಕವಿಸ್ಮಿತನಾದನು. ಏಳು ಮಲ್ಲಿಗೆ ತೂಕದ ರಾಜಕುಮಾರಿ ನಗು ನಗುತ್ತಾ ಬಂದು ರಾಜಕುಮಾರನ ಕೈ ಹಿಡಿದಳು. ಆಗ ರಾಜಕುಮಾರ "ನನ್ನ ಭಾಗ್ಯದ ಗಿಣಿ ಎಲ್ಲಿ" ಎಂದು ಕೇಳಲು "ನಾನೇ ಆ ಭಾಗ್ಯದ ಗಿಣಿ!" ಎಂದು ಹೇಳಿದಳು. ಕೆಲವಾರು ದಿನಗಳು ಅರಮನೆಯಲ್ಲಿ ಸುಖವಾಗಿದ್ದು ರಾಜಕುಮಾರ ಏಳು ಮಲ್ಲಿಗೆ ತೂಕದ ರಾಜಕುಮಾರಿಯ ಜೊತೆ ತನ್ನ ರಾಜ್ಯಕ್ಕೆ ಬಂದನು.


ರಾಜಕುಮಾರನ ತಂದೆ ತಾಯಿ ಇವನ ಚಿಂತೆಯಲ್ಲಿ ಹಾಸಿಗೆ ಹಿಡಿದಿದ್ದರು. ರಾಜಕುಮಾರ ಏಳು ಮಲ್ಲಿಗೆ ತೂಕದ ರಾಜಕುಮಾರಿಯನ್ನು ಮದುವೆಯಾಗಿ ಬಂದುದನ್ನು ಕಂಡು ಸಂತೋಷದಿಂದ ರಾಜಕುಮಾರನಿಗೆ ರಾಜ್ಯಭಾರವನ್ನು ನೀಡಿ ನಿಶ್ಚಿಂತರಾದರು ಅವನ ಮಾತಾಪಿತರು.

* * *

## ೭. ಆಕಾಶ ಇಳೆ

ಆಕಾಶ ಎಂಬ ಹುಡುಗ, ಇಳೆ ಎಂಬ ಹುಡುಗಿ. ಇಬ್ಬರೂ ಪರಸ್ಪರ ಹುಚ್ಚಾಪಟ್ಟೆ ಪ್ರೀತಿಸುತ್ತಿದ್ದರು. ದಿನದ ಇಪ್ಪತ್ನಾಲ್ಕು ಗಂಟೆ ಒಬ್ಬರನ್ನು ಬಿಟ್ಟು ಒಬ್ಬರು ಇರುತ್ತಿರಲಿಲ್ಲ. ಪಡ್ಡೆ ಹುಡುಗ ಆಕಾಶ ಅಪ್ಪ ಅಮ್ಮನ ಮಾತಿಗೆ ಸೊಪ್ಪು ಹಾಕುತ್ತಿರಲಿಲ್ಲ. ಇನ್ನು ಇಳೆ ಅಪ್ಪ ಅಮ್ಮನಿಗೆ ಅಧಿಕಾರ ಚಲಾಯಿಸುತ್ತಿದ್ದಳು. ಇವರು ತಿರುಗದ ಜಾಗವೇ ಇರಲಿಲ್ಲ. ಬೆಟ್ಟ, ಗುಡ್ಡ, ನದಿ, ತೊರೆ, ಹೊಲ, ಗದ್ದೆ ಎಲ್ಲೆಲ್ಲೂ ಇವರೇ. ಇಬ್ಬರೂ ಅಂದ ಚೆಂದದ ಹುಡುಗರು. ಇವರು ನಡೆದೆಡೆಯೇ ಸ್ವರ್ಗ. ಬೆಟ್ಟಗುಡ್ಡದ ಮರಗಿಡಗಳಲ್ಲಿ ಹಣ್ಣು ಕಿತ್ತು ತಿಂದು, ನದಿ ತೊರೆಗಳಲ್ಲಿ ತಿಳಿ ನೀರು ಕುಡಿದು ಎಲ್ಲೆಂದರಲ್ಲಿ ಸ್ವಚ್ಛಂದತೆಯಿಂದ ತಿರುಗುತ್ತಿದ್ದರು.

ಇವರ ಈ ಪ್ರೇಮವನ್ನು ಸಹಿಸದ ಗ್ರಾಮದ ಪ್ರಮುಖರು, ಇಬ್ಬರ ತಂದೆ ತಾಯಿಗೆ ಹೇಳಿ ನೋಡಿದರು, ಆದರೆ ಏನೂ ಪ್ರಯೋಜನವಾಗಲಿಲ್ಲ. ಅವರಿಬ್ಬರ ತಂದೆ ತಾಯಿಗಳು "ನೀವೇನಾದರೂ ಮಾಡಿ, ನಮ್ಮ ಮಾತೇ ಅವರು ಕೇಳುವುದಿಲ್ಲ" ಎಂದು ಬಿಟ್ಟರು.



ಗ್ರಾಮಸ್ಥರೆಲ್ಲಾ ಸೇರಿ ಬಾಧೆಪುರ ಭಯಂಕರ ಎಂಬ ಮಂತ್ರವಾದಿಯನ್ನು ಕರೆಸಿದರು. ಇರುವ ವಿಷಯ ಹೇಳಿದರು. ಅವನು ಅಂಜನಾ ಹಾಕಿ ನೋಡಿ, "ಪರಸ್ಪರ ನೋಡುವುದನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ. ದೂರ ಬೇಕಾದರೆ ಮಾಡಬಹುದು. ಏನು ಮಾಡಬೇಕು. " ಎಂದು ಕೇಳಿದ.

ಅದಕ್ಕೆ ನಮ್ಮ ಹಳ್ಳಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಇಲ್ಲಿನ ಹೆಣ್ಣು ಮಕ್ಕಳನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ? ಆದುದರಿಂದ ಅವರನ್ನು ಶಾಶ್ವತವಾಗಿ ದೂರ ಮಾಡಬೇಕು" ಎಂದರು. "ಸರಿ ಅದನ್ನು ಬೇಕಾದರೆ ಮಾಡೋಣ" ಎಂದನು ಮಂತ್ರವಾದಿ. ಗ್ರಾಮಸ್ಥರೆಲ್ಲಾ ಮಾತು ಕತೆ ಮುಗಿಸಿ ಆಕಾಶ ಮತ್ತು ಇಳೆಯನ್ನು ಪರಸ್ಪರ ದೂರ ಮಾಡಲು ಒಪ್ಪಿಕೊಂಡರು.

ಮಂತ್ರವಾದಿ ಭಯಂಕರ "ನೋಡಿ, ನಾನು ಹೇಳಿದ ಹಾಗೆ ಮಾಡಿ. ಅವರನ್ನು ಪ್ರೀತಿಯಿಂದ ಮಾತನಾಡಿಸಿ ಮದುವೆ ಮಾಡುವುದಾಗಿ ಹೇಳಿ. ಆಕಾಶನನ್ನು ಹೊಂಬಾಳೆ ತರುವುದಕ್ಕೂ, ಇಳೆಯನ್ನು ಹೂ ತರುವುದಕ್ಕೂ ಕಳುಹಿಸಿ. ಅಷ್ಟರೊಳಗೆ ನಾನು ಕಂದಕ ಏರ್ಪಡಿಸುತ್ತೇನೆ. ಆಗ ಅವರಿಬ್ಬರು ಶಾಶ್ವತವಾಗಿ ದೂರವಾಗುತ್ತಾರೆ" ಎಂದನು.

ಗ್ರಾಮಸ್ಥರು ಮಂತ್ರವಾದಿ ಭಯಂಕರ ಹೇಳಿಕೊಟ್ಟಂತೆ ಅವರನ್ನು ಕರೆದು ಪ್ರೀತಿಯಿಮದ ಮಾತನಾಡಿಸಿ ಅವರಿಗೆ ಮದುವೆ ಮಾಡುವುದಾಗಿ ಹೇಳಿ, ಅವರಿಗೆ ಎಣ್ಣೆ ತಿಕ್ಕಿ ನೀರು ಹಾಕಿ ಹೊಸ ಬಟ್ಟೆ ಉಡಿಸಿದರು. ಅವರ ಮಾತಿಗೆ ಮರುಳಾದ ಆಕಾಶ ಹೊಂಬಾಳೆ ತರಲು ತೆಂಗಿನ ಮರವೇರಿದನು. ಇಳೆ ಹೂ ತರಲು ತೋಟಕ್ಕೆ ಹೋದಳು. ಎಂದೂ ಇಬ್ಬರನ್ನೊಬ್ಬರು ಬಿಟ್ಟಿರದಿದ್ದ ಆಕಾಶ - ಇಳೆ ಬೇಗ ಸೇರುವುದಾಗಿ ಹೇಳಿ ಹೊರಟಿದ್ದರು. ಇದನ್ನೇ ಕಾಯುತ್ತಿದ್ದ ಮಂತ್ರವಾದಿ ಭಯಂಕರ ತನ್ನ  ಗಾಜಿನ ಗೋಲದಲ್ಲಿದ್ದ ಗಾಳಿಯನ್ನು ಹೊರಗೆ ಬಿಟ್ಟು ಬಿಟ್ಟನು. ಪ್ರಚಂಡ ಗಾಳಿ ಬೀಸತೊಡಗಿತು. ತೆಂಗಿನ ಮರ ಏರಿದ್ದ ಆಕಾಶ ಮೇಲೆ ಮೇಲೇರಿ ಆಕಾಶವಾದನು. ಹೂ ಕೀಳಲು ತೋಟದೊಳಗೆ ಹೋದ ಇಳೆ, ಪ್ರಚಂಡ ಗಾಳಿಗೆ ಹೆದರಿ ಮುದುರಿ ಮಣ್ಣಿನ ಪಾತಿಯೊಳಗೆ ಹೂತು ಇಳೆಯಲ್ಲಿ ಇಳೆಯಾದಳು.

ಗ್ರಾಮಸ್ಥರಿಗೆ ಬಹಳ ಸಂತೋಷವಾಯಿತು. ಮಂತ್ರವಾದಿ ಭಯಂಕರನಿಗೆ ಧನಕನಕ ಕೊಟ್ಟು ಗೌರವಿಸಿದರು. ಪಾಪ ಇದರಿಂದ ದೂರದ ಆಕಾಶ - ಇಳೆ ದೂರದಿಂದಲೇ ಒಬ್ಬರನ್ನೊಬ್ಬರು ನೋಡಿಕೊಂಡು ವಿರಹವನ್ನು ಅನುಭವಿಸುತ್ತಿದ್ದರು.

ಸೂರ್ಯ ಚಂದ್ರರ ಕಣ್ಣುಗಳಾಗಿ ಪಡೆದ ಆಕಾಶ, ಸೂರ್ಯ ಚಂದ್ರರ ಕಿರಣಗಳಿಂದ ಇಳೆಯನ್ನು ಸ್ಪರ್ಶಿಸುತ್ತಾ ಇರಲು, ಆದರೆ ಒಂದಾಗುವ ಮಾರ್ಗ ಕಾಣದೆ ಇಬ್ಬರು ಪರಿತಪಿಸುತ್ತಿದ್ದರು. ಇಳೆ ತನ್ನ ಮೇಲಿನ ಗಿಡಮರ ಬೆಟ್ಟಗಳಾಗಿ ಕೈ ಚಾಚಿದರೂ ಸಿಗಲೊಲ್ಲ, ಏನು ಮಾಡುವುದು? ನಿತ್ಯ ಇಬ್ಬರಿಗೂ ಒಂದೇ ಒಂದಾಗುವ ಯೋಚನೆ, ಆಕಾಶನಿಗೊಂದು ಯೋಚನೆ ಹೊಳೆಯಿತು. ಮೋಡವಾಗಿ ಯಾಕೆ ಹೋಗಬಾರದು? ಆದರೆ ಅದಕ್ಕೂ ಗಾಳಿ ಬೀಸಬೇಕು. ಗಾಳಿಯನ್ನು " ಗಾಳಿ, ಗಾಳಿ, ನಾವಿಬ್ಬರು ಮಂತ್ರವಾದಿಯಿಂದ ದೂರವಾಗಿದ್ದೇವೆ. ನೀನು ಜೋರಾಗಿ ಬೀಸಿದರೆ ಮೋಡವಾಗಿ ಅವಳನ್ನು ಸೇರುತ್ತೇನೆ. ನನಗೆ ಉಪಕಾರ ಮಾಡಿ ಪುಣ್ಯಕಟ್ಟಿಕೋ" ಎಂದು ಕೇಳಿದ ಆಕಾಶ.

ಅದಕ್ಕೆ ಗಾಳಿ " ಮಂತ್ರವಾದಿ ಭಯಂಕರ ತಾನೆ? ನಾನು ಅವನಿಂದ ಅಂತರ ಪಿಶಾಚಿಯಾಗಿದ್ದೇನೆ. ಮೋಡವಾಗಿ ನೀನು ಹೋದರೆ ಗ್ರಾಮಸ್ಥರು ನಿನ್ನನ್ನು ಸುಮ್ಮನೆ ಬಿಡುವರೆ? ಮತ್ತೆ ಮಂತ್ರವಾದಿಯನ್ನು ಕರೆಸಿ ಇನ್ನೇನಾದರೂ ಮಾಡಿಸುತ್ತಾರೆ. ಆಮೇಲೆ ಮಂತ್ರವಾದಿ ನನ್ನನ್ನು ಸುಮ್ಮನೆ ಬಿಡುವನೆ? ಬೇಡಪ್ಪ" ಎಂದಿತು ಗಾಳಿ.

ಆಕಾಶನಿಗೆ ಮತ್ತೊಂದು ಯೋಚನೆ ಹೊಳೆಯಿತು. "ಸರಿ ಗಾಳಿ ನಾನು ಮೋಡವಾಗಿ ಹೋದರೆ ತಾನೆ ಗ್ರಾಮಸ್ಥರಿಗೆ ಗೊತ್ತಾಗುವುದು? ನಾನು ಮಳೆಯಾಗಿ ನನ್ನ ಬಾಹುಗಳನ್ನು ಇಳೆಯತ್ತ ಚಾಚುತ್ತೇನೆ. ಸರಿ ತಾನೇ? ಆಗ ಯಾರಿಗೂ ಗೊತ್ತಾಗುವುದಿಲ್ಲ" ಎಂದನು.

"ಸರಿ, ನಾನು ಜೋರಾಗಿ ಬೀಸುತ್ತೇನೆ. ಮಂತ್ರವಾದಿ ಕೇಳಿದರೆ ಬೀಸುವುದೇ ನನ್ನ ಕೆಲಸವಲ್ಲವೆ ಎಂದು ಹೇಳುತ್ತೇನೆ" ಎಂದು ಗಾಳಿ ಧೈರ್ಯವಾಗಿ ಹೇಳಿತು. ಆಕಾಶ ಕಡು ನೀಲಿ ಉಡಿಗೆ ತೊಟ್ಟು ಸಿದ್ಧನಾಗಲು, ಗಾಳಿ ಜೋರಾಗಿ ಬೀಸಿತು. ಎಲ್ಲಿಯೋ ಇದ್ದ ಮಂತ್ರವಾದಿ ಭಯಂಕರನಿಗೆ ಗೊತ್ತಾಗಿ ಗುಡುಗು ಮಿಂಚಾಗಿ ಬಾಣಗಳನ್ನು ಬಿಟ್ಟನು. ಹಠವಾದಿಯಾದ ಆಕಾಶ ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಮೋಡ ಚದುರಿ ಮಳೆ ಇಳೆಯತ್ತ ತನ್ನ ಬಾಹುಗಳನ್ನು ಚಾಚಿತು. ಆದರೂ ತುಂಟ ಆಕಾಶ ಯಾರಿಗೂ ಕಾಣದಂತೆ ಆನೆಕಲ್ಲಾಗಿ ಇಳೆಯತ್ತ ಆಗಾಗ ಧಾವಿಸುತ್ತಿದ್ದನು.

## ೩. ಶ್ಯಾಮಣ್ಣನ ಉಂಡೆ

ಒಂದೂರಿನಲ್ಲಿ ಅಜ್ಜಿ ಮತ್ತು ಮೊಮ್ಮಗಳಿದ್ದರು. ಮೊಮ್ಮಗಳು ಶಾರದ ರಜ ಕಳೆಯಲು ಅಜ್ಜಿಯ ಮನೆಗೆ ಬಂದಿದ್ದಳು. ಅಪ್ಪನ ಮನೆಯಲ್ಲಿ ಕುರುಕಲು ತಿಂದು ಅಭ್ಯಾಸವಿದ್ದ ಮೊಮ್ಮಗಳಿಗೆ, ಅಜ್ಜಿ ಕೊಡುತ್ತಿದ್ದ ಕುರುಕಲು ಸಾಕಾಗುತ್ತಿರಲಿಲ್ಲ. ದಿನ ಚಕ್ಕುಲಿ, ಉಂಡೆ, ನಿಪ್ಪಟ್ಟು ಮಾಡುವ ಶಾಮಣ್ಣ ಅಜ್ಜಿಯ ಜಗುಲಿಯ ಮೇಲೆ ಮಾರಾಟಕ್ಕೆ ಕೂರುತ್ತಿದ್ದ. ಮೊಮ್ಮಗಳಿಗೆ ಶಾಮಣ್ಣನ ಚಕ್ಕುಲಿ ಉಂಡೆ ತಿನ್ನಲು ಅತಿಯಾದ ಆಸೆ. ಆದರೆ ಅವಳ ಹತ್ತಿರ ಹಣವಿಲ್ಲ. ಏನು ಮಾಡುವುದು? ಅಜ್ಜಿ ಮನೆಗೆಲಸವೆಲ್ಲ ಮುಗಿಸಿ ಬಟ್ಟೆ ತೆಗೆದುಕೊಂಡು ಹೊಳೆಯ ಹತ್ತಿರ ಹೋದ ಮೇಲೆ ಮೊಮ್ಮಗಳು ಶಾಮಣ್ಣನನ್ನು ಕೇಳಿದಳು. ಅದಕ್ಕೆ ಬಹು ಚತುರನಾದ ಶಾಮಣ್ಣ "ಅದಕ್ಯಾಕವ್ವ ಬೇಸರ, ವಾಡೆಲಿ ರಾಗಿ ಇದ್ದರೆ ಕೊಡು, ಚಕ್ಕುಲಿ ಕೊಡುತ್ತೀನಿ" ಎಂದನು. ಅಜ್ಜಿಯು ಸಹ ಸೊಪ್ಪಿನವಳಿಗೆ ರಾಗಿ ಕೊಟ್ಟು ಸೊಪ್ಪು ತೆಗೆದುಕೊಂಡುದು ನೋಡಿದ್ದ ಮೊಮ್ಮಗಳಿಗೆ ಇದರಲ್ಲಿ ತಪ್ಪೇನು ಕಾಣಲಿಲ್ಲ. ಮೊರ ತೆಗೆದುಕೊಂಡು ಕಿರುಕೋಣೆಗೆ ಹೋಗಿ ವಾಡೆಯ ಬೆಣೆ ತೆಗೆದು ಮೊರಕ್ಕೆ ರಾಗಿ ತುಂಬಿಕೊಂಡು ಕಷ್ಟಪಟ್ಟು ಬೆಣೆ ಹಾಕಿದಳು. ಶಾಮಣ್ಣ ಕೊಟ್ಟ ಉಂಡೆ ಚಕ್ಕುಲಿ ತಿಂದು ಆಟವಾಡುತ್ತ ಆನಂದದಿಂದ ಇರುತ್ತಿದ್ದಳು.



ಅಜ್ಜಿಗೆ ಅನುಮಾನ ಶುರುವಾಯಿತು. ವಾಡೆಯಲ್ಲಿ ರಾಗಿ ಇದ್ದಕ್ಕಿದ್ದ ಹಾಗೆ ಕಮ್ಮಿಯಾಗುತ್ತಿದೆ. ಕಿರುಕೋಣೆಗೆ ಬಂದರೆ ರಾಗಿ ಚೆಲ್ಲಿರುತ್ತದೆ. ಇದು ಯಾರ ಕೆಲಸವೋ ಕಂಡು ಹಿಡಿಯಬೇಕೆಂದು ಸುಮ್ಮನಾದಳು. ಮಾರನೆ ದಿನ ಮನೆ ಕೆಲಸ ಮುಗಿಸಿ ಬಟ್ಟೆ ಗೂಡೆ ಹಿಡಿದು 'ಹೊಳೆಗೆ ಹೋಗಿ ಬರುತ್ತೇನೆ' ಎಂದು ಹೇಳಿ ಹಿತ್ತಲ ಬಾಗಿಲಿನಿಂದ ವಾಡೆಯ ಹಿಂದೆ ಅವಿತುಕೊಂಡಳು. "ಚಕ್ಕುಲಿ, ಉಂಡೆ ಎರಡು ಹೆಚ್ಚಾಗೆ ಇದೆ. ಬೇಗ ರಾಗಿ ತಗೊಂಬಾ, ನಿಮ್ಮಜ್ಜಿ ಏನಾದರೂ ಬಂದುಗಿಂದಾಳು" ಎಂದು ಅಂಗಡಿಯವನು ಎನ್ನಲು, ಕಿರುಕೋಣೆಯ ವಾಡೆಯಿಂದ

“ಇರು ಪಂಚಾಯತಿ ಸೇರಿಸಿ, ಅರಿಯದ ಹುಡುಗಿಗೆ ಕಳ್ಳತನ ಕಲಿಸುತ್ತಿದ್ದಾನೆ ಎಂದು ಹೇಳುತ್ತೇನೆ” ಎನ್ನಲು, ಶಾಮಣ್ಣ ಅಜ್ಜಿ ಕಾಲಿಗೆ ಬಿದ್ದು “ನನ್ನ ಹೊಟ್ಟೆ ಮೇಲೆ ಹೊಡಿಬೇಡಿ, ಮಕ್ಕಳೊಂದಿಗ, ಇನ್ನು ಮೇಲೆ ಇಂಥ ಕೆಲಸ ಮಾಡಲ್ಲ” ಎಂದು ಪ್ರಮಾಣ ಮಾಡಿ ಹೇಳಲು, “ಸರಿ ಹಾಗಾದರೆ, ನನ್ನ ಮೊಮ್ಮಗಳ ಕೈಯಲ್ಲಿ ಹಣ ಕೊಟ್ಟಿರುತ್ತೇನೆ. ದಿನಕ್ಕಿಂತ ಹೆಚ್ಚಾಗಿ ಅವಳಿಗೆ ಚಕ್ಕುಲಿ ಉಂಡೆ ಕೊಡು. ಇನ್ನು ಮೇಲಿಂದ ಯಾರ ಹತ್ತಿರಾನೂ ಇಂಥ ಕೆಲಸ ಮಾಡಿದ್ದು ತಿಳಿದರೆ ನಿನಗೆ ಪಂಚಾಯಿತಿಯೇ ಗತಿ, ಹುಷಾರ್!” ಎಂದು ಅಜ್ಜಿ ಎಚ್ಚರಿಸಿದಳು.

ಕಕ್ಕಾಬಿಕ್ಕಿಯಾಗಿ ನಿಂತಿದ್ದ ಮೊಮ್ಮಗಳಿಗೆ ಅಜ್ಜಿ ಬುದ್ಧಿ ಹೇಳಿ, “ಇನ್ನು ಮೇಲೆ ಹಣಕೊಟ್ಟು ಚಕ್ಕುಲಿ ಉಂಡೆ ತೆಗೆದುಕೊ” ಎಂದು ಹೇಳಿದಳು.

## ೪.ಸುಣ್ಣದ ಕರಂಡಿಗೆ

ನಮ್ಮೂರ ವೀರಮ್ಮ, ಅಪ್ಪ ಹಾಲಪ್ಪ ಹಾಡಿದರೆ ದೇವರೆ ಕುಂತು ಕೇಳಬೇಕು. ಅಷ್ಟು ಬಯಭಕ್ತಿಭಾವದಲ್ಲಿ ಹಾಡುತ್ತಾರೆ. ಯಾವ ಹಬ್ಬ ಹರಿದಿನವಾದರೂ, ಮದುವೆ ಮುಂಜಿಯಾದರೂ ಮೊದಲು ವೀರಮ್ಮ, ಅಪ್ಪ ಹಾಲಪ್ಪ ಹಾಡಿರಬೇಕು. ಎಂಟು ದಿನಗಳ ಮದುವೆ ಇದ್ದರೂ ಒಂದು ಸಲ ಹಾಡಿದ ಪದ ಮತ್ತೊಂದು ಸಲ ಹಾಡುತ್ತಿರಲಿಲ್ಲ.

ಇವರು ಪ್ರತಿ ವರ್ಷ ಕಾಲ್ನಡಿಗೆಯಲ್ಲಿ ಕಾಡುಮೇಡು ದಾಟಿ ಗುಂಬಳಾಪುರಕ್ಕೆ ಗೌರಿ ಹಬ್ಬಕ್ಕೆ ಹೋಗುತ್ತಿದ್ದರು. ಅಲ್ಲಿ ಗೌರಮ್ಮನ ಮುಂದೆ ಗೌರೀಪದ ಹೇಳುತ್ತಿದ್ದರು. ಕೈಲಾಸದಲ್ಲಿ ಗೌರಮ್ಮನಾದೋ  ಯಾವಾಗ ಗೌರೀಹಬ್ಬ ಬರುವುದೋ, ಇವರ ಪದ ಕೇಳುವೇನೋ ಎಂಬ ಕಾತುರ. ಆದರೆ ಏನು ಮಾಡುವುದು? ಗೌರಮ್ಮನ ಬಿಟ್ಟಿರಲಾರದ ಶಿವ ಹಿಂದೆಯೂ ಗಣಪನನ್ನು ಕಳುಹಿಸಿಬಿಡುತ್ತಿದ್ದ. ತೌರಿನಲ್ಲಿ ನೆಮ್ಮದಿಯಾಗಿ ಇರಲಿಕ್ಕೆ ಬಿಡದೆ ಕರೆಸಿಕೊಂಡುಬಿಡುತ್ತಿದ್ದ.

ಹೀಗೆ ಪ್ರತಿ ವರ್ಷದಂತೆ ಗುಂಬಳಾಪುರಕ್ಕೆ ವೀರಮ್ಮ ಅಪ್ಪ ಹಾಲಪ್ಪ ಬಂದರು. ಕೈಲಾಸದಿಂದ ಮಣಿ ಮೇಲೆ ಬಂದ ಗೌರಮ್ಮನ ಐಭೋಗ ನೋಡಿ ವೀರಮ್ಮ ಅಪ್ಪ ಹಾಲಪ್ಪ ಪದ ಹಾಡಲಿಕ್ಕೆ ಪ್ರಾರಂಭಿಉಸಿದರು. ಲಗುಬಗೆಯಿಂದ ತೌವರಿಗೆ ಬಂದ ಗೌರಿಗೆ ಇವರನ್ನು ನೋಡಿ ಬಹಳ ಸಂತೋಷವಾಯಿತು.

ವಯಸ್ಸಾದ ಮುತ್ತೈದೆಯ ಹಾಗೆ ಬಂದ ಗೌರಮ್ಮ ಇವರಿಬ್ಬರ ಪಕ್ಕ ಬಂದು ಕುಳಿತಳು. “ಅಲ್ಲ, ಹೀಗೆ ಒಂದೇ ಸಲ ಪದ ಹೇಳುತ್ತೀರಲ್ಲ, ಬ್ಯಾಸರ ಆಗಕಿಲ್ಲವ?” ಎಂದಳು. ಅದಕ್ಕೆ ವೀರಮ್ಮ “ತಪ್ಪಾಯಿತು ಅನ್ನ ತಾಯಿ. ದೇವರ ನೆನೆದರೆ,  ಗೌರಮ್ಮ “ನೀವು ಯಾವಾಗ್ಯಾವಾಗ ಪದ ಹಾಡುತ್ತೀರಾ?” ಎಂದು ಕೇಳಿದಳು.

“ಹೇ ಸುಮ್ನಿರು ತಾಯಿ, ನಾವೇನು ಹೀಗೆ ಮನಸ್ಸಿಗೆ ಕಷ್ಟ-ಸುಖ ಆದಾಗ ಹಾಡಿಕೊಂತಾನೇ ಇರುತ್ತೀವಿ. ಕೆಲಸ ಬೊಗಸೆ ಮಾಡುವಾಗ, ಹೊಲದ ಕೆಲಸ ಮಾಡುವಾಗ” ಎನ್ನಲು, “ಹಾಗಾದರೆ ನಿನ್ನ ಪದ ಕೇಳಬೇಕೆಂದರೆ ನಾನು ಯಾವಾಗ ಬರಲಿ?” ಎಂದು ಕೇಳಿದಳು.

“ಅಯ್ಯೋ ಅದಕ್ಕೇನಂತೆ ಯಾವಾಗ ಬೇಕಾದರೂ ಬಾ, ನಾ ಹಾಡುತ್ತಿರುತ್ತೀನಿ. ನೀ ಕೇಳುವಂತೆ,”

“ಸರಿಯವ್ವ, ಹಾಗಾದರೆ ಎಲೆ ಅಡಿಕೆ ಕೊಡಬೇಕಾ?” ಎನ್ನಲು, ಗೌರಮ್ಮ ” ಕೊಡು ತಾಯಿ ಕೊಡು. ಒಳ್ಳೆ ಗೌರಮ್ಮ ತಾಯಿ ಇದ್ದ ಹಾಗೆ ಇದ್ದೀಯಾ, ಕೈಮುಗಿದೆ” ಎಂದಳು ವೀರಮ್ಮ.



ಗುಂಬಳಾಪುರದಿಂದ ಬಂದ ವೀರಮ್ಮನಿಗೆ ಮನೆ ಕೆಲಸ, ಹೊಲದ ಕೆಲಸ, ಅವಳ ಪಾಡು ಅವಳ ಹಾಡು. ಹೀಗಿರಲು ಒಂದು ದಿನ ಮಧ್ಯಾಹ್ನ ಮನೆಯ ಕದ ಸದ್ದಾಯಿತು. ಯಾರೆಂದು ನೋಡಲು, ಗುಂಬಳಾಪುರದಲ್ಲಿ ಸಿಕ್ಕ ಮುತ್ತೈದೆ, ವೀರಮ್ಮ "ಓ ನನ್ನ ಪದ ಕೇಳಲು ಬಂದೆಯ ತಾಯಿ, ಬಾ" ಎಂದು ಚಾಪೆ ಹಾಕಿ ಬೆಲ್ಲ ನೀರು ಕೊಟ್ಟಳು. "ಅಲ್ಲ ತಾಯಿ, ಚಂದದ ಪದವೆಂದು ಅಲ್ಲಿಂದ ಇಲ್ಲಿಯತನಕ ಬಂದೆ" ಎಂದು ನಾಚಿಕೊಂಡಳು. "ಅದು ಸರಿ, ನಾನು ಆದಿನ ತಾಯಿ ನಿನ್ನ ಹೆಸರು ಕೇಳಲೇ ಇಲ್ಲ" ಎನ್ನಲು, ಗೌರಮ್ಮ "ನನ್ನ ಹೆಸರು ಗೌರಮ್ಮ ಅಂತ. ಇಲ್ಲೆ ಪಕ್ಕ ಇದೆಯಲ್ಲ. ಹರಕಾಯುವ ಪುರ ಅದೇ ನಮ್ಮೂರು."

"ಹರ ಕಾಯುವ ಪುರ ನಾನು ಕೇಳೇ ಇಲ್ಲವಲ್ಲ? ಇಲ್ಲೇ ಎಲ್ಲೋ ಇರಬೇಕು. ನಾನು ಮನೇಲಿರತೀನಿ. ನಂಗೇನು ಗೊತ್ತಾಯ್ತದೆ ಹೇಳು ತಾಯಿ" ಎಂದಳು.

"ಬಾ ವೀರಮ್ಮ. ಇಬ್ಬರು ಕುಳಿತುಕೊಂಡು ಎಲೆ ಅಡಿಕೆ ಹಾಕಿಕೊಳ್ಳುವ. ಚಿಗುರು ವಿಳ್ಳೇದೆಲೆ, ಸಣ್ಣಚೂರಿನ ಅಡಿಕೆ ಎಲ್ಲ ತಂದಿದ್ದೇನೆ" ಎನ್ನಲು, "ನನಗೆ ಇನ್ನೇನಿದೆ ಎಲೆ ಅಡಿಕೆ ಹಾಕಿಕೊಂಡು ಕೆಲಸ ಮಾಡುತ್ತಾ ಹಾಡುತ್ತೇನೆ. ನೀನು ಮಾಹಾರಾಯ್ತಿಯಂಗೆ ಕುಂತು ಕೇಳು" ಎಂದು ಎಲೆ ಅಡಿಕೆಗೆ ಕೈಚಾಚಿದಳು. " ಎಲೆ ಅಡಿಕೆ ಎಷ್ಟು ಬೇಕಾದರೂ ತಗೋ, ಬೇಡ ಅನ್ನಲ್ಲ ವೀರಮ್ಮ. ಆದರೆ ಸುಣ್ಣ ಮಾತ್ರ ಎಷ್ಟಬೇಕೋ ಅಷ್ಟು ಮಾತ್ರ ತಗೋ" ಎಂದಳು. ಏನು ಅರಿಯದ ವೀರಮ್ಮ "ಯಾಕೆ ಸುಣ್ಣ ಬೆಣ್ಣೆಯಂಗೆ ಘಂ ಅಂತ ಐತೇ ಅಂತಲಾ?" ಎನ್ನಲು, ಗೌರಮ್ಮ ಹುಂಗುಟ್ಟುತ್ತಾ ಮನಸ್ಸಿನಲ್ಲಿ 'ನೀ ಈ ಸುಣ್ಣ ನಾನಿಲ್ಲದಾಗ ಬಳಸಿದರೆ ನಾನಿರುವಲ್ಲಿಗೆ ಬಂದು ಬಿಡುತ್ತೀಯಾ' ಎಂದುಕೊಂಡಳು. ವೀರಮ್ಮ ಕೆಲಸ ಮಾಡುತ್ತಾ ಪದ ಹಾಡಲು ಸುರು ಮಾಡಿದಳು. ಹೀಗೆ ದಿನಾ ನಡೆಯುತ್ತಿರಲು ಒಂದು ದಿನ ಗೌರಮ್ಮನಿಗೆ ಕುಂಕುಮ ಕೊಟ್ಟು ತಲೆಬಾಗಿಲ ತನಕ ಬಿಟ್ಟು ಹಿಂತಿರುಗಿ ಬರಲು ಸುಣ್ಣದ ಪುಟ್ಟ ಕರಂಡಿಕೆ ಕಂಡಿತು. ತಕ್ಷಣ ಕರಂಡಿಕೆ ಎತ್ತಿಕೊಂಡು ಬಾಗಿಲ ಹೊರಗೆ ನೋಡಲು ಗೌರಮ್ಮ ಕಾಣಲಿಲ್ಲ. 'ಇಷ್ಟು ಬೇಗ ಎಲ್ಲಿ ಹೋದಳು. ನಾಳೆ ಕೊಟ್ಟರಾಯಿತು' ಎಂದು ಗೂಡಿನಲ್ಲಿಟ್ಟಳು. ಇಡುವಾಗ ಕರಂಡಿಕೆಯ ಅಂದ ಚೆಂದ ನೋಡಿ ಬೆರಗಾದಳು.

ಕೆಲಸ ಬೇಗನೆ ಮುಗಿಸಿ ಸಾಯಂಕಾಲವಾಗಲು, ಹೊಲಕ್ಕೆ ಹೋಗಿದ್ದ ಹಾಲಪ್ಪ ದನ ಹೊಡೆದುಕೊಂಡು ಬಂದನು. ಅಪ್ಪ ಮಗಳು ಇಬ್ಬರು ಉಂಡು ಎಲೆ ಅಡಿಕೆ ಹಾಕಿಕೊಳ್ಳುವಾಗ ಅಪ್ಪ " ತಡಿ, ಘಂ ಅನ್ನೋ ಬೆಣ್ಣೆಯಂತೆ ಸುಣ್ಣ ಐತೆ, ಕೊಟ್ಟೇನು. ಅದೇ ದಿನಾ ಮದ್ಯಾಹ್ನ ಪದ ಕೇಳಕ್ಕೆ ಗೌರಮ್ಮ ಅಂತಾ ಬತ್ತಾಳಲ್ಲ ಅವಳದು. ಪಾಪ, ಈವತ್ತು ಮರೆತು ಹೋಗಿ ಬಿಟ್ಟಳು. ನಾನು ತಲೆಬಾಗಿಲ ತನಕ ಹೋಗಿ ದಾರಿಗಂಟ ನೋಡಿದೆ, ಕಾಣಲಿಲ್ಲ. ತಗೋ" ಎಂದು ಸುಣ್ಣದ ಡಬ್ಬಿಯನ್ನು ಕೊಟ್ಟು, ಕುಳಿತುಕೊಂಡು ಇಬ್ಬರು ಎಲೆ ಅಡಿಕೆ ಹಾಕಿಕೊಳ್ಳಲು ಮುಂದಾದರು.

ತಾಂಬೂಲ ಹಾಕಿಕೊಳ್ಳುವಾಗಲೂ ಇವರಿಗೆ 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರ ಕೇಳಿಸುತ್ತಿತ್ತು. ತಾಂಬೂಲ ಅಗಿದಂತೆಲ್ಲ ಅವರು ಬಹು ಸಂತೋಷದಿಂದ ಕೈಲಾಸದತ್ತ ಪಯಣಿಸುತ್ತಿದ್ದರು. ಘಂಟಾನಾದ, ಜಾಗಟೆಗಳ ಶಬ್ದ ಗಣಗಣಗಳಿಂದ ಕೂಡಿದ ಒಂದು ಅದ್ಭುತ ಸಭೆಗೆ ಬಂದರು. ಅಲ್ಲಿ ಶಿವನ ಪಕ್ಕದಲ್ಲಿ ಗೌರಮ್ಮ ಕುಳಿತಿದ್ದಳು. ಗೌರಮ್ಮನಿಗೆ ತನ್ನ ತಪ್ಪಿನ ಅರಿವಾಯಿತು. ಇದನ್ನೆಲ್ಲ ಬಲ್ಲ ಶಿವ ಹುಸಿನಗುತ್ತಿದ್ದನು. " ಬನ್ನಿ ಬನ್ನಿ. ನೀವು ಒಂದುದು ಒಳ್ಳೆಯದಾಯಿತು. ಇನ್ನು ಮೇಲೆ ದಿನಾ ಗೌರಿ ಭೂಲೋಕ ಯಾತ್ರೆ

ಮಾಡಬೇಕಾಗಿಲ್ಲ" ಎಂದು ಹೇಳಿ ವೀರಮ್ಮ ಅಪ್ಪ ಹಾಲಪ್ಪನಿಗೆ ಬಿಟ್ಟು ಪದವಿಯನ್ನಿತ್ತು ದಿನಾ ಕೈಲಾಸದಲ್ಲಿ ಪದ ಹೇಳುವ ಹಾಗೆ ಏರ್ಪಾಟು ಮಾಡಿದರು.

## ೫. ಕುದುರೆ ಭೀಮಾ

ಜಯಪುರವೆಂಬ ರಾಜ್ಯದಲ್ಲಿ ಜಯಸಿಂಹನೆಂಬ ರಾಜ ಆಳುತ್ತಿದ್ದನು. ಅವನಿಗೆ ಚಂಚಲೆಯೆಂಬ ಸಾಧ್ವಿ ರಾಣಿಯಾಗಿದ್ದಳು. ಇವರಿಗೆ ಎಷ್ಟು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ರಾಜ ಮತ್ತು ರಾಣಿ ಭೀಮಾ ಎಂಬ ಕುದುರೆಯನ್ನು ಚಿಕ್ಕ ವಯಸ್ಸಿನಿಂದಲೂ ಅತಿ ಮುದ್ದಿನಿಂದ ಸಾಕುತ್ತಿದ್ದರು. ಮಕ್ಕಳಿಲ್ಲವೆಂಬ ಕೊರಗು ದೂರವಾಗುವಷ್ಟರ ಮಟ್ಟಿಗೆ ಅದನ್ನು ಪ್ರೀತಿಸುತ್ತಿದ್ದರು. ಅದು ಹೆಸರಿಗೆ ತಕ್ಕಂತೆ ಭೀಮನಂತೆ ಸದೃಢವಾಗಿತ್ತು. ಕೆಲವಾರು ಯುದ್ಧಗಳಲ್ಲಿ ಜಯಸಿಂಹನ ಪ್ರಾಣವನ್ನು ಅದು ರಕ್ಷಿಸಿದ್ದಿತು.

ಕಮಲಾಪುರದ ಯುದ್ಧದಲ್ಲಿ ಜಯಸಿಂಹನು ಶತ್ರು ರಾಜರಿಂದ ತೀವ್ರವಾಗಿ ಗಾಯಗೊಂಡು ಮೂರ್ಛಿತನಾಗಲು ಭೀಮನು ತನ್ನ ಚಾಕಚಕ್ಯತೆಯಿಂದ ಯುದ್ಧಭೂಮಿಯಿಂದ ಹೊರಬಂದು ತನ್ನ ರಾಜನನ್ನು ಕರೆಯ ದಂಡೆಯಲ್ಲಿ ತಂದು ನಿಲ್ಲಿಸಿದಾಗ, ಅಲ್ಲಿದ್ದ ಮಡಿವಾಳರು ರಾಜರ ಗಾಯಕ್ಕೆ ಮುಲಾಮನ್ನು ಹಾಕಿ ನೀರನ್ನು ಕುಡಿಸಿ ಶೈತ್ಯೋಪಚಾರ ಮಾಡಿದ್ದರು. ಹೀಗೆ ಅನೇಕ ರೀತಿಯಲ್ಲಿ ಭೀಮಾ ಜಯಸಿಂಹನಿಗೆ ಸಹಾಯವನ್ನು ಮಾಡಿದ್ದ. ಏನೇ ಹೇಳಿದರೂ ಅರ್ಥಮಾಡಿಕೊಳ್ಳುವ ಜಾಣ್ಮೆ ಭೀಮನಿಗಿದೆ. ರಾಣಿ ಭೀಮನಿಗೆ ಬೇಕಾದ ಹುಲ್ಲನ್ನು ತಾನೇ ನಿಂತು ಹುಲ್ಲುಗಾವಲಿನಲ್ಲಿ ಬೆಳೆಸುತ್ತಿದ್ದಳು. ಅದಕ್ಕೆ ಸ್ನಾನ ಮಾಡಿಸಲು ತಾನೇ ಮುಂದಾಗುತ್ತಿದ್ದಳು. ಅದಕ್ಕೆ ಹಣ್ಣುಗಳನ್ನು ತಟ್ಟೆಯಲ್ಲಿಟ್ಟು ತಿನ್ನಿಸುತ್ತಿದ್ದಳು. ಅದಕ್ಕೆ ಚಿನಿವಾರನಿಗೆ ಹೇಳಿ ಚಿನ್ನದ ಸರಪಣಿಯ ಲಗಾಮನ್ನೂ, ಬೆಳ್ಳಿಯ ಕವಚವನ್ನೂ ಮಾಡಿಸಿ ಹಾಕಿದ್ದಳು. ಒಟ್ಟಿನಲ್ಲಿ ಭೀಮಾ ಜಯಪುರದ ಅರಮನೆಯಲ್ಲಿ ರಾಜಕುಮಾರನಂತೆ ಬೆಳೆಯುತ್ತಿತ್ತು.

ಯಾರ ದೃಷ್ಟಿ ತಾಗಿತೋ ದಿನದಿಂದ ದಿನಕ್ಕೆ ಭೀಮಾ ಬಡಕಲಾಗುತ್ತ ಬಂದಿತು. ರಾಜ - ರಾಣಿಗೆ ಚಿಂತೆ ಆವರಿಸಿತು. ದೇಶ - ವಿದೇಶಗಳಿಂದ ವೈದ್ಯರುಗಳನ್ನು ಕರೆಸಿದರು. ಅವರುಗಳು ಮಾಡದ ಔಷಧಿಯೇ ಇಲ್ಲ, ಕುಡಿಸದ ಕಷಾಯವಿಲ್ಲ. ಆದರೂ ಭೀಮಾ ಬಡಕಲಾಗುತ್ತಾ ಬಂದಿತು. ಜಯಸಿಂಹ - ಚಂಚಲೆಗೆ ಊಟ ಸೇರದಾಯಿತು. ದಿನವೆಲ್ಲ ಭೀಮನ ಬಳಿಯೇ ಕುಳಿತು ಅದರ ಆರೈಕೆಯಲ್ಲಿ ತೊಡಗಿದರು. ಯಾರಿಗೂ ಕಂಡು ಹಿಡಿಯಲಾರದ ಕಾಯಿಲೆಗೆ ಭೀಮಾ ಗುರಿಯಾಗಿದ್ದ.

ಸದಾ ಅರಮನೆಯ ಮೈದಾನದಲ್ಲಿ ಠೀವಿಯಿಂದ ಕೆನೆಯುತ್ತ ಓಡಾಡುತ್ತಿದ್ದ ಭೀಮಾ, ಒಂದು ಹೆಜ್ಜೆಯನ್ನೂ ಎತ್ತಿಕ್ಕಲಾರದಷ್ಟು ನಿಶ್ಶಕ್ತನಾದ. ಚಂಚಲೆ ಊಟ-ನೀರು ಬಿಟ್ಟು ಅದರ ಆರೈಕೆಗೆ ನಿಂತಳು. ಭೀಮಾ ತನ್ನ ದುಃಸ್ಥಿತಿ, ಚಂಚಲೆಯ ಆರೈಕೆ ನೋಡಿ ಕಣ್ಣೀರು ಸುರಿಸಿದರೆ, ಮಗನಿಗಿಂತ ಹೆಚ್ಚಾಗಿ ಸಾಕಿದ ಭೀಮನ ಸ್ಥಿತಿ ನೋಡಿ ಚಂಚಲೆ ಕಣ್ಣೀರು ಸುರಿಸುತ್ತಿದ್ದಳು. ಇವರಿಬ್ಬರ ಪರಿ ನೋಡಿ ಜಯಸಿಂಹನಿಗೆ ದಿಕ್ಕೇ ತೋಚದಾಯಿತು.



ಭೀಮನ ತಲೆಯ ಬಳಿ ಕುಳಿತಿದ್ದ ಚಂಚಲೆಗೆ ಜೋಂಪು ಹತ್ತಿತು. ಸ್ವಪ್ನದಲ್ಲಿ ಭೀಮ 'ಅಮ್ಮ, ನಿನ್ನನ್ನು ಬಿಟ್ಟು ಹೋಗಲಾರೆ. ಆದರೆ ಏನು ಮಾಡಲಿ, ಸಾವು ನನ್ನನ್ನು ಕರೆಯುತ್ತಿದೆ' ಎನ್ನಲು ಚಂಚಲೆ, 'ಬೇಡ ಭೀಮಾ, ನಿನ್ನನ್ನು ಬಿಟ್ಟು ನಾತಾನೇ ಹೇಗೆ ಬದುಕಲಿ?' ಎನ್ನುತ್ತಿದ್ದಳು. ಅದಕ್ಕೆ ಭೀಮಾ 'ಮುಂದಿನ ಜನ್ಮದಲ್ಲಿ ನಾನು ನಿನ್ನ ಹೊಟ್ಟೆಯಲ್ಲಿ ಮಗನಾಗಿ ಹುಟ್ಟುತ್ತೇನೆ' ಎನ್ನಲು ಚಂಚಲೆಗೆ ಎಚ್ಚರವಾಯಿತು.

ಭೀಮನು ತಲೆಯನ್ನು ಎರಡು ಮೂರು ಬಾರಿ ಒದರಿದನು. ಬಾಯಿಮದ ಜೊಲ್ಲು ಸುರಿಯುತ್ತಿತ್ತು. ಕಣ್ಣೀರು ಬತ್ತಿಹೋಯಿತು. ಸತ್ತ ಭೀಮನನ್ನು ನೋಡಿ ಚಂಚಲೆ ಎದೆ ಎದೆ ಬಡಿದುಕೊಂಡು ಅತ್ತಳು. ಜಯಸಿಂಹ ದುಃಖಪೂರಿತನಾಗಿ ಅರಮನೆಯ ಆವರಣದಲ್ಲಿಯೇ ಭೀಮನನ್ನು ಸಮಾಧಿ ಮಾಡಿದನು. ಅಲ್ಲಿ ಭೀಮನ ಒಂದು ಮೂರ್ತಿಯನ್ನು ಕೆತ್ತಿಸಿದನು.

ಚಂಚಲೆ ಯಾವಾಗಲೂ ಭಿಮನ ಸಮಾಧಿಯ ಹತ್ತಿರ ಸರಿಯಾಗಿ ಊಟ ತಿಂಡಿ ಸ್ನಾನ ಮಾಡದೆ ಕುಳಿತಿರುತ್ತಿದ್ದಳು. ಚಂಚಲೆಗೆ ತಲೆ ತಿರುಗುವಿಕೆ, ವಾಂತಿ ಪ್ರಾರಂಭವಾಯಿತು. ಚಂಚಲೆಯ ದೇಹಸ್ಥಿತಿ ಜಯಸಿಂಹನಿಗೆ ಗಾಬರಿ ತರಿಸಿತು. ವೈದ್ಯರನ್ನು ಕರೆದುಕೊಂಡು ಬಂದು ತೋರಿಸಲು ಚಂಚಲೆ ಗರ್ಭಧರಿಸಿರುವುದಾಗಿ ತಿಳಿಯಿತು.

ಭೀಮ ಸತ್ತ ಒಂಭತ್ತು ತಿಂಗಳಿಗೆ ಚಂಚಲೆ ಒಂದು ಕುದುರೆಗೆ ಜನ್ಮ ನೀಡಿದಳು. ಜಯಸಿಂಹ ಚಂಚಲೆ ಕುದುರೆ ಹಡೆದುದನ್ನು ನೋಡಿ ಬೇಸರಪಟ್ಟನು. ಒಂದು ರಾಜ್ಯದ ರಾಣಿ ಕುದುರೆ ಹಡೆದಳೆಂದರೆ ಅವಮಾನವೆಂದು, ರಾಜ್ಯದ ಪ್ರಜೆಗಳ ಮುಂದೆ ಅವಮಾನಕ್ಕೆ ತುತ್ತಾಗಬೇಕಾಗುತ್ತದೆ ಎಂದು ಅವಳನ್ನು ಕಾಡಿಗೆ ಅಟ್ಟಿದನು.

ರಾಣಿ ಚಂಚಲೆಗೆ ಭೀಮನೇ ಹುಟ್ಟಿದನೆಂಬ ಸಂತೋಷ. ಆದರೆ ರಾಜಾಜ್ಞೆಯಂತೆ ತನ್ನ ಕುದುರೆಯ ಜೊತೆ ಕಾಡಿಗೆ ಹೊರಟಳು. ಕಾಡಿನಲ್ಲಿ ಅಲೆದಾಡುತ್ತ ಗೆಡ್ಡೆಗೆಣಸು, ಸಿಕ್ಕಿದ ಹಣ್ಣು ಹಂಪಲನ್ನು ತಿನ್ನುತ್ತಾ, ಕೊನೆಗೆ ಕಾಡಿನಲ್ಲೆ ಒಂದು ಗುಡಿಸಲನ್ನು ಕಟ್ಟಿಕೊಂಡು ವಾಸಿಸಲು ಮೊದಲು ಮಾಡಿದಳು. ಹೀಗೆ ವರ್ಷಗಳು ಉರುಳಲು, ಕುದುರೆ ವಯಸ್ಸಿಗೆ ಬಂದು ಗರ್ಭಧರಿಸಿತು. ಚಂಚಲೆಗೆ ತಾನು ಹೆತ್ತ ಕುದುರೆಯ ಮೇಲೆ ಅಗಾಧವಾದ ಪ್ರೀತಿ. ತುಂಬು ಗರ್ಭಿಣಿಯಾದ ಕುದುರೆಯ ಲಾಲನೆ, ಪೋಷಣೆಯನ್ನು ಚೆನ್ನಾಗಿಯೇ ಮಾಡುತ್ತಿದ್ದಳು.

ಹೀಗೆ ಒಂದು ದಿನ ಚಂಚಲೆ ಕುದುರೆಯ ತಲೆಯ ಹತ್ತಿರ ನಿದ್ರೆ ಮಾಡುತ್ತಿರಲು, ಮತ್ತೊಂದು ಸ್ವಪ್ನ ಬಿದ್ದಿತು. 'ಅಮ್ಮ, ನನ್ನನ್ನು ಅಪ್ಪನ ಹತ್ತಿರ ಕರೆದುಕೊಂಡು ಹೋಗು' ಎಂದಂತೆ. ಮೊದಲನೇ ಸ್ವಪ್ನ ನಿಜವಾದುದು ಅನ್ನುತ್ತಿದ್ದ ಚಂಚಲೆ ಸಂತೋಷದಿಂದಲೇ ಜಯಪುರದತ್ತ ತನ್ನ ಮಗಳು ಕುದುರೆಯ ಜೊತೆ ಪ್ರಯಾಣ ಬೆಳೆಸಿದಳು.

ಇತ್ತ ಜಯಸಿಂಹ ಜನರ ಅವಮಾನಕರವಾದ ಮಾತುಗಳಿಗೆ ಹೆದರಿ ರಾಣಿಯನ್ನೇನೋ ರಾಜ್ಯ ಬಿಟ್ಟು ಕಳುಹಿಸಿ ಬಿಟ್ಟಿದ್ದ. ಆದರೆ ರಾಣಿಯ ಮೇಲೂ ಮತ್ತು ಕುದುರೆಯ ಮೇಲೂ ಅವನಿಗಿದ್ದ ಪ್ರೀತಿಯೇನು ಕಡಿಮೆಯಾಗಿರಲಿಲ್ಲ. ರಾಜ್ಯಭಾರವನ್ನೆಲ್ಲ ಮಂತ್ರಿಯ ಮೇಲೆ ಹಾಕಿ ಸದಾ ಹೆಂಡತಿ, ಮಗಳ ಚಿಂತೆಯಲ್ಲೇ ಕಾಲ ಕಳೆಯತೊಡಗಿದ.

ರಾಜ್ಯದ ಹೊರಗೆ ಯಾರೋ ಅಲೆಮಾರಿ ಹೆಂಗಸು ಎಷ್ಟು ಹೇಳಿದರೂ ಕೇಳದೆ ಕುದುರೆಯ ಸಮೇತ ಬಂದು ರಾಜನ ದರ್ಶನಕ್ಕೆ ಕಾಯುತ್ತಿರುವುದಾಗಿ ಸೈನಿಕನೊಬ್ಬ ರಾಜನಿಗೆ ತಿಳಿಸಿದ. ಜಯಸಿಂಹ ಕುದುರೆಯ ಸಮೇತ ಬಂದಿರುವವಳು ತನ್ನ ಹೆಂಡತಿ ಎಂದು ಅತಿ ಸಂತೋಷದಿಂದ ಎದುರುಗೊಂಡ. ಚಂಚಲೆ ಚಿಂದಿಯುಟ್ಟು ಕಳಾಹೀನಳಾಗಿ ನಿಂತ ಅವಳನ್ನು ನೋಡಿ ರಾಜನಿಗೆ ದುಃಖ ಒತ್ತರಿಸಿ ಬಂತು. ಚಂಚಲೆ ರಾಜನನ್ನು ಅತಿ ಸಂತೋದಿಂದ ನೋಡುತ್ತಿರಲು, ಚಂಚಲೆಯ ಬಳಿ ಇದ್ದ ಕುದುರೆ ಮಗಳು ತಂದೆಯ ಬಳಿ ಬಂದು ಪಾದಕ್ಕೆ ನಮಸ್ಕರಿಸುತ್ತಲೇ ಕುಸಿಯಿತು. ಅಲ್ಲೇ ಅದು ಒಂದು ಗಂಡು ಮಗುವಿಗೆ ಜನ್ಮ ನೀಡಿ ಕೊನೆಯುಸಿರೆಳೆಯಿತು.

ಈ ಆಘಾತದಿಂದ ಕುಸಿದ ಚಂಚಲೆಗೆ ಅಲ್ಲಿ ಸೇರಿದ ಪುರದ ಜನರೇ ಸಂತೈಸಿ, ಮಗುವಿನ ಸಮೇತ ಅರಮನೆಗೆ ಕರೆದುಕೊಂಡು ಹೋದರು. ರಾಜ ಜಯಸಿಂಹ ಭೀಮನ ಪಕ್ಕದಲ್ಲೇ ತನ್ನ ಮಗಳು ಕುದುರೆಗೂ ಸಮಾಧಿ ಕಟ್ಟಿಸಿ ದಿನಾ ಅದಕ್ಕೆ ಪೂಜೆ ಸಲ್ಲಿಸುತ್ತಾ ಬಹುಕಾಲ ರಾಜ್ಯಭಾರ ಮಾಡುತ್ತ ಸುಖದಿಂದಿದ್ದರು.

# ೬. ಮೋಸಗಾರ ಚೆಲುವ

ಒಂದು ಊರಿನಲ್ಲಿ ರಾಮೋಜಿ ಎಂಬ ಕುಂಬಾರನಿದ್ದನು. ಗಂಡ-ಹೆಂಡತಿ ತಮ್ಮ ಕುಲ ಕಸುಬಾದ ಕುಂಬಾರಿಕೆಯಿಂದ ಜೀವನ ನಡೆಸುತ್ತಿದ್ದರು. ಪ್ರತಿ ದಿನ ಸೂರ್ಯ ಹುಟ್ಟುವ ಮುಂಚೆಯೇ ಹೆಂಡತಿ ಕೊಟ್ಟ ರೊಟ್ಟಿ ಕಟ್ಟಿಕೊಂಡು ಮಡಿಕೆ ಮಾಡಲಿಕ್ಕೆ ಮಣ್ಣು ತರಲು ಹೋಗುತ್ತಿದ್ದನು. ಗಾಡಿಯಿಂದ ಮಣ್ಣು ತಂದು ಹಾಕಿ, ಮಣ್ಣನ್ನು ಹದ ಮಾಡುತ್ತಿರಬೇಕಾದರೆ ಒಂದು ದಿನ ರಾಮೋಜಿಗೆ ಮಣ್ಣಿನಲ್ಲಿ ನಿಂಬೆಹಣ್ಣಿನ ಗಾತ್ರದ ಒಂದು ಹರಳು ದೊರಕಿತು. ಪಕ್ಕದಲ್ಲೇ ಮಡಕೆಯಲ್ಲಿದ್ದ ನೀರಿನಲ್ಲಿ ಅದನ್ನು ತೊಳೆದು ನೋಡಲು ಅದು ಸೂರ್ಯನ ಬೆಳಕಿಗೆ ಸಪ್ತವರ್ಣದಿಂದ ಹೊಳೆಯುತ್ತಿತ್ತು. ರಾಮೋಜಿ ಊಟ ಮಾಡಿಕೊಂಡು ಮಧ್ಯಾಹ್ನದ ಮೇಲೆ ಚಿನ್ನದ ಕೆಲಸ ಮಾಡುವ ಅಕ್ಕಸಾಲಿಗ ಚೆಲುವನಿಗೆ ಆ ಹರಳನ್ನು ತೋರಿಸಲು ಅವನ ಬಳಿ ಹೋದನು. ರಾಮೋಜಿ ತನಗೆ ಸಿಕ್ಕಿದ ಹರಳನ್ನು ಚಿನ್ನದ ಕೆಲಸ ಮಾಡುವ ಚೆಲುವಯ್ಯನಿಗೆ ತೋರಿಸಿದನು. ಚೆಲುವಯ್ಯ ರಾಮೋಜಿಗೆ ಮೋಸ ಮಾಡಲು ಅದು ಕೇವಲ ಗಾಜಿನ ಚೂರೆಂದು ಹೇಳಿ ಕಳುಹಿಸಿದನು. ತಟವಟ ಅರಿಯದ ರಾಮೋಜಿ ಚೆಲುವಯ್ಯನ ಮಾತು ಸತ್ಯವೆಂದು ನಂಬಿ 'ಬಂದ ದಾರಿಗೆ ಸುಂಕವಿಲ್ಲ' ಎಂದು ಹಾಗೇ ಮನೆಗೆ ಹಿಂತಿರುಗಿದನು.



ಹೀಗಿರಲು ಮತ್ತೊಂದು ದಿನ ಮಣ್ಣನ್ನು ಹದ ಮಾಡಬೇಕಾದರೆ, ಅದೇ ರೀತಿಯ ಇನ್ನೊಂದು ಹರಳು ದೊರಕಿತು. ಇದನ್ನು ರಾಮೋಜಿಯ ಹೆಂಡತಿ ನೋಡಿದಳು. ರಾಮೀಜಿಯ ಹೆಂಡತಿ ಲಕ್ಷ್ಮೀ ಬಹಳ ಚತುರೆ. ಲಕ್ಷ್ಮೀ ಆ ಹರಳನ್ನು ಸಂತೋಷದಿಂದ ತಂದು ನೀರಿನಲ್ಲಿ ತೊಳೆದು ಚಿನ್ನದ ಕೆಲಸದ ಚೆಲುವಯ್ಯನಿಗೆ ತೋರಿಸಿ, ಹಣ ಬಂದರೆ ತೆಗೆದುಕೊಂಡು ಬರುವಂತೆ ಗಂಡನಿಗೆ ಹೇಳಿದಳು. ರಾಮೋಜಿ ಮೊದಲೇ ತನಗೆ ಇಂಥ ಹರಳು ದೊರಕಿದುದು, ಅದನ್ನು ವಜ್ರದ ಹರಳಿರಬಹುದೆಂದು ತಾನೂ ಅನುಮಾನಿಸಿ ಚೆಲುವಯ್ಯನ ಬಳಿ ತೋರಿಸಿದುದು, ಅವನು ಅದನ್ನು ಗಾಜಿನ ಚೂರೆಂದು ಹೇಳಿದ ವೃತ್ತಾಂತವನ್ನು ಹೇಳಿ ಅದು ಗಾಜಿನ ಅಸಡ್ಡೆಯಿಂದ ಹೇಳಿದನು. ಆದರೆ ಲಕ್ಷ್ಮೀಗೆ ಸಂಶಯ ಪರಿಹಾರವಾಗಲಿಲ್ಲ. ಅವಳು ರಾಮೋಜಿಗೆ ಹೇಳಿದಳು: "ನಾಳೆ ಹೇಗಿದ್ದರೂ ನಾನು ಪಕ್ಕದ ಊರಿಗೆ ಹೋಗಬೇಕು. ಅಲ್ಲಿನ ಮಾಲಿಂಗಾಚಾರಿಗೆ ತೋರಿಸಿ ಬರುತ್ತೇನೆ" ಎಂದು ಹೇಳಿ, ಮಾರನೇ ದಿನ ಗಂಡನಿಗೆ ಅಡಿಗೆ ಮಾಡಿಟ್ಟು, ಮಧ್ಯಾಹ್ನ ತಾನೇ ಹಾಕಿಕೊಂಡು ಉಣ್ಣಲು ಹೇಳಿ, ಪಕ್ಕದ ಗ್ರಾಮಕ್ಕೆ ಹೊರಟಳು. ಇದರಿಂದ ರಾಮೋಜಿಗೆ ಯಾವ ರೀತಿಯ ಉತ್ಸಾಹವಾಗಲಿ, ಕುತೂಹಲವಾಗಲಿ ಇರಲಿಲ್ಲ. ಚೆಲುವಯ್ಯ ನಂಬಿಗಸ್ಥ, ತನ್ನ ಹೆಂಡತಿಗೆ ಓಲೆ ಸಹ ಮಾಡಿಕೊಟ್ಟಿದ್ದಾನೆ. ಅಂಥವನು ಸುಳ್ಳು ಹೇಳುತ್ತಾನೆಯೇ ಎಂಬ ದೃಢವಾದ ನಂಬಿಕೆ.

ಲಕ್ಷ್ಮಿ ನೇರವಾಗಿ ಪಕ್ಕದ ಗ್ರಾಮಕ್ಕೆ ಬಂದು ಮಾಲಿಂಗಾಚಾರಿ ಹತ್ತಿರ ಹೋಗಿ, ತನಗೆ ಸಿಕ್ಕಿದ ಹರಳನ್ನು ತೋರಿಸಿದಳು. ಮಾಲಿಂಗಾಚಾರಿ ವೃದ್ಧ, ಅನುಭವಸ್ಥ, ಸತ್ಯಧರ್ಮ ಬಲ್ಲವನು. ಇನ್ನೊಬ್ಬರ ವಸ್ತುವೆಂದರೆ ಪಾಷಾಣದಂತೆ ಕಂಡವನು. ಬಡತನವಿದ್ದರೂ ನೆಮ್ಮದಿಯ ಜೀವನ ನಡೆಸುತ್ತಿದ್ದವನು. ಮಾಲಿಂಗಾಚಾರಿ ಹರಳನ್ನು ಪರೀಕ್ಷಿಸಿ, "ಇದು ಬಹುಬೆಲೆ ಬಾಳುವ ವಜ್ರ. ಇದನ್ನು ತೆಗೆದುಕೊಳ್ಳುವ ಶಕ್ತಿ ಮಹಾರಾಜರಿಗಲ್ಲದೆ ಬೇರೆ ಯಾರಿಗೂ ಇಲ್ಲ. ಸುಮ್ಮನೆ ನಿನ್ನ ಗಂಡನನ್ನು ಕರೆದುಕೊಂಡು ರಾಜಧಾನಿಗೆ ಹೋಗಿ ಮಹರಾಜರಿಗೆ ಇದನ್ನು ಒಪ್ಪಿಸಿ, ನಿಮ್ಮನ್ನು ಆದರದಿಂದ ಕಂಡು ಬಹುಮಾನವನ್ನು ಕೊಡುತ್ತಾರೆ, ಬೇರೆ ಯಾರಿಗೂ ತೋರಿಸಬೇಡಿ, ನಿಮಗೆ ಅಪಾಯ ಸಂಭವಿಸಬಹುದು" ಎಂದು ಬುದ್ಧಿ ಮಾತು ಹೇಳಿದನು.

ಲಕ್ಷ್ಮಿ ಮನೆಗೆ ಬಂದು ಗಂಡನಿಗೆ ನಡೆದ ವಿಷಯವನ್ನೆಲ್ಲಾ ಹೇಳಿದಳು. ರಾಮೋಜಿಗೆ ತನ್ನ ಗೆಳೆಯ ಚೆಲುವಯ್ಯನು ಮಾಡಿದ ಮೋಸವೆಲ್ಲಾ ಅರಿವಾಯಿತು. ರಾಮೋಜಿ ಹೆಂಡತಿಗೆ, “ಲಕ್ಷ್ಮೀ, ಈಗ ನಾವು ಹೋಗಿ ಚೆಲುವಯ್ಯನನ್ನು ಕೇಳಿದರೆ ಮೊದಲೇ ಮೋಸಮಾಡಿದ ಅವನು ಹರಳನ್ನು ಇಲ್ಲ ಎನ್ನಬಹುದು. ಅದಕ್ಕೆ ಮಹಾರಾಜರಿಗೆ ಈ ಹರಳನ್ನು ಒಪ್ಪಿಸಿ, ನಡೆದುದನ್ನೆಲ್ಲಾ ಅವರಲ್ಲಿ ಅರಿಕೆ ಮಾಡಿಕೊಳ್ಳೋಣ. ಮಿಕ್ಕದ್ದು ಮಹಾರಾಜರಿಗೆ ಬಿಟ್ಟಿದ್ದು. ಏನಂತೀಯಾ?” ಎಂದು ಕೇಳಿದನು. ಹೆಂಡತಿ ಲಕ್ಷ್ಮಿ ಅವನ ಮಾತಿಗೆ ಒಪ್ಪಿಗೆ ಸೂಚಿಸಿದಳು.

ರಾಮೋಜಿ ಮತ್ತು ಲಕ್ಷ್ಮಿ ಬೆಳಿಗ್ಗೆ ಬೇಗ ಎದ್ದು ಸ್ನಾನ ಮಾಡಿ, ರೊಟ್ಟಿ ಕಟ್ಟಿಕೊಂಡು ಮಹಾರಾಜರನ್ನು ಕಾಣಲು ರಾಜಧಾನಿಗೆ ಪ್ರಯಾಣ ಮಾಡಿದರು. ಕಷ್ಟಪಟ್ಟು ಹೇಗೋ ಮಹಾರಾಜನ ದರ್ಶನ ಪಡೆಯುವುದರಲ್ಲಿ ಯಶಸ್ವಿಯಾದರು. ಮಹಾರಾಜರಿಗೆ ಹರಳನ್ನು ಒಪ್ಪಿಸಿ, ನಡೆದ ಸಮಾಚಾರವನ್ನೆಲ್ಲ ಹೇಳಿದರು. ತಾವೇ ಹರಳನ್ನು ಇಟ್ಟುಕೊಳ್ಳದೆ, ಯಾವ ರತ್ನಪಡಿ ವ್ಯಾಪಾರಿಗೂ ಮಾರದೆ, ಭಯಭಕ್ತಿಯಿಂದ ತಂದು ಕೊಟ್ಟಿರುವುದನ್ನು ನೋಡಿ ಮಹಾರಾಜನಿಗೆ ಬಹಳ ಸಂತೋಷವಾಯಿತು. ಆದರೆ ಇಂಥ ಮುಗ್ಧರನ್ನು ಮೋಸ ಮಾಡಿದ ಚೆಲುವಯ್ಯನ ಮೇಲೆ ಕೋಪ ಸಹ ಬಂದಿತು. ರಾಮೋಜಿ ದಂಪತಿಗಳನ್ನು ಅಭಿನಂದಿಸಿದ ರಾಜನಿಗೆ ಚೆಲುವಯ್ಯನಿಗೆ ಬುದ್ಧಿ ಕಲಿಸುವುದು ಹೇಗೆಂದು ಆಪ್ತ ಸಚಿವರಲ್ಲಿ ಅಮಾಲೋಚಿಸಿದನು. ಸಮಾಲೋಚನೆಯ ಫಲವಾಗಿ ರಾಮೋಜಿ ದಂಪತಿಗಳಿಗೆ ಅಂದು ಅಲ್ಲೇ ಉಳಿದುಕೊಳ್ಳಲು ಹೇಳಿ, ಎಲ್ಲ ವ್ಯವಸ್ಥೆಯನ್ನು ಮಾಡಿಸಿದನು.

ಮಾರನೇ ದಿನ ಮಹಾರಾಜ ಉಪಹಾರ ನಂತರ ರಾಮೋಜಿ ದಂಪತಿಗಳಿಗೆ ಒಂದು ಉಪಾಯವನ್ನು ಹೇಳಿದನು. “ನೀವು ಹೇಗೆ ಬಂದಿರೋ ಹಾಗೇ ನಿಮ್ಮ ಗ್ರಾಮಕ್ಕೆ ಹೋಗಿ, ಚೆಲುವಯ್ಯನ ಬಳಿ ಹೋಗಿ, ಈಗ ಸಿಕ್ಕಿರುವ ಈ ಹರಳನ್ನು ತೋರಿಸಿ. ಇಷ್ಟು ಬೇಗ ಇಂಥ ಹರಳನ್ನು ಅವನು ಬೇರೆಯವರಿಗೆ ಮಾರುವುದಕ್ಕೆ ಸಾಧ್ಯವಿಲ್ಲ. ಹರಳಿನ ವಿಷಯವನ್ನು ಲೋಕಾಭಿರಾಮವಾಗಿ ಮಾತಾಡುತ್ತಾ ಇರಿ. ಮುಂದಿನದನ್ನು ನಾವು ನೋಡಿಕೊಳ್ಳುತ್ತೇವೆ.”

“ಹಾಗೆ ಆಗಲಿ ಮಹಾಪ್ರಭು!” ಎಂದು ರಾಮೋಜಿ ದಂಪತಿಗಳು ಮಹಾರಾಜನಿಗೆ ಹೇಳಿ ರಾಜನಿಂದ ಬೀಳ್ಕೊಂಡು ತಮ್ಮ ಊರಿಗೆ ಮರಳಿದರು.

ರಾಮೋಜಿ ದಂಪತಿಗಳು ತುಸು ಹೊತ್ತು ಪ್ರಯಾಣದ ದಣಿವಾರಿಸಿ ಕೊಂಡು ಮತ್ತೆ ಮಹಾರಾಜನು ಹೇಳಿದ ಹಾಗೆ ಚಲುಯ್ಯನ ಅಂಗಡಿಯನ್ನು ಕುರಿತು ಹೊರಟರು.

ಇತ್ತ ಆ ವೇಳೆಗಾಗಲೇ ಚೆಲುವಯ್ಯನು ಆ ಬೆಲೆಬಾಳುವ ವಜ್ರದ ಹರಳನ್ನು ರಾಜಧಾನಿಗೆ ತೆಗೆದುಕೊಂಡು ಹೋಗಿ ಮಾರಲು ಸಮಯ ಕಾಯುತ್ತಿದ್ದನು. ಅಷ್ಟರಲ್ಲೇ ತನ್ನ ಅಂಗಡಿಯತ್ತ ರಾಮೋಜಿ ಮತ್ತು ಅವನ ಹೆಂಡತಿ ಬರುತ್ತಿರುವುದನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಆದರೆ ಇವರು ಯಾವುದೋ ಊರಿಗೆ ಹೋಗಿದ್ದ ವಿಷಯ ಚೆಲುವಯ್ಯನಿಗೆ ತಿಳಿದಿತ್ತು. ತನ್ನ ಮುಖದಲ್ಲಿ ಸಂತೋಷವನ್ನು ಆದಷ್ಟು ಮರೆಮಾಡಿ, ಏನೋ ಕೆಲಸದಲ್ಲಿ ಮಗ್ನನಾಗಿರುವಂತೆ ನಟಿಸಿದನು. ಅಂಗಡಿ ಬಳಿಗೆ ಬಂದ ಮೇಲೆ, “ಓ ರಾಮೋಜಿ. ಮೊನ್ನೆ ಎಲ್ಲೋ ಯಾವುದೋ ಊರಿಗೆ ಹೊರಟಂಗೆ ಇತ್ತು?” ಎನ್ನಲು ರಾಮೋಜಿ ಲಕ್ಷ್ಮಿಗೆ, ಎಲ್ಲಿಯಾದರೂ ನಾವು ಮಹಾರಾಜರನ್ನು ಕಂಡ ವಿಷಯ ಇವನಿಗೆ ಗೊತ್ತಾಯಿತೇನೋ ಎಂದು ಒಂದು ಗಳಿಗೆ ಇಬ್ಬರೂ ಗಾಬರಿಗೊಂಡರು. ಆದರೂ ಗುಟ್ಟು ಬಿಡದೆ ಸಾವರಿಸಿಕೊಂಡು “ಮೊನ್ನೆ ಇವಳಪ್ಪನ ಮನೆಗೆ ಹೋಗಿದ್ದೆ. ನಮ್ಮತ್ತೆಗೆ ಹುಷಾರಿರಲಿಲ್ಲ. ಈಗ ಪರ್ವಾಗಿಲ್ಲ. ನೀನು ಹೆಂಗಿದ್ದೀಯಾ? ಯಾಪಾರ ಹೆಂಗೈತೇ?” ಎನ್ನಲು, “ಏನು ಯಾಪಾರವೋ ಏನೋ? ಅದು ಸರಿ, ಈವತ್ತು ಮತ್ತೆ ಯಾವುದಾದರೂ ಗಾಜಿನ ಚೂರು ತಂದಿಲ್ಲ ತಾನೆ?” ಎಂದು ಹೇಳುತ್ತ, ರಾಮೋಜಿಯ ಕಡೆ ಕಳ್ಳ ನೋಟ ಬೀರಿದನು. ನೀ ಹಂಗಣೆ ಮಾಡಬ್ಯಾಡಪ್ಪ, ಏನೋ ಮಣ್ಣು ತೆಗೆಯಲಿಕ್ಕೆ ಹೋದಾಗ ಸಿಕ್ಕು, ತಂದು ತೋರಿಸಿದೆ. ಅದು ತೆಪ್ಪಾ?” ಎಂದನು.

“ನಾ ಯಾಕೆ ನಗಸಾರ ಮಾಡ್ಲಿ, ಸಿಕ್ಕಿದರೆ ಕೊಡು, ನನಗೂ ಕೆಲಸ ಇಲ್ಲ, ಕಲ್ಲನ್ನಾದರೂ ಕುಟ್ಟುತ್ತೀನಿ” ಎಂದನು. ಅದಕ್ಕೆ ರಾಮೋಜಿ “ನೆನ್ನೆ ಅದೇ ತರದ್ದು ಇನ್ನೊಂದು ಸಿಕ್ತು. ನನ್ನ ಹೆಂಡತಿಗೆ ಅದು ಗಾಜಿನ ಚೂರೆಂದು ಹೇಳಿದರೆ ಸಂಶಯ, ಕೇಳಲೇ ಇಲ್ಲ. ನನ್ನ ಮೇಲೆ ಸಂಶಯ ಅವಳಿಗೆ. ಅದಕ್ಕೆ ಅವಳನ್ನೇ ನಿನ್ನಲ್ಲಿಗೆ ಕರೆದುಕೊಂಡು ಬಂದೆ. ನೀನೇ ಹೇಳಪ್ಪ” ಎಂದನು.

“ಹೌದು ಲಕ್ಷ್ಮವ್ವ, ನಿನ್ನ ಗಂಡ ಹೇಳಿದ್ದು ಸತ್ಯನೇ, ಎಲಾ ಇನ್ನೊಂದು ಹರಳು ತೋರಿಸು” ಎಂದನು ಚೆಲುವಯ್ಯ. ಲಕ್ಷ್ಮಿ ತನ್ನ ಬಾಳೆಕಾಯಿ ಗಂಟಲ್ಲಿದ್ದ ನಿಂಬೆ ಹಣ್ಣಿನ ಗಾತ್ರದ ಹರಳನ್ನು ತೆಗೆದು ತೋರಿಸಿ, “ಅಲ್ಲ ಚೆಲುವಯ್ಯ, ಮೊದಲಿನ ತರದ್ದೇ ಅಂತ ಹೇಗೆ ಹೇಳುತ್ತೀಯಾ? ನೋಡು, ಹೇಗೆ ಹೊಳೆಯುತ್ತಿದೆ!?” ಎಂದು ಹರಳನ್ನು ಚೆಲುವಯ್ಯ ಹರಳನ್ನು ಕೈಗೆ ತೆಗೆದುಕೊಂಡು “ಅಲ್ಲ ಕಣ್ಣವ್ವ, ಎಲ್ಲರೂ ನನ್ನ ಅಂಗಡಿಗೆ ಚಿನ್ನ ಕೊಟ್ಟು ಒಡವೆ ಮಾಡಿಸಿದರೆ, ನೀವೊಬ್ಬರೇ ಗಾಜಿನ ಚೂರು ತಂದು ತೋರಿಸುತ್ತಿರುವುದು” ಎಂದು ನಗೆಯಾಡಿದನು.

ಅವನಿಗೆ ಈಗ ಒಳಗೇ ಸಂತೋಷ ತುಂಬಿ ಇದನ್ನು ಹೇಗಾದರೂ ಲಪಟಾಯಿಸಿಬಿಡಬೇಕೆಂಬ ಉತ್ಕಟೇಚ್ಛೆ ಮನದಲ್ಲಿ ಪ್ರಬಲವಾಯಿತು.

ಅಷ್ಟರಲ್ಲಿ ಅಲ್ಲೇ ಮಾರುವೇಷದಲ್ಲಿ ಅಡಗಿದ್ದ ಮಹಾರಾಜರ ಕಡೆಯವರು ಚೆಲುವಯ್ಯನನ್ನು ಬಂಧಿಸಿ ರಾಜಧಾನಿಗೆ ಎಳೆದುಕೊಂಡು ಹೋದರು. ಮಹಾರಾಜ ಚೆಲುವಯ್ಯನಿಂದ ಹರಳುಗಳನ್ನು ವಶಪಡಿಸಿಕೊಂಡು, ಮುಗ್ಧ ದಂಪತಿಗಳಿಗೆ ಮೋಸ ಮಾಡಿದ್ದಕ್ಕೆ ಶಿಕ್ಷೆಯನ್ನು ವಿಧಿಸಿ, ರಾಮೋಜಿ ದಂಪತಿಗಳನ್ನು ಅರಮನೆಗೆ ಕರೆಸಿ, ಸತ್ಕರಿಸಿ, ಮುಂದಿನ ಜೀವನವನ್ನು ಸುಖಸಂತೋಷದಿಂದ ಕಳೆಯಲು ಅನುಕೂಲಗಳನ್ನು ಮಾಡಿಕೊಟ್ಟನು.

## ೭. ಹಾವಿಗೆ ಹಾಲೆರದ ಮುದುಕಿ

ಒಬ್ಬ ಮುದುಕಿ ಒಂದು ದಿನ ತನ್ನ ಮನೆ ಮುಂದೆ ಕುಳಿತಿದ್ದಳು. ಅವಳ ಕಾಲಿನ ಬೆರಳು ತಣ್ಣಗಾಗದಂತೆ ಅವಳಿಗೆ ಅನ್ನಿಸಿತು. ತಕ್ಷಣ ಕಾಲನ್ನು ಎಳೆದುಕೊಂಡು ಏನೆಂದು ನೋಡಲು, ಎಲ್ಲಿಂದಲೋ ಒಂದು ನಾಗರಹಾವು ಅವಳತ್ತಲೇ ನೋಡುತ್ತಿತ್ತು. ಅವಳು ಭಯಭಕ್ತಿಯಿಂದ ಒಂದು ಬಟ್ಟಲಲ್ಲಿ ಹಾಲನ್ನು ತಂದು ನೀಡಿ ಕೈ ಮುಗಿದು, “ನಾಗರಾಜ, ಹಾಲನ್ನು ಕುಡಿದು ಯಾರಿಗೂ ಏನು ಮಾಡದೇ ಹೊರಟು ಹೋಗು” ಎಂದಳು. ಅದಕ್ಕೆ ನಾಗರಾಜ “ಪ್ರತಿ ದಿನಾ ನನಗೆ ಹಾಲು ಇಡುವುದಾದರೆ ಯಾರಿಗೂ ಏನು ಮಾಡುವುದಿಲ್ಲ” ಎಂದು ಹೇಳಿತು.

ಹೀಗೆ ವರ್ಷಾನುಗಟ್ಟಲೆ ಮುದುಕಿ ಭಕ್ತಿಯಿಂದ ನಾಗರಾಜನಿಗೆ ಹಾಲನ್ನು ನೀಡುತ್ತಿದ್ದಳು. ನಾಗರಾಜನಿಗೂ ಪ್ರತಿದಿನ ಮುದುಕಿ ಕೊಡುವ ಹಾಲನ್ನು ಕುಡಿಯುವುದು ರೂಢಿಯಾಗಿ ಹೋಯಿತು. ವಯಸ್ಸಾದಂತೆ ಮುದುಕಿ ನಿತ್ರಾಣಳಾದಳು. ಬರುವ ಆದಾಯ ಕಡಿಮೆಯಾಗಿ ಮಗ ಬೇರೆ ಕಡೆ ಮನೆ ಮಾಡಿ ಹೊರಟುಹೋದನು. ಮುದುಕಿಗೆ ನಾಗರಾಜನಿಗೆ ಹಾಲನ್ನು ತರುವಷ್ಟು ಹಣ ಇಲ್ಲದಂತಾಯಿತು. ಮುಂದೆ ಏನು ಮಾಡಬೇಕೆಂದು ತಿಳಿಯದೆ ಬಹಳ ಪೇಚಾಡಿಕೊಂಡಳು. ಕೊನೆಗೆ ಒಬ್ಬ ಹಾವು ಹಿಡಿಯುವವನನ್ನು ಕರೆದು, “ನಾಗರಾಜ ಬಂದಾಗ ಅದನ್ನು ನೋವಾಗದಂತೆ ಹಿಡಿದು ಊರಿನಿಂದ ಆಚೆ ತೆಗೆದುಕೊಂಡು ಹೋಗಿ ಬಿಟ್ಟುಬಿಡು” ಎಂದು ಹಾವಾಡಿಗನಿಗೆ ಹೇಳಿದಳು. ಹಾವು ಹಿಡಿಯುವವನು ಅದೇ ರೀತಿ ಹಾವನ್ನು ಹಿಡಿದು ಊರಿನ ಆಚೆ ಬಿಟ್ಟು ಬಂದನು. ಆದರೆ ಮಾರನೆ ದಿನ ಅದೇ ಸಮಯಕ್ಕೆ ಸರಿಯಾಗಿ ಹಾವು ಬುಸುಗುಟ್ಟುತ್ತಾ ಮರಳಿ ಅಜ್ಜಿಯ ಮನೆ ಬಾಗಿಲಿಗೇ ಬಂದಿತು. ಮುದುಕಿ ದಡಬಡಿಸಿ ಎದ್ದು ಮನೆಯಲ್ಲಿ ಇದ್ದ ಅಲ್ಪಸ್ವಲ್ಪ ಹಾಲನ್ನು ಬಟ್ಟಲಲ್ಲಿ ಹಾಕಿ ಹಾವಿಗೆ ಕುಡಿಯಲು ಇಟ್ಟಳು. ಮಾರನೇ ದಿನ ಹಾವು ಹಿಡಿಯುವವನನ್ನು ಮತ್ತೆ ಹಿಡಿಸಿ ಊರಾಚೆ ಕಾಡಿನಲ್ಲಿ ಬಿಡಲು ಹೇಳಿದಳು. ಹೀಗೆ ಐದಾರು ಬಾರಿ ಹಾವನ್ನು ಹಿಡಿಸಿ ಊರಿಂದ ಆಚೆ ಬಿಡಿಸಿದರೂ ಅದು ಪುನಃ ಪುನಃ ಮುದುಕಿಯ ಮನೆಗೇ ಬರುತ್ತಿತ್ತು.




ಏಳನೇ ಬಾರಿ ಹಾವಿನವನು ಹಿಡಿದಾಗ ನಾಗರಹಾವು ತುಂಬ ಕೋಪದಿಂದ ಮುದುಕಿಯನ್ನು ಕಚ್ಚಲಿಕ್ಕೆ ಹೋಯಿತು. ಮುದುಕಿ ಕಣ್ಣಲ್ಲಿ ನೀರನ್ನು ತುಂಬಿ ಕೈಮುಗಿದು ನಿಂತಳು. ಹಾವಾಡಿಗ ಹಾವನ್ನು ಮತ್ತೆ ಹಿಡಿದು ಊರಾಚೆ ಬಿಟ್ಟಾಗ ಆ ನಾಗರಹಾವು "ನೀನು ಎಷ್ಟು ದಿನಾಂತ ಹಿಡಿದು ಬಿಡುತ್ತಿಯಾ? ಆ ಮುದುಕಿಯನ್ನು ನಾನು ಕಚ್ಚೇ ಕಚ್ಚುತ್ತೇನೆ" ಎಂದಿತು. ಅದಕ್ಕೆ ಹಾವಾಡಿಗನು, "ಒಳ್ಳೆ ಕೆಲಸ. ನಿನಗೆ ವರ್ಷಾನುಗಟ್ಟಲೆಯಿಂದ ಹಾಲೆರೆದು ಸಾಕಿದ್ದಕ್ಕೆ ಮುದುಕಿಗೆ ಒಳ್ಳೆ ಪ್ರತಿಫಲವನ್ನೇ ಕೊಟ್ಟೆ. ನಿನ್ನಂಥ ಹಾವುಗಳನ್ನು ನಾನು ಎಷ್ಟೊಂದು ಹಿಡಿದು ಸಾಯಿಸಿದ್ದೇನೆ ಗೊತ್ತೆ? ನಿನಗೆ ಒಂದು ಚೂರೂ ನೋವಾಗದಂತೆ ಹಿಡಿದು ಊರಾಚೆ ಬಿಟ್ಟುಬಿಡಲು ಪ್ರತಿಬಾರಿಯೂ ಮುದುಕಿ ಹೇಳುತ್ತಿದ್ದಳು. ಬೇರೆಯವರಾಗಿದ್ದರೆ ಯಾವತ್ತೋ ನಿನ್ನನ್ನು ನನ್ನ ಕೈಯಿಂದ ಸಾಯಿಸುತ್ತಿದ್ದರು. ನಿನಗೆ ಅನೇಕ ಬಾರಿ ಪ್ರಾಣ ನೀಡಿದ ಆ ಮುದುಕಿಯನ್ನೇ ಕಚ್ಚುತ್ತೀಯಾ? ಕಚ್ಚು ಹೋಗು. ಅದಕ್ಕೇ ಅನ್ನುವುದು ಹಾವಿಗೆ ಹಾಲೆರೆದು ಏನು ಫಲ? ಎಂದು" ಕೋಪದಿಂದ ಅದನ್ನು ಕೊಲ್ಲುವುದಕ್ಕೆ ಹೋದನು. ಆಗ ಪಶ್ಚಾತ್ತಾಪದಿಂದ ನಾಗರಹಾವು "ತಡಿ, ತಡಿ, ನೀ ಹೇಳುವುದೆಲ್ಲ ನಿಜವೇ. ಆದರೆ ನನಗೆ ಇದೆಲ್ಲ ತಿಳಿಯದು. ನನ್ನನ್ನು ಕ್ಷಮಿಸು" ಎಂದು ಹೇಳಿ ಸರಸರನೆ ಹರಿದು ಹೋಯಿತು. ತನ್ನ ಕೋಪವನ್ನು ಬಿಟ್ಟು ತನ್ನಷ್ಟಕ್ಕೆ ತಾನು ಹೋದ ಹಾವನ್ನು ನೋಡಿ ಹಾವಾಡಿಗ ನೆಮ್ಮದಿಯ ನಿಟ್ಟುಸಿರು ಬಿಟ್ಟನು.

ಮಾರನೇ ದಿನ ಅದೇ ಸಮಯಕ್ಕೆ ಮುದುಕಿಯ ಮನೆಗೆ ಬಂದ ಹಾವನ್ನು ಕಂಡು ಮುದುಕಿ ಭಕ್ತಿಯಿಂದ ಕೈ ಮುಗಿದು ಹಾಲು ತರಲಿಕ್ಕೆ ಒಳ ಹೋಗುವುದಕ್ಕೂ ಸರಿಯಾಗಿ ಆ ಹಾವು "ನನಗೆ ಇನ್ನು ನಿನ್ನ ಹಾಲು ಬೇಡ. ನೀನು ನನಗೆ ಇಷ್ಟು ವರ್ಷ ಹಾಲು ನೀಡಿದ್ದೇ ಸಾಕು. ತಗೋ ನನ್ನಲ್ಲಿರುವ ಈ ರತ್ನ. ಇದನ್ನು ಮಾರಿ ಬಂದ ಹಣದಿಂದ ಸುಖವಾಗಿ ಬಾಳು" ಎಂದು ಹೇಳಿ ತನ್ನ ಹೆಡೆಯಿಂದ ಒಂದು ರತ್ನವನ್ನು ಉರುಳಿಸಿ ಸರಸರನೆ ಹರಿದು ಹೋಯಿತು. ಮತ್ತೆಂದೂ ಮುದುಕಿಯ ಮನೆಯಲ್ಲಿ ಆ ಹಾವು ಕಂಡು ಬರಲಿಲ್ಲ.

## ೮. ಅಹಂಕಾರದ ಇಡ್ಲಿ

ನಮ್ಮೂರಿನ ದಂಪತಿಗಳಾದ ನಂಜುಂಡಯ್ಯ ನಂಜಮ್ಮ ತಮ್ಮ ಬದುಕು ಸಾಗಿಸಲು ಒಂದು ಚಿಕ್ಕ ಹೋಟೆಲ್ ನಡೆಸುತ್ತಿದ್ದರು. ತುಂಬ ಶುಚಿ-ರುಚಿಯಾಗಿ ಮಾಡುತ್ತಿದ್ದುದರಿಂದ ಬಹಳ ಜನ ಇವರ ಹೋಟೆಲಿಗೆ ಬರುತ್ತಿದ್ದರು. ಹೋಟೆಲ್ಲಿನಲ್ಲಿ ಮಲ್ಲಿಗೆ ಹೂವಿನಂತೆ ಬೆಳ್ಳಗಿನ ಮೃದುವಾದ ಇಡ್ಲಿ, ಪೂರಿ ಸಾಗು, ಚಟ್ನಿ, ಚಿತ್ರಾನ್ನ, ವಡೆ, ಬೋಂಡ, ಕಾಫೀ, ಟೀ ಮಾಡುತ್ತಿದ್ದರು. ಇಡ್ಲಿಗಾದರೋ ತನ್ನ ಬಿಳಿ ಬಣ್ಣಕ್ಕಾಗಿ ಎಲ್ಲರೂ ತನ್ನನ್ನೇ ಕೇಳುತ್ತಿರುವುದನ್ನು ಕಂಡು ಜಂಬ ಬಂದು ಬಿಟ್ಟಿತು. ಪೂರಿ, ಸಾಗು,ಚಟ್ನಿ, ಚಿತ್ರಾನ್ನ, ದೋಸೆ, ವಡೆ, ಬೋಂಡ ಇವುಗಳ ಜೊತೆ ಮಾತನಾಡುವುದನ್ನೇ ಕೈಬಿಟ್ಟಿತು. ಅವುಗಳು ಮಾತನಾಡಿಸಿದರೂ "'ಆ, ಹೂಂ" ಎಂದು ಬೇಕಾಬಿಟ್ಟಿ ಉದಾಸೀನದಿಂದ ಮಾತಾಡಿ ಸುಮ್ಮನಾಗುತ್ತಿತ್ತು. ಎಲ್ಲವಕ್ಕೂ ಇದರ ನಡತೆಯಿಂದ ಬೇಸರವಾಯಿತು.

ಒಂದು ಬಾರಿ ಗಿರಾಕಿಯೊಬ್ಬ ಮೊದಲು ಚಿತ್ರಾನ್ನ ತೆಗೆದುಕೊಂಡು ಅದೇ ತಟ್ಟೆಗೆ ಇಡ್ಲಿಯನ್ನು ಹಾಕಿಸಿಕೊಂಡ. ಆಗಂತು ಇಡ್ಲಿ ಹೊಲಸಲ್ಲಿ ಬಿದ್ದಂತೆ ಮುಖ ಊದಿಸಿ ಅಸಹ್ಯಿಸಿ ಕೊಂಡಿತು. ಚಿತ್ರಾನ್ನಕ್ಕೆ ಪಾಪ ಅಳುವೇ ಬಂದು ಬಿಟ್ಟಿತು. ಇನ್ನೊಂದು ಬಾರಿ ಗಿರಾಕಿಯೊಬ್ಬ ಇಡ್ಲಿ ತಿಂದು ನೀರು ಕುಡಿಯುತ್ತಿರಬೇಕಾದರೆ, ನೀರು ಇಡ್ಲಿಯ ಜೊತೆ "ಯಾಕೆ ಇಡ್ಲಿಯಕ್ಕ, ಈ ನಡುವೆ ನೀನು ನಮ್ಮ ಜೊತೆ ಸೇರೋದೆಯಿಲ್ಲ. ಯಾವಾಗಲೂ ಒಬ್ಬಳೇ ಕುಳಿತುಕೊಂಡಿರುತ್ತಿಯಾ? ಯಾರಾದರೂ ಏನಾದರೂ ಅಂದರಾ?" ಎನ್ನಲು



“ನನ್ನನ್ಯಾಕೆ ಯಾರಾದರೂ ಅಂತಾರೆ. ನಾನು ಅಂದರೆ ಏನು ಅಂತ ತಿಳಿದಿದ್ದೀಯಾ? ನೀರೆ, ನನ್ನ ಬಣ್ಣ ಏನು, ಅದು ಅಲ್ಲದೆ ನನ್ನ ಯಜಮಾನ ಇದ್ದಾನಲ್ಲ, ನನ್ನ ಯಾವಾಗಲೂ ಜೋಪಾನವಾಗಿ ಬಿಸಿಬಿಸಿಯಾಗಿ ಇಟ್ಟಿರುತ್ತಾನೆ. ಪೂರಿ, ಚಿತ್ರಾನ್ನದಂತೆ ಒಣಗಿಕೊಂಡು ತಣ್ಣಗಾಗಿರುತ್ತೇನೆಯೇ ನಾನು. ನೀನು ಪೇಪರ್ ಓದಲ್ಲವಾ? ಮೊನ್ನೆ ಮೊನ್ನೆ ಬ್ರಿಟನ್ನಿನ ಪ್ರಧಾನಿಯೇ ನನ್ನ ಮೆಚ್ಚಿಕೊಂಡು ಸೇವಿಸಿದ್ದಾನೆ ಎಂದ ಮೇಲೆ, ನಾನು ಎಂದರೆ ಏನು ಅಂತ ನಿನಗೆ ಅರ್ಥ ಆಗಿರಬೇಕಲ್ಲ. ಮೊದಲೇ ತಣ್ಣಗಿದ್ದೀಯಾ, ಹಾಗೇ ಸುಮ್ಮನಿರು” ಎಂದು ವ್ಯಂಗವಾಗಿ ಇಡ್ಲಿ ನುಡಿಯಲು ಇದಾವ ಗ್ರಾಚಾರ ಎಂದು ನೀರು ಸುಮ್ಮನೆ ಗಿರಾಕಿಯ ಹೊಟ್ಟೆಯೊಳಗೆ ಹರಿಯಿತು.

ಪೂರಿ ಅಳುತ್ತಿದ್ದುದನ್ನು ನೋಡಿ ಚಿತ್ರಾನ್ನಕ್ಕೆ ತುಂಬ ಬೇಸರವಾಯಿತು. “ಯಾಕೆ?” ಎಂದು ಕೇಳಲು, “ಇಡ್ಲಿ ನನ್ನನ್ನು ಒಲೆ ಮೇಲೆ ಊದಿಕೊಂಡರೇನು, ಸ್ವಲ್ಪ ಹೊತ್ತಿಗೆಲ್ಲ ಎಲೆ ತರಹ ಅಪ್ಪಚ್ಚಿಯಾಗುತ್ತೀಯಾ ಎಂದು ಅಣಕಿಸಿದಳು” ಎಂದು ಹೇಳಲು, ಚಿತ್ರಾನ್ನ “ನನಗೂ ಅಷ್ಟೇ, ಒಣಗಿ ವಾಟೆಗರಿಯಾಗಿರೋ ನಿನ್ನನ್ನು ಯಾವನು ತಗೋತಾನೆ ಅನ್ನೋದೆ. ಅದಕ್ಕೆ ಸರಿಯಾಗಿ ಬುದ್ಧಿ ಕಲಿಸಬೇಕು. ಆದರೆ ಹೇಗೆ?”

“ಒಂದು ಕೆಲಸ ಮಾಡಿ. ನಾಳೆ ಹೇಗಿದ್ದರೂ ನಂಜುಂಡಯ್ಯ ಬೆಳಗಿನ ಜಾವವೇ ಎದ್ದು ನಮ್ಮನ್ನೆಲ್ಲ ಸಿದ್ಧಪಡಿಸಿ ಜೋಡಿಸಿ, ಇಡ್ಲಿ ತಯಾರಿಸಲು ಹೋಗುತ್ತಾನೆ. ಆಗ ನಾವೆಲ್ಲ ಸಭೆ ಸೇರಿ ಮುಂದೆ ಏನು ಮಾಡುವುದೆಂದು ಯೋಚಿಸೋಣ” ಎಂದಿತು ಚಿತ್ರಾನ್ನ.

ಮಾರನೇ ದಿನ ಬೆಳಗಿನಲ್ಲೇ ಎಲ್ಲ ಸಭೆಗೆ ಸೇರಿ ಸಿದ್ಧರಾಗಿದ್ದರು. ಈಗ ಇಡ್ಲಿಗೆ ಗಂಟೆ ಕಟ್ಟುವವರು ಯಾರು? ಅದಕ್ಕೆ ಬುದ್ಧಿ ಕಲಿಸಬೇಕು. ಹೇಗೆ? ಹಾಗೆ ಹೀಗೆ ಎಂದು ತಲಾ ಒಂದೊಂದು ಮಾತನ್ನಾಡಿದರು. ಕೊನೆಗೆ ನೀರು ಹೇಳಿತು: “ನಾನೇನೋ ಎಲ್ಲರ ಜೊತೆನೂ ಇರುತ್ತೇನೆ. ಮೊದಲು ನನ್ನ ಜೊತೆ ತುಂಬ ಪ್ರೀತಿ, ವಿಶ್ವಾಸದಿಂದ ಇಡ್ಲಿ ನಡೆದುಕೊಳ್ಳುತ್ತಿದ್ದಳು. ಅದ್ಯಾಕೋ ಈ ನಡುವೆ ಮಾತಾಡೋದೆ ಇಲ್ಲ. ಹತ್ತಿರ ಹೋದರೆ ಹರದಾರಿ ದೂರ ಹೋಗುತ್ತಾಳೆ. ಅದಕ್ಕೆ ನಾನು ಗಿರಾಕಿಗಳು ಅವಳನ್ನು ನುಂಗಿ ಕೆಮ್ಮಿದ ಮೇಲೇನೆ ಗಂಟಲಲ್ಲಿ ಇಳಿಯುವುದು ಗೊತ್ತಾ!?” ಎಂದಿತು.

“ಅದು ಸರಿ, ಆದರೆ ಅದಕ್ಕೆ ಬುದ್ಧಿ ಕಲಿಸುವುದು ಹೇಗೆ? ನಾವೆಲ್ಲ ಜೊತೇಲಿ ಸಂತೋಷವಾಗಿರೋದು ಎಲ್ಲೋ ಸ್ವಲ್ಪ ಹೊತ್ತು. ಆಮೇಲೆ ನಾವುಗಳು ಯಾರ್ಯಾರ ಹೊಟ್ಟೆಗೆ ಹೋಗುತ್ತೀವೋ ಏನೋ? ಇರೋ ಸ್ವಲ್ಪ ಹೊತ್ತು. ಆಮೇಲೆ ನಾವುಗಳು ಯಾರ್ಯಾರ ಹೊಟ್ಟೆಗೆ ಹೋಗುತ್ತೀವೊ ಏನೋ? ಇರೋ ಸ್ವಲ್ಪ ಹೊತ್ತಾದರೂ ನಗ್ತಾ ನಗ್ತಾ ಇರಾನಾ ಅಂದರೆ, ಇವಳದೊಂದು. ಏನು ಮಾಡೋದು?” ಎಲ್ಲಾ ತಿಂಡಿಗಳು ಗಡ್ಡದ ಮೇಲೆ ಕೈಯಿಟ್ಟುಕೊಂಡು ಚಿಂತಾಕ್ರಾಂತವಾದವು.

“ಓ! ನನಗೆ ಒಂದು ಉಪಾಯ ಹೊಳೆಯಿತು” ಎಂದಿತು ನೀರು. ” ಏನು, ಏನು, ಬೇಗ ಹೇಳು” ಎಂದವು ತಿಂಡಿಗಳು ಒಕ್ಕೊರಲಿನಿಂದ. “ನಾಳೆ ಹೇಗಿದ್ದರೂ ಪೂರಿ ನೀನು ಎಣ್ಣೆಯಲ್ಲಿದ್ದಾಗ ಜೋರಾಗಿ ಉಸಿರು ಬಿಡು. ಆಗ ಹೇಗಿದ್ದರು ಇಡ್ಲಿ ಮಾಡಲಿಕ್ಕೆ ನಂಜಮ್ಮ ಪಾತ್ರೆಗೆ ನೀರು ಸುರಿಯುತ್ತಿರುತ್ತಾಳೆ. ಎಣ್ಣೆ ಎಗರಿ ಅವಳ ಕಾಲಿನ ಮೇಲೆ ಬೀಳಬೇಕು. ನೀನು ಅಷ್ಟು ಜೋರಾಗಿ ಉಸಿರು ಬಿಡಬೇಕು, ಗೊತ್ತಾಯಿತಾ?” ಎಂದಿತು. ಆಗ ಹಂಡೆಗೆ ನೀರು ಹೆಚ್ಚಾಗಿ ಬೀಳುತ್ತದೆ. ಮುಂದಿನದು ನೋಡುವಿಯಂತೆ. ಇಡ್ಲಿ ನನ್ನ ಜೊತೆ ಬೆರೆತು ತೊಪ್ಪೆ ತೊಪ್ಪೆಯಾಗುತ್ತಾಳೆ. ಆಗ ಅವಳ ಅಹಂಕಾರ ಮುರಿಯುತ್ತದೆ. ಎಲ್ಲಾ ತಿಂಡಿಗಳಿಗೂ ಬಹಳ ಖುಷಿಯಾಗುತ್ತದೆ. ಅಲ್ಲಿಗೆ ಅಂದಿನ ಸಭೆ ಮುಗಿಯುತ್ತದೆ.

ಮಾರನೆ ದಿನ ಮುಂಜಾನೆಯೇ ನಂಜುಂಡ ನಂಜಮ್ಮ ಎದ್ದು ತಮ್ಮ ಕಾಯಕದಲ್ಲಿ ತೊಡಗಿದರು. ಇಡ್ಲಿ ಮಾಡಲು ನಂಜಮ್ಮ ಹಂಡೆಗೆ ನೀರು ಸುರಿಯುತ್ತಿರುವಾಗ, ನಂಜುಂಡಯ್ಯ ಪೂರಿ ಕರಿಯುತ್ತಿದ್ದನು. ಒಂದು ಪೂರಿ ದಪ್ಪನೆ ಉಬ್ಬಿ ತಕ್ಷಣ ಪುಸ್ಸಂತ ಉಸಿರು ಬಿಟ್ಟಿತು. ಮೇಲೆ ಎತ್ತಿದ ಜಾಲರಿ ಕೆಳಗೆ ಸರಿಯಿತು. ಆಗ ನೀರು ಸುರಿಯುತ್ತಿದ್ದ ನಂಜಮ್ಮನ ಕಾಲಿಗೆ ಎಣ್ಣೆ ಹಾರಿ ಬಿದ್ದಿತು. ತಕ್ಷಣ ಹಂಡೆಗೆ ನೀರು ಹೆಚ್ಚಾಗಿ ಬಿದ್ದಿತು. ನಂಜಮ್ಮ ಗಂಡನಿಗೆ “ನೋಡಿ ಮಾಡಬಾರದ, ಎಣ್ಣೆ ಮುಂದೆ ಕುಂತಿದ್ದೀಯಾ. ಈಗ ನೋಡು, ನನ್ನ ಕಾಲಿಗೆ ಎಣ್ಣೆ ಬಿತ್ತು” ಎಂದು ರೇಗಿದಳು. ಹಂಡೆಗೆ ನೀರು ಬಿದ್ದ ಕಡೆ ಅವಳ ಗಮನವಿರಲಿಲ್ಲ.

ಇಡ್ಲಿ ತಟ್ಟೆ ಜೋಡಿಸಿ ಹಂಡೆಗೆ ಬೆಂಕಿ ಹಾಕಿ ಹಬೆ ಬಂದುದು ನೋಡಿ ಬೆಂದಿದೆ ಎಂದು ನಂಜಮ್ಮ ಇಡ್ಲಿ ತೆಗೆದಳು. ಎಲ್ಲಾ ನೀರು ಉಕ್ಕಿ ಪಿತಪಿತ ಆಗಿದ್ದಿತು. ಇದನ್ನು ನೋಡಿ ನಂಜಯ್ಯ ಹೆಂಡತಿಯನ್ನು ಬೈದನು. ಹೆಂಡತಿಯಾದರೋ " ಈ ಇಡ್ಲಿಗೆ ಸ್ವಲ್ಪ ನೀರು ಹೆಚ್ಚಾದರೂ ಉಕ್ಕಿ ಪಿತಪಿತ ಅಂತ ಆಗುತ್ತದೆ. ಪೂರಿ ಇವೇ ಸರಿ, ಸ್ವಲ್ಪ ಹೆಚ್ಚು ಕಮ್ಮಿಯಾದರೂ ತಡೆಯುತ್ತವೆ. ಇಡ್ಲಿದೊಂದು ಗೋಳು" ಎಂದು ಇಡ್ಲಿಯನ್ನು ಬೈದಳು. ಇಡ್ಲಿಯನ್ನೆಲ್ಲಾ ತೆಗೆದು ತಟ್ಟೆ ಸಮೇತ ಒಂದು ಮೂಲೆಗೆ ಗುಡ್ಡೆ ಹಾಕಿದಳು. ಇಡ್ಲಿಗೋ ತನ್ನ ರೂಪ ನೋಡಿ, ನಂಜಮ್ಮನ ಬೈಗಳ ಕೇಳಿ ಅಳುವೇ ಬಂದುಬಿಟ್ಟಿತು. ಅಳುತ್ತಾ, ಅಳುತ್ತಾ, ಇನ್ನೂ ನೀರು ನೀರಾಯಿತು. ಇದರ ಪರಿಸ್ಥಿತಿ ನೋಡಿ ಚಿತ್ರಾನ್ನ, ಪೂರಿ, ವಡೆ, ಬೋಂಡಕ್ಕೆ ಸಂತೋಷವೋ ಸಂತೋಷ. ಬಂದವರೆಲ್ಲ ಇವನ್ನೇ ಕೇಳುತ್ತಿರುತ್ತಾರೆ. ತಟ್ಟೆಯಲ್ಲಿ ಕುಣಿಕುಣಿಯುತ್ತ ಇಡ್ಲಿಯ ನೋಡಿದರು ನೋಡದಂತೆ ಗಿರಾಕಿಗಳ ಹತ್ತಿರ ಹೋಗುತ್ತಿದ್ದವು. ಇಡ್ಲಿಗೆ ಅಳು ಇನ್ನೂ ಹೆಚ್ಚಾಯಿತು.

ಆಗ ಅಲ್ಲಿಯೇ ಇದ್ದ ನೀರು "ಯಾಕೆ ಇಡ್ಲಿ ಅಳುತ್ತಿದ್ದೀಯಾ? ಎನ್ನಲು, "ಆ ನಂಜಮ್ಮ ಇದ್ದಾಳಲ್ಲ, ನನ್ನ ರೂಪನ ನೋಡು ಹೇಗೆ ಮಾಡಿಬಿಟ್ಲು. ಈ ಮೂಲೇಲಿ ಬಿಸಾಡಿದ್ದಾಳೆ" ಎಂದು ಇನ್ನು ಜೋರಾಗಿ ಅಳಲಿಕ್ಕೆ ಪ್ರಾರಂಭಿಸಿದಳು. ನನ್ನದೊಂದು ಮಾತು ಕೇಳುವುದಾದರೆ ನಿನ್ನ ನಾಳೆಯಾದರೂ ಚೆನ್ನಾಗಿ ಮಾಡಲಿಕ್ಕೆ ಹೇಳುತ್ತೀನಿ, ಕೇಳುತ್ತೀಯಾ?" ಎಂದಿತು ನೀರು. "ಅದೇನು ಹೇಳು. ನನ್ನ ರೂಪ ಸರಿ ಹೋಗಲು ಏನು ಮಾಡಬೇಕು?" ಎಂದು ಕೇಳಿತು.

"ನೀನು ನಿನ್ನ ಜಂಬ ಗಿಂಬ ಎಲ್ಲ ಬಿಟ್ಟು ನಮ್ಮೊಂದಿಗೆಲ್ಲ ಮೊದಲಿನಂತೆ ಚೆನ್ನಾಗಿ ಮಾತನಾಡಿಕೊಂಡಿರುತ್ತೀನಿ ಎಂದರೆ ನಾವೆಲ್ಲ ಸೇರಿ ಏನಾದರೂ ಮಾಡುತ್ತೀವಿ. ಇಲ್ಲದಿದ್ದರೆ ನಿನ್ನ ಹಣೆಬರಹ" ಎಂದರು. ಅದಕ್ಕೆ ಇಡ್ಲಿ "ನಾನು ಮೊದಲಿನಂತೆ ಆದರೆ, ಮೊದಲಿನ ಹಾಗೆ ನನ್ನ ಗೆಳೆಯರ ಜೊತೆ ಚೆನ್ನಾಗಿರುತ್ತೇನೆ. ನನ್ನದು ತಪ್ಪಾಯಿತು" ಎಂದು ಹೇಳಿತು. "ಸರಿ, ನೀನು ಯೋಚನೆ ಮಾಡಬೇಡ. ನಾಳೆ ನಿನ್ನ ಚೆನ್ನಾಗಿ ಮಾಡಲಿಕ್ಕೆ ನಂಜಮ್ಮನಿಗೆ ನಾನು ಹೇಳುತ್ತೇನೆ" ಎಂದಿತು ನೀರು. ಇಡ್ಲಿ ಕಣ್ಣೀರು ಒರೆಸಿಕೊಳ್ಳುತ್ತ ಸರಿ ಎಂಬಂತೆ ತಲೆ ಆಡಿಸಿತು.

ನೀರು ಬಂದು ನಡೆದ ವಿಷಯ ಗೆಳೆಯರ ಜೊತೆ ಹೇಳಿತು. ಅದನ್ನು ಕೇಳಿ ಎಲ್ಲರಿಗೂ ಸಂತೋಷವಾಯಿತು. ಮಾರನೇ ದಿನ ನಸುಕಿನಲ್ಲಿ ಪೂರಿ ಕರಿಯುವಾಗ ಜೋರಾಗಿ ಉಸಿರು ಬಿಡಲಿಲ್ಲ. ಎಣ್ಣೆ ನಂಜಮ್ಮನ ಕಾಲಿಗೆ ಹಾರಲಿಲ್ಲ. ಹಂಡೆಗೆ ಹೆಚ್ಚಾಗಿ ನೀರು ಬೀಳಲಿಲ್ಲ. ಇಡ್ಲಿ ಹೊರಬಂದು ತನ್ನ ಗೆಳೆಯರೊಂದಿಗೆ ಸೇರಿಕೊಂಡು ಮಾತುಕತೆಯಾಡುತ್ತಾ, ನಗುನಗುತ್ತಾ ಇದ್ದಿತು.

## ೬. ಅಣ್ಣ ತಂಗಿ

ಮಾರಸಂದ್ರ ಎಂಬ ಹಳ್ಳಿಯಲ್ಲಿ ತಂದೆ-ತಾಯಿ ಕಳೆದುಕೊಂಡ ಅಣ್ಣ-ತಂಗಿಯರಿದ್ದರು. ಇನ್ನೂ ಚಿಕ್ಕವರಾದ ಇವರನ್ನು ನೋಡಲು ಬಂಧುಗಳಾರೂ ಬರುತ್ತಿರಲಿಲ್ಲ. ಪುಟ್ಟ ಅಣ್ಣ-ತಂಗಿ ಅನ್ಯೋನ್ಯತೆಯಿಂದ ಎರಡು ಹಸುಗಳನ್ನು ಸಾಕಿಕೊಂಡು ಹಾಲನ್ನು ಮಾರಿ ಜೀವನ ನಡೆಸುತ್ತಿದ್ದರು. ಅಣ್ಣನಾದರೊ ಆಗಾಗ ತಂಗಿಗೆ ಬಣ್ಣಬಣ್ಣದ ಹೂವು, ನೆಲ್ಲಿಕಾಯಿ, ನೇರಳೆ ಹಣ್ಣು, ಸೀಬೆಹಣ್ಣು, ಸೀರೆಕಾಯಿ, ಗಿಲಕಿ ಹಣ್ಣು, ದೋರಾದ ಹುಣಿಸೆಕಾಯಿ ಎಲ್ಲಾ ತಂದು ಕೊಡುತ್ತಿದ್ದ. ತಂಗಿ ಅದನ್ನು ಪ್ರೀತಿಯಿಂದ ತಿನ್ನುತ್ತಿದ್ದಳು.

ಹೀಗಿರಲು ಒಂದು ದಿನ ಹಸು ಮೇಯಿಸಲಿಕ್ಕೆ ಹೋದಾಗ ಬಹುಚೆಂದದ ಕುಂಕುಮದ ಬಣ್ಣದ ದುಂಬಿಯೊಂದು ಹಾಡುತ್ತಾ ಹಾರಾಡುತ್ತಿತ್ತು. ಅದರ ಚೆಂದ ಕಂಡು ಅಣ್ಣನು ತನ್ನ ತಂಗಿಗೆ ಆಟ ಆಡಲಿಕ್ಕೆ ಅದನ್ನು ತೆಗೆದುಕೊಂಡು ಹೋಗಬೇಕೆಂದು ನಿರ್ಧರಿಸಿದ. ಉಪಾಯವಾಗಿ ಹಿಡಿದು ಅದರ ಕೊರಳಿಗೆ ದಾರ ಕಟ್ಟಿ ತಂಗಿಗೆ ತಂದುಕೊಟ್ಟ. ಅಂದದ ಬಣ್ಣದ ಕಾರೇ ದುಂಬಿಯನ್ನು ನೋಡಿ ಅವಳಿಗೆ ಬಹಳ ಸಂತೋಷವಾಯಿತು. ತಕ್ಷಣ ಅವಳು ಕಟ್ಟಿದ ದಾರವನ್ನು ನೋಡಿ "ಅಯ್ಯೋ ಪಾಪ, ಅದರ ಕತ್ತಿಗೆ ಎಷ್ಟು ನೋವಾಗುತ್ತಿದೆಯೋ?" ಎಂದು ದಾರ ಬಿಚ್ಚಲು ಹೋದಳು. "ದಾರ ಬಿಚ್ಚಬೇಡ. ಬಿಚ್ಚಿದರೆ ಅದು ಹಾರಿಹೋಗುತ್ತದೆ" ಎಂದ. "ಹೌದಾ!" ಎಂದು ಒಲೆಯ ಮುಂದಿದ್ದ ಖಾಲಿ ಬೆಂಕಿಪೊಟ್ಟಣದಲ್ಲಿ ಹಾಸಿಗೆಯಂತೆ ಮಡಿಚಿಟ್ಟು ಮೆತ್ತಗೆ ದುಂಬಿಯನ್ನು ಪ್ರೀತಿಯಿಂದ ಎತ್ತಿಕೊಂಡು ಬೆಂಕಿಪೊಟ್ಟಣದಲ್ಲಿ ಹಾಕಿ ಮುಚ್ಚಿ ಇಟ್ಟಳು ತಂಗಿ. ಅಣ್ಣ ಹೇಳಿದ: "ನೋಡು, ನಾನು ಹೋದ ಮೇಲೆ ನೀನು ಇದರ ಸಂಗಡ ಆಟ ಆಡುತ್ತ ಇರು. ಆದರೆ ದಾರ ಬಿಚ್ಚಿದರೆ ಮತ್ತೆ ನಿನಗೆ ಇಂಥ ಚೆಂದದ ದುಂಬಿ ಸಿಗುವುದಿಲ್ಲ" ಎಂದು ಎಚ್ಚರಿಕೆ ನೀಡಿದ.

ಅಣ್ಣ ಹಸುಗಳನ್ನು ಮೇಯಿಸಲು ಹೋದ ಮೇಲೆ ಬೇಗ ಕೆಲಸ ಮುಗಿಸಿ ದುಂಬಿ ಜೊತೆ ಆಟ ಆಡಲು ಬೆಂಕಿ ಪೊಟ್ಟಣ ತೆಗೆದು ನೋಡಿದಳು. ದುಂಬಿಯಾದರೋ ಒಂದು ಚೂರು ಎಲೆ ತಿಂದಿರುವುದಿಲ್ಲ. ಎಲೆ ಎಲ್ಲ ಒದ್ದೆಯಾಗಿತ್ತು. ಪ್ರೀತಿಯಿಂದ ಎತ್ತಿಕೊಂಡು "ಯಾಕೆ ದುಂಬಿ, ಎಲೆ ತಿಂದಿಲ್ಲ? ಕಣ್ಣೆಲ್ಲ ಕೆಂಪಾಗಿದೆ! ಯಾಕೆ ಅಳುತ್ತಿದ್ದೀಯಾ?" ಎಂದು ಕೇಳಲು, "ನಾನು ಹೇಗೆ ತಿನ್ನಲಿ, ನನ್ನ ಕತ್ತಲ್ಲಿ ನಿಮ್ಮಣ್ಣ ಕಟ್ಟಿದ ದಾರದಿಂದ ಉರಿಯುತ್ತಿದೆ" ಎಂದಿತು.

"ದಾರ ಬಿಚ್ಚಿದರೆ ನೀನು ಹಾರಿ ಹೋಗಿಬಿಡುತ್ತೀಯಾ! ನನ್ನ ಜೊತೆ ಆಟ ಆಡುವವರು ಯಾರು? ಬೇಡಪ್ಪ ನಿನ್ನಷ್ಟು ಚೆಂದದ ದುಂಬಿಯನ್ನು ಇದೇ ಮೊದಲು ನಮ್ಮಣ್ಣ ನನಗೆ ತಂದು ಕೊಟ್ಟಿರುವುದು" ಎಂದಳು. "ಅದೂ ಅಲ್ಲದೆ ನಿನ್ನಂತೆ ಯಾವ ದುಂಬಿಯೂ ಇಷ್ಟು ಮುದ್ದು ಮುದ್ದಾಗಿ ಮಾತನ್ನಾಡಿರಲಿಲ್ಲ. ಬರಿ ಗುಂಯ್ಗುಡುತ್ತ ಹಾರುತ್ತಿದ್ದವು. ನಿನ್ನನ್ನು ಬಿಟ್ಟುಬಿಡುತ್ತೀನಾ?" ಎಂದಳು. "ಸರಿ ಬಿಡು, ನನ್ನ ಕಷ್ಟ ನನಗೆ. ಕತ್ತಿನಿಂದ ರಕ್ತ ಬರುತ್ತಿದ್ದಿಬೇಕು" ಎಂದು ದುಃಖದಿಂದ ಹೇಳಿತು. ಅದನ್ನು ಕೇಳಿ ಅವಳಿಗೆ ಕಣ್ಣಲ್ಲಿ ನೀರೇ ಬಂದುಬಿಟ್ಟಿತು. 'ದಾರ ಬಿಚ್ಚಿ ಹಾರಿಹೋದರೆ ಚೆಂದದ ಮಾತನ್ನಾಡುವ ದುಂಬಿ ಬೇರೆ. ಅಣ್ಣ ಬೈಯುವುದಿಲ್ಲವೇ? ಆದರೆ ಕತ್ತಿನಿಂದ ರಕ್ತ ಜಿನುಗುತ್ತಿದೆ. ಹೊಟ್ಟೆಗೆ ಬೇರೆ ಏನು ತಿಂದಿಲ್ಲ. ಅಯ್ಯೋ ಪಾಪ, ಹಾರಿ ಹೋಗಬೇಡ ಅಂತ ಹೇಳಿ ದಾರ ಬಿಚ್ಚುತ್ತೇನೆ. ಹಾರಿ ಹೋದರೆ ಅಣ್ಣ ಬೈಯುತ್ತಾನೆ ಅಷ್ಟೇ. ಪಾಪ ಅದಕ್ಕೆ ನೋವು ಕಡಿಮೆಯಾದರೆ ಸಾಕು' ಎಂದು ಯೋಚಿಸುತ್ತಾ "ದುಂಬಿ ತಾಳು, ಸೂಜಿ ತಂದು ಕತ್ತಿನಲ್ಲಿ ದಾರವನ್ನು ಉಪಾಯವಾಗಿ ಬಿಚ್ಚುತ್ತೇನೆ. ಆದರೆ ನನ್ನನ್ನು ಬಿಟ್ಟು ಹೋಗಬಾರದು" ಎಂದಳು. "ಖಂಡಿತ ಇಲ್ಲ. ನೀನು ದಾರ ಬಿಚ್ಚಿದರೆ ನಿನ್ನ ಜೊತೆ ಆಟ ಆಡಿಕೊಂಡು ನಿನ್ನ ಹತ್ತಿರವೇ ಇರುತ್ತೇನೆ" ಎಂದಿತು. ದುಂಬಿ. ಹೋಗಿ ಸೂಜಿ ತಂದು ಉಪಾಯವಾಗಿ ದಾರ ಬಿಚ್ಚಿ ಗಾಯಕ್ಕೆ ಮುಲಾಮನ್ನು ಹಚ್ಚಿದಳು. ದುಂಬಿಗೆ ಬಹಳ ಸಂತೋಷವಾಗಿ ಅವಳ ಸುತ್ತಮುತ್ತ ಹಾರಾಡುತ್ತಾ ಅವಳನ್ನು ಆಟವಾಡಿಸುತ್ತಾ ಇದ್ದಿತು.

ಹೀಗಿರಲು ಒಂದು ದಿನ ದುಂಬಿ, "ಅಲ್ಲಾ ದಿನಾ ನಿಮ್ಮಣ್ಣ ನಿನ್ನ ಒಬ್ಬಳನ್ನೇ ಬಿಟ್ಟು ಹೋಗುತ್ತಾನಲ್ಲಾ. ನಿಮಗೆ ಯಾರೂ ಇಲ್ಲವಾ?" ಎಂದು ಕೇಳಿತು. "ಇಲ್ಲದೇ ಏನು, ಇಲ್ಲಾ ಇದ್ದಾರೆ. ನಮ್ಮ ಅಪ್ಪ, ಅಮ್ಮ ಸತ್ತ ಮೇಲೆ ನಮ್ಮನ್ನು ಸಾಕಬೇಕಾಗುತ್ತದೆ ಎಂದು ನಮ್ಮ ಮನೆ ಕಡೆ ಯಾರೂ ತಿರುಗಿ ನೋಡಿಲ್ಲ. ನಾವು ಹಾಲು ಮಾರಿಕೊಂಡು, ಹಸು ಸಾಕಿಕೊಂಡು ಜೀವನ ಮಾಡುತ್ತಿದ್ದೇವೆ. " ಎಂದು ದುಃಖದಿಂದ ಹೇಳಿ, "ಅದು ಸರಿ, ನಿನಗೆ ಯಾರೂ ಇಲ್ಲವಾ?" ಎಂದು ದುಂಬಿಯನ್ನು ಕೇಳಿದಳು.

"ಇಲ್ಲದೇ ಏನು, ದೊಡ್ಡ ಕುಟುಂಬ. ಒಂದು ದೊಡ್ಡ ಹೂತೋಟವೇ ನಮ್ಮ ಮನೆ. ಅಲ್ಲಿ ಅಪ್ಪ-ಅಮ್ಮ, ಅಜ್ಜಿ-ಅಜ್ಜ, ದೊಡ್ಡಪ್ಪ-ಚಿಕ್ಕಪ್ಪ, ದೊಡ್ಡಮ್ಮ-ಚಿಕ್ಕಮ್ಮ ಇನ್ನು ಎಲ್ಲಾ ಬಂಧುಗಳು ಇದ್ದಾರೆ. ನಮ್ಮಮ್ಮನಿಗೆ ನನ್ನನ್ನು ಕಂಡರೆ ತುಂಬ ಪ್ರೀತಿ. ಯಾಕೆಂದರೆ, ನಾನೇ ಕೊನೆ ಮಗ ಅವರಿಗೆ. ಅವಳು ನಾನು ತಪ್ಪಿಸಿಕೊಂಡಿರುವುದನ್ನು ನೋಡಿ ಇರುತ್ತಾಳೋ, ಸತ್ತು ಹೋಗಿರುತ್ತಾಳೋ ಏನೋ" ಎಂದು ಅಳಲು ಪ್ರಾರಂಭಿಸಿತು.

"ಯಾಕೆ ಅಳುತ್ತೀಯಾ, ಸುಮ್ಮನೆ ಇರು. ಈಗ ನನ್ನ ಜೊತೆ ಸಂತೋಷವಾಗಿ ಇದ್ದೀಯಲ್ಲ?" ಎಂದು ಸಮಾಧಾನ ಮಾಡಿದಳು. "ನಿನಗೆ ಗೊತ್ತಿಲ್ಲ. ನಮ್ಮ ಪ್ರಪಂಚ ಎಷ್ಟೊಂದು ಸುಂದರ, ಸಂತೋಷವಾಗಿರುತ್ತದೆ ಎಂದು. ನಿನ್ನ ಪ್ರೀತಿಗೆ, ಮಾತಿಗೆ ಕಟ್ಟುಬಿದ್ದು ನಾನು ನಿನ್ನ ಜೊತೇಲಿ ಇದ್ದೇನೆ ಗೊತ್ತಾ? ಬೇಕಾದರೆ ನೀನು ನನ್ನ ರೆಕ್ಕೆಯ ಮೇಲೆ ಕುಳಿತುಕೊಂಡರೆ ಹೋಗುತ್ತೇನೆ. ನಿಮ್ಮಣ್ಣ ಬರುವುದರೊಳಗಾಗಿ ಬಂದುಬಿಡಬಹುದು. ಏನಂತೀಯಾ?" ಎಂದು ಕೇಳಿತು.

"ಬೇಡಪ್ಪ, ಯಾಕೋ ನನಗೆ ಭಯವಾಗುತ್ತಿದೆ" ಎಂದಳು ತಂಗಿ. "ಭಯವೆಂತಹದ್ದು ನನಗೂ ನಮ್ಮ ಅಪ್ಪ-ಅಮ್ಮನ ನೋಡದೆ ಎಷ್ಟು ದುಃಖವಾಗಿದೆ ಗೊತ್ತಾ?" ನೀನು ನಿಮ್ಮಣ್ಣನ ಬಿಟ್ಟು ಒಂದು ದಿನ ಇರ್ತೀಯಾ? ಹೇಳು" ಎಂದು ಮರುಪ್ರಶ್ನೆ ಹಾಕಿತು. "ಅದು ಸರಿ, ನಿನ್ನನ್ನು ನೋಡಿದರೆ ನನಗೂ ದುಃಖವಾಗುತ್ತದೆ. ಆದರೆ ಅಣ್ಣನಿಗೆ ಗೊತ್ತಾದರೆ ?" ನಿಮ್ಮಣ್ಣನಿಗೂ ಗೊತ್ತಾಗದಂತೆ ಅವನು ಬರುವ ಮುಂಚೆ ಬಂದುಬಿಡಾನ ಸರಿತಾನೆ. ಹೋಗಿ ತಲೆ ಬಾಚಿ ಬೇಗ ಬಾ" ಎಂದಿತು ದುಂಬಿ. ಮನಸ್ಸಿಲ್ಲದಿದ್ದರೂ ದುಂಬಿಯ ಪ್ರೀತಿಯ ಮಾತಿಗೆ ಕಟ್ಟುಬಿದ್ದು ತಲೆಬಾಚಿ ಮಡಿ ಬಟ್ಟೆಯನ್ನುಟ್ಟು ಬಂದು ಮುಂಬಾಗಿಲನ್ನು ಒಳಗಿನಿಂದ ಹಾಕಿ ಬಂದು ದುಂಬಿಯ ರೆಕ್ಕೆಯ ಮೇಲೆ ಕುಳಿತುಕೊಳ್ಳಲು, ದುಂಬಿ ಆನಂದದಿಂದ ಹಾಡುತ್ತಾ ಆಕಾಶದತ್ತ ಹಾರಿತು.

ಎಲ್ಲೆಲ್ಲೂ ಬಣ್ಣ ಬಣ್ಣದ ಚಿಕ್ಕ ದೊಡ್ಡ ಸುಂದರ ಅತಿ ಸುಂದರ ಹೂವುಗಳು, ಮೊಗ್ಗುಗಳು, ಗೊಂಚಲು ಗೊಂಚಲಾಗಿ ಬಿಡಿಬಿಡಿಯಾಗಿ, ಗುಂಪುಗುಂಪಾಗಿ, ಹಸಿರಿನ ಮೇಲೆ ಸಾಮ್ರಾಜ್ಯ ನಡೆಸುತ್ತಿವೆ. ಕೈಗೆ ಎಟುಕಿದರೆ ಸಿಗುವಂಥಹ ಅನೇಕ ರೀತಿಯ ಹಣ್ಣುಗಳು ಜೊಂಪೆಜೊಂಪೆಯಾಗಿ ಇಳಿ ಬಿದ್ದಿದ್ದವು. ಬಣ್ಣ ಬಣ್ಣದ ಚಿಕ್ಕದೊಡ್ಡ ಚಿಟ್ಟೆಗಳು, ದುಂಬಿಗಳು ಹಾರಾಡುತ್ತ ಆಟವಾಡುತ್ತಿದ್ದವು. ದೊಡ್ಡಮರ, ಚಿಕ್ಕಮರಗಳು ಹಸಿರಿನಿಂದ ಕಂಗೊಳಿಸುತ್ತಿತ್ತು. "ಓ ನಾನೇನು ಸ್ವಪ್ನಲೋಕಕ್ಕೆ ಬಂದಿರುವೆನೇ? ಇದೇನಿದು ಮಾಯಾಲೋಕ ದುಂಬಿ" ಎಂದು ಕೇಳಿದಳು.

"ಇದು ಮಯಾಲೋಕವಲ್ಲ, ಇದು ನಮ್ಮ ಲೋಕ. ಬಾ, ನಿನ್ನ ನಮ್ಮ ಅಪ್ಪ-ಅಮ್ಮನ ಹತ್ತಿರ ಕರೆದುಕೊಂಡು ಹೋಗುತ್ತೇನೆ" ಎಂದು ಒಂದು ಮರದ ಪೊಟರೆ ಹತ್ತಿರ ಕರೆದುಕೊಂಡು ಹೋಗಿ ಕುಳ್ಳಿರಿಸಿತು. ಅಲ್ಲಿ ದುಂಬಿಯ ಅಮ್ಮ ಹಾಸಿಗೆ ಹಿಡಿದಿತ್ತು. ತಂದೆ ದುಃಖದಿಂದ ಪಕ್ಕ ಕುಳಿತಿದ್ದಿತು. ದುಂಬಿ ಬಂದುದು ನೋಡಿ ಸಂತೋಷದಿಂದ ದುಂಬಿ ಅಮ್ಮ ಎದ್ದು ಕೂತು ಸಮಾಚಾರವೆಲ್ಲ ಕೇಳಿತು. "ನೀನು ಮನುಷ್ಯರ ಕೈಗೆ ಸಿಕ್ಕಿಹಾಕಿಕೊಂಡು ಇಷ್ಟು ಹೊತ್ತಿಗೆ ಸತ್ತೇಹೋಗಿರುತ್ತೀಯಾ ಎಂದುಕೊಂಡಿದ್ದೆವು. ನೀನು ಬದುಕಿ ಬಂದುದು ನೋಡಿ ಎಷ್ಟು ಸಂತೋಷ ಆಗುತ್ತಿದೆ ಗೊತ್ತಾ?" ಎಂದು ಅಪ್ಪ-ಅಮ್ಮ ಇಬ್ಬರು ತಬ್ಬಿಕೊಂಡು ಸಂತೋಷದಿಂದ ಆನಂದಬಾಷ್ಪ ಸುರಿಸಿದರು. ಆಗ ದುಂಬಿ "ನಾನು ಬದುಕಿ ಬರಲಿಕ್ಕೆ ಇವಳೇ ಕಾರಣ. ನನ್ನನ್ನು ಉಳಿಸಿದವಳು ಇವಳು" ಎಂದು ತಂಗಿಯನ್ನು ಪರಿಚಯ ಮಾಡಿಕೊಡುತ್ತಾನೆ. "ಹೌದು! ಎಷ್ಟು ಚೆಂದದ ಹುಡುಗಿ, ಒಳಗೆ ಜೇನು ಇದೆ ಕೊಡು. ಹಣ್ಣುಗಳಿವೆ, ಅವಳಿಗೆ ಹೊಟ್ಟೆತುಂಬ ತಿನ್ನಿಸು" ಎಂದರು ದುಂಬಿಯ ತಾಯಿತಂದೆ. "ಅದು ಸರಿ ಅಮ್ಮ, ನಾವು ಮತ್ತೆ ಸಾಯಂಕಾಲದ ಒಳಗೆ ಹೋಗಬೇಕು. ಇಲ್ಲದಿದ್ದರೆ ಇವಳ ಅಣ್ಣ ರೋಧಿಸುತ್ತಾನೆ" ಎಂದು ದುಂಬಿ ತನ್ನ ತಾಯಿಗೆ ಹೇಳಿತು. ಮೃದು ಹೃದಯಿಗಳಾದ ದುಂಬಿಗಳು "ಹೌದು ಹಾಗಾದರೆ ಜೇನುತುಪ್ಪ, ಹಣ್ಣುಗಳನ್ನು ತಿಂದು ಸಾಯಂಕಾಲದವರೆಗೆ ಆಟ ಆಡುತ್ತ ಆಮೇಲೆ ಹೋಗಿಬನ್ನಿ. ಮತ್ತೆ ನಾಳೆ ಬರುವೆ ತಾನೆ?" ಎಂದು ಕೇಳಿದವು. "ಖಂಡಿತವಾಗಿಯೂ ನಾಳೆ ಮತ್ತೆ ಬರುತ್ತೇವೆ" ಎಂದು ಹೇಳಿ ಪೊಟರೆಯಿಂದ ಹೊರಬಂದು ಆಟ ಆಡಲಿಕ್ಕೆ ತೊಡಗಿದರು.

ಹೀಗೆ ಹಲವಾರು ದಿನಗಳು ಕಳೆದವು. ದುಂಬಿಯ ಅಪ್ಪ-ಅಮ್ಮ ಹುಡುಗಿಯನ್ನು ಕರೆದು, "ನೋಡು, ನೀವಿಬ್ಬರು ತುಂಬಾ ಅನ್ಯೂನ್ಯವಾಗಿ, ಪ್ರೀತಿಯಿಂದ ಇದ್ದೀರಾ ಅಲ್ಲವಾ?" ಎಂದು ಕೇಳಿದೆವು. "ಅದಕ್ಕೆ ಹುಡುಗಿ ನಾಚಿಕೆಯಿಂದ "ಹೌದು!" ಎಂದಳು. "ಹಾಗಾದರೆ ಮತ್ತೆ ನಮ್ಮ ದುಂಬಿಯನ್ನು ಮದುವೆ ಆಗಿಬಿಡು" ಎಂದರು. ಅದಕ್ಕೆ ಹುಡುಗಿ "ದುಂಬಿನ ಮದುವೆಯಾಗೋದು ಹೇಗೆ? ನನಗೇನೋ ಒಂದು ಗಳಿಗೆ ಅದನ್ನು ಬಿಟ್ಟು ಇರಲಿಕ್ಕೆ ಇಷ್ಟವಿಲ್ಲ. ನಾನು ಅದನ್ನು ತುಂಬ ಪ್ರೀತಿಸುತ್ತೇನೆ" ಎಂದಳು. "ಹೌದಾ! ಆದರೆ ಒಂದು ಕೆಲ್ಸ ಮಾಡು, ಅಲ್ಲಿ ಕಾಣುವ ಬಿಲ್ವಪತ್ರೆ ಮರದ ಕೆಳಗೆ ಕುಳಿತು ನಮ್ಮ ದೇವರಾದ ಶಿವನನ್ನು ಕುರಿತು ತಪಸ್ಸು ಮಾಡು. ನಿನ್ನ ಭಕ್ತಿಗೆ ಶಿವ ಮೆಚ್ಚೇಮೆಚ್ಚುತ್ತಾನೆ. ಅವನು ಪ್ರತ್ಯಕ್ಷನಾದ ಮೇಲೆ ದುಂಬಿಯನ್ನು ಮಾನವನಾಗೋ, ಇಲ್ಲ ನೀನು ದುಂಬಿಯಾಗೋ ಹಾಗೆ ವರ ಕೇಳು" ಎಂದು ಸಲಹೆ ನೀಡಿದರು. ಅದಕ್ಕೆ ಹುಡುಗಿ "ದುಂಬಿ ಮಾನವನಾದರೇ ನಿಮಗೆ ಇಷ್ಟವೇ?" ಎಂದು ಆಶ್ಚರ್ಯದಿಂದ ಕೇಳಿದಳು. "ಹೌದು, ನನ್ನ ಮಗ ಸಂತೋಷದಿಂದ ಹೇಗಿದ್ದರೂ ಸರಿ" ಎಂದರು. "ನೋಡಿ, ನಾನು ದುಂಬಿಯಾದರೆ ನಮ್ಮಣ್ಣನಿಗೆ ತುಂಬ ದುಃಖವಾಗುತ್ತದೆ. ಈಗ ಏನು ಮಾಡುವುದು ನೀವೇ ಹೇಳಿ" ಎಂದಳು ಹುಡುಗಿ. "ಸರಿ, ದುಂಬಿನ ಮನುಷ್ಯನನ್ನಾಗಿ ಮಾಡೋ ವರನೇ ಕೇಳು, ಪರವಾಗಿಲ್ಲ" ಎಂದವು ದುಂಬಿಗಳು.

ದುಂಬಿಗಳೆಲ್ಲ ಬಿಲ್ವಪತ್ರದ ಮರದ ಹತ್ತಿರ ತಮ್ಮ ರೆಕ್ಕೆಗಳಿಂದ ಕಸ ತೆಗೆದು ಶುಭ್ರ ಮಾಡಿದವು. ಹುಡುಗಿ ಅಲ್ಲಿನ ಪನ್ನೀರಿನಂತಹ ನೀರಿನಲ್ಲಿ ಸ್ನಾನ ಮಾಡಿ ಮಡಿಯುಟ್ಟು ತಪಸ್ಸಿಗೆ ಕೂತಳು. ದುಂಬಿಯು ಅವಳ ಎದುರಿಗೆ ಹಾರುವುದು ಮರೆತು ಕುಳಿತುಕೊಂಡಿತು. ಹೀಗೆ ದಿನಗಳು ಉರುಳಲು ಕೈಲಾಸದಲ್ಲಿದ್ದ ಶಿವನಿಗೆ ಹುಡುಗಿಯು ತಪಸ್ಸು ಮಾಡುತ್ತಿರುವುದು ತಿಳಿದು ಬಂದಿತು. ಪುಟ್ಟ ಹುಡುಗಿ ತಪಸ್ಸು ಮಾಡುತ್ತಿರುವುದನ್ನು ನೋಡಿ ಹೃದಯ ಕರಗಿತು. ಶಿವನು ಹುಡುಗಿಯ ಮುಂದೆ ಪ್ರತ್ಯಕ್ಷನಾದನು. ಶಿವನನ್ನು ಕಂಡು ಹುಡುಗಿ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದಳು. ಶಿವನು ಹುಡುಗಿಯನ್ನು "ಏತಕ್ಕಾಗಿ ತಪಸ್ಸು ಮಾಡುತ್ತಿದ್ದಿಯೇ?" ಎಂದು ಕೇಳಲು, ಹುಡುಗಿ "ತನ್ನ ಪ್ರೀತಿಯ ದುಂಬಿಯನ್ನು ಮಾನವನನ್ನಾಗಿ ಮಾಡಬೇಕೆಂದು ಶಿವನಲ್ಲಿ ಕೇಳಿಕೊಂಡಳು. ಶಿವನು "ತಥಾಸ್ತು" ಎಂದು ಮಾಯವಾದನು. ಮಾನವನಾದ ದುಂಬಿಯನ್ನು ಕಂಡು ಅದರ ಅಪ್ಪ,ಅಮ್ಮ, ಬಂಧು ಬಳಗಕ್ಕೆಲ್ಲಾ ತುಂಬ ಸಂತೋಷವಾಯಿತು. ಅವುಗಳೆಲ್ಲ ಸೇರಿ ಇಬ್ಬರಿಗೂ ಬಹು ವಿಜೃಂಭಣೆಯಿಂದ ಮದುವೆ ಮಾಡಿದರು. ಮದುವೆಯಾದ ಮೇಲೆ ಹುಡುಗಿ ತನ್ನ ಅಣ್ಣನನ್ನು

ನೋಡಬೇಕೆಂದು ಮಾನವ ಗಂಡು ದುಂಬಿಯನ್ನು "ನಾವು ಹೇಳದೆ ಕೇಳದೆ ಬಂದಿರುವುದರಿಂದ ಅವನ ಪರಿಸ್ಥಿತಿ ಹೇಗಿದೆಯೋ ಏನೋ" ಎಂದು ಹೇಳಿದಳು. ಇವಳ ಮಾತನ್ನು ಕೇಳಿದ ಗಂಡ ದುಂಬಿ ಅಣ್ಣನನ್ನು ನೋಡಲು ಹೊರಡುತ್ತಾರೆ.

ಈ ಕಡೆ ಅಣ್ಣನಾದರೋ ಇದ್ದೊಬ್ಬ ತಂಗಿ ಇದ್ದಕ್ಕಿದ್ದಂತೆ ಮಾಯವಾದುದನ್ನು ಕಂಡು ಅತ್ತು ಕರೆದು ಊಟ-ತಿಂಡಿ ಸರಿಯಾಗಿ ಮಾಡದೆ ಹುಚ್ಚನೇ ಆಗಿದ್ದನು. ಒಂದು ದಿನ ಇದ್ದಕ್ಕಿದ್ದಂತೆ ಮದುವೆ ಮಾಡಿಕೊಂಡು ಸಂತೋಷದಿಂದ ಅವರನ್ನು ಎದುರುಗೊಂಡು ಮನೆಯೊಳಕ್ಕೆ ಬರಮಾಡಿಕೊಂಡನು.

ಅಣ್ಣ-ತಂಗಿ, ತಂಗಿ ಗಂಡನಾದ ದುಂಬಿ ಮೂರು ಮಂದಿಯೂ ಅಲ್ಲಿ ಇಲ್ಲಿ ಎರಡೂ ಕಡೆ ಓಡಾಡಿಕೊಂಡಿರುತ್ತ ಎಲ್ಲರಿಗೂ ಪ್ರೀತಿ ಪಾತ್ರರಾಗಿ ಬಹುಕಾಲ ಸುಖವಾಗಿ ಬಾಳುತ್ತಿದ್ದರು.

## ೧೦. ದೇವರಲ್ಲಿ ನಂಬಿಕೆ ಇರಲಿ

ಹಿಂದೂ ಧರ್ಮದಲ್ಲಿರುವ, ದೋಷಗಳಲ್ಲಿ ಅಸ್ಪೃಷ್ಯತೆಯೂ ಒಂದು. ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಕೀಳು ಎಂದು ತಿಳಿಯುವುದು ಅತಿ ದೊಡ್ಡ ತಪ್ಪು. ಹುಟ್ಟಿನಿಂದ ಜಾತಿಯಿಂದ ಯಾರೂ ದೊಡ್ಡವರಾಗುವುದಿಲ್ಲ. ಅವರವರು ಮಾಡಿದ ಒಳ್ಳೆಯ ಕೆಲಸಗಳಿಂದಲೇ ಇತರರಿಂದ ಗೌರವವನ್ನು ಪಡೆಯುತ್ತಾರೆ.

ಭಾರತದಲ್ಲಿ ಇತ್ತೀಚಿನ ಕೆಲವು ವರ್ಷಗಳವರೆಗೆ ಅಸ್ಪೃಶ್ಯರನ್ನು ಇತರರು ಅತಿ ನಿಕೃಷ್ಟವಾಗಿ ಕಾಣುತ್ತಿದ್ದರು. ಅವರನ್ನು ಮುಟ್ಟಿಸಿಕೊಳ್ಳುವುದೂ ಪಾಪ ಎಂದು ತಿಳಿಯುತ್ತಿದ್ದರು.

ಬಾಪು ಚಿಕ್ಕವರಿದ್ದಾಗ ಅವರ ತಾಯಿ, "ಮಗು ಅಸ್ಪೃಶ್ಯರನ್ನು (ಹರಿಜನ-ಗಿರಿಜನ) ಮುಟ್ಟಿಸಿಕೊಳ್ಳಬೇಡ. ಒಂದು ವೇಳೆ ಅವರ ಮೈ ಕೈ ತಗುಲಿದರೆ ತಕ್ಷಣ ಯಾರಾದರೊಬ್ಬ ಮುಸ್ಲಿಮನನ್ನು ಮುಟ್ಟಿಬಿಡು. ಪಾಪ ಪರಿಹಾರವಾಗಿ ಬಿಡುತ್ತದೆ" ಎಂದು ಹೇಳುತ್ತಿದ್ದರಂತೆ. ಆ ಮಾತು ಕೇಳಿ ಬಾಪುಗೆ ನಗೆ ಬರುತ್ತಿತ್ತು. ಆತ ಶಾಲೆಗೆ ಹೋಗಿ ಬಂದರೆ ಯಾರ್ಯಾರು ಮುಟ್ಟಿ ಮೈಲಿಗೆಯಾಯಿತೋ ಎಂದು ಮನೆಯ ಹೊರಗೆ ಕುಳ್ಳರಿಸಿ ಸ್ನಾನ ಮಾಡಿಸುತ್ತಿದ್ದರಂತೆ!

ಗಾಂಧೀಜಿ ಬೆಳೆದಂತೆಲ್ಲಾ ವಿಚಾರವಂತರಾದರು. ಅಸ್ಪೃಶ್ಯರು ನನ್ನ ಬಂಧುಗಳು ಎಂದರು. ಅವರನ್ನು ಹರಿಜನರು ಎಂದು ಕರೆದರು. ಅವರ ಜೀವನ ಮಟ್ಟವನ್ನು ಸುಧಾರಿಸಲು ಶ್ರಮಿಸಿದರು.

ಗಾಂಧೀಜಿ ಅಹಮದಾಬಾದಿನ ಬಳಿ ಸೇವಾ ಗ್ರಾಮವನ್ನು ಸ್ಥಾಪಿಸಿದರು. ಅಲ್ಲಿಗೆ ಒಂದು ಹರಿಜನ ಸಂಸಾರ ಬಂದು ಆಶ್ರಯ ಕೇಳಿತು. ಅವರು ಕೂಡಲೇ ತುಂಬು ಹೃದಯದಿಂದ ಒಪ್ಪಿಕೊಂಡರು.

ಸುದ್ದಿ ಹಬ್ಬಿತು. ಗಾಂಧೀಜಿ ಹರಿಜನರಿಗೆ ಆಶ್ರಮವನ್ನು ಕೊಟ್ಟು ಆಶ್ರಮವನ್ನು ಅಪವಿತ್ರಗೊಳಿಸಿದರು ಎಂದು ಹಲವರು ಬಾಪುವನ್ನು ಕಟುವಾಗಿ ಟೀಕಿಸದರು. ಆಶ್ರಮಕ್ಕೆ ಧನಸಹಾಯ ನೀಡುತ್ತಿದ್ದ ಅಹಮದಾಬಾದಿನ ಧನಿಕರೆಲ್ಲಾ ಸಹಾಯ ನಿಲ್ಲಿಸಿದರು. ಆಶ್ರಮದ ವೆಚ್ಚಕ್ಕೆ ಹಣವಿಲ್ಲವಾಯಿತು. ಆಶ್ರಮದ ಮಗನ್ ಲಾಲ್ ಬಾಪು ಬಳಿಗೆ ಬಂದು ಹೇಳಿದರು.

"ಹಣ ಮುಗಿಯಿತು. ಯಾರಿಂದಲೂ ನೆರವು ದೊರೆಯುವ ಸಂಭವವೂ ಇಲ್ಲವೆಂದು ತೋರುತ್ತಿದೆ. ಮುಂದೆ ಆಶ್ರಮಕ್ಕೆ ಬೇಕಾಗುವ ದವಸ-ಧಾನ್ಯದ ಖರ್ಚಿಗೆ ಏನು ಮಾಡುವುದು?"

ಬಾಪು ಶಾಂತಚಿತ್ತರಾಗಿ ಹೇಳಿದರು-

“ಅದಕ್ಕೇಕೆ ಚಿಂತೆ. ನಾವು ದೇವರು ಮೆಚ್ಚುವ ಕೆಲಸ ಮಾಡಿದ್ದೇವೆ. ಅದಕ್ಕಾಗಿ ತಲೆ ತಗ್ಗಿಸಬೇಕಾಗಿಲ್ಲ, ಧೈರ್ಯಗೆಡಬೇಕಿಲ್ಲ. ನಾಳೆಯಿಂದ ಅಗತ್ಯ ಬಿದ್ದರೆ ಹರಿಜನರ ವಸತಿಯಲ್ಲಿ ಹೋಗಿ ಅಲ್ಲೇ ನೆಲೆಸೋಣ, ನಿಲ್ಲೋಣ. ”



ಗಾಂಧೀಜಿಗೆ ದೇವರಲ್ಲಿ ಅಚಲ ನಂಬಿಕೆ ಇತ್ತು. ಇದೂ ಒಂದು ಪರೀಕ್ಷೆ. ಸತ್ಯ ಶೋಧಕರಿಗೆ ಇಂತಹ ಅಡಚಣೆಗಳು ಹೆಜ್ಜೆ ಹೆಜ್ಜೆಗೂ ಹಿಂಭಾಲಿಸುತ್ತೇವೆ. ಸಾಧಕರು ಧೈರ್ಯದಿಂದಿರಬೇಕು. ದೇವರೇ ದಾರಿ ತೋರಿಸುತ್ತಾನೆ ಎಂದುಕೊಂಡು ಆ ರಾತ್ರಿ ಸುಖವಾಗಿ ನಿದ್ರಿಸಿದರು.

ಮಾರನೆಯ ದಿನ ಬೆಳಕು ಹರಿಯುವುದರಲ್ಲಿ ಶ್ರೀಮಂತನೊಬ್ಬ ಕಾರಿನಲ್ಲಿ ಆಶ್ರಮಕ್ಕೆ ಬಂದು ಗಾಂಧೀಜಿಯನ್ನು ಭೇಟಿ ಮಾಡಿದ. ಗಾಂಧೀಜಿ ಆತನನ್ನು ಎಂದೋ ಒಂದು ಬಾರಿ ನೋಡಿದರಷ್ಟೆ.

“ಬಾಪೂ, ನಿಮ್ಮ ಆಶ್ರಮಕ್ಕೆ ಹಣದ ಅವಶ್ಯಕತೆ ಇದೆಯೇ?”

ಆ ಶ್ರೀಮಂತ ನಮ್ರನಾಗಿ ಕೇಳಿದ.

“ಹೌದು” ಎಂದರು ಬಾಪೂಜಿ.

“ಮಾರನೆಯ ದಿನ ಆತ ಹದಿಮೂರು ಸಾವಿರ ರೂಪಾಯಿಗಳನ್ನು ಗಾಂಧೀಜಿಯ ಕೈಗೆ ತಂದಿತ್ತ. ಆ ಹಣ ಆಶ್ರಮದ ಒಂದು ವರ್ಷದ ಖರ್ಚಿಗೆ ಸಾಕಾಗಿತ್ತು.”

ಆಶ್ರಮದ ಜನರಿಂದ, ಕಸ್ತೂರಬಾ ಮನದಿಂದ ಅಸ್ಪೃಶ್ಯತಾ ಭಾವನೆಯನ್ನು ತೊಡೆದು ಹಾಕಲು ಬಾಪು ತುಂಬಾ ಶ್ರಮಿಸಬೇಕಾಯಿತು.

ಗಾಂಧೀಜಿ ಆ ಅಸ್ಪೃಶ್ಯ ಸಂಸಾರದ ಹೆಣ್ಣು ಮಗು ಲಕ್ಷ್ಮಿಯನ್ನು ತಮ್ಮ ಮಗಳಾಗಿ ದತ್ತು ಸ್ವೀಕರಿಸಿದರು.

“ನನಗೆ ಇನ್ನೊಂದು ಜನ್ಮ ಇರುವುದಾದರೆ ಆ ಜನ್ಮ ಹರಿಜನ ಕುಟುಂಬದಲ್ಲಿ ಬರಲಿ. ಅವರು ಸಾವಿರಾರು ವರ್ಷಗಳಿಂದ ಅನುಭವಿಸುತ್ತಿರುವ ಅಪಮಾನದಲ್ಲಿ ಪಾಲು ದೊರೆಯಲಿ. ಅವರನ್ನು ಆ ದುಃಖ ಸ್ಥಿತಿಯಿಂದ ಪಾರುಗೊಳಿಸುವ ಶಕ್ತಿಯನ್ನು ದೇವರು ನನ್ನಲ್ಲಿ ಅನುಗ್ರಹಿಸಲಿ” ಎಂದು ಬಾಪು ಬಯಸುತ್ತಿದ್ದರು.

***

# ಹುಲಿಯ ಗುಹೆಗೆ ಪುಟ್ಟಿಯ ಪಯಣ

## ಲೇಖಕನ ಮಾತು

**ಮಕ್ಕಳಿಗೆ ನಮ್ಮ ರಾಷ್ಟ್ರೀಯ ಮೃಗವಾದ ಹುಲಿಯ ದೇಹ ಲಕ್ಷಣಗಳು, ಜೀವನವಿಧಾನ, ಆಹಾರಾಭ್ಯಾಸ ಮತ್ತು ಗುಣ ಸ್ವಭಾವಗಳ ಪರಿಚಯ ಮಾಡಿಸುವುದು ಈ ಕೃತಿ ರಚನೆಯ ಉದ್ದೇಶ. ಹೇಳಬೇಕಾದುದನ್ನು ಕಥಾ ರೂಪದಲ್ಲಿ ತಿಳಿಸುವ ಪ್ರಯತ್ನ ಇಲ್ಲಿ ನಡೆದಿದೆ. ಕಾಡು ಪ್ರಾಣಿಯಾದ ಹುಲಿಯಲ್ಲೂ ಮನುಷ್ಯರಲ್ಲಿ ಕಾಣಿಸಿದ ಕೆಲವು ಗುಣ ವಿಶೇಷಗಳಿವೆ. ಹುಲಿ ನಮ್ಮ ರಾಷ್ಟ್ರೀಯ ಸಂಪತ್ತು. ಅದನ್ನು ರಕ್ಷಿಸುವುದು ನಮ್ಮ ಕರ್ತವ್ಯ. ನಾವೇನು ಮಾಡಿದ್ದೇವೆ? ಈ ಪ್ರಯತ್ನದಲ್ಲಿ ನಾವೆಷ್ಟು ಸಫಲರಾಗಿದ್ದೇವೆ? ಇವೇ ಮೊದಲಾದ ವಿಚಾರಗಳ ಕಡೆಗೂ ಬೆಳಕು ಚೆಲ್ಲಲು ಇಲ್ಲಿ ಯತ್ನಿಸಲಾಗಿದೆ. ಹುಲಿಗಳ ಸಂತತಿ ನಾಶ ಹೊಂದುತ್ತಿರುವ ಇಂದಿನ ಸನ್ನಿವೇಶದಲ್ಲಿ, ಇಂತಹದೊಂದು ಪ್ರಯತ್ನ ಸ್ವಾಗತಾರ್ಹ ಎನ್ನುವ ಅನಿಸಿಕೆ ನನ್ನದು. ಈ ಕೃತಿ ರಚನೆಯಲ್ಲಿ ಶ್ರೀ ಎಸ್.ಎಫ್. ಉಪ್ಪಿನ ಅವರ "ನಮ್ಮ ವನ್ಯ ಪ್ರಾಣಿಗಳು" ಮತ್ತು ಅಜ್ಜಂಪುರ ಕೃಷ್ಣ ಸ್ವಾಮಿ ಅವರ "ವನಸಿರಿ" ಈ ಪುಸ್ತಕಗಳು ನನಗೆ ನೆರವಾಗಿವೆ. ಸಂಬಂಧಪಟ್ಟ ಲೇಖಕರಿಗೆ ನಾನು ಆಭಾರಿ.**

ಈ ಪುಸ್ತಕವನ್ನು ಪ್ರಕಟಿಸಿ, ಉಪಕಾರ ಮಾಡಿದವರು ನನ್ನ ನಿರಂತರ ಪ್ರೋತ್ಸಾಹಕರಾದ ಕಿನ್ನಿಗೋಳಿ ಯುಗಪುರುಷ ಪ್ರಕಟಣಾಲಯದ ಶ್ರೀ ಕೆ. ಭುವನಾಭಿರಾಮ ಉಡುಪರು. ಅವರಿಗೆ ನಾನು ಚಿರಋಣಿ.

ಈ ಪುಸ್ತಕಕ್ಕೆ ಚಿತ್ರಗಳನ್ನು ಬರೆದುಕೊಟ್ಟು ಸಹಕರಿಸಿದ ಮಿತ್ರ ಬಾಲ ಮಧುರಕಾನನ ಮತ್ತು ನನ್ನ ಮೊಮ್ಮಗಳು ಪ್ರೀತಿ ಎಚ್. ರಾವ್, ಇದನ್ನು ಅಂದವಾಗಿ ಮುದ್ರಿಸಿದ ಕಿನ್ನಿಗೋಳಿ ಯುಗಪುರುಷ ಗ್ರಾಫಿಕ್ಸ್ ನ ಗೆಳೆಯರು ಇವರೆಲ್ಲರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಕಿರುಹೊತ್ತಗೆಯಿದು ಹೊರಬರುತ್ತಿರುವ ಈ ಸಂದರ್ಭದಲ್ಲಿ ಹಿಂದೆ ನನಗೆ ಮಹದುಪಕಾರ ಮಾಡಿದ್ದ ಹಿರಿಯರಾದ ದಿ.ಕೊ.ಅ. ಉಡುಪ ಮತ್ತು ಧರ್ಮದರ್ಶಿ. ಹರಿಕೃಷ್ಣ ಪುನರೂರು ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

**ಪಳಕಳ ಸೀತಾರಾಮ ಭಟ್ಟ**
ಶಿಶುಸಾಹಿತ್ಯ ಮಾಲೆ.
ಮಿತ್ತಬೈಲು

## ಪ್ರಕಾಶಕರ ಮಾತು

ಶ್ರೀ ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗಾಗಿ ಬರೆದಿರುವ ಕವನಗಳು, ಕಥನಕವನಗಳು, ಕಥೆಗಳು, ಪ್ರಹಸನ, ನಾಟಕ, ಜೀವನ ಚರಿತ್ರೆ, ಪತ್ರಲೇಖನ, ಚುಟುಕುಗಳು, ಪ್ರಬಂಧಗಳು ಎಲ್ಲವೂ ನೇರವಾಗಿ ಮಕ್ಕಳ ಮನ ಮುಟ್ಟುವಂತಿವೆ. ಶಿಶು ಸಾಹಿತ್ಯ ಮಾಲೆಯ ಮೂಲಕ ಮಕ್ಕಳಿಗಾಗಿ ಸಿಹಿ ತಿನಿಸನ್ನು ನೀಡುತ್ತಾ ಬಂದಿರುವ ಶ್ರೀ ಪಳಕಳರ ಬಹುತೇಕ ಸತ್ಕೃತಿಗಳು ನಮ್ಮ ಪ್ರಕಟಣಾಲಯದ ಮೂಲಕ ಪ್ರಕಟವಾಗಿವೆ.

ಶಿಶು ಸಾಹಿತ್ಯ ಮಾಲೆಯ ಮೂಲಕ ಹೊಸ ಆಯಾಮವನ್ನೇ ಪರಿಕಲ್ಪಿಸಿ, ಸಾರಸ್ವತ ಲೋಕದಲ್ಲಿ ಸ್ವಂತ ನಡಿಗೆಯಲ್ಲಿ ಮುನ್ನಡೆಯುತ್ತಿರುವ ಶ್ರೀ ಪಳಕಳ ಸೀತಾರಾಮ ಭಟ್ಟರ '**"ಹುಲಿಯ ಗುಹೆಗೆ ಪುಟ್ಟಿಯ ಪಯಣ"** ಎಂಬ ಈ ಮಕ್ಕಳ ಕಥಾ' ಸಂಗ್ರಹವನ್ನು ನಮ್ಮ ಪ್ರಕಟಣಾಲಯದ ೩೯ನೇ ಕೃತಿಯಾಗಿ ಓದುಗರ ಮುಂದೆ ಇರಿಸಲು ಸಂತೋಷ ಪಡುತ್ತೇವೆ. ಶ್ರೀ ಪಳಕಳರಿಗೆ ನಮ್ಮ ವಂದನೆಗಳು.

ಈ ಕೃತಿಯ ಅಚ್ಚುಕಟ್ಟಿನ ದಿಶೆಯಲ್ಲಿ ಸಹಕರಿಸಿದ ಯುಗಪುರುಷದ ಕಾರ್ಯಕರ್ತರೆಲ್ಲರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳು.

**ಕೊಡೆತ್ತೂರು ಭುವನಾಭಿರಾಮ ಉಡುಪ**

ಪ್ರಕಾಶಕ.

ಕಿನ್ನಿಗೋಳಿ

## ಹುಲಿಯ ಗುಹೆಗೆ ಪುಟ್ಟಿಯ ಪಯಣ(ಮಕ್ಕಳ ಕತೆ)

ಪುಟ್ಟಿ ಕಾಡಿಗೆ ಬಂದಿದ್ದಳು. ಇಕ್ಕಟ್ಟಾದ ಒಂದು ಹಾದಿಯಲ್ಲಿ ಅವಳು ನಡೆಯುತ್ತಿದ್ದಳು. ಕಾಡಿಗೆ ಅವಳು ಹೇಗೆ ಬಂದಳು? ಯಾವಾಗ ಬಂದಳು? ಯಾಕೆ ಬಂದಳು? ಅದು ಅವಳಿಗೇ ತಿಳಿಯದು. ಈ ಬಗ್ಗೆ ಅವಳು ಬಹಳ ಯೋಚಿಸಿದಳು. ಆದರೆ ಯಾವುದೂ ನೆನಪಿಗೆ ಬರುತ್ತಿಲ್ಲ. ಅವಳು ತನ್ನ ಮನೆಯಲ್ಲೇ ಇದ್ದಳು, ರಾತ್ರೆಯ ಊಟ ತೀರಿಸಿದ್ದಳು. ಅಜ್ಜಿ ಹೇಳಿದ ಕತೆ ಕೇಳುತ್ತಾ ಮಲಗಿದ್ದಳು. ಅಷ್ಟು ಮಾತ್ರ ಗೊತ್ತು ಅವಳಿಗೆ. ಉಳಿದ ಯಾವ ವಿಚಾರವೂ ಅವಳ ನೆನಪಿನಲ್ಲಿಲ್ಲ.

ಪುಟ್ಟಿ ಕಾಡಿನಲ್ಲಿ ಅಲೆಯುತ್ತಲೇ ಇದ್ದಳು. ಸಮಯ ಆಗಲೇ ಮುಸ್ಸಂಜೆಯಾಗಿತ್ತು. ಕಾಡಿನ ಹಕ್ಕಿಗಳೆಲ್ಲ ಗೂಡು ಸೇರಿದ್ದವು. ಎತ್ತರದ ಕೆಲವು ಮರಗಳಿಂದ ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತಿತ್ತು. ಆಗೊಮ್ಮೆ ಈಗೊಮ್ಮೆ ಕಾಡು ಪ್ರಾಣಿಗಳ ಕೂಗು ಕೇಳಿಬರುತ್ತಿತ್ತು. ಉಳಿದಂತೆ ಎಲ್ಲವೂ ಮೌನ. ನಿಮಿಷ ನಿಮಿಷಕ್ಕೂ ಬೆಳಕು ಕಡಿಮೆಯಾಗುತ್ತಿತ್ತು. ಆದಷ್ಟು ಬೇಗ ಪುಟ್ಟಿ ಮನೆ ಸೇರಬೇಕು. ಆದರೆ ಮನೆ ಯಾವ ಕಡೆಗಿದೆ? ಮನೆಗೆ ಹೋಗುವ ದಾರಿ ಯಾವುದು? ತಾನೀಗ ಎತ್ತ ಸಾಗುತ್ತಿದ್ದೇನೆ? ಈ ಕಾಡು ಎಷ್ಟು ದೊಡ್ಡದಿದೆ? ಇದರಿಂದ ಹೊರ ಹೋಗುವುದು ತನಗೆ ಸಾಧ್ಯವಾದೀತೇ? ಅದು ಆಗದಿದ್ದರೆ ತನ್ನ ಗತಿ ಏನು? ಅವಳು ಯೋಚಿಸುತ್ತಲೇ ಇದ್ದಳು. ಮುಂದೆ ಮುಂದೆ ನಡೆಯುತ್ತಲೂ ಇದ್ದಳು.

ಅದು ಹುಣ್ಣಿಮೆಯ ರಾತ್ರಿಯಾಗಿತ್ತು. ಬಾನಲ್ಲಿ ಚಂದಮಾಮ ಬೆಳಗುತ್ತಿದ್ದನು. ಹೊರಗೆ ಹಾಲು ಚೆಲ್ಲಿದಂತೆ ತಿಂಗಳ ಬೆಳಕು ಹರಡಿತ್ತು. ಆದರೆ ಕಾಡಿನ ಮರಗಳು ಆ ಬೆಳಕನ್ನು ತಡೆಯುತ್ತಿದ್ದವು. ಹಾಗಾಗಿ ಕಾಡಿನೊಳಗೆ ಹೆಚ್ಚು ಬೆಳಕು ಇರಲಿಲ್ಲ. ದಾರಿ ಅಸ್ಪಟ್ಟವಾಗಿ ಕಾಣಿಸುತ್ತಿತ್ತು. ಪುಟ್ಟಿ ಅಲ್ಲಿ ಒಬ್ಬಂಟಿಯಾಗಿದ್ದಳು. ಅವಳು ಬೊಬ್ಬಿಟ್ಟರೂ ಅದನ್ನು ಕೇಳುವವರು ಯಾರೂ ಅಲ್ಲಿರಲಿಲ್ಲ. ಅವಳ ಸಹಾಯಕ್ಕೆ ಬರುವವರೂ ಇರಲಿಲ್ಲ. ಪುಟ್ಟಿಗೂ ಅದು ಗೊತ್ತು. ಅವಳು ಹೆದರಿದಳು. ಹಾಗೆ ಹೆದರಿ ಕೂತರೆ ಅವಳು ಮನೆ ಸೇರುವುದು ಸಾಧ್ಯವೇ? ಇಲ್ಲವಲ್ಲಾ? ಅವಳು ಮತ್ತೆ ಧೈರ್ಯ ತಂದುಕೊಂಡಳು "ಇಲ್ಲಿಂದ ಪಾರಾಗುವ ಬಗೆ ಹೇಗೆ?" ಅವಳು ಯೋಚಿಸಿದಳು.

"ಇಲ್ಲೇ ಎಲ್ಲಾದರೂ ಕೂತು ಬಿಡಬೇಕು; ಬೆಳಗಾಗುವ ತನಕ ಕಾಯಬೇಕು. ಆಮೇಲೆ ಊರ ಹಾದಿ ಕಂಡು ಹಿಡಿಯಬೇಕು." ಅವಳು ನಿರ್ಧಾರಕ್ಕೆ ಬಂದಳು. ಮತ್ತೆ ಕಣ್ಣು ದೊಡ್ಡದು ಮಾಡಿ, ಸುತ್ತ ಮುತ್ತ ನೋಡಿದಳು. ಎದುರುಗಡೆ ದೊಡ್ಡದೊಂದು ಮರ ಕಾಣಿಸಿತು. ಅದು

ಮಾವಿನ ಮರವೇ ಇರಬೇಕು ಎನಿಸಿತು ಅವಳಿಗೆ. ಆ ಮರದ ತುಂಬ ಹಣ್ಣುಗಳಿದ್ದವು. ಪುಟ್ಟಿ ಇನ್ನಷ್ಟು ಮುಂದಕ್ಕೆ ಬಂದಳು, ಮರದ ಬುಡ ಸೇರಿದಳು, ಎಚ್ಚರಿಕೆಯಿಂದ ಮತ್ತೆ ಸುತ್ತಮುತ್ತ ಕಣ್ಣಾಡಿಸಿದಳು.



ಮರದ ಪಕ್ಕದಲ್ಲೇ ಆನೆಯಂಥ ಬಂಡೆಯೊಂದು ನಿಂದಿತ್ತು. ಬಂಡೆಯ ಸಂದಿನಲ್ಲಿ ವಿಶಾಲವಾದ ಗುಹೆಯೊಂದು ಕಾಣಿಸಿತು. ಅವಳು ಅದರ ತೀರ ಹತ್ತಿರಕ್ಕೆ ಬಂದಳು, ಗುಹೆಯ ಒಳಗೆ ಇಣುಕಿ ನೋಡಿದಳು. "ಅರೆ ಅಲ್ಲಿ ಎರಡು ಮಿಣುಕು ಹುಳಗಳಂಥ ದೀಪಗಳಿವೆಯಲ್ಲ!" ಅವಳು ತನಗೆ ತಾನೇ ಹೇಳಿಕೊಂಡಳು. ಆಗಲೇ ಗುಹೆಯೊಳಗಿಂದ ಮಾತೊಂದು ಕೇಳಿ ಬಂತು- "ಯಾರದು?"

ಪುಟ್ಟಿಯ ಮೈ ರೋಮಗಳು ನಿಮಿರಿ ನಿಂತವು! ಆದರೂ ಕೇಳಿ ಬಂದ ಪ್ರಶ್ನೆಗೆ ಅವಳು ಉತ್ತರಕೊಟ್ಟಳು - "ನಾನು, ಪುಟ್ಟಿ."

"ನೀನು ಎಲ್ಲಿಂದ ಬಂದೆ? ಯಾಕೆ ಬಂದೆ? ನಿನಗೆ ಇಲ್ಲೇನು ಕೆಲಸ?" ಮತ್ತೆ ದನಿ ಕೇಳಿಸಿತು.

ಪುಟ್ಟಿಗೆ ಸ್ವಲ್ಪ ಧೈರ್ಯ ಬಂತು. "ನೆರೆಯ ಹಳ್ಳಿಯವಳು ನಾನು. ರಾತ್ರೆ ಉಂಡು ಮಲಗುವ ತನಕ ಮನೆಯಲ್ಲೇ ಇದ್ದೆ ಅದು ಸರಿಯಾಗಿ ನೆನಪಿದೆ. ಆದರೆ ಈ ಕಾಡಿಗೆ ಹೇಗೆ ಬಂದೆ? ಯಾಕೆ ಬಂದೆ? ಅದು ನನಗೂ ತಿಳಿಯದು. ಎಷ್ಟು ಯೋಚಿಸಿದರೂ ನೆನಪಿಗೆ ಬರುತ್ತಿಲ್ಲ?" ತಡವರಿಸುತ್ತಲೇ ಹೇಳಿದಳು ಪುಟ್ಟಿ.

"ಅಯ್ಯೋ, ನೀನಿನ್ನೂ ಹೊರಗೆ ನಿಂತೇ ಇರುವೆಲ್ಲಾ? ಒಳಗೆ ಬಾ ಮಗೂ. ಇಲ್ಲಿ ನಾನು ಸಹ ಒಬ್ಬಳೇ ಇದ್ದೇನೆ. ಒಳಗೆ ಬರಲು ಹೆದರಬೇಕಾಗಿಲ್ಲ. ಬಾ ಒಳಗಡೆಗೆ ಬಂದು ಬಿಡು" ದನಿ ಮತ್ತೆ ಕರೆಯಿತು. ಮಾತಿನ ರೀತಿ ಈಗ ಬದಲಾಗಿತ್ತು. ಮೊದಲಿನಂತೆ ಅದು ಒರಟಾಗಿರಲಿಲ್ಲ. ತುಂಬ ಮೆದುವಾಗಿತ್ತು.

ಪುಟ್ಟಿಯ ಅಂಜಿಕೆ ದೂರಾಯಿತು. ಧೈರ್ಯದಿಂದ ಅವಳು ಗುಹೆಯೊಳಗೆ ಕಾಲಿಟ್ಟಳು. ಗುಹೆಯ ಬಾಯಿ ದೊಡ್ಡದಾಗಿತ್ತು. ಮನೆಯ ಚಾವಡಿಯಂತೆ ಅದು ವಿಶಾಲವಾಗಿತ್ತು. ಒಳಗೆಲ್ಲ ಮಬ್ಬುಗತ್ತಲು ತುಂಬಿತ್ತು. ಕತ್ತಲಲ್ಲೇ ಪುಟ್ಟಿ ಕಣ್ಣರಳಿಸಿ ನೋಡಿದಳು. ಬೆಕ್ಕಿನ ಹಾಗಿನ ಪ್ರಾಣಿಯೊಂದು ಅಲ್ಲಿ ಕೂತಿತ್ತು. ಆದರೆ ಗಾತ್ರದಲ್ಲಿ ಅದು ತುಂಬ ದೊಡ್ಡದಿತ್ತು. ಮಬ್ಬುಗತ್ತಲಲ್ಲಿ ಕಣ್ಣುಗಳು ಫಳಫಳ ಹೊಳೆಯುತ್ತಿದ್ದವು.

"ಓಹ್, ಇದು ಹುಲಿಯ ಗವಿ. ಇದರ ಒಳಗಡೆಗೇ ನಾನು ಬಂದು ಬಿಟ್ಟಿದ್ದೇನೆ" ಪುಟ್ಟಿ ಮನಸ್ಸಿನಲ್ಲೇ ಅಂದುಕೊಂಡಳು. ಅಷ್ಟರಲ್ಲಿ ಆ ಪ್ರಾಣಿ ನರಳುವುದು ಕೇಳಿಸಿತು. ನಿಧಾನವಾಗಿ ಅದು ತನ್ನ ಮುಂಗಾಲುಗಳನ್ನು ಮುಂದೆ ಚಾಚಿತು; ಅವುಗಳ ಮೇಲೆ ತನ್ನ ತಲೆ ಇರಿಸಿ, ನಾಯಿಗಳು ಮಲಗುವಂತೆ ಮಲಗಿಸಿಕೊಂಡಿತು. "ನೋವುಮಗೂ, ನೋವು; ಕೈಕಾಲುಗಳಲ್ಲಿ ನೋವು; ಭಾರೀ ನಿಶ್ಯಕ್ತಿ, ಅತ್ತಿತ್ತ ಓಡಾಡಲಿಕ್ಕೂ ಆಗುವುದಿಲ್ಲ. ವಯಸ್ಸಾಯಿತು ನೋಡು" ಹುಲಿಯಜ್ಜಿ ಸಂಕಟ ತೋಡಿಕೊಂಡಳು.

ಪುಟ್ಟಿಗೆ ತನ್ನ ಅಜ್ಜಿಯ ನೆನಪಾಯಿತು. ಅವಳು ಸಹ ಆಗಾಗ ಹೀಗೇ ಹೇಳುತ್ತಿದ್ದಳು. ಕೈಕಾಲುಗಳನ್ನು ನೀವಿಕೊಳ್ಳುತ್ತಿದ್ದಳು. "ಉಸ್ಸಪ್ಪಾ" ಎಂದು ಅಲ್ಲಲ್ಲಿ ಕೂಡುತ್ತಿದ್ದಳು. ಕತೆ, ಹಾಡು ಹೇಳಿ ಮಕ್ಕಳನ್ನು ಖುಶಿಪಡಿಸುತ್ತಿದ್ದಳು. ಅವಳ ಹಾಗೆ ಈ ಅಜ್ಜಿ ಸಹ ಎನಿಸಿತು ಪುಟ್ಟಿಗೆ.

ಅಷ್ಟರಲ್ಲಿ "ಅಯ್ಯೋ ಮಗೂ, ನೀನಿನ್ನೂ ನಿಂತೇ ಇರುವೆಯಲ್ಲಾ! ನಿನ್ನ ಹಿಂದುಗಡೆ ನೋಡು. ಅಲ್ಲೊಂದು ಪೆಟ್ಟಿಗೆಯಂಥ ಕಲ್ಲು ಇದೆಯಲ್ಲಾ? ಅದರ ಮೇಲಾದರೂ ಕೂತು ಬಿಡು. ನಿನ್ನ ಮನೆಯಲ್ಲಿ ಇರುವ ಹಾಗೆ ಮೇಜು, ಕುರ್ಚಿ, ಮಂಚ, ಹಾಸಿಗೆ ಇವು ಯಾವುದೂ ಇಲ್ಲಿ ಇಲ್ಲ. ಈ ನೆಲ ಸಹ ಬೆಚ್ಚಗಿಲ್ಲ. ಹಾಗಾಗಿ ಆ ಕಲ್ಲಿನ ಮೇಲೆಯೇ ನೀನು ಕೂಡಬೇಕಷ್ಟೆ!" ಹುಲಿಯಜ್ಜಿ ಮತ್ತೆ ಹೇಳಿದಳು.

ಪುಟ್ಟಿ ಹಿಂದಕ್ಕೆ ನೋಡಿದಳು. ಪೆಟ್ಟಿಗೆಯಂಥ ಕಲ್ಲೊಂದು ಅಲ್ಲಿ ಕಾಣಿಸಿತು. ಪುಟ್ಟಿ ಅದರ ಮೇಲೆ ಕೂತುಕೊಂಡಳು. "ನೀನು ನಮ್ಮ ಮನೆಗೆ ಬಂದಿದ್ದೆಯಾ, ಅಜ್ಜೀ?" ಅವಳು ಅಜ್ಜಿಯನ್ನು ಕೇಳಿದಳು. ತಮ್ಮ ಮನೆಯಲ್ಲಿ ಮೇಜು, ಕುರ್ಚಿ, ಮಂಚ, ಹಾಸಿಗೆ ಇವೆಲ್ಲ ಇರುವುದು ಈ ಅಜ್ಜಿಗೆ ಹೇಗೆ ಗೊತ್ತು? ಎನ್ನುವ ಕುತೂಹಲ ಅವಳಿಗೆ.

"ಇಲ್ಲ ಮಗೂ, ನಾನು ನಿಮ್ಮ ಮನೆಗೆ ಬಂದಿಲ್ಲ. ಆದರೂ ನಿನ್ನ ಹಾಗಿನ ಬಹಳ ಮಂದಿಯನ್ನು ಕಂಡಿದ್ದೇನೆ, ನಿಮ್ಮವರ ಬಗ್ಗೆ ಬಹಳ ಸಂಗತಿಗಳನ್ನು ತಿಳಿದಿದ್ದೇನೆ." ಅಜ್ಜಿ ಹೇಳಿದಳು, ತುಸು ಹೊತ್ತು ತಡೆದು ಅವಳು ಮತ್ತೆ ಮುಂದುವರಿಸಿದಳು, "ಕೆಲವು ಕಾಲ ನಾನೊಂದು ಸರ್ಕಸ್ ಕಂಪೆನಿಯಲ್ಲಿದ್ದೆ. ಆಗ ಕಂಪೆನಿಯೊಂದಿಗೆ ನಾನು ಹಲವಾರು ಊರುಗಳನ್ನು ಸುತ್ತಿದ್ದೆ. ಬಹಳ ಜನಗಳನ್ನು ಕಂಡಿದ್ದೆ. ಅವರ ಮಾತುಕತೆಗಳನ್ನು ಕೇಳಿದ್ದೆ. ಮನುಷ್ಯರ ಬಗ್ಗೆ ತುಂಬ ಸಂಗತಿಗಳನ್ನು ತಿಳಿದುಕೊಂಡಿದ್ದೆ. ನನ್ನ ಅದೃಷ್ಟ ಒಳ್ಳೆಯದಿತ್ತು. ಸರ್ಕಸ್ ಕಂಪೆನಿಯಿಂದ ತಪ್ಪಿಸಿಕೊಳ್ಳಲು ನನಗೊಂದು ಅವಕಾಶ ಸಿಕ್ಕಿಬಿಟ್ಟಿತು. ಅದನ್ನು ನಾನು ಬಳಸಿಕೊಂಡೆ; ಅಲ್ಲಿಂದ ತಪ್ಪಿಸಿಕೊಂಡು ಈ ಕಾಡಿಗೆ ಬಂದು ಬಿಟ್ಟೆ. ಅದೊಂದು ದೊಡ್ಡ ಸಾಹಸ. ಈಗಿನ ಪರಿಸ್ಥಿತಿಯಲ್ಲಿ ಅದನ್ನು ಊಹಿಸಲಿಲಕ್ಕೂ ಸಾಧ್ಯವಿಲ್ಲ. ಅದಿರಲಿ, ನೀನೀಗ ನನ್ನ ಮನೆಗೆ ಬಂದಿದ್ದೀಯಾ ನಿನಗೇನಾದರೂ ತಿನ್ನಲು ಕೊಡಬಹುದೆಂದರೆ ಇಲ್ಲೇನೂ ಇಲ್ಲವಲ್ಲಾ.. ಏನು ಮಾಡೋಣ? ಆಹಾಂ, ಈಗ ನೆನಪಿಗೆ ಬಂತು. ಇಲ್ಲೇ ಹೊರಗಡೆ ಮಾವಿನ ಹಣ್ಣುಗಳು ಬಿದ್ದಿರಬೇಕು. ನಾಲ್ಕೋ ಆರೋ ಹಣ್ಣುಗಳನ್ನು ಹೆಕ್ಕಿ ತಿಂದು ಬಿಡು. ಒಂದು ಬಾರಿಗೆ ನಿನ್ನ ಹಸಿವು ಹಿಂಗೀತು" ಅಜ್ಜಿ ಸಲಹೆ ನೀಡಿದಳು. ಪುಟ್ಟಿಗೆ ಅವಳು ತುಂಬ ಒಳ್ಳೆಯವಳಾಗಿ ಕಾಣಿಸಿದಳು.



"ಬೇಡ ಅಜ್ಜೀ. .ನನಗೆ ಹಸಿವಿಲ್ಲ. ನನಗೇನೂ ಬೇಕಾಗಿಲ್ಲ. ಬೆಳಗಿನ ತನಕ ಆಸರೆ ಸಿಕ್ಕಿದರಾಯಿತು. ಮತ್ತೆ ನಾನು ಮನೆಗೆ ಹೋಗಿಬಿಡುತ್ತೇನೆ. ಸದ್ಯ ಬಹಳ ಆಯಾಸವಾಗಿದೆ. ಕಾಡಲ್ಲಿ ಅಲೆದು ಕಾಲುಗಳು ಸೋತು ಹೋಗಿವೆ. ಹಾಗಾಗಿ ಈ ಕಲ್ಲ ಮೇಲೆಯೇ ಕೂತಿರುತ್ತೇನೆ. ಬೆಳಗಾಗುವ ತನಕ ಹೇಗಾದರೂ ಪೇಚಾಡಿ ಸಮಯ ಕಳೆಯುತ್ತೇನೆ." ಪುಟ್ಟಿ ಹೇಳಿದಳು




“ಆಗಲಿ ಮಗೂ, ಹಾಗೇ ಮಾಡು” ಹುಲಿಯಜ್ಜಿ ಒಪ್ಪಿಗೆ ಸೂಚಿಸಿದಳು. ಪುಟ್ಟಿಗೆ ಸ್ವಲ್ಪ ಸಮಾಧಾನವಾಯಿತು. “ಇಷ್ಟಾದರೂ ಆಸರೆ ಸಿಕ್ಕಿತಲ್ಲಾ. ಕಷ್ಟ ಸಹಿಸಿಯಾದರೂ ಬೆಳಗಿನ ವರೆಗೆ ಸಮಯ ಕಳೆಯಬಹುದಲ್ಲಾ” ಎನಿಸಿತು ಅವಳಿಗೆ.

ಈಗ ಪುಟ್ಟಿಯ ಕಣ್ಣುಗಳು ಒಳಗಿನ ಕತ್ತಲೆಗೆ ಹೊಂದಿಕೊಂಡಿದ್ದವು. ಹೊರಗಡೆ ಮರಗಳೆಡೆಯಿಂದ ತೂರಿ ಬಂದ ಅಲ್ಪ ಸ್ವಲ್ಪ ತಿಂಗಳ ಬೆಳಕು ಇತ್ತಲ್ಲ? ಅದರಿಂದಾಗಿ ಒಳಗಿನ ನೋಟವು ಸ್ಪಷ್ಟವಾಗತೊಡಗಿತ್ತು. ಪುಟ್ಟಿ ಮತ್ತೊಮ್ಮೆ ಗವಿಯೊಳಗೆಲ್ಲ ಕಣ್ಣಾಡಿಸಿದಳು. ಏನು ಆಶ್ಚರ್ಯ! ಹುಲಿಯಜ್ಜಿ ಸೀರೆಯೊಂದನ್ನು ಹೊದ್ದುಕೊಂಡಿದ್ದಾಳೆ! ಅರೆ, ಇವಳಿಗೆ ಸೀರೆ ಎಲ್ಲಿಂದ ಬಂತು? ಪುಟ್ಟಿಗೆ ಆಶ್ಚರ್ಯವಾಯಿತು.




“ಅಜ್ಜೀ, ನಿನಗೆ ಇಂಥ ಸೀರೆ ಎಲ್ಲಿ ಸಿಕ್ಕಿತು?” ಕುತೂಹಲದಿಂದ ಅವಳು ಪ್ರಶ್ನೆ ಹಾಕಿದಳು.

ಅಜ್ಜಿ ಕ್ಷಣಕಾಲ ಮೌನ ವಹಿಸಿದಳು. ಮತ್ತೆ ನಿಧಾನವಾಗಿ ಅವಳೆಂದಳು. “ಕೆಲವು ದಿನಗಳ ಹಿಂದೆ ಒಬ್ಬಳು ಮುದುಕಿ ಈ ಕಾಡಿಗೆ ಬಂದಿದ್ದಳು. ಕಟ್ಟಿಗೆ ಒಯ್ಯಲು ಅವಳು ಇಲ್ಲಿಗೆ ಬಂದಿರಬೇಕು. ಹಾಗೆ ಬಂದ ಅವಳು, ಕಾಡಿನಲ್ಲೇ ಸತ್ತು ಬಿದ್ದಳು. ಅವಳ ಹೆಣವನ್ನು ಕಾಡು ಮೃಗಗಳು ತಿಂದು ಮುಗಿಸಿದ್ದವು. ಅವಳ ಈ ಸೀರೆ ಮಾತ್ರ ಅಲ್ಲೇ ಬಿದ್ದುಕೊಂಡಿತ್ತು. ಅದನ್ನು ನಾನು ನೋಡಿದೆ. ಚಳಿಗೆ ಹೊದ್ದುಕೊಳ್ಳಬಹುದಲ್ಲಾ ಎನಿಸಿತು. ಅದನ್ನು ಇಲ್ಲಿಗೆ ತಂದುಬಿಟ್ಟೆ. ನಾನೀಗ ಹೊದ್ದುಕೊಂಡಿರುವುದು ಆ ಸೀರೆಯನ್ನೇ.”



ಪುಟ್ಟಿಗೆ ಸಮಾಧಾನವಾಯಿತು. ಅವಳು ಸೀರೆಯ ಬಗ್ಗೆ ಮತ್ತೆ ಮಾತೆತ್ತಲಿಲ್ಲ. ಬಹಳ ಹೊತ್ತು ಅವಳು ಅಲ್ಲಿ ಕೂತೇ ಇದ್ದಳು. ಹಾಗೆ ಕೂತು ನಿದ್ದೆ ಮಾಡುವುದು ಸಾಧ್ಯವೇ ಇರಲಿಲ್ಲ. ನಿದ್ದೆ ಬರುವ ಲಕ್ಷಣವೂ ಕಾಣಿಸಲಿಲ್ಲ ಅವಳಿಗೆ. "ಹೀಗೆ ನಾನು ಎಷ್ಟು ಹೊತ್ತು ಕೂತಿರಬಹುದು?" ಅವಳು ಯೋಚಿಸಿದಳು. ಥಕ್ಕನೆ ಅವಳಿಗೆ ತನ್ನ ಅಜ್ಜಿಯ ನೆನಪು ಬಂತು. ಅವಳು ಹೇಳುತ್ತಿದ್ದ ಬಗೆ ಬಗೆಯ ಕತೆಗಳೂ ನೆನಪಿಗೆ ಬಂದವು. "ಕತೆ ಹೇಳುವಂತೆ ಈ ಅಜ್ಜಿಯನ್ನೇ ಕೇಳಿಕೊಂಡರೆ ಹೇಗೆ?" ಅವಳು ತನ್ನನ್ನು ತಾನೇ ಪ್ರಶ್ನಿಸಿಕೊಂಡಳು.



"ಈ ಕಲ್ಲ ಮೇಲೆ ಕೂತು ನಿದ್ದೆ ತೂಗಿದರೆ ಬಿದ್ದು ಬಿಡುವುದು ಖಂಡಿತ. ಹಾಗಾಗಿ ನಿದ್ದೆ ತೊಗಬಾರದು. ಮತ್ತೇನು ಮಾಡಲಿ? ಈ ಅಜ್ಜಿಯ ಜೊತೆ ಮಾತಾಡುತ್ತ ಕೂತುಬಿಟ್ಟರೆ ಹೇಗೆ? ಹಾಂ, ಅದೇ ಸರಿ. ಈ ಅಜ್ಜಿಯನ್ನೇ ಮಾತಿಗೆ ಎಳೆಯಬೇಕು" ಅವಳು ನಿರ್ಧರಿಸಿದಳು. ಮತ್ತೆ "ಅಜ್ಜೀ, ನನಗೊಂದು ಕತೆ ಹೇಳುತ್ತೀಯಾ?" ಅವಳು ಅಜ್ಜಿಯನ್ನು ಕೇಳಿದಳು.

ಅಜ್ಜಿ ಎಚ್ಚರವಾಗೇ ಇದ್ದಳು. "ಅಯ್ಯೋ, ನನಗೇನು ಕತೆ ಗೊತ್ತಿದೆ, ಪುಟ್ಟೀ? ನಿಮ್ಮ ಹಾಗೆ ನಾನು ಶಾಲೆಗೆ ಹೋಗಿದ್ದೇನೆಯೇ? ಓದು ಬರಹ ಕಲಿತಿದ್ದೇನೆಯೇ? ಪುಸ್ತಕ ಗಿಸ್ತಕ ಓದಿದ್ದೇನೆಯೇ? ಅವಳು ಮರುಪ್ರಶ್ನೆ ಹಾಕಿದಳು.


"ಇಲ್ಲಿ ಮಲಗಲು ಆಗುವುದಿಲ್ಲ ಅಜ್ಜೀ. ನಿದ್ದೆಯೂ ಬರುವ ಹಾಗಿಲ್ಲ. ನಿದ್ದೆ ಮಾಡುವಂತೆಯೂ ಇಲ್ಲ. ಹೇಗಾದರೂ ಸಮಯ ಕಳೆಯಬೇಕಲ್ಲ? ಅದಕ್ಕಾಗಿ ಕೇಳಿದೆ. ನೀನು ಏನು ಹೇಳಿದರೂ ಚಿಂತಿಲ್ಲ. ನಾನದನ್ನು ಕೇಳುತ್ತಾ ಕೂತುಬಿಡುತ್ತೇನೆ. ಹೇಳು, ಏನಾದರೂ ಹೇಳುತ್ತಿರು." ಪುಟ್ಟಿ ಕೇಳಿಕೊಂಡಳು.

"ಸರಿ ಹಾಗಾದರೆ. ಯಾರದೋ ಕತೆ ಹೇಳುವ ಬದಲು ನಮ್ಮ ಕತೆ, ಅಂದರೆ ಹುಲಿಗಳ ಬದುಕಿನ ಕತೆ ಹೇಳುತ್ತೇನೆ. ಆದೀತೇನು?" ಹುಲಿಯಜ್ಜಿ ವಿಚಾರಿಸಿದಳು. "ಆಗಲೀ ಅಜ್ಜೀ ನೀನೇನು ಹೇಳಿದರೂ ಸರಿ, ಅದನ್ನು ನಾನು ಕೇಳುತ್ತಾ ಇರುತ್ತೇನೆ." ಪುಟ್ಟಿ ಸಮ್ಮತಿ ಸೂಚಿಸಿದಳು. ಅಜ್ಜಿ ಹೇಳತೊಡಗಿದಳು-

“ನಾನು ತಿಳಿದಿರುವುದನ್ನು ನಿನಗೆ ಹೇಳಿಬಿಡುತ್ತೇನೆ. ನೀನು ಮಾತ್ರ ಕಿವಿಗೊಟ್ಟು ಕೇಳಬೇಕು. ನಿನಗೆ ಸಂದೇಹ ಬಂದಾಗ, ಹೆಚ್ಚಿನ ವಿವರಣೆ ಬೇಕು ಎನಿಸಿದಾಗ ನೀನು ಪ್ರಶ್ನೆ ಹಾಕಬೇಕು. ವಿಷಯವನ್ನು ಮನದಟ್ಟು ಮಾಡಿಕೊಳ್ಳಬೇಕು. ಸರಿ. ಈಗ ಕತೆ ಆರಂಭಿಸುತ್ತೇನೆ.”

“ನಾವು, ಅಂದರೆ ಹುಲಿಗಳು ಬೆಕ್ಕಮ್ಮನ ಸಂತಾನಕ್ಕೆ ಸೇರಿದವರು. ನಮ್ಮ ಸಂತಾನ ಬಹಳ ದೊಡ್ಡದಿದೆ. ಹುಲಿ, ಸಿಂಹ, ಚಿರತೆ, ಕಿರುಬ, ಕಾಡುಬೆಕ್ಕು, ಚುಕ್ಕೆಬೆಕ್ಕಕು, ಮೀನುಬೆಕ್ಕು, ಪುನುಗಿನ ಬೆಕ್ಕು ಮೊದಲಾದುವು ಸಹ ನಮ್ಮ ಕುಟುಂಬಕ್ಕೆ ಸೇರಿದವುಗಳೇ. ಇವುಗಳಲ್ಲಿ ಹುಲಿ, ಸಿಂಹ, ಚಿರತೆ, ಕಿರುಬ ಇತ್ಯಾದಿಗಳು ದೊಡ್ಡಗಾತ್ರದವು. ಕಾಡು ಬೆಕ್ಕು, ಚುಕ್ಕೆಬೆಕ್ಕು, ಮೀನುಬೆಕ್ಕು, ಪುನುಗಿನ ಬೆಕ್ಕು ಮೊದಲಾದವು ಚಿಕ್ಕಗಾತ್ರದವು. ಇವುಗಳ ಗಾತ್ರದಲ್ಲಿ ವ್ಯತ್ಯಾಸವಿದೆಯಲ್ಲ? ಹಾಗೆ ಕೂಗಿನಲ್ಲೂ ವ್ಯತ್ಯಾಸವಿದೆ. ದೊಡ್ಡಗಾತ್ರದವು ಘರ್ಜಿಸುತ್ತವೆ. ಸಣ್ಣಗಾತ್ರದವು ಗುರುಗುಟ್ಟುತ್ತವೆ.”

“ಬೆಕ್ಕಮ್ಮನ ಸಂತಾನಕ್ಕೆ ಸೇರಿದ ನಾವೆಲ್ಲರೂ ಮಾಂಸಾಹಾರಿಗಳು ನಮ್ಮ ದೇಹದ ಬಣ್ಣ ಬೇರೆ ಬೇರೆ ಇರಬಹುದು. ಗಾತ್ರದಲ್ಲಿ ವ್ಯತ್ಯಾಸ ಇರಬಹುದು. ದೇಹದ ತೂಕದಲ್ಲೂ ಹೆಚ್ಚು ಕಡಿಮೆ ಬರಬಹುದು. ಆದರೆ ನಮ್ಮ ದೇಹದ ಲಕ್ಷಣಗಳಲ್ಲಿ ಮಾತ್ರ ವ್ಯತ್ಯಾಸ ಕಡಿಮೆ, ಹೋಲಿಕೆಯೇ ಹೆಚ್ಚು. ಇದು ನೆನಪಿಡಬೇಕಾದ ಮುಖ್ಯ ಸಂಗತಿ.”



“ಇನ್ನೊಂದು ವಿಚಾರವನ್ನೂ ನಾನು ಹೇಳಬೇಕು. ಏನದು ಗೊತ್ತೇ? ಬೆಕ್ಕಮ್ಮನ ಸಂತಾನಕ್ಕೆ ಸೇರಿದ ನಮ್ಮ ಎಲ್ಲರ ಮೈಕಟ್ಟು ಒಂದೇ ರೀತಿಯದು. ನಮ್ಮೆಲ್ಲರ ಬದುಕಿನ ರೀತಿಯೂ ಹಾಗೆಯೇ. ಅಷ್ಟು ಮಾತ್ರವಲ್ಲ. ನಮ್ಮ ಮರಿಗಳ ಲಾಲನೆ ಪಾಲನೆಯೂ ಏಕರೀತಿಯದು. ಮರಿಗಳಿಗೆ ನಾವು ನೀಡುವ ಬೇಟೆಯ ತರಬೇತಿಯಲ್ಲೂ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ಇವು ಇಷ್ಟು ಬೆಕ್ಕಮ್ಮನ ಸಂತಾನದ ಸರ್ವಸದಸ್ಯರ ಸಾಮಾನ್ಯ ಸಂಗತಿಗಳು. ಮುಂದಿನ ನನ್ನ ವಿವರಣೆಗಳೆಲ್ಲ ನಮ್ಮವರಿಗೆ, ಅಂದರೆ ಹುಲಿಗಳಿಗೇ ಹೆಚ್ಚು ಸಂಬಂಧಿಸಿದ್ದು. ಇದು ನಿನ್ನ ಗಮನದಲ್ಲಿರಬೇಕಲು.”

“ನೀನು ಶಾಲೆಗೆ ಹೋಗುವವಳು ಇದ್ದೀಯಾ. ಶಾಲೆಯಲ್ಲಿ ನೀನು ಭೂಪಟವನ್ನು ನೋಡಿರಬೇಕಲ್ಲ? ಜಗತ್ತಿನ ವಿವಿಧ ಖಂಡಗಳ ಬಗ್ಗೆ, ದೇಶಗಳ ಬಗ್ಗೆ ನೀನು ತಿಳಿದಿರಬೇಕಲ್ಲ? ಹಾಗಾಗಿ ನಾನು ಹೇಳುವ ಭೂಭಾಗಗಳ ವಿಚಾರ ನಿನಗೆ ಅರ್ಥವಾದೀತು ಎಂದು ನಂಬುತ್ತೇನೆ.”

“ಸಾಮಾನ್ಯ ಜನರೆಲ್ಲ ನಮ್ಮನ್ನು “ಹುಲಿ” ಎಂದು ಗುರುತಿಸುತ್ತಾರೆ. ಆದರೆ ವಿಜ್ಞಾನಿಗಳು ಇದ್ದಾರಲ್ಲ? ಅವರು ನಮಗಿಟ್ಟ ಹೆಸರು ಬೇರೆಯೇ ಇದೆ. ಅವರು ಹೇಳುವ ಪ್ರಕಾರ ನಮ್ಮ ಹೆಸರು “ಪ್ಯಾಂತೇರಾ ಟೈಗ್ರಿಸ್” ಎಂದು. ಬೇರೆ ಬೇರೆ ಭಾಷೆಯ ಜನ ಬೇರೆ ಬೇರೆ ಹೆಸರಿನಿಂದ ನಮ್ಮನ್ನು ಕರೆಯುತ್ತಾರೆ. ಯಾರು ಯಾವ ಹೆಸರಲ್ಲಿ ಕರೆದರೇನಂತೆ? ಅದರಿಂದ ನಾವೇನೂ ಬದಲಾಗುವುದಿಲ್ಲವಲ್ಲ? ಯಾರು ಹೇಗೆ ಬೇಕೋ ಹಗೆ ಕರೆದುಕೊಳ್ಳಲಿ. ಆ ಬಗ್ಗೆ ನಾವೇನೂ ಚಿಂತಿಸುವುದಿಲ್ಲ.” ಇಷ್ಟು ಹೇಳಿ ಹುಲಿಯಜ್ಜಿ ಕ್ಷಣ ಕಾಲ ಮೌನವಹಿಸಿದಳು. ಮತ್ತೆ ಮುಂದುವರಿಯಿತು. ಅವಳ ಮಾತು–



“ಪುಟ್ಟೀ, ಈಗ ನೀನು ಮನಸ್ಸಿನಲ್ಲೇ ಭೂಪಟವನ್ನು ಕಲ್ಪಿಸಿಕೊ. ನಾನೀಗ ಹೆಸರಿಸುವ ಪ್ರದೇಶಗಳನ್ನು ಅಲ್ಲಿ ಗುರುತಿಸಲು ಯತ್ನಿಸು. ಆಗಬಹುದಲ್ಲ?' ನಾನೀಗ ನಮ್ಮ ಮೂಲಸ್ಥಾನದ ಬಗ್ಗೆ ಹೇಳುತ್ತೇನೆ.

“ಸಾವಿರಾರು ವರ್ಷಗಳ ಹಿಂದೆ ನಾವು ಉತ್ತರ ಹಾಗೂ ಮಧ್ಯ ಏಷಿಯಾ ಪ್ರದೇಶದಲ್ಲಿ ಇದ್ದವರಂತೆ. ಸೈಬೀರಿಯಾ ನಮ್ಮ ಮೂಲಸ್ಥಾನವಂತೆ. ಹಾಗಾಗಿ ಅಂದು ಅಲ್ಲಿ ದಟ್ಟ ಕಾಡುಗಳಿದ್ದವು. ಅಪಾರ ಸಂಖ್ಯೆಯ ಪ್ರಾಣಿ ಸಂಪತ್ತು ಅಲ್ಲಿತ್ತು. ಹಿತಕರವಾದ ವಾಯುಗುಣವು ಅಲ್ಲಿನದಾಗಿತ್ತು ಎಂದು ನಾವು ಊಹಿಸಿದರೆ ತಪ್ಪಾಗದು.”

“ಕಾಲ ಕ್ರಮೇಣ ಅಲ್ಲಿ ನಮ್ಮವರ ಸಂಖ್ಯೆ ಹೆಚ್ಚಾಗಿರಬೇಕು. ಆ ಪ್ರದೇಶದ ಪರಿಸ್ಥಿತಿಯೂ ಬದಲಾಗಿರಬೇಕು. ಆದುದರಿಂದಲೇ ಬದುಕಿನ ಅಗತ್ಯಗಳನ್ನು ಹುಡುಕುತ್ತ ನಮ್ಮವರು ಅಲ್ಲಿಂದ ವಲಸೆ ಹೋಗಿರಬೇಕು. ಹಾಗಾಗಿಯೇ ಇಂದು ಸೈಬೀರಿಯಾ ಮಾತ್ರವಲ್ಲದೆ ಕ್ಯಾಸ್ಪಿಯನ್ ಸಮುದ್ರ ತೀರದ ಪ್ರದೇಶಗಳಲ್ಲಿ, ದಕ್ಷಿಣ ಚೀನಾ, ಇಂಡೋಚೀನ, ಭಾರತ, ಬರ್ಮಾ, ಥಾಯ್‌ಲ್ಯಾಂಡ್, ಮಲಯಾ, ಬಾಲಿ, ಸುಮಾತ್ರಾ ಮೊದಲಾದ ವಿವಿಧ ಭೂಭಾಗಗಳಲ್ಲಿ ನಮ್ಮವರು ಕಂಡು ಬರುವಂತಾಯಿತು.”

“ಈ ಹಿಂದೆಯೇ ಹೇಳಿದಂತೆ, ನಾವು ಮಾಂಸಾಹಾರಿಗಳು, ಬಹಳ ಚಂದದ ಪ್ರಾಣಿಗಳು ಸಹ. ನಮ್ಮ ಜೀವನ ಸಾಗುವುದು ಬೇಟೆಯಿಂದಲೇ. ಹಾಗಾಗಿ ನಮ್ಮ ದೇಹರಚನೆ ಯಾ ಬೇಟೆಗೆ ಅನುಕೂಲಿಸುವಂತೆ ಇರಬೇಕಲ್ಲ? ಹೌದು, ಅದು ಹಾಗೆಯೇ ಇದೆ.”

“ಬೆಕ್ಕಮ್ಮನ ಕುಟುಂಬದ ಬಲು ದೊಡ್ಡ ಗಾತ್ರದ ಪ್ರಾಣಿಗಳು ನಾವು ಎಂದು ಆಗಲೇ ಹೇಳಿದ್ದೆನಲ್ಲ? ನಮ್ಮಲ್ಲಿ ಹೆಣ್ಣು ಮತ್ತು ಗಂಡುಗಳ ಗಾತ್ರದಲ್ಲಿ, ತೂಕದಲ್ಲಿ, ಎತ್ತರದಲ್ಲಿ ವ್ಯತ್ಯಾಸಗಳಿವೆ. ಸಾಮಾನ್ಯವಾಗಿ ಗಂಡುಗಳು ೨೬೭ - ೨೯೯ ಸೆ.ಮಿ. ಉದ್ದ ಇರುತ್ತವೆ. ೯೧ - ೧೦೭ ಸೆ.ಮಿ. ಎತ್ತರ ಇರುತ್ತವೆ. ೧೯೦ - ೨೩೦ ಕೆ.ಜಿ. ಭಾರ ಇರುತ್ತವೆ. ಹೆಣ್ಣು ಹುಲಿಗಳು ಗಾತ್ರದಲ್ಲಿ, ಎತ್ತರದಲ್ಲಿ ಮತ್ತು ತೂಕದಲ್ಲಿ ಗಂಡುಗಳಿಗಿಂತ ಕಡಿಮೆ ಇರುತ್ತವೆ. ನಿಮ್ಮಲ್ಲಿ ಗಂಡಸರಿಗೆ ಗಡ್ಡ ಮೀಸೆ ಇರುವುದಿದೆಯಲ್ಲ? ಹಾಗೆ ನಮ್ಮಲ್ಲೂ ಗಂಡುಗಳಿಗೆ ಗಲ್ಲದಲ್ಲಿ ಗಡ್ಡದ ಹಾಗಿನ ಕೂದಲುಗಳೂ ಇರುತ್ತವೆ. ಮೀಸೆಯಂತೂ ನಮಗೆಲ್ಲರಿಗೆ ಸರ್ವಸಾಮಾನ್ಯ.”

“ನಮ್ಮವರಿಗೆ ಮೈಮೇಲೆ ನಸುಕೆಂಪು, ಕೆಂಪು, ಕಿತ್ತಳೆ, ಹಳದಿ ಬಣ್ಣಗಳಿರುತ್ತವೆ. ಹಾಗೆಯೇ ಅವುಗಳ ಮಧ್ಯೆ ಕಪ್ಪು ಪಟ್ಟೆಗಳೂ ಕಂಗೊಳಿಸುತ್ತವೆ. ಈ ಕಪ್ಪು ಪಟ್ಟೆಗಳು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ಕಂಡು ಬರಬಹುದು. ಅಲ್ಲದೆ, ನಮ್ಮ ಗಲ್ಲ, ಗಂಟಲು, ಹೊಟ್ಟೆ, ಕಾಲು, ಕಿವಿಗಳ ಅಕ್ಕಪಕ್ಕಗಳಲ್ಲಿ ಬಿಳಿ ಬಣ್ಣ ಬರುವುದೂ ಇದೆ. ಪರಿಸರವನ್ನು ಹೊಂದಿಕೊಂಡು ನಮ್ಮವರ ಗಾತ್ರ, ತೂಕ ಹಾಗೂ ಮೈಬಣ್ಣಗಳಲ್ಲಿ ಸಹ ಬದಲಾವಣೆಗಳು ಕಂಡುಬರುತ್ತವೆ. ನಯವಾದ ರೋಮಗಳುಳ್ಳ ನಮ್ಮ ಮೈ ಚರ್ಮವು ಸದಾ ಹೊಳಪಿನಿಂದ ಕೂಡಿರುತ್ತದೆ. ಇನ್ನೊಂದು  ಸಂಗತಿ ನಿನಗೆ ಗೊತ್ತೇ? ನಿಮ್ಮಲ್ಲಿ , ಅಂದರೆ ಮನುಷ್ಯರಲ್ಲಿ, ಕರಿಯರೂ, ಬಿಳಿಯರೂ ಕಂಡುಬರುವ ಹಾಗೆ ನಮ್ಮಲ್ಲಿ ಸಹ ಅಪೂರ್ವವಾಗಿ ಬಿಳಿಬಣ್ಣದವರೂ ಕಾಣಸಿಗುವುದುಂಟು. ಆದರೆ ಅಂಥವರ ಸಂಖ್ಯೆ ಮಾತ್ರ ತೀರ ಕಡಿಮೆ . ಸಾಮಾನ್ಯವಾಗಿ ನಮ್ಮವರ ಆಯುಸ್ಸು ೨೦ ವರ್ಷಗಳು ಮಾತ್ರ.”




“ಅಜ್ಜೀ, ನಿಮ್ಮವರ ದೇಹರಚನೆ ಬೇಟೆಯಾಡಲು ಅನುಕೂಲಿಸುವಂತಿದೆ ಎಂದಿದ್ದೆ ನೀನು. ಆದರೆ ಈಗ ನಿಮ್ಮವರ ದೇಹದ ಗಾತ್ರ, ತೂಕ, ಮೈಬಣ್ಣಗಳ ಬಗ್ಗೆಯೇ ವಿವರಿಸುತ್ತಿರುವೆಯಲ್ಲಾ? ಬೇಟೆಯಾಡಲು ನಿಮಗಿರುವ ಅನುಕೂಲತೆಗಳೇನು? ಈ ಬಗ್ಗೆ ಮೊದಲು ಹೇಳು” ಪುಟ್ಟಿ ಮಧ್ಯೆ ಬಾಯಿ ಹಾಕಿದಳು.

“ಆಗಲಿ ಪುಟ್ಟೀ, ನೀನು ಹೇಳಿದಂತೇ ಆಗಲಿ, ಬೇಟೆಯಾಡಲು ನಮಗಿರುವ ಅನುಕೂಲತೆಗಳ ಕಕುರಿತೇ ಈಗ ಹೇಳುತ್ತೇನೆ.”

“ನಿಮಗೆ, ಮನುಷ್ಯರಿಗೆ ಎರಡು ಕಾಲುಗಳಿದ್ದರೆ ನಮಗೆ ನಾಲ್ಕು ಕಾಲುಗಳಿವೆ. ನಮ್ಮ ಹಿಂಗಾಲುಗಳು ಉದ್ದವಾಗಿವೆ. ಮುಂಗಾಲುಗಳು ಗಿಡ್ಡವಾಗಿವೆ. ನಮ್ಮ ಸ್ನಾಯುಗಳು ಬಹಳ ಬಲಿಯುತವಾಗಿವೆ. ಇದರಿಂದಾಗಿ ಸ್ಪ್ರಿಂಗಿನಂತೆ ಕೊಳ್ಳೆಯ ಮೇಲೆ ನೆಗೆಯುವುದು ನಮಗೆ ಸಾಧ್ಯವಾಗುತ್ತದೆ. ನಮ್ಮ ಮುಂಗಾಲುಗಳಲ್ಲಿ ಐದು ಬೆರಳುಗಳಿವೆ. ಹಿಂಗಾಲಲ್ಲಿ ನಾಲ್ಕು ಬೆರಳುಗಳಿವೆ. ನಮ್ಮ ಬೆರಳುಗಳ ತುದಿಗಳಲ್ಲಿ ಮೊನಚಾದ ಉಗುರುಗಳಿವೆ. ಇವು ಒಳಮುಖಕ್ಕೆ ಬಾಗಿದ್ದು, ಚರ್ಮದ ಕೋಶದಲ್ಲಿ ಹುದುಗಿರುತ್ತವೆ. ಹಾಗಾಗಿ ನಾವು ಅತ್ತಿತ್ತ ಓಡಾಡುವಾಗ ಉಗುರುಗಳು ನೆಲಕ್ಕೆ ತಾಗುವುದಿಲ್ಲ, ಸವೆಯುವುದೂ ಇಲ್ಲ. ಮೊನಚಾಗಿರುವ ನಮ್ಮ ಉಗುರುಗಳು, ನಾವು ಕೊಳ್ಳೆಯ ಮೇಲೆ ಎರಗಿ, ಅದನ್ನು ಹೊಡೆದಾಗ ತಟ್ಟನೆ ಕೋಶದಿಂದ ಹೊರಬರುತ್ತವೆ, ಕೊಳ್ಳೆಯ ದೇಹದೊಳಗೆ ನಾಟುತ್ತವೆ. ಮೇಲಿಂದ ಕೆಳಕ್ಕೆ ಚಲಿಸಬಲ್ಲ ನಮ್ಮ ದವಡೆಗಳು ಸಹ ಅತಿಬಲಿಯುತವಾಗಿವೆ; ಕೊಳ್ಳೆಯನ್ನು ಹಿಡಿಯಲು ಸಹಕಾರಿಯಾಗಿವೆ. ನಮ್ಮ ದವಡೆಗಳ ಮುಂಭಾಗದಲ್ಲಿ ಸುಮಾರು ೭.೫ ಸೆ.ಮೀ. ಉದ್ದದ ಮೊನಚಾದ ಕೋರೆಹಲ್ಲುಗಳಿವೆ. ಈ ಕೋರೆಹಲ್ಲುಗಳ ಹಿಡಿತಕ್ಕೆ ಸಿಕ್ಕಿದ ಯಾವ ಕೊಳ್ಳೆಯೂ ಸುಲಭದಲ್ಲಿ ನಮ್ಮಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ನಮ್ಮ ದವಡೆ ಹಲ್ಲುಗಳು ಅಗಿಯಲಿಕ್ಕೂ ಬಾಚಿ ಹಲ್ಲುಗಳು ಮಾಂಸವನ್ನು ಕಡಿದು, ಹೆರೆದು ತಿನ್ನಲಿಕ್ಕೂ ಸಹಾಯಕವಾಗಿವೆ.”



“ಆದರೆ ಅಜ್ಜೀ, ನಿನ್ನ ಬಾಯಲ್ಲಿ ಹಲ್ಲುಗಳೇ ಕಾಣಿಸುವುದಿಲ್ಲ! ಯಾಕೆ ಹೀಗೆ?” ಪುಟ್ಟಿ ಇನ್ನೊಂದು ಪ್ರಶ್ನೆ ಎಸೆದಳು.

“ನಿನ್ನ ಪ್ರಶ್ನೆಯಲ್ಲೆ ಉತ್ತರ ಇದೆಯಲ್ಲ ಪುಟ್ಟೀ? ನೀನೇ ನನ್ನನ್ನು “ಅಜ್ಜಿ” ಈ ಎಂದು ಕರೆದಿದ್ದೀಯಾ. ನಾನು ಅಜ್ಜಿ ಎನ್ನುವುದು ನಿನಗೂ ತಿಳಿದು ಹೋಗಿದೆ. ಅಜ್ಜಿಯ ಹಲ್ಲುಗಳು ಉದುರಿ ಹೋಗಿರುತ್ತವೆ. ಹಾಗಾಗಿ ನನ್ನ ಬಾಯಲ್ಲಿ ಹಲ್ಲುಗಳೂ ಇಲ್ಲ, ದೇಹದಲ್ಲಿ ಶಕ್ತಿಯೂ ಇಲ್ಲ. ನನ್ನ ಕೊನೆಗಾಲ ಸಮೀಪಿಸುತ್ತಿದೆ ಮಗೂ. ಸದ್ಯ ಗಟ್ಟಿಯಾಗಿ ಮಾತನಾಡಲಿಕ್ಕೂ ಕಷ್ಟವಾಗುತ್ತಿದೆ ನನಗೆ. ಕತೆ ಹೇಳಬೇಕೆಂದು ನೀನು ಕೇಳಿಕೊಂಡೆಯಲ್ಲ? ಅದಕ್ಕಾಗಿ ನಾನೀಗ ಹೇಳುತ್ತಿದ್ದೇನೆ, ನಮ್ಮವರ ಜೀವನ ಪರಿಚಯ ನೀಡುತ್ತಿದ್ದೇನೆ. ಇದು ತಿಳಿವು ತಾನೇ? ತಿಳಿವು ನೀಡುವುದು ಒಳ್ಳೆಯ ಕೆಲಸವಂತೆ. ನನ್ನ ಕೊನೆಗಾಲದಲ್ಲಿ ಇದೊಂದು ಒಳ್ಳೆಯ ಕೆಲಸವನ್ನಾದರೂ ಮಾಡಿಬಿಡುತ್ತೇನೆ” ನಿಟ್ಟುಸಿರು ಬಿಡುತ್ತಲೇ ಹೇಳಿದಳು ಅಜ್ಜಿ.

“ನನ್ನ ಮಾತು ಕೇಳಿ ಬೇಸರವಾಯಿತೆ ಅಜ್ಜಿ? ಹಾಗಿದ್ದರೆ ಕ್ಷಮಿಸಿಬಿಡು” ಪುಟ್ಟಿ ಕೈಜೋಡಿಸಿದಳು.

“ಅಯ್ಯೋ, ನೀನೇಕೆ ಹಾಗೆ ಹೇಳುತ್ತೀ? ನೀನೇನೂ ತಪ್ಪು ಮಾಡಿಲ್ಲ ಪುಟ್ಟೀ. ಮತ್ತೆ ಕ್ಷಮೆಯಾಚನೆ ಯಾಕೆ ಹೇಳು? ಹೆಚ್ಚು ಪ್ರಶ್ನೆ ಕೇಳುವುದು ಬುದ್ಧಿವಂತರ ಲಕ್ಷಣವಂತೆ. ಕಲಿವ ಆಸಕ್ತಿಯ ಸೂಚನೆಯಂತೆ ಅದು ಇರಲಿ. ನನ್ನ ಮಾತು ಮುಂದುವರಿಸುತ್ತೇನೆ. ಹಾಂ, ನಮ್ಮವರ ಹಲ್ಲುಗಳ ಬಗ್ಗೆ ನಾನು ಹೇಳುತ್ತಿದ್ದೆನಲ್ಲ? ಇನ್ನು ನಾಲಗೆಯ ವಿಚಾರ ತಿಳಿಸುತ್ತೇನೆ . ನಿಮಗೆಲ್ಲ ಇರುವ ಹಾಗೆ ನಮಗೂ ನಾಲಗೆ ಇದೆ. ನಿಮ್ಮ ನಾಲಗೆ ನಿಮಗೆ ರುಚಿಯನ್ನು ತಿಳಿಸುತ್ತದೆ, ಮಾತಾಡಲಿಕ್ಕೂ ನೆರವಾಗುತ್ತದೆ. ಸರಿ ತಾನೇ? ಆದರೆ ನಮ್ಮ ನಾಲಿಗೆ ಹಾಗಲ್ಲ. ಇದು ತೆಳುವಾಗಿ, ಮರಳು ಕಾಗದದ ಹಾಗೆ ದೊರಗಾಗಿದೆ. ಇಂಥ ನಾಲಗೆಯು ಮೂಳೆಗಳಿಂದ ಮಾಂಸವನ್ನು ಹೆರೆದು ತೆಗೆಯಲಿಕ್ಕೂ ನಮ್ಮ ದೇಹವನ್ನು ನೆಕ್ಕಿ, ಸ್ವಚ್ಛಗೊಳಿಸಲಿಕ್ಕೂ ನಮಗೆ ನೆರವಾಗುತ್ತದೆ.”



“ನಿಮ್ಮ ಕಣ್ಣುಗಳಿಗೂ ನಮ್ಮ ಕಣ್ಣುಗಳಿಗೂ ವ್ಯತ್ಯಾಸವಿದೆ. ತಿಳಿ ಹಳದಿ ಬಣ್ಣದ ನಮ್ಮ ಕಣ್ಣುಗಳಿಗೆ ಒಂದು ವಿಶೇಷ ಶಕ್ತಿ ಇದೆ. ಅದೇನು ಗೊತ್ತೇ? ನಮ್ಮ ಕಣ್ಣ ಪಾಪೆಗಳು ಬೆಳಕಿನಲ್ಲಿ ಸಂಕೋಚಗೊಳ್ಳುತ್ತವೆ, ಕತ್ತಲಲ್ಲಿ ಹಿಗ್ಗುತ್ತವೆ. ಆದುದರಿಂದ ಹಗಲಿನಲ್ಲಿ ಹೇಗೋ ಹಾಗೆ ಕತ್ತಲಲ್ಲೂ ನಾವು ಕಾಣಬಲ್ಲೆವು. ಗಿಡ್ಡವಾಗಿರುವ ನಮ್ಮ ಕಿವಿಗಳು ಬಹಳ ಚುರುಕು. ಆದರೆ ವಾಸನೆಯನ್ನು ಗ್ರಹಿಸುವ ನಮ್ಮ ಶಕ್ತಿ ಮಾತ್ರ ಅಷ್ಟು ಹೆಚ್ಚಿನದಲ್ಲ.”

“ಇನ್ನು ನಮ್ಮವರ ಬೇಟೆಯ ವಿಚಾರ ತಿಳಿಸುತ್ತೇನೆ. ಸಾಮಾನ್ಯವಾಗಿ ನಾವು ಬೇಟೆಯನ್ನು ಅಟ್ಟಿಸಿಕೊಂಡು ಹೋಗುವುದಿಲ್ಲ. ಬದಲಾಗಿ, ನಮ್ಮ ಬೇಟೆಯು ನೀರಿಗೆ ಬರುವ ಸ್ಥಳಗಳಲ್ಲಿ ಅಥವಾ ಅದು ಓಡಾಡುವ ಕಡೆಗಳಲ್ಲಿ ನಾವು ಹೊಂಚು ಹಾಕಿ ಕೂತಿರುತ್ತೇವೆ. ಬೇಟೆ ಹತ್ತಿರ ಬಂದಾಗ, ಥಕ್ಕನೆ ಅದರ ಮೇಲೆ ಎರಗಿ ಅದನ್ನು ಹಿಡಿದು ಬಿಡುತ್ತೇವೆ. ಕೆಲವು ಬಾರಿ ಮೆಲ್ಲನೆ ಬೇಟೆಯನ್ನು ಹಿಂಬಾಲಿಸಿ ಹೋಗಿ, ಅದರ ಮೇಲೆ ಎರಗುವುದೂ ಇದೆ. ಹಾಗೆ ಎರಗುವಾಗ, ಕೊಳ್ಳೆಯ ಕೋಡುಗಳ ತಿವಿತದಿಂದ ಅಥವಾ ಕಾಲಿನ ಒದೆತದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಈ ಬಗ್ಗೆ ನಾವು ತುಂಬ ಎಚ್ಚರ ವಹಿಸುತ್ತೇವೆ. ಹೆಚ್ಚಾಗಿ ನಾವು ಕೊಳ್ಳೆಯ ಮೇಲೆ ಎರಗಿದ ತತ್‌ಕ್ಷಣ ಅದರ ಕತ್ತನ್ನು

ಹಿಡಿದು, ಹೊರಳಿಸಿ, ಕೆಡವಿ, ಅದನ್ನು ಕೊಂದುಬಿಡುತ್ತೇವೆ. ಆದರೆ ಪ್ರತಿಬಾರಿಯೂ ಕೊಳ್ಳೆಯನ್ನು ನಾವೇ ಕೊಲ್ಲಬೇಕಾಗಿ ಬರುವುದಿಲ್ಲ. ಯಾಕೆ ಗೊತ್ತೇ? ಕೆಲವು ಬಾರಿ ನಮ್ಮ ಬೇಟೆಯ ಪ್ರಾಣಿ ನೆಲಕ್ಕೆ ಬೀಳುವಾಗ, ಅದರ ದೇಹದ ಭಾರಕ್ಕೇ ಗೋಣು ಮುರಿದು ಹೋಗಿ, ಅದು ಸಾಯುವುದೂ ಇದೆ. ನಾನು ಆಗಲೇ ಹೇಳಿದಂತೆ, ನಮ್ಮ ಕೋರೆ ಹಲ್ಲುಗಳು ಹಿಡಿತಕ್ಕೆ ಸಿಕ್ಕಿದ ಬೇಟೆ ಮತ್ತೆ ನಮ್ಮಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಒಂದು ವೇಳೆ ಅದು ತಪ್ಪಿಸಿಕೊಂಡರೆ? ಆಗ ಅದರ ಬೆನ್ನಟ್ಟಿ ಹೋಗುವ ಪ್ರಯತ್ನವನ್ನೂ ನಾವು ಮಾಡುವುದಿಲ್ಲ."

"ನಾವು ಕೊಂದ ಪ್ರಾಣಿಯು ಗಾತ್ರದಲ್ಲಿ ಸಣ್ಣದಿದ್ದರೆ, ಅದನ್ನು ಬಾಯಲ್ಲಿ ಕಚ್ಚಿಕೊಂಡೇ ಬೇಕಾದಲ್ಲಿಗೆ ಒಯ್ಯುತ್ತೇವೆ. ಕೊಳ್ಳೆಯು ಗಾತ್ರದಲ್ಲಿ ದೊಡ್ಡದಿದ್ದರೆ, ಜಗ್ಗಿ ಎಳೆದುಕೊಂಡೇ ಅದನ್ನು ಬಯಸಿದೆಡೆಗೆ ಒಯ್ದುಬಿಡುತ್ತೇವೆ. ಸಣ್ಣಗಾತ್ರದ ಪ್ರಾಣಿಯನ್ನು ನಾವು ಒಂದೇ ಬಾರಿಗೆ ತಿಂದು ಮುಗಿಸುತ್ತೇವೆ. ದೊಡ್ಡ ಪ್ರಾಣಿಗಳ ಮಾಂಸವನ್ನು ಎರಡು ಮೂರು ದಿನಗಳಲ್ಲಿ ತಿಂದು ಮುಗಿಸುವುದೂ ಇದೆ."

"ಇನ್ನೊಂದು ಸಂಗತಿಯನ್ನೂ ನಾನು ಸ್ಪಷ್ಟಪಡಿಸಬಯಸುತ್ತೇನೆ. ಅದೇನು ಗೊತ್ತೇ? ಯಾವ ಕಾಲದಲ್ಲೇ ಆಗಲಿ , ನಮ್ಮ ಬೇಟೆಯ ಉದ್ದೇಶ ಆಹಾರ ಸಂಪಾದನೆ ಮಾತ್ರ. ಸಾಮಾನ್ಯವಾಗಿ ನಾವು ಬೇಟೆಯಾಡುವುದು ರಾತ್ರಿ ಕಾಲದಲ್ಲೇ. ಆಹಾರ ಹುಡುಕುತ್ತ ಕೆಲವು ಬಾರಿ ನಾವು ಇಪ್ಪತ್ತು ಮೂವತ್ತು ಕಿ.ಮೀ. ದೂರ ಸಂಚರಿಸುವುದೂ ಇದೆ. ಸಂದರ್ಭಕ್ಕೆ ತಕ್ಕ ಹಾಗೆ, ನಮ್ಮ ಬೇಟೆಯ ಕ್ರಮವೂ ಬದಲಾಗುತ್ತದೆ. ನಮ್ಮಂಥ ಮಾಂಸಾಹಾರಿಗಳಿಂದಾಗಿಯೇ ನಿಸರ್ಗದಲ್ಲಿ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಒಂದು ಮಿತಿಯಲ್ಲಿದೆ. ಪ್ರಕೃತಿಯಲ್ಲಿ ಸಮತೋಲನ ಉಳಿದಿದೆ ಎನ್ನುತ್ತಾರೆ ತಿಳಿದವರು. ಈ ಮಾತು ನಿಜ."



"ನಮ್ಮವರ ಬದುಕಿನ ಬಗ್ಗೆ ನಾನು ಹೇಳಬೇಕಾದ ಸಂಗತಿಗಳು ಇನ್ನೂ ಇವೆ. ಅವುಗಳನ್ನೂ ನಿನಗೆ ತಿಳಸಿಬಿಡುತ್ತೇನೆ. ನಮ್ಮಲ್ಲಿ ಗಂಡುಗಳು ನಾಲ್ಕು ಐದು ವರ್ಷಗಳಲ್ಲಿ ಪ್ರಾಯಕ್ಕೆ ಬರುತ್ತವೆ. ಹೆಣ್ಣುಗಳು ಮೂರು - ನಾಲ್ಕು ವರ್ಷಕ್ಕೇ ಬೆಳೆದು ನಿಲ್ಲುತ್ತವೆ. ಬೆದೆಯ ಸಮಯದಲ್ಲಿ ಮಾತ್ರ ನಮ್ಮ ಗಂಡು ಹೆಣ್ಣುಗಳು ಜೊತೆಗೂಡುತ್ತವೆ. ಹೆಣ್ಣು ಗರ್ಭಧರಿಸಿದ ೧೦೫ - ೧೧೩ ದಿನಗಳಲ್ಲಿ ಮರಿಗಳು ಹುಟ್ಟುತ್ತವೆ. ಸಾಮಾನ್ಯವಾಗಿ ನಿಮ್ಮಲ್ಲಿ, ಅಂದರೆ ಮನುಷ್ಯರಲ್ಲಿ ಒಂದು ಬಾರಿಗೆ ಒಂದೇ ಮಗು ಹುಟ್ಟುವುದಷ್ಟೇ?ಆದರೆ ನಮ್ಮಲ್ಲಿ ಹಾಗಲ್ಲ. ಒಂದು ಬಾರಿಗೆ ನಾಲ್ಕು - ಆರು ಮರಿಗಳೂ ಹುಟ್ಟುವುದಿದೆ. ಅವುಗಳಲ್ಲಿ ಗಂಡುಗಳೂ ಇರುತ್ತವೆ. ಹೆಣ್ಣುಗಳೂ ಇರುತ್ತವೆ. ನಿಮ್ಮವರು ಗಂಡು ಮಕ್ಕಳನ್ನು ಹೆಚ್ಚು ಇಷ್ಟಪಡುತ್ತಾರೆ ಎನ್ನುವುದನ್ನು ಕೇಳಿದ್ದೇನೆ. ಆದರೆ ನಾವು ಹಾಗಲ್ಲ. ಹುಟ್ಟಿದ ಮರಿಗಳು ಗಂಡಾಗಲಿ ಅಥವಾ ಹೆಣ್ಣಾಗಲಿ ಆ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಗಂಡು - ಹೆಣ್ಣು ಮರಿಗಳಲ್ಲಿ ನಾವೆಂದೂ ಭೇದ ಎಣಿಸುವುದಿಲ್ಲ. ಎಲ್ಲವನ್ನೂ ಒಂದೇ ರೀತಿ ಪ್ರೀತಿಸುತ್ತೇವೆ; ಒಂದೇ ರೀತಿ ನೋಡಿಕೊಳ್ಳುತ್ತೇವೆ. ಈ ವಿಚಾರದಲ್ಲಿಲ ಮನುಷ್ಯರಿಗಿಂತ ನಾವೇ ಮೇಲು ಎನ್ನುವುದು ನನ್ನ ನಂಬಿಕೆ ಇರಲಿ."

"ಹುಟ್ಟುವಾಗ ನಮ್ಮ ಮರಿಗಳು ಸಹ ಬೆಕ್ಕಿನ ಮರಿಗಳ ಹಾಗೇ ಇರುತ್ತವೆ. ಆಗ ಅವು ಕಣ್ಣು ಬಿಟ್ಟಿರುವುದಿಲ್ಲ. ಎಲ್ಲದಕ್ಕೂ ಅವು ತಾಯಿಯನ್ನೇ ಅವಲಂಬಿಸಿ ಇರಬೇಕಾಗುತ್ತದೆ. ಮುಂದೆ ಹತ್ತು ಹದಿನೈದು ದಿನಗಳಲ್ಲಿ ಮರಿಗಳು ಕಣ್ಣು ಬಿಡುತ್ತವೆ. ಆಗ ಸಹ ತಾಯಿ

ಮೊಲೆಹಾಲೇ ಅವುಗಳಿಗೆ ಆಹಾರ. ಸುಮಾರು ೯೦ ರಿಂದ ೧೦೦ ದಿನಗಳ ವರೆಗೂ ತಾಯಿ ತನ್ನ ಮರಿಗಳಿಗೆ ಮೊಲೆ ಉಣಿಸುತ್ತದೆ. ಕ್ರಮೇಣ ಮರಿಗಳು ಮಾಂಸಾಹಾರ ಸೇವಿಸತೊಡಗುತ್ತವೆ."



ಆಗ ಬಂತು ಪುಟ್ಟಿಯ ಪ್ರಶ್ನೆ - "ನಮ್ಮಲ್ಲಿ ಅಮ್ಮ - ಅಪ್ಪ ಜತೆಗೂಡಿ ಮಕ್ಕಳ ಆರೈಕೆ ಮಾಡುತ್ತಾರೆ. ಅವುಗಳನ್ನು ಬೆಳೆಸುತ್ತಾರೆ. ನಿಮ್ಮಲ್ಲಿ ಹೇಗೆ?"

"ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ ಪುಟ್ಟೀ. ಈ ವಿಚಾರದಲ್ಲಿ ನೀವು, ಅಂದರೆ ಮನುಷ್ಯರು ಭಾಗ್ಯವಂತರು. ಹಾಗೆಯೇ ಹಕ್ಕಿಗಳು ಕೂಡ. ನಾನು ಯಾಕೆ ಹೀಗೆ ಹೇಳುತ್ತೇನೆ ಗೊತ್ತೇ? ಅಲ್ಲಿ, ಮಕ್ಕಳ ಆರೈಕೆಯ ವಿಚಾರದಲ್ಲಿ ಹೆಣ್ಣು ಗಂಡುಗಳು ಕೂಡಿ ದುಡಿಯುತ್ತವೆ. ಪರಸ್ಪರ ಸಹಕಾರ ನೀಡುತ್ತವೆ. ಆದರೆ ನಮ್ಮಲ್ಲಿ ಹಾಗಿಲ್ಲ. ಮರಿಗಳನ್ನು ಸಾಕುವ, ಬೆಳೆಸುವ ಸಂಪೂರ್ಣ ಜವಾಬ್ದಾರಿ ಹೆಣ್ಣುಗಳದೇ ಆಗಿರುತ್ತದೆ. ಇಲ್ಲಿ ಗಂಡಿನ ಯಾವ ರೀತಿಯ ಸಹಕರವೂ ಹೆಣ್ಣಿಗೆ ಸಿಗುವುದಿಲ್ಲ. ಮರಿಗಳು ಮಾಂಸ ತಿನ್ನಲು ತೊಡಗಿದಾಗ ಅವುಗಳಿಗೆ ಬೇಟೆಯಾಡುವ ತರಬೇತಿ ಸಹ ಸಿಗುವುದು ಹೆಣ್ಣುಗಳಿಂದಲೇ. ಇಲ್ಲಿ ಗಂಡುಗಳು ಲೆಕ್ಕಕ್ಕೇ ಇಲ್ಲ. ಅವುಗಳ ಬಗ್ಗೆ ಎಲ್ಲಕ್ಕಿಂತ ಬೇಸರದ ಸಂಗತಿ ಒಂದಿದೆ. ಅದೇನು ಗೊತ್ತೇ? ನಮ್ಮಲ್ಲಿ ಗಂಡುಗಳು ಮರಿಗಳ ಪಾಲಿನ ಮಾರಿಗಳೇ ಆಗಿ ಬಿಡುತ್ತವೆ. ತಮ್ಮ ಕಣ್ಣಿಗೆ ಬಿದ್ದರೆ ಸಾಕು, ಮರಿಗಳನ್ನು ಅವು ಕೊಂದು ಹಾಕುತ್ತವೆ; ತಿಂದೂ ಮುಗಿಸುತ್ತವೆ. ಹಾಗಾಗಿ ನಮ್ಮ ತಾಯಂದಿರು ತಮ್ಮ ಮರಿಗಳನ್ನು ಗಂಡುಗಳಿಂದ ರಕ್ಷಿಸಲು ಭಾರೀ ಸಾಹಸ ಪಡಬೇಕಾಗುತ್ತದೆ. ಗಂಡುಗಳಿಗೆ ಮರಿಗಳಿರುವ ಜಾಗವೇ ಗೊತ್ತಾಗದಂತೆ ಅವು ಎಚ್ಚರವಹಿಸುತ್ತವೆ. ಅದಕ್ಕಾಗಿಯೇ ಅವು ಮರಿಗಳಿರುವ ಜಾಗವನ್ನು ಆಗಾಗ ಬದಲಾಯಿಸುತ್ತಲೂ ಇರುತ್ತವೆದ. ಬಹಳ ಕಷ್ಟದ ಕೆಲಸ ಇದು. ಯಾಕೆ ಗೊತ್ತೇ?"

"ಹಾಗೆ ಸ್ಥಳ ಬದಲಾಯಿಸುವಾಗ, ಅವು ಒಂದೊಂದೇ ಮರಿಯನ್ನು ಅದಕ್ಕೆ ನೋವಾಗದಂತೆ ಬಾಯಲ್ಲಿ ಹಿಡಿದುಕೊಂಡು, ಸುರಕ್ಷಿತ ಸ್ಥಳಕ್ಕೆ ಒಯ್ಯಬೇಕಾಗುತ್ತದೆ. ಆರೇಳು ಮರಿಗಳು ಇದ್ದರಂತೂ ಅವುಗಳ ಕಷ್ಟ ಹೇಳತೀರದು. ಎಲ್ಲವನ್ನೂ ಅವು ತಾವೇ ನಿಭಾಯಿಸಬೇಕಾಗುತ್ತದೆ. ಹಾಗಾಗಿ ನಮ್ಮ ಮರಿಗಳಿಗೆ ತಾಯಂದಿರೇ ಸರ್ವಸ್ವ. ನಮ್ಮ ಗಂಡುಗಳೆಂದರೆ ಮಕ್ಕಳನ್ನೇ ಕೊಲ್ಲುವ ಅಪ್ಪಂದಿರು ಅಷ್ಟೇ. ಇದು ಎಂಥ ದುರದೃಷ್ಟ ನೋಡು."



"ಹುಟ್ಟಿದ ಸುಮಾರು ಆರು ತಿಂಗಳ ಬಳಿಕ ಮರಿಗಳು ಸಹ ತಾಯ ಜೊತೆಗೆ ಬೇಟೆಗೆ ಹೋಗುತ್ತವೆ. ಮುಂದೆ ಎರಡು ವರ್ಷಗಳ ಕಾಲ ಅವು ತಾಯಿಯ ಆಸರೆಯಲ್ಲೇ ಉಳಿಯುತ್ತವೆ. ಆಗಲೇ ಅವು ಬೇಟೆಯಾಡುವ ಬಗೆ ಹೇಗೆ? ಬೇಟೆ ಬರುವ ಹಾದಿಯಲ್ಲಿ ಹೇಗೆ ಹೊಂಚು

ಹಾಕಿ ಕೂಡಬೇಕು? ಅದರ ಮೇಲೆ ಜಿಗಿದು, ಹೇಗೆ ಅದನ್ನು ಹಿಡಿಯಬೇಕು? ಏನು ಎಚ್ಚರ ವಹಿಸಬೇಕು? ಈ ಎಲ್ಲ ಅನುಭವಗಳನ್ನು ಅವು ಪಡೆಯುವುದು ತಾಯಿಯಿಂದಲೇ. ಬೇಟೆಯ ತರಬೇತಿ ಮುಗಿವವರೆಗೂ ಅವುಗಳಿಗೆ ತಾಯಿಯ ಆಸರೆ ಅನಿವಾರ್ಯ. ಮುಂದೆ ಕ್ರಮೇಣ ಅವುಗಳ ಸ್ವತಂತ್ರ ಬದುಕು ಆರಂಭವಾಗುತ್ತದೆ."

"ಸಾಮಾನ್ಯವಾಗಿ ನಾವು ಸಂಘಜೀವಿಗಳಲ್ಲ; ಒಂಟಿಯಾಗಿಯೇ ಬಾಳುವವರು. ಆದರೂ ಕೆಲವು ಬಾರಿ ಗಂಡು-ಹೆಣ್ಣುಗಳು ಜೊತೆಯಾಗಿ ಕಾಣಿಸಿಕೊಳ್ಳಬಹುದು. ಕೆಲವು ಬಾರಿ ಮರಿಗಳ ಜೊತೆಗಿರುವ ತಾಯಿ ಹುಲಿ ಕಾಣಸಿಗಬಹುದು. ಉಳಿದಂತೆ ಎಂದಿಗೂ ನಾವು ಗುಂಪಾಗಿ ಕಾಣಸಿಗುವುದಿಲ್ಲ. ನಿಮ್ಮ ಹಾಗೆ ನಮಗೆ ಸಹ ನೀರು ಬೇಕೇ ಬೇಕು. ಹೆಚ್ಚಾಗಿ ನೀರು ಮತ್ತು ನೆರಳು ಇರುವ ಜಾಗವನ್ನು ನಾವು ಇಷ್ಟಪಡುತ್ತೇವೆ. ಅಂಥ ಜಾಗವನ್ನೇ ಆರಿಸಿಕೊಳ್ಳುತ್ತೇವೆ. ನೀರಲ್ಲಿ ನಾವು ಈಜಬಲ್ಲೆವು. ಆದರೆ ಮರ ಏರುವುದು ನಮ್ಮಿಂದಾಗದು. ಹಾಗೆಯೇ ಮನುಷ್ಯರಿಂದ ದೂರ ಇರಲು ಬಯಸುವವರು ನಾವು. ಇನ್ನೊಂದು ಸಂಗತಿ ನಿನಗೆ ಗೊತ್ತೇ? ನಾವು ಹಸಿದಾಗ ಮಾತ್ರ ಬೇಟೆಯಾಡುತ್ತೇವೆ. ಇತರ ಪ್ರಾಣಿಗಳನ್ನು ಕೊಲ್ಲುತ್ತೇವ. ಹೊರತು, ಮನುಷ್ಯರಂತೆ ದುಡ್ಡಿನ ಆಸೆಗಾಗಿ ನಾವು ಬೇಟೆಯಾಡುವುದಿಲ್ಲ. ಯಾವ ಪ್ರಾಣಹಾನಿಯನ್ನೂ ಮಾಡುವುದಿಲ್ಲ. ಬೆಕ್ಕು ತನ್ನ ಬೇಟೆಯೊಡನೆ ಚೆಲ್ಲಾಟ ಆಡುವುದುಂಟಲ್ಲ? ಅದನ್ನು ಹಿಂಸಿಸುವುದೂ ಇದೆಯಲ್ಲ? ಹಾಗೆ ನಾವೆಂದೂ ಮಾಡುವುದಿಲ್ಲ. ಕೊಲ್ಲುವುದಿದ್ದರೆ ಒಂದೇ ಬಾರಿಗೆ ಕೊಂದು ಬಿಡುತ್ತೇವೆ. ಅದು ಸಹ ಹೊಟ್ಟೆ ಹಸಿವು ಹಿಂಗಿಸುವುದಕ್ಕಾಗಿ ಮಾತ್ರ. ವಿನಾಕಾರಣ ನಾವು ಕೊಲ್ಲುವುದೂ ಇಲ್ಲ. ಹಿಂಸಿಸುವವರೂ ಅಲ್ಲ. ಈ ವಿಚಾರದಲ್ಲೂ ಮನುಷ್ಯರಿಗಿಂತ ನಾವು ಮೇಲು. ಇದು ನನ್ನ ದೃಢವಾದ ನಂಬಿಕೆ. ಇದಕ್ಕೆ ನೀನೇನು ಹೇಳುತ್ತಿಯಾ?" ಅಜ್ಜಿ ಪುಟ್ಟಿಯನ್ನು ಕೇಳಿದಳು.


"ನಿನ್ನ ಮಾತು ನಿಜ ಅಜ್ಜೀ. ಅದನ್ನು ನಾನು ಸಂಪೂರ್ಣ ಒಪ್ಪುತ್ತೇನೆ." ಪುಟ್ಟಿ ಹೇಳಿದಳು. ಮತ್ತೆ "ಅಜ್ಜೀ, ನಿನ್ನಲ್ಲಿ ಇನ್ನೊಂದು ಪ್ರಶ್ನೆ ಇದೆ . ನಿಮಗೆಲ್ಲ ಇಷ್ಟವಾದ ಆಹಾರ ಯಾವುದು? ಯಾವ ಯಾವ ಪ್ರಾಣಿಗಳನ್ನು ನೀವು ಬೇಟೆಯಾಡುತ್ತೀರಿ?" ಅವಳು ವಿಚಾರಿಸಿದಳು.

ಕಾಡು ಹಂದಿಯನ್ನು ಹಿಡಿದು ತಿನ್ನುವುದೆಂದರೆ ನಮಗೆ ಬಹಳ ಇಷ್ಟ. ಹಾಗೆಯೇ ಜಿಂಕೆ, ಕಡವೆ, ಮುಳ್ಳು ಹಂದಿ, ಕರಡಿ, ಕಾಡೆಮ್ಮೆ, ಕಾಟಿಗಳನ್ನು ನಾವು ಬೇಟೆಯಾಡುತ್ತೇವೆ . ಕೆಲವು ಬಾರಿ ನಾವು ಆನೆಗಳ ಮೇಲೆ ಎರಗುವುದೂ ಇದೆ. ಆದರೆ ನಾವು ಆ ಧೈರ್ಯ ಮಾಡುವುದು ಯಾವಾಗ ಗೊತ್ತೇ? ಅದುಕ, ಆನೆಯೊಂದು ಒಂಟಿಯಾಗಿ ಕಾಣಿಸಿಕೊಂಡಾಗ ಮಾತ್ರ. ಗುಂಪಿನಲ್ಲಿರುವ ಆನೆ, ಕಾಟಿ, ಕಾಡೆಮ್ಮೆಗಳ ತಂಟೆಗೆ ನಾವು ಹೋಗುವುದಿಲ್ಲ."



"ಇನ್ನೊಂದು ವಿಚಾರ. ಸಾಮಾನ್ಯವಾಗಿ ನಾವು ಮನುಷ್ಯರನ್ನು ಬೇಟೆಯಾಡುವುದಿಲ್ಲ. ಅವರಿಂದ ದೂರವಿರಲು ಬಯಸುವವರು ನಾವು. ಅವರನ್ನು ಕಂಡರೆ ಓಡಿ ಹೋಗುವರೂ ಹೌದು. ಆದರೆ ಗಾಯಗೊಂಡು ಬಿದ್ದಿರುವಾಗ ಅಥವಾ ಮುಪ್ಪಿನಲ್ಲಿರುವಾಗ ಮಾತ್ರ ನಾವು ಮನುಷ್ಯರನ್ನೂ ಬೇಟೆಯಾಗಿ ಹಸಿವು ಹಿಂಗಿಸಿಕೊಳ್ಳಬಹುದು. ಸಾಕು ಪ್ರಾಣಿಗಳನ್ನೂ ಹಿಡಿದು ತಿನ್ನಬಹುದು. ಹಾವು, ಮೀನು, ಕಾಡು ಪಾರಿವಾಳಗಳಂಥ ಸಣ್ಣ ಜೀವಿಗಳನ್ನೂ ಬೇಟೆಯಾಡಬಹುದು. ಕೊಳೆತ ಮಾಂಸವನ್ನು ತಿನ್ನುವುದೂ ಅಸಂಭವವಲ್ಲ. ಒಂದು ಬಾರಿ ಮನುಷ್ಯನನ್ನು ತಿಂದವರು, ನರಮಾಂಸದ ರುಚಿಕಂಡ ನಮ್ಮವರು, ಮತ್ತೆ ನರಭಕ್ಷಕರಾಗಿ, ಭೀತಿ ಹುಟ್ಟಿಸಿದ ಸಂಧರ್ಭಗಳೂ ಇವೆ."

“ನಮ್ಮವರ ಬಗ್ಗೆ ನಾನು ಹೇಳಲೇಬೇಕಾದ ವಿಶೇಷ ಸಂಗತಿ ಒಂದಿದೆ. ಅದೇನು ಗೊತ್ತೇ? ಹಿಂದನ ಕಾಲದಲ್ಲಿ ರಾಜರು ಇಲ್ಲಿ ಆಳಲುತ್ತಿದ್ದರು ಎಂದು ನೀನು ಓದರಿಬೇಕಲ್ಲ? ಆಗ ಪ್ರತಿಯೊಬ್ಬ ರಾಜನಿಗೂ ಅವನದೇ ಆದ ರಾಜ್ಯವಿದ್ದುದು ನಿನಗೆ ತಿಳಿದಿರಬೇಕಲ್ಲ? ಅಂದಿನ ಕಾಲದ ರಾಜರ ಹಾಗೆ, ರಾಜ್ಯ ಕಟ್ಟುವ ಬುದ್ಧಿ ನಮ್ಮವರಲ್ಲೂ ಇದೆ ಎಂದರೆ ನೀನು ನಂಬುತ್ತೀಯಾ? ನೀನು ನಂಬಲೂಬಹುದು ನಂಬದಿರಲೂಬಹುದು. ಆದರೆ ಈ ಮಾತಂತೂ ನಿಜ. ಅದು ಹೇಗೆ ಎಂದು ವಿವರಿಸಬೇಕೆ? ಹೇಳುತ್ತೇನೆ ಕೇಳು. ನಮ್ಮವರಲ್ಲಿ ಪ್ರತಿಯೊಬ್ಬರೂ ಹಲವು ಚ.ಕಿ.ಮಿ. ವಿಸ್ತೀರ್ಣದ ಜಾಗವನ್ನು ತಮ್ಮ ಅಧೀನ ಪ್ರದೇಶವೆಂದು ಗುರುತಿಸಿಕೊಳ್ಳುತ್ತಾರೆ. ಕಟ್ಟುನಿಟ್ಟಾಗಿ ಅದನ್ನು ರಕ್ಷಿಸಿಕೊಳ್ಳುತ್ತಾರೆ. ಆದರೆ ಇಲ್ಲಿ ಗಡಿಕಲ್ಲುಗಳು ಇರುವುದಿಲ್ಲ. ಬದಲಾಗಿ ತಮ್ಮ ಮಲಮೂತ್ರಗಳಿಂದಲೇ ಅವರು ತಮ್ಮ ಕ್ಷೇತ್ರದ ಗಡಿಯನ್ನು ಗುರುತಿಸುತ್ತಾರೆ . ಇದರೊಳಗೆ ಅನ್ಯರ ಪ್ರವೇಶವನ್ನು ಅವರೆಂದೂ ಸಹಿಸಿಕೊಳ್ಳುವುದಿಲ್ಲ” ಅಜ್ಜಿ ವಿವರಿಸಿದಳು.



“ನಿಮ್ಮವರಲ್ಲೂ ರಾಜ್ಯ ಕಟ್ಟಿಕೊಳ್ಳುವ ಬುದ್ಧಿ ಇದೆ ಎನ್ನುವುದು ಕುತೂಹಲದ ಸಂಗತಿ; ಆಶ್ಚರ್ಯಕರವಾದುದೂ ಹೌದು. ಇರಲಿ. ಈಗ ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಹೇಳುತ್ತೀಯಾ?” ಭಾರತದ ಯಾವ ಭಾಗಗಳಲ್ಲಿ ನಿಮ್ಮವರು ಕಂಡು ಬರುತ್ತಾರೆ? “ಪುಟ್ಟಿ ಕುತೂಹಲ ತೋರಿದಳು.

“ಹೇಳುತ್ತೇನೆ ಪುಟ್ಟೀ, ನನಗೆ ಗೊತ್ತಿರುವ ಎಲ್ಲವನ್ನೂ ಹೇಳುತ್ತೇನೆ. ಹಿಂದೆ ನಾವು ಹಿಮಾಲಯದ ತಪ್ಪಲಿನ ಕಾಡುಗಳಲ್ಲಿ ನೆಲೆಸಿದ್ದೆವೆಂದೂ ಮತ್ತೆ ಕ್ರಮೇಣ ದೇಶದ ಇತರ ಭಾಗಗಳಿಗೆ ಹರಡಿದೆವೆಂದೂ ಹೇಳುವುದನ್ನು ಕೇಳಿದ್ದೆ. ಬಂಗಾಳದ ಸುಂದರ ಬನದ ಜಾಗಗಳಲ್ಲಿ, ಮಧ್ಯಪ್ರದೇಶ ಹಾಗೂ ದಕ್ಷಿಣ ರಾಜ್ಯಗಳ ಕಾಡುಗಳಲ್ಲಿ ನಮ್ಮವರು ಹೆಚ್ಚಾಗಿ ಕಂಡು ಬರುತ್ತಾರೆ. ಹಾಗೆಯೇ ರಾಜಸ್ಥಾನದ ಕುರುಚಲು ಅರಣ್ಯಗಳಲ್ಲಿ, ಅಸ್ಸಾಮದ ಅತಿ ಮಳೆಯ ಕಾಡುಗಳಲ್ಲಿ, ಸಹ ನಮ್ಮವರು ಇದ್ದಾರೆ. ಕರ್ನಾಟಕದ ಶಿವಮೊಗ್ಗ, ಚಿಕ್ಕಮಗಳೂರ, ಕೊಡಗು, ಮೈಸೂರು, ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡದ ದಟ್ಟ ಕಾಡುಗಳಲ್ಲೂ ನಮ್ಮವರು ನೆಲೆಸಿದ್ದಾರೆ.” ತರಗತಿಯಲ್ಲಿ ಪಾಠ ಮಾಡುವ ಟೀಚರರ ಹಾಗೆ ವಿವರಿಸುತ್ತಾ ಹೋದಳು ಅಜ್ಜಿ. “ಹಾಗಾದರೆ ಈಗ ಇಲ್ಲೆಲ್ಲ ನಿಮ್ಮವರ ಸಂಖ್ಯೆ ಬಹಳ ಹೆಚ್ಚಿರಬೇಕಲ್ಲ?” ಮತ್ತೊಮ್ಮೆ ಪ್ರಶ್ನೆ ಹಾಕಿದಳು ಪುಟ್ಟಿ.

“ನಾನೊಂದು ವಿಚಿತ್ರ ಸತ್ಯವನ್ನು ಹೇಳುತ್ತೇನೆ ಪುಟ್ಟೀ ದಿನದಿಂದ ದಿನಕ್ಕೆ ಜಗತ್ತಿನ ಜನಸಂಖ್ಯೆ ಏರುತ್ತಿದೆ. ಆದರೆ ನಮ್ಮವರ ಸಂಖ್ಯೆ ಮಾತ್ರ ಇಳಿಯುತ್ತಲೇ ಇದೆ.” ಅಜ್ಜಿ ಹೇಳಿದಳು.

ಪುಟ್ಟಿಗೆ ಆಶ್ಚರ್ಯವಾಯಿತು. “ಜನಸಂಖ್ಯೆ ಏರುತ್ತಲೇ ಇದೆ. ಹುಲಿಗಳ ಸಂಖ್ಯೆ ಇಳಿಯುತ್ತಲೇ ಇದೆ. ಇದೇಕೆ ಹೀಗೆ ? ಸಹಜವಾಗಿಯೇ ಹುಲಿಗಳ ಸಂಖ್ಯೆಯೂ ಹೆಚ್ಚಾಗಬೇಕಲ್ಲ? ಅದು ಕಮ್ಮಿಯಾಗುತ್ತ ಸಾಗಲು ಕಾರಣವೇನು? ಅದನ್ನು ತಿಳಿಯಬೇಕು ಎನಿಸಿತು ಅವಳಿಗೆ. ಅವಳು ಕೇಳಿದಳು, “ಜನಸಂಖ್ಯೆ ಏರಿದ ಹಾಗೆ ನಿಮ್ಮವರ ಸಂಖ್ಯೆಯೂ ಏರಬೇಕಲ್ಲ? ಅದೇಕೆ ಇಳಿಯುತ್ತಿದೆ?”

“ಅದಕ್ಕೆ ಹಲವು ಕಾರಣಗಳಿವೆ ಪುಟ್ಟೀ. ಹುಲಿ ಉಳಿದರೆ ಕಾಡು ಉಳಿದೀತು. ಕಾಡು ಉಳಿದರೆ ನಾಡು ಉಳಿದೀತು” ಎಂದು ಜನ ಹೇಳುತ್ತಲೇ ಬಂದಿದ್ದಾರೆ. ಆದರೆ ಅದೇ ಜನ ಮರಗಳನ್ನು ಕಡಿದು, ಕಾಡುಗಳನ್ನು ನಾಶಗೊಳಿಸುತ್ತಾ ಬಂದಿದ್ದಾರೆ, ನಮ್ಮವರ ನಾಶಕ್ಕೂ

ವಿವರಿಸಿ ಹೇಳುತ್ತೇನೆ. ಜನಸಂಖ್ಯೆ ಹೆಚ್ಚಾದಂತೆ ಅವರ ಅಗತ್ಯಗಳೂ ಹೆಚ್ಚಿದವು. ಅವರಿಗೆ ಹೆಚ್ಚು ಆಹಾರ ಧಾನ್ಯಗಳಲು ಬೇಕಾದವು. ಹೆಚ್ಚು ಆಶ್ರಯ ಸ್ಥಾನಗಳು ಬೇಕಾದವು. ಹಾಗಾಗಿ ಅವರು ಕಾಡುಗಳನ್ನು ಕಡಿದು ಕೃಷಿ ಭೂಮಿ ಮಾಡಿದರು. ಮನೆಗಳನ್ನು ಕಟ್ಟಿಕೊಂಡರು. ಮರಮಟ್ಟುಗಳಿಗಾಗಿ, ಉರುವಲಿಗಾಗಿ ಸಹ ಮರಗಳನ್ನು ಕಡಿದರು. ಕೈಗಾರಿಕೆಗಾಗಿ, ಗಣಿಗಾರಿಕೆಗಾಗಿ, ಅಣೆಕಟ್ಟುಗಳ ರಚನೆ ಮತ್ತು ವಿದ್ಯುತ್ ಉತ್ಪಾದನೆಯ ವಿವಿಧ ಯೋಜನೆಗಳಿಗಾಗಿಯೂ ಕಾಡುಗಳನ್ನು ನಾಶಮಾಡಿದರು. ವಿದ್ಯುತ್ ಸರಬರಾಜು, ರಸ್ತೆ ನಿರ್ಮಾಣಗಳ ನೆಪದಲ್ಲೂ ಕಾಡುಗಳ ನಾಶವಾಯಿತು. ದುಡ್ಡಿನ ಆಸೆಗಾಗಿ ಕೆಲವು ಮಂದಿ ಕಾಡುಗಳ್ಳರು, ವನಪಾಲಕರು, ಜನನಾಯಕರು ಕಾಡುಗಳ ನಾಶಕ್ಕೆ ಕಾರಣರಾದರು."



"ಹೀಗೆ ಕಾಡಿನ ನಾಶದೊಂದಿಗೆ ಕಾಡು ಪ್ರಾಣಿಗಳ ನಾಶವೂ ಆಯಿತು. ಅಳಿದು ಉಳಿದವುಗಳಿಗೂ ಆಸರೆ ತಪ್ಪಿತು; ಆಹಾರ ಸಿಗದಾಯಿತು. ಇಂಥ ಪರಿಸ್ಥಿತಿಯಿಂದ ಅತಿ ಹೆಚ್ಚು ಸಂಕಟ ಅನುಭವಿಸಿದವರು ನಾವು, ಹುಲಿಗಳು. ಇಲ್ಲಿ ಒಂದು ಮಾತನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಅದೇನು ಗೊತ್ತೇ? ಈ ದೇಶದಲ್ಲಿ ಕಾಡಿಗೆ ಮತ್ತು ಕಾಡುಪ್ರಾಣಿಗಳಾದ ನಮಗೆ ಬಲುದೊಡ್ಡ ಕಂಟಕ ಬಂದುದು ನಿಮ್ಮವರಿಂದ, ಅಂದರೆ ಮನುಷ್ಯರಿಂದಲೇ. ಹಿಂದೆ ರಾಜರ ಆಡಳಿತವಿತ್ತಲ್ಲ? ಆಗ ರಾಜರಿಗೆ ಬೇಟೆ ಒಂದು ಮನೋರಂಜನೆಯ ವಿಷಯವಾಗಿತ್ತು. ತಮ್ಮ ಖುಶಿಗಾಗಿಯೂ ಅವರು ಬೇಟೆಯಾಡುತ್ತಿದ್ದರು. ಕಾಡುಪ್ರಾಣಿಗಳ ಹಾವಳಿ ಹೆಚ್ಚಿದಾಗ, ಪೈರುನಾಶವಾಗುತ್ತಿದೆ ಎಂದು ರೈತರು ದೂರು ನೀಡಿದರೂ ಸಹ ಬೇಟೆಗೆ ಬರುತ್ತಿದ್ದರು; ವನವಾಸಿಗಳಾದ ನಮ್ಮನ್ನು ಕೊಲ್ಲುತ್ತಿದ್ದರು. ಮುಂದೆ ಇಂಗ್ಲಿಷರು ಇಲ್ಲಿ ಆಳಿದರಲ್ಲ? ಆಗ ಅವರೂ ಮನಬಂದಂತೆ ನಮ್ಮನ್ನು ಕೊಂದರು. ನಮ್ಮ ಚರ್ಮ ಹೆಚ್ಚು ಬೆಲೆ ಬಾಳುತ್ತಿತ್ತು. ನಮ್ಮ ಉಗುರು, ಮೀಸೆ ಇವುಗಳಿಗೂ ಬೇಡಿಕೆ ಇತ್ತು. ಆದುದರಿಂದ ಹಣದ ಆಸೆಯಿಂದ ಸಾರ್ವಜನಿಕರೂ ನಮ್ಮನ್ನು ಬೇಟೆಯಾಡಿದರು. ಸಿಕ್ಕ ಸಿಕ್ಕಲ್ಲಿ ನಮ್ಮನ್ನು ಕೊಂದರು. ಕೆಲವರು ನಮ್ಮನ್ನು ಜೀವಂತವಾಗಿ ಸೆರೆಹಿಡಿಯಲಿಕ್ಕೂ ಯತ್ನಿಸಿದರು. ಅದರಲ್ಲಿ ಯಶಸ್ವಿಗಳೂ ಆದರು.

"ಏನಜ್ಜೀ, ನಿಮ್ಮನ್ನು ಜೀವಂತವಾಗಿ ಸೆರೆಹಿಡಿಯುತ್ತಿದ್ದರೇ? ಹೇಗೆ ಹಿಡಿಯುತ್ತಿದ್ದರು? ಯಾಕೆ ಹಿಡಿಯುತ್ತಿದ್ದರು?" ವಿಚಾರಿಸಿದಳು ಪುಟ್ಟಿ.

"ಸರ್ಕಸ್ ಕಂಪೆನಿಗಳು ನಮ್ಮನ್ನು ಕೊಳ್ಳುತ್ತಿದ್ದವು. ನಮ್ಮ ಪ್ರದರ್ಶನದಿಂದ ತಾವು ದುಡ್ಡು ಮಾಡುತ್ತಿದ್ದವು. ಶ್ರೀಮಂತ ಜನ ಶೋಕಿಗಾಗಿ ನಮ್ಮನ್ನು ಸಾಕುತ್ತಿದ್ದರಂತೆ. ಹೊರದೇಶಗಳಿಗೆ ನಮ್ಮನ್ನು ಕಳುಹಿಸುವುದೂ ನಡೆಯುತ್ತಿತ್ತು ಎಂದು ಕೇಳಿದ್ದೇನೆ. ಹಾಗಾಗಿ ಬುದ್ಧಿವಂತರಾದ ಸಾಹಸಿಗಳು ಬೇರೆ ಬೇರೆ ಉಪಾಯ ಹೂಡುತ್ತಿದ್ದರು. ನಮ್ಮನ್ನು ಜೀವಂತವಾಗಿ ಸೆರೆಹಿಡಿಯುತ್ತಿದ್ದರು.'




“ಕೆಲವರು ಆಳವಾದ ಹೊಂಡದಲ್ಲಿ ಬೀಳಿಸಿ, ನಮ್ಮನ್ನು ಹಿಡಿಯುತ್ತಿದ್ದರು. ಕೆಲವರು ಬೋನುಗಳನ್ನು ಇರಿಸಿ, ನಮ್ಮನ್ನು ಬಂಧಿಸುತ್ತಿದ್ದರು. ಈಗಿನ ಜನ ಹೊಸತೊಂದು ಉಪಾಯ ಕಂಡುಕೊಂಡಿದ್ದಾರೆ. ಅದೇನು ಗೊತ್ತೇ? ಮತ್ತು ಬರಿಸುವ ಔಷಧಿ ಗುಂಡುಗಳು ಈಗ ಸಿಗುತ್ತಿವೆ. ಅಂಥ ಗುಂಡೇಟು ಹೊಡೆದು, ನಾವು ಮತಿಗೆಟ್ಟು ಬಿದ್ದಾಗ ನಮ್ಮನ್ನು ಅವರು ಬೋನುಗಳಲ್ಲಿ ಹಿಡಿದಿಡುತ್ತಾರೆ. ಮತ್ತೆ ನಮ್ಮ ಮಾರಾಟ ನಡೆಸುತ್ತಾರೆ. ಸಾಮಾನ್ಯವಾಗಿ ನಮ್ಮನ್ನು ಜೀವಂತ ಹಿಡಿಯುವುದು ಸುಲಭದ ಕೆಲಸವಲ್ಲ. ಹಾಗಾಗಿ ಹಣದ ಆಸೆಯ ಜನ, ನಮ್ಮನ್ನು ಸಾಯಿಸುವುದೇ ಹೆಚ್ಚು. ಅದಕ್ಕೂ ಅವರಲ್ಲಿ ವಿವಿಧ ಉಪಾಯಗಳಿವೆ. ಕೆಲವರು ಎತ್ತರದಲ್ಲಿ ಅಟ್ಟಣಿಗೆ ಕಟ್ಟುತ್ತಾರೆ. ಕೆಳಗೆ, ತುಸು ದೂರದಲ್ಲಿ ಎಮ್ಮೆಯ ಕರು, ಆಡು ಇಂಥ ಬಲಿ ಪ್ರಾಣಿಯನ್ನು ಕಟ್ಟಿರುತ್ತಾರೆ. ಅದನ್ನು ನಾವು ತಿನ್ನಲು ಬಂದಾಗ, ನಮ್ಮನ್ನು ಗುಂಡಿಟ್ಟು ಕೊಲ್ಲುತ್ತಾರೆ. ಕೆಲವು ಬಾರಿ ನಾವು ಅರ್ಧ ತಿಂದು ಬಿಟ್ಟ ಕೊಳ್ಳೆಯನ್ನು ಮತ್ತೆ ತಿನ್ನಲು ಬಂದಾಗ, ಅಟ್ಟಣಿಗೆಯಲ್ಲಿ ಕೂತು, ಗುಂಡು ಹೊಡೆದು, ನಮ್ಮನ್ನು ಸಾಯಿಸುತ್ತಾರೆ. ಇನ್ನು ಕೆಲವು ಬಾರಿ ಆಹಾರದಲ್ಲಿ ವಿಷ ಬೆರೆಸಿ ಇಟ್ಟು, ನಮ್ಮನ್ನು ಕೊಂದು ಬಿಡುತ್ತಾರೆ. ಕೃಷಿಕರ, ತೋಟಗಾರರ ವಿದ್ಯುತ್ ಬೇಲಿಗಳೂ ನಮ್ಮ ಜೀವಕ್ಕೆ ಅಪಾಯ ತರುತ್ತವೆ. ಹೀಗೆ ನಿರಂತರವಾಗಿ ಸಾಗುತ್ತಿದೆ ನಮ್ಮ ಕೊಲೆ. ಆದುದರಿಂದಲೇ ಜನಸಂಖ್ಯೆ ಏರಿದ ಹಾಗೆ ನಮ್ಮವರ ಸಂಖ್ಯೆ ಇಳಿಮುಖವಾಗುತ್ತಿದೆ”


“ಹಿಂದೆ ನಮ್ಮ ದೇಶದಲ್ಲಿ ನಿಮ್ಮವರ ಸಂಖ್ಯೆ ಎಷ್ಟಿತ್ತು? ಈಗ ಎಷ್ಟು ಇದೆ? ಈ ಬಗ್ಗೆ ನಿನಗೇನು ಗೊತ್ತಿದೆ? ಹೇಳುತ್ತೀಯಾ” ಮತ್ತೆ ಕೇಳಿದಳು ಪುಟ್ಟಿ.

ಸುಮಾರು ನೂರು ವರ್ಷಗಳ ಹಿಂದೆ ಭಾರತದಲ್ಲಿ ನಮ್ಮ ಸಂಖ್ಯೆ ೪೦,೦೦೦ ವನ್ನೂ ಮೀರಿತ್ತು ಎಂದು ಹೇಳುವುದನ್ನು ಕೇಳಿದ್ದೆ. ಇನ್ನು ಕೆಲವರ ಹೇಳಿಕೆ ಪ್ರಕಾರ, ಅಂದು ನಮ್ಮವರ ಸಂಖ್ಯೆ ಸುಮಾರು ಒಂದು ಲಕ್ಷದಷ್ಟು ಇತ್ತು. ಆದರೆ ಬರಬರುತ್ತಾ ಆ ಸಂಖ್ಯೆ ಕಡಿಮೆಯಾಯಿತು. ೧೯೬೦ ಸಮಯಕ್ಕೆ ಆ ಸಂಖ್ಯೆ ನಾಲ್ಕು - ಐದು ಸಾವಿರಕ್ಕೆ ಇಳಿಯಿತು. ಮುಂದಿನ ದಶಕದಲ್ಲಿ ಅದು ಇನ್ನಷ್ಟು ಕಡಿಮೆಯಾಯಿತು. ೧೯೭೨ರಲ್ಲಿ ಇಲ್ಲಿದ್ದ ನಮ್ಮವರ ಸಂಖ್ಯೆ ಕೇವಲ ೨೦೦೦ ಎಂದು ಅಂದಾಜು ಮಾಡಲಾಯಿತು. ಆಗ ನಮ್ಮ ಜನ ಎಚ್ಚೆತ್ತರು. ಸರಕಾರವೂ ಎಚ್ಚರಗೊಂಡಿತು. ನಮ್ಮವರ ಸಂರಕ್ಷಣೆಗೆ, ಅಭಿವೃದ್ಧಿಗೆ ತುರ್ತುಕಾರ್ಯಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಇದರ ಪರಿಣಾಮ ಏನಾಯಿತು ಗೊತ್ತೇ? ೧೯೭೩ರಲ್ಲಿ ಕೇಂದ್ರ ಸರಕಾರವು ‘ಪ್ರೊಜೆಕ್ಟ್ ಟೈಗರ್’ ಎಂಬ ಹೊಸತೊಂದು ಯೋಜನೆಯನ್ನು ಜಾರಿಗೊಳಿಸಿತು. ಇದರ ಪ್ರಕಾರ ನಮ್ಮವರ ಸಂರಕ್ಷಣೆಗಾಗಿ ಹಾಗೂ ನಮ್ಮ ವಂಶದ ಅಭಿವೃದ್ಧಿಗಾಗಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ದೇಶದ ವಿವಿಧ ಭಾಗಗಳಲ್ಲಿ ನಮ್ಮ ರಕ್ಷಣೆಗಾಗಿ ಅಭಯಾರಣ್ಯಗಳನ್ನು ಕಾದಿರಿಸಲಾಯಿತು. ನಮಗೆ ರಾಷ್ಟ್ರ ಪ್ರಾಣಿಯ ಸ್ಥಾನ ಮಾನ ದೊರೆಯಿತು. ನಮ್ಮ ಬೇಟೆಯನ್ನು ನಿಷೇಧಿಸಲಾಯಿತು. ನಮ್ಮನ್ನು ಹಿಡಿಯುವುದು, ಬಂಧಿಸಿ ಇಡುವುದು, ಅಥವಾ ಕೊಲ್ಲುವುದು ಶಿಕ್ಷಾರ್ಹ ಅಪರಾಧ ಎಂದು ಸಾರಲಾಯಿತು. ನಮ್ಮನ್ನು ಅಥವಾ ನಮ್ಮ ಚರ್ಮ, ಉಗುರು ಇತ್ಯಾದಿಗಳ ಮಾರಾಟವನ್ನು ಹಾಗೂ ರಫ್ತನ್ನು ಸಹ ನಿಷೇಧಿಸಲಾಯಿತು. ಹಾಗಾಗಿ ಮೃಗಾಲಯದಲ್ಲೂ ನಮ್ಮನ್ನು ಬಂಧಿಸಿ ಇಡುವುದು ಈಗ ಅಪರಾಧವಾಗುತ್ತದೆ. ಆದುದರಿಂದ ಅಲ್ಲಿಯೂ ಸುತ್ತ ಕಂದಕದ ಏರ್ಪಾಡುಮಾಡಿ, ನಡುವಿನ ಜಾಗದಲ್ಲಿ ನಮಗೆ ಸುತ್ತಾಡಲು ಅವಕಾಶ ಒದಗಿಸಿಕೊಡುತ್ತಿದ್ದಾರೆ. ರಕ್ಷಿತ ಅರಣ್ಯಗಳಲ್ಲೂ ಸುತ್ತ ಕಂದಕದ ಏರ್ಪಾಡು ಇದ್ದು, ನಡುವಿನ ವಿಶಾಲ ಪ್ರದೇಶದಲ್ಲಿ ನಮ್ಮ ವಾಸಕ್ಕೆ, ತಿರುಗಾಟಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆ. ಕರ್ನಾಟಕದ ಬಂಡೀಪುರವೂ (ಭದ್ರಾ, ನಾಗರಹೊಳೆ)

ಸೇರಿದಂತೆ ಹಿಮಾಚಲದ ತಪ್ಪಲಿನಲ್ಲಿರುವ ಕಾರ್ಬೆಟ್ ರಾಷ್ಟ್ರೀಯ ಅಭಯಾರಣ್ಯ ರಾಜಸ್ಥಾನದ ರಣಥಂಬೋರ್ ಅಭಯಾರಣ್ಯ ಇತ್ಯಾದಿ ವಿವಿಧ ಭಾಗಗಳಲ್ಲಿ ಇಂದು ನಮ್ಮ ರಕ್ಷಣಾ ಕೇಂದ್ರಗಳು ತಲೆ ಎತ್ತಿವೆ." ಅಜ್ಜಿ ವಿವರಣೆ ನೀಡಿದಳು.



"ಇದು ನಿಜಕ್ಕೂ ಸಂತೋಷದ ಸಂಗತಿ. ಅಂತೂ ಈ ಎಲ್ಲ ಕಾರ್ಯಕ್ರಮಗಳಿಂದಾಗಿ ಈಗ ನಿಮ್ಮವರ ಸಂಖ್ಯೆ ತುಂಬ ಏರಿರಬೇಕಲ್ಲ?" ಪುಟ್ಟಿ ಪ್ರಶ್ನಿಸಿದಳು. ನಮ್ಮ ಸಂಖ್ಯೆ ಸ್ವಲ್ಪ ಮಟ್ಟಿಗೆ ಏರಿದೆ ನಿಜ, ಆದರೆ ಇಂದಿಗೂ ನಮ್ಮ ಕಳ್ಳ ಬೇಟೆ ನಡೆಯುತ್ತಲೇ ಇದೆ ಪುಟ್ಟೀ. ನಿಮ್ಮವರು ನಮ್ಮವರನ್ನು ಸಾಯಿಸುತ್ತಲೇ ಇದ್ದಾರೆ. ಕಾನೂನುಗಳು ಕಡತದಲ್ಲೇ ಇರುತ್ತವೆ ಹೊರತು ಪರಿಣಾಮಕಾರಿಯಾಗಿ ಜಾರಿಯಾಗುವುದಿಲ್ಲ. ಕಡಿಮೆ ಸಂಖ್ಯೆಯಲ್ಲಿರುವ ಅರಣ್ಯಪಾಲರಿಂದ ವಿಶಾಲ ಪ್ರದೇಶದ ಕಾವಲು ಅಸಾಧ್ಯವಾಗುತ್ತದೆ. 'ಬೇಲಿಯೇ ಹೊಲ ಮೇದಂತೆ' ಎನ್ನುತ್ತಾರಲ್ಲ? ಹಾಗೆ , ಕೆಲವೆಡೆ ಅರಣ್ಯ ಇಲಾಖೆಯ ಮಂದಿಗಳು ಕಾಡುಗಳ್ಳರ ಜೊತೆ ಶಾಮೀಲಾಗುತ್ತಾರೆ; ನಮ್ಮವರ ಕಳ್ಳ ಬೇಟೆಗೆ ಕುಮ್ಮಕ್ಕು ನೀಡುತ್ತಾರೆ. ಇದಕ್ಕೆ ಭ್ರಷ್ಟ ರಾಜಕಾರಣಿಗಳ ಬೆಂಬಲವೂ ಸಿಕ್ಕಿಬಿಡುತ್ತದೆ. ಕೆಲವು ಬಾರಿ ಬೆಂಕಿ ಆಕಸ್ಮಿಕಗಳಿಂದಲೂ ಕಾಡುಗಳು ಸುಟ್ಟು ಬೂದಿಯಾಗುತ್ತವೆ. ನಮ್ಮವರು ಸಂಕಟಕ್ಕೆ ಸಿಲುಕುತ್ತಾರೆ. ಇಂಥ ಹತ್ತು ಹಲವು ಕಾರಣಗಳಿಂದಾಗಿ, ರಕ್ಷಿತಾರಣ್ಯಗಳಲ್ಲೂ ಇಂದು ನಮ್ಮವರ ಜೀವ ಸುರಕ್ಷಿತವಾಗಿಲ್ಲ ಎನ್ನುವುದು ಒಂದು ವಿಚಿತ್ರ ಸತ್ಯ."



"ನಾಡಿನಲ್ಲಿ ಆಗಾಗ ಮನುಷ್ಯರ ಗಣತಿ ನಡೆಯುತ್ತದಲ್ಲ? ಹಾಗೆ, ಇಲ್ಲಿ ಕಾಡಲ್ಲಿ ನಮ್ಮವರ ಗಣತಿಯೂ ನಡೆಯುವುದುಂಟು. ನಮ್ಮ ಬಗೆಗಿನ ಅಂಕೆ ಸಂಖ್ಯೆಗಳೂ ಪ್ರಕಟಗೊಳ್ಳುವುದುಂಟು. ಆದರೆ ನಮ್ಮ ದೇಶದಲ್ಲಿ ನಿಜವಾಗಿ ಬದುಕಿರುವ ನಮ್ಮವರು ಎಷ್ಟು ಎನ್ನುವುದನ್ನು ಹೇಳಲು ಯಾರಿಂದಲೂ ಸಾಧ್ಯವಾಗದು." ಅಜ್ಜಿ ಮಾತು ನಿಲ್ಲಿಸಿದಳು. ಮಾತಾಡಿ ಮಾತಾಡಿ ಅವಳು ಸೋತು ಹೋದಂತೆ ಕಂಡಿತು. ಆಯಾಸದಿಂದ ಅವಳು ಕಣ್ಣು ಮುಚ್ಚಿಕೊಂಡಳು. ನೀಡಿದ ಮುಂಗಾಲುಗಳ ಮೇಲೆ ತನ್ನ ತಲೆಯಿರಿಸಿ, ವಿರಮಿಸಿದಳು.

ಬಹಳ ಹೊತ್ತು ಅಜ್ಜಿ ಹಾಗೇ ಇದ್ದಳು. ಪುಟ್ಟಿ ಸಹ ಕಲ್ಲ ಮೇಲೆ ಕೂತೇ ಇದ್ದಳು. ಹಾಗೆ ಕೂತು ಕೂತು ಆಕೆಗೆ ಸೋತು ಹೋಗಿತ್ತು. ಕೂತಲ್ಲೇ ಅವಳು ನಿದ್ದೆ ತೂಗ ತೊಡಗಿದ್ದಳು. ಆದರೆ ಅವಳು ಕೂತಿದ್ದ ಕಲ್ಲು ದೊಡ್ಡದಿರಲಿಲ್ಲವಲ್ಲ? ಹಾಗಾಗಿ ಅದರ ಮೇಲೆ ನಿದ್ರಿಸುವುದೂ ಸಾಧ್ಯವಿರಲಿಲ್ಲ. ಕೆಳಗಡೆ ಮಲಗಬಹುದೆಂದರೆ ಅದು ಥಂಡಿ ನೆಲ. ಅಲ್ಲೂ ಮಲಗುವಂತಿಲ್ಲ. ಈಗ ಏನು ಮಾಡಲಿ? ಹೇಗೆ ಸಮಯ ಕಳೆಯಲಿ?" ಅವಳು ಯೋಚಿಸಿದಳು. ಅವಳ ನೋಟ ಮತ್ತೆ ಅಜ್ಜಿಯ ಕಡೆಗೆ ಹೊರಳಿತು. ಈಗ ಅಜ್ಜಿಯ ಸೀರೆ ಅವಳ ಗಮನ ಸೆಳೆಯಿತು.

ಯಾರೋ ಹೆಂಗಸು ಉಡುತ್ತಿದ್ದ ಸೀರೆ ಅದು. ತನಗೆ ಕಾಡಿನಲ್ಲಿ ಸಿಕ್ಕಿತು ಎಂದಿದ್ದಳು ಅಜ್ಜಿ. ಅವಳ ಮಾತು ನಿಜವಿರಬಹುದೇ? ಅಥವಾ..... ಈ ಅಜ್ಜಿಯೇ ಆ ಹೆಂಗಸನ್ನು ಕೊಂದು, ತಿಂದಿರಬಹುದುದೇ..? ಸಂದೇಹವೊಂದು ಪುಟ್ಟಿಯ ಮನವನ್ನು ಕಾಡತೊಡಗಿತು.

ಈ ಅಜ್ಜಿಯ ಮಾತನ್ನು ಹೇಗೆ ನಂಬಲಿ .....? "ಗಾಯಗೊಂಡಿರುವಾಗ, ಮುಪ್ಪಿನಲ್ಲಿರುವಾಗ ನಮ್ಮವರು ಮನುಷ್ಯರನ್ನೂ ತಿನ್ನುವುದಿದೆ. ಒಂದು ಬಾರಿ ನರಮಾಂಸದ ರುಚಿಕಂಡ ನಮ್ಮವರು, ಮತ್ತೆ ನರಭಕ್ಷಕರಾಗುವುದೂ ಇದೆ" ಎಂದು ಈ ಅಜ್ಜಿಯೇ ಹೇಳಿದ್ದಳಲ್ಲ? ಹಾಗೆ ಈಕೆ ನಿಜವಾಗಿ ನರಭಕ್ಷಕಿಯೇ ಇರಬಹುದೇ? ಇವಳು ಇನ್ನು ನನ್ನನ್ನೂ ಕೊಲ್ಲಬಹುದೇ? ಸದ್ಯ ನಾನು ನಿದ್ದೆ ಹೋಗುವುದನ್ನೇ ಕಾಯುತ್ತಿರಬಹುದೇ? ಅವಳು ಯೋಚಿಸಿದಳು. ಈ ಯೋಚನೇ ಬಂದುದೇ ತಡ, ಅವಳು ಇನ್ನಷ್ಟು ಹೆದರಿಕೊಂಡಳು. ನೆಟ್ಟ ನೋಟದಿಂದ ಅಜ್ಜಿಯನ್ನೇ ನೋಡತೊಡಗಿದಳು.



ತುಸು ಹೊತ್ತು ಕಳೆಯಿತು. ಅಜ್ಜಿ ಮೆಲ್ಲನೆ ಕಣ್ಣು ತೆರೆದಳು. ಅವಳು ಬಿಟ್ಟ ಕಣ್ಣುಗಳಿಂದ ಪುಟ್ಟಿಯನ್ನೇ ದಿಟ್ಟಿಸತೊಡಗಿದಳು. ಬಹಳ ಹೊತ್ತು ಅವಳು ಹಾಗೆ ದಿಟ್ಟಿಸುತ್ತಲೇ ಇದ್ದಳು. ಈಗ ಅವಳ ಬಾಯಲ್ಲಿ ನೀರೂರ ತೊಡಗಿತು. ಅವಳು ನಿಧಾನವಾಗಿ ತಲೆ ಎತ್ತಿದಳು. ಸರಿಯಾಗಿ ಎದ್ದು ಕೂತಳು. ಇನ್ನೂ ಅವಳು ಪುಟ್ಟಿಯನ್ನು ನೋಡುತ್ತಲೇ ಇದ್ದಳು. ಆದರೆ ಅವಳು ನೋಡುವ ರೀತಿ ಮಾತ್ರ ಮೊದಲಿನಂತಿರಲಿಲ್ಲ. ಕಣ್ಣಲ್ಲೇ ನುಂಗಿಬಿಡುವ ಹಾಗಿತ್ತು ಅವಳ ನೋಟ. ಅದನ್ನು ಕಂಡುದೇ ತಡ, ಪುಟ್ಟಿಯ ಮೈರೋಮಗಳು ನಿಮಿರಿ ನಿಂತವು. ಅವಳ ಎದೆಬಡಿತ ಜೋರಾಯಿತು. ಆದರೂ ಅವಳು ಧೈರ್ಯ ತಂದುಕೊಂಡಳು. ಅಜ್ಜಿಯನ್ನು ತಾನೇ ಮಾತಿಗೆಳೆಯಲು ನಿರ್ಧರಿಸಿದಳು.

"ಅಜ್ಜೀ, ನೀವೆಲ್ಲ ಕ್ರೂರ ಪ್ರಾಣಿಗಳೆಂದು ಹೇಳುವುದನ್ನು ಕೇಳಿದ್ದೆ. ಅದು ನಿಜವೆಂದೇ ನಂಬಿದ್ದೆ. ಆದರೆ ಮನುಷ್ಯರಲ್ಲೂ ಇಲ್ಲದ ಕೆಲವು ಒಳ್ಳೆಯ ಗುಣಗಳು ನಿಮ್ಮಲ್ಲಿರುವುದು ನನಗೀಗ ತಿಳಿದಿದೆ. ನಿಜ ಹೇಳುತ್ತೇನೆ ಅಜ್ಜೀ, ನಿನ್ನಿಂದ ನನಗೆ ತುಂಬಾ ಉಪಕಾರವಾಯಿತು. ನಿಮ್ಮವರ ಬಹಳ ವಿಷಯಗಳನ್ನು ನನಗೆ ನೀನು ತಿಳಿಸಿದ್ದೀಯಾ. ನನಗಿಲ್ಲಿ ಆಸರೆ ನೀಡಿದ್ದೀಯಾ. ನಿನ್ನ ಜೊತೆ ಮಾತಾಡುತ್ತ ಸಮಯ ಕಳೆದುದೇ ಗೊತ್ತಾಗಲಿಲ್ಲ ನನಗೆ" ಅವಳು ಹೇಳಿದಳು.

"ನನಗೂ ಹಾಗೆಯೇ ಪುಟ್ಟೀ. ನಾನು ಇಲ್ಲಿಗೆ ಬಂದುದರಿಂದ ನನ್ನ ಮನಸ್ಸಿಗೆ ಬಹಳ ಖುಷಿಯಾಗಿದೆ. ನನ್ನ ಬೇಸರ ದೂರಾಗಿದೆ. ನಿಜ ಹೇಳಬೇಕೆಂದರೆ, ನಿನ್ನ ಮೇಲೆ ಅದೇನೋ ಪ್ರೀತಿ ಉಂಟಾಗಿದೆ. ಒಂದು ಬಾರಿ ನಿನ್ನನ್ನು ತಬ್ಬಿಕೊಳ್ಳಬೇಕು ಎನಿಸಿದೆ. ನೀನೇನೂ ಹೆದರಬೇಡ ಪುಟ್ಟೀ. ಒಂದು ಬಾರಿ ನನ್ನನ್ನು ನಾನು ತಬ್ಬಿಕೊಳ್ಳುತ್ತೇನೆ" ಎಂದಳು ಅಜ್ಜಿ. ಹಾಗೆ ಹೇಳಲುತ್ತಾ, ಅವಳು ಇನ್ನಷ್ಟು ನೆಟ್ಟಗೆ ಕೂತಳು.

ಪುಟ್ಟಿಗೆ ತನ್ನ ಅನುಮಾನ ನಿಜ ಎನಿಸಿತು. ಈ ಅಜ್ಜಿ ಈಗ ತನ್ನನ್ನು ಮುಗಿಸಿ ಬಿಡುತ್ತಾಳೆ. ಇಲ್ಲಿ ತನ್ನ ರಕ್ಷಣೆಗೆ ಬರುವವರು ಯಾರೂ ಇಲ್ಲ. ಹಾಗಾಗಿ ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕು. ಅವಳು ನಿರ್ಧರಿಸಿದಳು. ತತ್‌ಕ್ಷಣ ಅದಕ್ಕೆ ಅವಳು ಸಿದ್ಧಳೂ ಆದಳು. ಅಲ್ಲಿ

ಆಯುಧವೇನಾದರೂ ಸಿಕ್ಕೀತೇ ಎಂದು ಅತ್ತಿತ್ತ ನೋಡಿದಳು. ಆದರೆ ಅಲ್ಲೇನೂ ಕಾಣಿಸಲಿಲ್ಲ. ಅಷ್ಟರಲ್ಲೇ, “ಏನು ಯೋಚಿಸುತ್ತಿದ್ದೀಯಾ? ನಾನು ಹೇಳಿದ್ದು ಕೇಳಿಸಲಿಲ್ಲವೇ, ಪುಟ್ಟೀ? ಒಂದೇ ಒಂದು ಬಾರಿ, ನಿನ್ನನ್ನು ನಾನು ಅಪ್ಪಿಕೊಳ್ಳುತ್ತೇನೆ. ಹೆದರಬೇಡ. ಹಾಂ?” ಎಂದಳು ಅಜ್ಜಿ. ಹಾಗೆ ಹೇಳುತ್ತಲೇ ಅವಳು ಹೆಜ್ಜೆ ಮುಂದಿಟ್ಟಳು.



ಪುಟ್ಟಿಗೆ ಆವೇಶ ಬಂದಂತಾಯಿತು. ಅವಳು ಥಟ್ಟನೆ ಮೇಲೆದ್ದಳು. ‘ನಿಲ್ಲು’ ಎಂದು ಅಬ್ಬರಿಸುತ್ತ, ಛಂಗನೆ ಅಲ್ಲಿಂದ ಹೊರ ಜಿಗಿದಳು. ಆಗಲೇ ‘ಧಡ್’ ಎಂಬ ಸದ್ದು ಕೇಳಿಸಿತು. ಪುಟ್ಟಿ ತನ್ನ ಮಂಚದಿಂದ ಕೆಳಗೆ ಬಿದ್ದಿದ್ದಳು. ಆದರೆ ಹುಲಿಯ ಗವಿಯಲ್ಲಿ ಅಲ್ಲ; ತನ್ನ ಮನೆಯಲ್ಲೇ.

“ಏನೇ ಪುಟ್ಟೀ, ಮಂಚದಿಂದ ಕೆಳಗೆ ಬಿದ್ದೆಯಾ ನೋವಾಗಿಲ್ಲ ತಾನೇ? ರಜಾದಿನ ವಾದರೇನು? ಎಂಟು ಗಂಟೆಯವರೆಗೂ ನಿದ್ದೆ ಮಾಡುವುದೇ?” ಅಡುಗೆ ಮನೆಯಿಂದ ಅಮ್ಮನ ಮಾತು ಕೇಳಿಸಿತು.

ಪುಟ್ಟಿ ಮೈಕೊಡವಿಕೊಂಡು ಮೇಲೆದ್ದಳು. ಸುತ್ತಮುತ್ತ ಒಮ್ಮೆ ಕಣ್ಣಾಡಿಸಿದಳು. ತಾನಿರುವುದು ತನ್ನ ಮನೆಯವರೇ ಎನ್ನುವುದು ಅವಳಿಗೆ ಖಾತರಿಯಾಯಿತು. ಆಗಲೇ ಕೆಲವು ದಿನಗಳ ಹಿಂದಿನ ಘಟನೆಯೊಂದು ಅವಳ ನೆನಪಿಗೆ ಬಂತು. ಯಾವುದದು ಘಟನೆ?

ಅಂದು ಅವರ ಶಾಲಾ ಮಕ್ಕಳು ಮೃಗಾಲಯಕ್ಕೆ ನೀಡಿದ್ದರು. ಅಲ್ಲಿ ಅವರು ಹುಲಿಗಳನ್ನೂ ಕಂಡಿದ್ದರು. ಅವರ ಬಗ್ಗೆ ನೂರಾರು ಪ್ರಶ್ನೆಗಳನ್ನೂ ಕೇಳಿದ್ದರು. ಅವರ ಪ್ರಶ್ನೆಗಳಿಗೂ ಟೀಚರ್ ಉತ್ತರ ನೀಡಿದ್ದರು. ಇನ್ನು ಹುಲಿಯಜ್ಜಿಯಿಂದ ಕೇಳಿ ತಿಳಿದ ಸಂಗತಿಗಳೆಲ್ಲ ಹುಲಿಯಜ್ಜೀ ಆಗಿರಲಿಲ್ಲ; ಬದಲಾಗಿ ಟೀಚರ್ ಮಕ್ಕಳಿಗೆ ಹೇಳಿದವರು ಆಗಿದ್ದವು.

ಪುಟ್ಟಿಕನಸಿನಲ್ಲೇ ಹುಲಿಯ  ಗುಹೆಗೆ ಹೋಗಿ ಬಂದಿದ್ದೆ.

***

# ದೋಸ್ತಿ (ಮಕ್ಕಳ ಕತೆಗಳು)

## ಲೇಖಕನ ಮಾತು

ಇದೊಂದು ಮಕ್ಕಳ ಕಥಾಸಂಗ್ರಹ. ಇದರಲ್ಲಿ ಐದು ಕಥೆಗಳಿವೆ. ಮಕ್ಕಳೇ ಇಲ್ಲಿನ ಪ್ರಧಾನ ಪಾತ್ರಗಳು. ಪರೋಪಕಾರ, ತ್ಯಾಗ, ಜೀವದಯೆ, ಕೋಮುಸಾಮರಸ್ಯ ಇತ್ಯಾದಿ ನೈತಿಕ ಮೌಲ್ಯಗಳನ್ನು ಪರೋಕ್ಷವಾಗಿ ಬಿಂಬಿಸುವ ಕತೆಗಳಿವು. ನೆಮ್ಮದಿಯ ಬದುಕಿಗೆ ಚಿನ್ನಕ್ಕಿಂತ ಅನ್ನ ಮಲುಖ್ಯ, ಪ್ರೀತಿ ಮುಖ್ಯ, ಮರ ಎನ್ನುವುದು ಈ ಭೂಮಿಗೆ ದೇವನಿತ್ತ ವರ-ಇಂಥ ವಿಚಾರಗಳನ್ನು ಬಿಂಬಿಸುವ ಕಥೆಗಳೂ ಇಲ್ಲಿವೆ. ಮಕ್ಕಳು ಇವುಗಳ ಸದುಪಯೋಗ ಪಡೆದರೆ ನನ್ನ ಶ್ರಮ ಸಾರ್ಥಕ.

ಈ ಪುಸ್ತಕವನ್ನು ಪ್ರಕಟಿಸಿ, ಉಪಕಾರ ಮಾಡಿದವರು ನನ್ನ ನಿರಂತರ ಪ್ರೋತ್ಸಾಹಕರಾದ ಕಿನ್ನಿಗೋಳಿ ಯುಗಪುರುಷ ಪ್ರಕಟಣಾಲಯದ ಶ್ರೀ ಕೆ. ಭುವನಾಭಿರಾಮ ಉಡುಪರು. ಅವರಿಗೆ ನಾನು ಚಿರ ಋಣಿ.

ಈ ಪುಸ್ತಕಕ್ಕೆ ಅಂದವಾದ ಚಿತ್ರಗಳನ್ನು ಬರೆದುಕೊಟ್ಟು ಸಹಕರಿಸಿದವರು ನನ್ನ ಕಲಾವಿದ ಮಿತ್ರ ಶ್ರೀ ಬಾಲ ಮಧುರ ಕಾನನ ಅವರು. ಇದನ್ನು ಅಂಧವಾಗಿ ಮುದ್ರಿಸಿದವರು ಕಿನ್ನಿಗೋಳಿ ಯುಗಪುರುಷ ಗ್ರಾಫಿಕ್ಸ್‌ನ ಬಂಧುಭಗಿನಿಯರು. ಇವರೆಲ್ಲರಿಗೆ ನಾನು ಆಭಾರಿ.

ಕಿರು ಹೊತ್ತಗೆಯಿದು ಹೊರಬರುತ್ತಿರುವ ಈ ಸಂದರ್ಭದಲ್ಲಿ ಹಿಂದೆ ನನಗೆ ಮಹದುಪಕಾರ ಮಾಡಿದ್ದ ಹಿರಿಯರು ದಿ. ಕೊ. ಅ. ಉಡುಪ ಮತ್ತು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

**ಪಳಕಳ ಸೀತಾರಾಮ ಭಟ್ಟ**

ಶಿಶುಸಾಹಿತ್ಯ ಮಾಲೆ

ಮಿತ್ತಬೈಲು

೧೧-೭-೨೦೦೬

***

## ಪ್ರಕಾಶಕರ ಮಾತು

ಶ್ರೀ ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗಾಗಿ ಬರೆದಿರುವ ಕವನಗಳು, ಕಥನಕವನಗಳು, ಕಥೆಗಳು, ಪ್ರಹಸನ, ನಾಟಕ, ಜೀವನ ಚರಿತ್ರೆ, ಪತ್ರಲೇಖನ, ಚುಟುಕುಗಳು, ಪ್ರಬಂಧಗಳು ಇಲ್ಲವೂ ನೇರವಾಗಿ ಮಕ್ಕಳ ಮನ ಮುಟ್ಟುವಂತಿವೆ. ಶಿಶು ಸಾಹಿತ್ಯ ಮಾಲೆಯ ಮೂಲಕ ಮಕ್ಕಳಿಗಾಗಿ ಸಿಹಿ ತಿನಿಸನ್ನು ನೀಡುತ್ತಾ ಬಂದಿರುವ ಶ್ರೀ ಪಳಕಳರ ಬಹುತೇಕ ಸತ್ಕೃತಿಗಳು ನಮ್ಮ ಪ್ರಕಟಣಾಲಯದ ಮೂಲಕ ಪ್ರಕಟವಾಗಿವೆ.

ಶಿಶು ಸಾಹಿತ್ಯ ಮಾಲೆಯ ಮೂಲಕ ಹೊಸ ಆಯಾಮವನ್ನೇ ಪರಿಕಲ್ಪಿಸಿ ಸಾರಸ್ವತ ಲೋಕದಲ್ಲಿ ಸ್ವಂತ ನಡಿಗೆಯಲ್ಲಿ ಮುನ್ನಡೆಯುತ್ತಿರುವ ಶ್ರೀ ಪಳಕಳ ಸೀತಾರಾಮ ಭಟ್ಟರ "ದೋಸ್ತಿ" ಎಂಬ ಈ ಮಕ್ಕಳ ಕಥಾ ಸಂಗ್ರಹವನ್ನು ನಮ್ಮ ಪ್ರಕಟಣಾಲಯದ ೩೯೯ನೇ ಕೃತಿಯಾಗಿ ಓದುಗರ ಮುಂದೆ ಇರಿಸಲು ಸಂತೋಷಪಡುತ್ತೇವೆ. ಶ್ರೀ ಪಳಕಳರಿಗೆ ನಮ್ಮ ವಂದನೆಗಳು.

ಈ ಕೃತಿಯಲ್ಲಿ ಅಚ್ಚುಕಟ್ಟಿನ ದಿಶೆಯಲ್ಲಿ ಸಹಕರಿಸಿದ ಯುಗಪುರುಷದ ಕಾರ್ಯಕರ್ತರಿಗೆಲ್ಲರಿಗೂ ಹಾರ್ದಿಕ ಕೃತಜ್ಞತೆಗಳು.

**ಕೊಡೆತ್ತೂರು ಭುವನಾಭಿರಾಮ ಉಡುಪ**

ಪ್ರಕಾಶಕ

ಕಿನ್ನಿಗೋಳಿ

************

# ದೋಸ್ತಿ

ಮೇ ತಿಂಗಳ ಕೊನೆಯ ವಾರ ಅದು. ಶಾಲೆಗೆ ರಜೆ ಇತ್ತು. ಆದರೂ ಕೆಲವು ಮಕ್ಕಳ ಅಂದು ಶಾಲೆಯತ್ತ ಧಾವಿಸುತ್ತಿದ್ದರು. ಕಾರಣ ಗೊತ್ತೇ? ಅಂದು ಏಳನೆಯ ತರಗತಿಯ ಮಕ್ಕಳ ಪರೀಕ್ಷಾ ಫಲಿತಾಂಶ ಹೊರಬೀಳಲಿತ್ತು. ಯಾರು ಪಾಸು? ಯಾರು ನಪಾಸು? ತಿಳಿವ ಕುತೂಹಲ ಅವರಿಗಿತ್ತು.

ಮಕ್ಕಳು ಶಾಲೆಗೆ ಬಂದರು. ಮುಖ್ಯ ಗುರುಗಳ ಕೋಣೆಯ ಹೊರಗೆ ಕರಿಹಲಗೆಯೊಂದನ್ನು ನಿಲ್ಲಿಸಿದ್ದರು. ಅದರಲ್ಲಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಿದ್ದರು. ವಿದ್ಯಾರ್ಥಿಯ ನೋಂದಣಿ ಸಂಖ್ಯೆ, ಹೆಸರು, ಪಡೆದ ಅಂಕಗಳು, ಫಲಿತಾಂಶ - ಇತ್ಯಾದಿ ವಿವರಗಳೆಲ್ಲ ಅಲ್ಲಿದ್ದವು. ಮಕ್ಕಳು ತಾವು ಪಡೆದ ಅಂಕಗಳು ಮತ್ತು ಫಲಿತಾಂಶ ಈ ವಿವರಗಳನ್ನು ಮೊದಲಿಗೆ ನೋಡಿಕೊಂಡರು. ಮತ್ತೆ ತಮ್ಮ ಸಹಪಾಠಿಗಳ ಸಾಧನೆ - ಫಲಿತಾಂಶಗಳ ವಿವರ ಸಂಗ್ರಹಿಸಿದರು.

ಆಗಲೇ, “ಓಹ್, ಎಲ್ಲರೂ ಪಾಸಾಗಿದ್ದಾರೆ. ಗೋಪುಗೆ ಮೊದಲ ರ್ಯಾಂಕ್ ಬಂದಿದೆ” ಒಬ್ಬ ಉದ್ಗರಿಸಿದ.

“ಹಾಂ, ಹೌದು; ಹೌದು. ಗೋಪುಗೆ ಫಸ್ಟ್ ರ್ಯಾಂಕ್, ೯೮% ಸರಾಸರಿ ಅಂಕಗಳು!” ಇನ್ನೊಬ್ಬ ದನಿಗೂಡಿಸಿದ.

“ಗೋಪು ಫಸ್ಟ್, ಗೋಪು ಫಸ್ಟ್” ಇನ್ನು ಕೆಲವರು ಕೂಗಿ ಹೇಳಿದರು. “ಏಯ್, ಗೋಪೂ, ಕೊಡು ಕೈ” ಎಂದು ಗೋಪುನ ಕೈಕುಲುಕಿದರು ಮತ್ತೆ ಕೆಲವರು.

ಎಲ್ಲರಿಗಿಂತ ಮೊದಲು ಗೋಪುನ ಕೈಕುಲುಕಿ, ಅಭಿನಂದನೆ ಹೇಳಿ, ಅವನನ್ನು ತಬ್ಬಿ ಕೊಂಡವನು ಶಂಕರ್, ಗೋಪುನ ಆತ್ಮೀಯ ಗೆಳೆಯ ಅವನು; ನೆರೆಮನೆಯವನು ಕೂಡ.

“ಹಾಂ, ಇನ್ನು ಹೈಸ್ಕೂಲಿಗೆ ಅರ್ಜಿ ಹಾಕಬಹುದಲ್ಲ? ಒಬ್ಬ ಕೇಳಿದ. “ಹೌದು, ಹೌದು. ತಡಮಾಡಿದರೆ ಸೀಟು ಸಿಗುವುದೆ ಕಷ್ಟವಾದೀತು” ಎರಡನೆಯವ ಎಚ್ಚರಿಕೆ ನೀಡಿದ.

ಮತ್ತೆ ಯಾರು ಯಾವ ಶಾಲೆಗೆ ಸೇರುವುದು? ಅವರ ಆಯ್ಕೆ ಯಾವುದು? ಇಂಗ್ಲಿಷ್ ಮಾಧ್ಯಮವೇ? ಕನ್ನಡವೇ? ಇತ್ಯಾದಿ ವಿಚಾರಗಳತ್ತ ಅವರ ಮಾತು ಹೊರಳಿತು. ಅಷ್ಟರಲ್ಲಿ ಕೋಣೆಯೊಳಗಿದ್ದ ಮುಖ್ಯ ಅಧ್ಯಾಪಕರು ಹೊರಬಂದರು.

“ಪರೀಕ್ಷೆಯಲ್ಲಿ ನೀವೆಲ್ಲ ಚೆನ್ನಗಿ ಮಾಡಿದ್ದೀರಾ.. ಎಲ್ಲರೂ ತೇರ್ಗಡೆ ಹೊಂದಿದ್ದೀರಾ. ಅಭಿನಂದನೆಗಳು” ಅವರೆಂದರು. ಬಳಿ ಗೋಪುನ ಕಡೆ ತಿರುಗಿ, “ಗೋಪೂ ನೀನು ೯೮% ಅಂಕಗಳಿಸಿ, ಶಾಲೆಗೆ ಕೀರ್ತಿ ತಂದಿದ್ದೀಯಾ. ಶಿಕ್ಷಣವನ್ನು ಅರ್ಧದಲ್ಲಿ ನಿಲ್ಲಿಸಬೇಡ, ಮುಂದುವರಿಸು. ನಿನಗೆ ಒಳ್ಳೆಯದಾಗಲಿ” ಅವರು ಅವನ ಬೆನ್ನು ತಟ್ಟಿದರು. ಮನದುಂಬಿ ಅವನನ್ನು ಹರಸಿದರು. ಗೋಪುನ ಮುಖ ಅರಳಿತು. ಆದರೆ ಗುರುಗಳಿಗೆ ಏನು ಹೇಳಬೇಕೆಂದೇ ಅವನಿಗೆ ತೋಚಲಿಲ್ಲ. ಗುರುಗಳು ತಮ್ಮ ಕೊಠಡಿ ಸೇರಿದರು. ಮಕ್ಕಳು ಅಲ್ಲಿಂದ ಚದರಿದರು.



ಎಂದಿನಂತೆ, ಶಂಕರ್ ಮತ್ತು ಗೋಪು ಜತೆಗೂಡಿ ನಡೆಯತೊಡಗಿದರು. "ಗೋಪೂ, ನೀನು ಶಾಲೆಗೆ ಫಸ್ಟ್ ಬಂದಿದ್ದೀಯಾ. ನಿನ್ನ ಅಪ್ಪ ಅಮ್ಮ ಬಹಳ ಖುಷಿಪಟ್ಟಾರು. ಅದಿರಲಿ, ನೀನಿನ್ನು ಯಾವ ಶಾಲೆಗೆ ಸೇರುತ್ತೀಯಾ? ಶಂಕರ್ ಗೆಳೆಯನಿಗೆ ಪ್ರಶ್ನೆ ಹಾಕಿದ.

"ಏನು, ನಾನಿನ್ನು ಶಾಲೆಗೆ ಹೋಗುವುದೇ? ಆ ಪುಣ್ಯ ನನಗೆಲ್ಲಿದೆ ಹೇಳು? ನಮ್ಮಪ್ಪ ಮೊನ್ನೆಯೇ ತಾಕೀತು ಮಾಡಿದ್ದಾರೆ." ಗೋಪು ಹೇಳಿದ.

"ಏನೆಂದು?" ಶಂಕರ್ ಕುತೂಹಲ ತೋರಿದ.

"ನಾನಿನ್ನು ಶಾಲೆಗೆ ಹೋಗಲಿಕ್ಕೆ ಎಂದು"

"ಯಾಕೋ, ಅವರು ಯಾಕೆ ಹಾಗೆ ಹೇಳ್ತಾರೆ?"

"ಯಾಕಂದ್ರೇ, ಶಾಲೆಗೆ ಹೋಗಲು ದುಡ್ಡು ಬೇಕಲ್ಲ? ಅದಕ್ಕೆ. ನನ್ನ ಅಪ್ಪನಲ್ಲಿ ದುಡ್ಡು ಎಲ್ಲಿದೆ ಹೇಳು?" ಗೋಪು ಕಾರಣ ತಿಳಿಸಿದ.

"ಏನೋ, ನಿನ್ನಪ್ಪ ಕೆಲಸಕ್ಕೆ ಹೋಗೋದಿಲ್ವ? ಅವರಿಗೆ ಸಂಬಳ ಸಿಗೋದಿಲ್ವಾ? ಆ ದುಡ್ಡನ್ನೆಲ್ಲ ಏನು ಮಾಡ್ತಾರೆ?" ಶಂಕರ್ ವಿಚಾರಿಸಿದ.

"ನನ್ನಪ್ಪ ಹೋಗೋದು ಕೂಲಿ ಕೆಲ್ಸಕ್ಕಲ್ವಾ? ಅದ್ರಲ್ಲೇ ಐದು ಮಂದಿಯ ನಮ್ಮ ಸಂಸಾರ ಸಾಗ್ಬೇಕಲ್ವಾ? ಅಂದಿನ ಸಂಪಾದನೇ ಅಂದಿಗೇ ಸರಿ. ಕೆಲ್ಸ ಸಿಕ್ಕದ ದಿನ ಊಟಕ್ಕೂ ಕಷ್ಟ. ಮತ್ತೆ ಶಾಲೆಗೆ ದುಡ್ಡು ಎಲ್ಲಿಂದ ಬರ್ಬೇಕು? ನನ್ನನ್ನು ಅವರು ಇಷ್ಟು ದಿನ ಶಾಲೆಗೆ ಕಳ್ಸಿದ್ದೇ ಹೆಚ್ಚು" ಗೋಪು ವ್ಯಥೆ ತೋಡಿಕೊಂಡ.

"ಏನೋ, ನಿನ್ನ ಅಮ್ಮ ಕೆಲ್ಸಕ್ಕೆ ಹೋಗೋದಿಲ್ವ?' ಶಂಕರ್ ಕೇಳಿದ. "ಸಣ್ಣ ಮಗು ಉಂಟಲ್ಲ? ಅದನ್ನು ಬಿಟ್ಟು, ಅವನು ಹೇಗೆ ಕೆಲ್ಸಕ್ಕೆ ಹೋಗ್ತಾಳೆ?" ಗೋಪು ಮರುಪ್ರಶ್ನೆ ಹಾಕಿದ.

"ಹೈಸ್ಕೂಲ್ ಮಕ್ಳಿಗೂ ಸಂಬಳ ಇಲ್ಲಾಂತ ಕೇಳಿದ್ದೆನಲ್ಲಾ?

ಇಂಗ್ಲೀಷ್ ಮೀಡಿಯಮ್ ಸ್ಕೂಲಲ್ಲಿ ಮಾತ್ರ ಸಂಬಳ ಕೊಡ್ಲಿಕ್ಕಿದೆ. ಕನ್ನಡ ಶಾಲೆಯಲ್ಲಿ ಇಲ್ಲಾಂತ ಯಾರೋ ಹೇಳಿದ ಹಾಗಿತ್ತು" ಶಂಕರ್ ತಾನು ತಿಳಿದುದನ್ನು ಹೇಳಿದ.

"ಅದು ಹಾಗಲ್ಲ ಶಂಕರ್. ಕನ್ನಡ ಶಾಲೆಯಲ್ಲೂ ನಾವು ಸೇರುವಾಗ ರೂಪಾಯಿ ಮುನ್ನೂರು-ನಾಲ್ಕು ನೂರು ಕಟ್ಲಿಕ್ಕಿದೆ. ನಾನು ವಿಚಾರಿಸಿ ಬಂದಿದ್ದೇನೆ." ಉತ್ತರಿಸಿದ ಗೋಪು.

“ಅಂದ್ರೆ, ನಿಂಗೆ ನಿಜವಾಗ್ಲೂ ಕಲೀಲಿಕ್ಕೆ ಮನಸ್ಸಿದೆ. ದುಡ್ಡಿನ ಕಾರಣಕ್ಕಾಗಿ ಅಪ್ಪು ಒಪ್ಪುತ್ತಿಲ್ಲ? ಹೌದಲ್ಲ?” ಶಂಕರ್ ಕೇಳಿದ.

“ಹೌದು” ಗೋಪು ಒಪ್ಪಿಕೊಂಡ.

“ದುಡ್ಡು ನಾನು ಕೊಡೋ ಹಾಗಿದ್ರೆ, ನೀನು ಹೈಸ್ಕೂಲ್‌ಗೆ ಬರ್ತೀಯಾ? ಅದ್ಕೆ ನಿನ್ನಪ್ಪ ಒಪ್ಪಿಕೊಳ್ತಾರಾ?” ಶಂಕರ್ ಮತ್ತೆ ವಿಚಾರಿಸಿದ.

“ನಾನಂತೂ ಹೈಸ್ಕೂಲ್ ಸೇರಲು ಸಿದ್ಧ ಇದ್ದೇನೆ. ಅಪ್ಪನೂ ಒಪ್ಪಿಕೊಳ್ತಾರೆ. “ದುಡ್ಡು ಇದ್ದಿದ್ರೆ ನಾನೂ ನಿನ್ನ ಶಾಲೆಗೆ ಸೇರ್ಸಿ ಬಿಡ್ತಿದ್ದೆ” ಎಂದು ಅವ್ರೇ ಮೊನ್ನೆ ಹೇಳಿದ್ರು. ಅರ್ದಿಲಿ, ನೀನೂ ನನ್ನ ಹಾಗೆ ಶಾಲೆಗೆ ಹೋಗೋ ಹುಡ್ಗ. ನಿಂಗೆ ದುಡ್ಡು ಎಲ್ಲಿಂದ ಬರ್ಬೇಕು? ಅಷ್ಟು ದುಡ್ಡು ಯಾರು ಕೊಡ್ತಾರೆ ಹೇಳು” ಗೋಪು ವಾದಿಸಿದ.

“ಯಾರು ಕೊಡ್ತಾರೋ ಬಿಡ್ತಾರೋ ಮತ್ತೆ ನೋಡೋಣ.

ದುಡ್ಡಿನ ಏರ್ಪಾಡು ನಾನು ಮಾಡಿದ್ರೆ, ನೀನು ನನ್ ಜೊತೆ ಹೈಸ್ಕೂಲ್‌ಗೆ ಬರ್ತೀಯಾ. ನೆಪ ಹೇಳಿ ಜಾರಿಕೊಳ್ಳೋದಿಲ್ಲ. ಎಲ್ಲಿ, ಭಾಷೆ ಕೊಡು” ಶಂಕರ್ ಕೈ ಮುಂದೆ ಮಾಡಿದ.

“ಹೂಂ ಬರ್ತೀನಿ” ಗೋಪು ಮಾತು ಕೊಟ್ಟ. ಆದರೂ ಅವನಿಗೆ ಶಂಕರ್ ನ ಮಾತಿನಲ್ಲಿ ನಂಬಿಕೆ ಬರಲಿಲ್ಲ. “ಯಾವುದಕ್ಕೂ ದುಡ್ಡು ಬೇಕಲ್ಲಪ್ಪಾ. ಅದಿಲ್ಲದೆ ಕನಸುಕಟ್ಟೋದ್ಯಾಕೆ?” ನಿರಾಸೆಯಿಂದಲೇ ಅವನು ಹೇಳಿದ.. ಅಷ್ಟರಲ್ಲಿ ಅವರು ತಮ್ಮ ಮನೆ ಬಳಿಗೆ ಬಂದಿದ್ದರು. “ಟಾ ಟಾ” ಹೇಳುತ್ತಾ ಅವರು ಪರಸ್ಪರ ಬೀಳ್ಕೊಂಡರು.

* * *

ಶಂಕರ್ ತನ್ನ ಮನೆಬಾಗಿಲಿಗೆ ಬಂದ. ಅವನ ಅಮ್ಮ ಬಾಗಿಲಲ್ಲೇ ನಿಂತಿದ್ದರು. “ಏನೋ ಶಂಕ್ರಾ, ನಿಮ್ಮ ಪರೀಕ್ಷಾ ಫಲಿತಾಂಶ ಗೊತ್ತಾಯ್ತೇ?” ಅವರು ಕೇಳಿದರು.

“ಹೌದಮ್ಮಾ ನಾನು ಪಾಸಾಗಿದ್ದೇನೆ. I ಕ್ಲಾಸ್ ಬಂದಿದೆ. ನಮ್ಮ ಶಾಲಾ ಮಕ್ಕಳು ೧೦೦% ಫಲಿತಾಂಶ ತಂದಿದ್ದಾರೆ. ನಮ್ಮ ಆಚೆಮನೆ ಗೋಪು ಇದ್ದಾನಲ್ಲ? ಅವನು ಮೊದಲ ರ್ಯಾಂಕ್ ಪಡೆದಿದ್ದಾನೆ. ೯೮% ಅಂಕಗಳು ಬಂದಿವೆ ಅವನಿಗೆ” ಶಂಕರ್ ವರದಿ ಒಪ್ಪಿಸಿದ.

“ಹೌದೇ? ಬಹಳ ಸಂತೋಷ. ಅಂತೂ ನೀವೆಲ್ಲರೂ ಪಾಸಾದಿರಲ್ಲ?” ಅಮ್ಮ ತೃಪ್ತಿ ವ್ಯಕ್ತಪಡಿಸಿದರು. ಅಷ್ಟರಲ್ಲೇ ಶಂಕರ್ ನ ಅಪ್ಪ ಮನೆಗೆ ಬಂದರು. “ಶಂಕರ್ ಪಾಸ್ ಅಂತೆ. I ಕ್ಲಾಸ್ ಬಂದಿದೆಯಂತೆ. ಫಸ್ಟ್ ಕ್ಲಾಸಿನಲ್ಲಿ ಪಾಸಾದ್ರೆ ಅವನಿಗೆ ವಾಚ್ ತಂದು ಕೊಡುತ್ತೇನೆ ಎಂದಿದ್ದಿರಲ್ಲ? ಅವನಿಗೆ ಅದನ್ನು ಕೊಡಿಸಿಬಿಡಿ”

ಅಪ್ಪ, ಮಗನಿಗೆ ಕೊಟ್ಟ ಮಾತನ್ನು ಅವರು ನೆನಪಿಸಿದರು. “ಏನು, ಶಂಕರ್ I ಕ್ಲಾಸಿನಲ್ಲಿ ಪಾಸೇನು? ತುಂಬ ಸಂತೋಷ. ನಾಳೆನೇ ಶಂಕರ್ ಹೈಸ್ಕೂಲಿಗೆ ಹೋಗಬೇಕು. ದಾಖಲಾತಿ ಅರ್ಜಿ ನಮೂನೆಯನ್ನು ಅಲ್ಲಿಂದ ಪಡೆದುಕೊಳ್ಳಬೇಕು. ಹೈಸ್ಕೂಲಿಗೆ ಅರ್ಜಿ ಸಲ್ಲಿಸಬೇಕು. ಮುಂದಿನ ವಾರ ನಾನು ಮಂಗಳೂರಿಗೆ ಹೋಗಲಿದ್ದೇನೆ. ಆಗ ವಾಚ್ ತಂದುಕೊಡುತ್ತೇನೆ.” ಕುರ್ಚಿಯಲ್ಲಿ ಕೂಡುತ್ತ, ಹೇಳಿದರು ಅಪ್ಪ.

“ಅಪ್ಪಾ, ನಂಗೆ ಯಾವ ವಾಚ್ ತರ್ತೀರಿ? ಎಷ್ಟು ಬೆಲೆಯದು?” ಶಂಕರ್ ಕೇಳಿದ.

“ಹೆಚ್.ಎಂ.ಟಿ.” ವಾಚ್ ಸಾಕಲ್ಲ? ಬೆಲೆ ಮುನ್ನೂರೋ ನಾಲ್ಕುನೀರೋ ಇರಬೇಕು. ಅಲ್ಲಿ ವಿಚಾರಿಸಿದರೆ ಗೊತ್ತಾದೀತು” ಅವರೆಂದರು.

“ಅಪ್ಪಾ, ನಾನೊಂದು ಮಾತು ಹೇಳ್ತೇನೆ. ನೀವು ಕೋಪಿಸಿಕೊಳ್ಬಾರ್ದು ಮತ್ತೆ”. ಅಪ್ಪನ ಮುಖವನ್ನೇ ನೋಡುತ್ತ, ಹೇಳಿದ ಶಂಕರ್.

“ಏನೋ ಅದು? ಇನ್ನೂ ಹೆಚ್ಚಿನ ಬೆಲೆಯ ವಾಚ್ ಬೇಕೆ? ತರೋಣ, ಅದಕ್ಕೇನಂತೆ?” ಅಪ್ಪ ಅದಕ್ಕೂ ಸಿದ್ಧರಿದ್ದರು.

“ಅಲ್ಲಪ್ಪಾ, ವಾಚ್‌ನ ವಿಷಯವೇ ಇಲ್ಲ. ಅದು…ಅದು ಗೋಪುನ ಬಗ್ಗೆ” ಶಂಕರ್ ತಡವರಿಸಿದ.

“ಏನು? ಗೋಪುನ ಬಗ್ಗೆ! ಏನದು?” ಕೇಳಿದರು ಅಪ್ಪ.

“ಅಪ್ಪಾ ನಮ್ಮ ಗೋಪು ಪರೀಕ್ಷೆಯಲ್ಲಿ ಮೊದಲನೆ ರ್‍ಯಾಂಕ್ ಪಡೆದಿದ್ದಾನೆ . ೯೮% ಅಂಕಗಳು ಬಂದಿವೆ ಅವನಿಗೆ. ಆದರೇನು? “ಹೈಸ್ಕೂಲಿಗೆ ಸೇರಲು ದುಡ್ಡಿಲ್ಲ. ಇನ್ನು ಶಾಲೆ ಸಾಕು” ಎಂದಿದ್ದಾರಂತ ಅವನ ಅಪ್ಪ. ಅದಕ್ಕೆ… ಅದಕ್ಕೆ.. ನೀವು ಅವನಿಗೆ ಸಹಾಯ ಮಾಡ್ತೀರಾ ಅಂತ…’ ತಡೆದು ತಡೆದು ಹೊರಬಂದವು ಅವನ ಮಾತುಗಳು.

“ಏನೋ ಶಂಕರ್, ಊರ ಮಕ್ಕಳಿಗೆಲ್ಲ ನಾವು ಸಹಾಯ ಮಾಡುವುದೇ? ನಮಗದು ಸಾಧ್ಯವೇ?” ಅಪ್ಪ ಕೇಳಿದರು.

“ಅಪ್ಪಾ, ಗೋಪು ನಮ್ಮ ನೆರಮನೆಯವನು, ನನ್ನ ದೋಸ್ತಿ. ತುಂಬ ಜಾಣ ಹುಡುಗ ಅವನು. ಕಲಿಯಲು ಅವನಿಗೆ ಬಹಳ ಆಸೆ ಇದೆ. ಅವನ ಅಪ್ಪನಲ್ಲಿ ದುಡ್ಡಿಲ್ಲ. ಅವನೊಬ್ಬನಿಗೆ ನಾವು ಸಹಾಯ ಮಾಡೋಣ ಅಪ್ಪ. ಹಣವನ್ನೇ ಅವನಿಗೆ ಕೊಟ್ಟರಾಯಿತು. ನಾವಿಬ್ಬರೂ ಒಟ್ಟಿಗೆ ಶಾಲೆಗೆ ಹೋಗುತ್ತೇವೆ. ಒಟ್ಟಿಗೆ ಕಲಿಯುತ್ತೇವೆ. ಅವನು ಜೊತೆಗಿದ್ದರೆ, ನನಗೂ ಸಹಾಯವಾಗುತ್ತದೆ. ಆಗೋದಿಲ್ಲ ಹೇಳ್ಬೇಡಿ ಅಪ್ಪಾ” ಶಂಕರ್ ಅಂಗಲಾಚಿದ.

“ಅವನಿಗೆ ವಾಚ್ ಬೇಡಾಂತ ಅವನೇ ಹೇಳ್ತಿದ್ದಾನಲ್ಲ? ಆ ದುಡ್ಡನ್ನೇ ಗೋಪುಗೆ ಕೊಟ್ಟುಬಿಡಿ. ಆಗ ಶಂಕ್ರುಗೆ ಖುಷಿಯಾಗುತ್ತೆ. ಜಾಣನಾದ ಬಡ ವಿದ್ಯಾರ್ಥಿಗೆ ಸಹಾಯ ಮಾಡಿದಂತೆಯೂ ಆಗುತ್ತೆ” ಅಮ್ಮ ದನಿಗೂಡಿಸಿದರು.



“ಹಾಗೆ ಈ ವರ್ಷಕ್ಕೆ ಹಣಕೊಟ್ಟರೆ ಸಾಕೇ? ಮುಂದಿನ ವರ್ಷ ಕೊಡಬೇಡವೇ?” ಮತ್ತೆ ಬಂತು ಅಪ್ಪನ ಪ್ರಶ್ನೆ.

“ಅಪ್ಪಾ, ಅದಕ್ಕೆ ನಾನೊಂದು ಪರಿಹಾರ ಹೇಳ್ತೇನೆ. ಒಪ್ಪಿಕೊಳ್ತೀರಾ?” ಶಂಕರ್ ಕೇಳಿದ.

“ಏನದು?” ಅಪ್ಪ ವಿಚಾರಿಸಿದರು.

“ಅಪ್ಪಾ, ಹೈಸ್ಕೂಲಿಗೆ ಇಲ್ಲಿಂದ ಐದು ಕಿ.ಮೀ. ದೂರವಿದೆ. ಹೆಚ್ಚಿನ ಮಕ್ಕಳು ಬಸ್ ಹಿಡಿದೇ ಅಲ್ಲಿಗೆ ಹೋಗುತ್ತಾರೆ. ಗೋಪು ಜತೆಗಿದ್ದರು. ನಾವು ನಡೆದುಕೊಂಡೇ ಶಾಲೆಗೆ ಹೋಗುತ್ತೇವೆ. ಆಗ ಬಸ್ಸಿಗಾಗಿ ನನಗೆ ಕೊಡುವ ಹಣ ಉಳಿಯುತ್ತದಲ್ಲ? ಆ ಹಣವನ್ನು ಗೋಪುಗಾಗಿ

ವೆಚ್ಚ ಮಾಡಿದರಾಯಿತು. ದಯವಿಟ್ಟು ಒಪ್ಪಿಕೊಳ್ಳಿ ಅಪ್ಪಾ. ಗೋಪುಗೆ ಅಷ್ಟಾದರೂ ಸಹಾಯ ಮಾಡೋಣ" ಶಂಕರ್ ಮತ್ತೆ ಬೇಡಿಕೊಂಡ. ತನ್ನ ಗೆಳೆಯನಿಗಾಗಿ ಎಷ್ಟು ಕಷ್ಟಪಡಲಿಕ್ಕೂ ಅವನು ಸಿದ್ಧನಾಗಿದ್ದ. ಎಂಥ ತ್ಯಾಗಕ್ಕೂ ಅವನು ಸಜ್ಜಾಗಿದ್ದ.

ಗೆಳೆಯನಿಗಾಗಿಯೇ ಅಲ್ಲವೇ ಅವನು ತನಗೆ ವಾಚ್ ಬೇಡ ಎಂದದ್ದು? ಗೆಳೆಯನಿಗಾಗಿಯೇ ಅಲ್ಲವೇ ಅವನು ದಿನಕ್ಕೆ ಹತ್ತು ಕಿ.ಮೀ. ನಡೆಯುತ್ತೇನೆ ಎಂದದ್ದು? ಗೆಳೆಯನ ಬಗ್ಗೆ ಶಂಕರ್ ಗೆ ಇದ್ದ ಪ್ರೀತಿ ಅಪ್ಪನ ಮನಸ್ಸನ್ನೂ ಮುಟ್ಟಿತು. ಅವರ ಹೃದಯವನ್ನು ತಟ್ಟಿತು. ತಮ್ಮ ಮಗನ ಬಗ್ಗೆ ಅವರು ಹೆಮ್ಮೆಪಟ್ಟರು. ಕ್ಷಣಕಾಲ ಯೋಚಿಸಿ ಅವರು ಹೇಳಿದರು, "ಆಗಲಿ ಮಗೂ, ನೀನು ಹೇಳಿದಂತೆ ಆಗಲಿ. ನೀವಿಬ್ಬರೂ ಚೆನ್ನಾಗಿ ಕಲಿಯಿರಿ. ಗೋಪುಗೆ ಸಹ ನನ್ನಿಂದಾಗುವ ಸಹಾಯ ನಾನು ಮಾಡುತ್ತೇನೆ. ಮುಂದಿನ ಮೂರು ವರ್ಷಗಳ ಕಾಲ ಅವನ ಶಿಕ್ಷಣದ ವೆಚ್ಚ ನಾನು ನೋಡಿಕೊಳ್ಳುತ್ತೇನೆ."

ಅಪ್ಪನ ಒಪ್ಪಿಗೆಯ ಮಾತು ಕೇಳಿ ಶಂಕರ್ ನ ಮುಖ ಅರಳಿತು. ಅವನಿಗೆ ಸಂತೋಷ ಹೇಳತೀರದು. "ಈಗ ಬರ್ತೀನಿ ಅಮ್ಮಾ" ಎನ್ನುತ್ತ ಅವನು ಅಲ್ಲಿಂದ ಓಟಕಿತ್ತ. ಈ ಶುಭವಾರ್ತೆಯನ್ನು ಗೆಳೆಯನಿಗೆ ತಿಳಿಸುವ ತನಕ ಅವನ ಮನಕ್ಕೆ ಸಮಾಧಾನವಿರಲಿಲ್ಲ. ಅರೆಗಳಿಗೆಯೊಳಗೆ ಅವನು ಗೆಳೆಯನ ಮನೆಬಾಗಿಲಿಗೆ ಬಂದಿದ್ದ.

"ಗೋಪೂ, ಏ ಗೋಪೂ" ಶಂಕರ್ ಗಟ್ಟಿಯಾಗಿ ಕೂಗಿದ.

"ಹೂಂ, ಬಂದೇ.." ಎನ್ನುತ್ತ ಗೋಪು ಓಡಿಬಂದ.

"ಏನೋ ಶಂಕರಾ, ಇಷ್ಟು ಬೇಗೆ ಬಂದು ಬಿಟ್ಟೆಯಲ್ಲಾ! ಏನು ವಿಶೇಷ?" ಗೋಪು ವಿಚಾರಿಸಿದ.

"ಗೋಪೂ, ಹೈಸ್ಕೂಲಿಗೆ ನೀನು ಬಂದೇ ಬರ್ತೀಯಾ. ನಿನಗೆ ಸಹಾಯ ಮಾಡಲು ನಮ್ಮಪ್ಪ ಒಪ್ಪಿದ್ದಾರೆ ಕಣೋ. ನಾಳೇನೇ ನಾವು ಹೈಸ್ಕೂಲಿಗೆ ಪ್ರವೇಶ ಪತ್ರ ಒಪ್ಪಿಸೋಣ" ಶಂಕರ್ ಹೇಳಿದ.

"ಏನು, ನಿನ್ನಪ್ಪ ನನಗೆ ಸಹಾಯ ಮಾಡ್ತಾರೆಯೇ? ಮಾಡಿದರೂ ಮುಂದಿನ ಒಂದು ವರ್ಷಕ್ಕೆ ಮಾಡಿಯಾರು. ಮತ್ತೆ?" ಆತಂಕ ವ್ಯಕ್ತಪಡಿಸಿದ ಗೋಪು.

"ಮುಂದಿನ ಮೂರು ವರ್ಷಕ್ಕೂ ಅವರು ಸಹಾಯ ಮಾಡ್ತಾರೆ ಕಣೋ.

ನೀನು ನಂಬಬಹುದು" ಶಂಕರ್ ಭರವಸೆ ನೀಡಿದ.

"ಏನು, ಮೂರು ವರ್ಷವೂ ನಿನ್ನಪ್ಪ ಸಹಾಯ ಮಾಡ್ತಾರೆಯೇ?

ಅಷ್ಟು ದೊಡ್ಡ ಸಹಾಯ?" ಗೋಪು ಕೇಳಿದ. ಗೆಳೆಯನ ಮಾತಿನಲ್ಲಿ ಅವನಿಗೆ ಇನ್ನೂ ನಂಬಿಕೆ ಹುಟ್ಟಿರಲಿಲ್ಲ.

"ನೋಡು ಗೋಪೂ ನಾನು ಫಸ್ಟ್ ಕ್ಲಾಸಿನಲ್ಲಿ ಪಾಸಾದರೆ ೪೦ ರೂಪಾಯಿ ಬೆಲೆಯ ವಾಚ್ ಕೊಡಿಸುವುದಾಗಿ ನನ್ನಪ್ಪ ಹೇಳಿದ್ದರು. ನನಗೆ ವಾಚ್ ಬೇಡ. ಆ ಹಣವನ್ನು ಗೋಪುಗೆ ಕೊಡಿರಿ. ಅವನು ಹೈಸ್ಕೂಲ್ ಸೇರಲಿ" ಎಂದೆ ನಾನು. ಅವರು ಅದಕ್ಕೆ ಒಪ್ಪಿದರು.

"ಗೋಪು ಜೊತೆಗಿದ್ದರೆ ನಾನು ಸಹ ನಡೆದುಕೊಂಡೇ ಶಾಲೆಗೆ ಹೋಗುತ್ತೇನೆ. ಬಸ್ಸಿಗಾಗಿ ನನಗೆ ಕೊಡುವ ಹಣ ಉಳಿಯುತ್ತದಲ್ಲ' ಆ ಹಣವನ್ನೇ ಗೋಪುನ ಮುಂದಿನ ಶಿಕ್ಷಣಕ್ಕೆ ಬಳಸಿಕೊಳ್ಳಿರಿ ಇದರಿಂದ ನನಗೆ ಸಂತೋಷವಾಗುತ್ತದೆ. ಗೋಪುಗೆ ಸಹಾಯವಾಗುತ್ತದೆ. ದಯವಿಟ್ಟು ಒಪ್ಪಿಕೊಳ್ಳಿರಿ" ಎಂದು ನಾನು ಅಪ್ಪನನ್ನು ಬೇಡಿಕೊಂಡೆ. ಅಮ್ಮನೂ ಅದಕ್ಕೆ ದನಿಗೂಡಿಸಿದರು. ಅಪ್ಪ ಒಪ್ಪಿಕೊಂಡರು.

ಇದನ್ನು ನಿನಗೂ ತಿಳಿಸೋಣ ಎಂದು ಓಡಿ ಬಂದೆ. ಶಂಕರ್ ವಿವರಿಸಿದ. ಅವನು ಬಹಳ ಖುಷಿಯಲ್ಲಿದ್ದ. ಉತ್ಸಾಹ ಕಳೆ ಪುಟಿಯುತ್ತಿತ್ತು ಅವನ ಮುಖದಲ್ಲಿ.

"ಅಯ್ಯೋ ನನ್ನಪ್ಪಾ, ನನಗಾಗಿ ನೀನೆಷ್ಟು ತೊಂದರೆ ತೆಗೆದುಕೊಂಡೆಯೋ" ಕಷ್ಟದಲ್ಲಿ ಹೇಳಿ ಮುಗಿಸಿದ ಗೋಪು ಅಷ್ಟರಲ್ಲೇ ಅವನ ಗಂಟಲು ಕಟ್ಟಿಹೋಗಿತ್ತು. ಕಣ್ಣುಗಳು ತುಂಬಿ ಬಂದಿದ್ದವು. ಮಾತು ಮೌನವಾಗಿತ್ತು. ಅವನ ಕೈಗಳು ಮಾತ್ರ ಗೆಳೆಯ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡೇ ಇದ್ದವು.

ದೋಸ್ತಿ ಎಂದರೆ ಹೀಗಿರಬೇಕು. ಅಲ್ಲವೇ?

* * *

# ಸ್ವಾತಂತ್ರ್ಯ ಸುಖ

ಪುಟ್ಟನ ಮನೆ ಇದ್ದುದು ಒಂದು ಹಳ್ಳಿಯಲ್ಲಿ. ಮನೆಯ ಎದುರುಗಡೆ ಅಂಗಳವಿತ್ತು. ಅಂಗಳದ ಇಕ್ಕಡೆಗಳಲ್ಲಿ ಬೆಳೆದು ನಿಂತ ಸಾಲುಮರಗಳಿದ್ದವು. ಅಂಗಳದ ಮುಂದುಗಡೆ ತೋಟವಿತ್ತು. ಮನೆಯ ಸುತ್ತಮುತ್ತ ಬಗೆ ಬಗೆಯ ಹೂಗಿಡ ಬಳ್ಳಿಗಳಿದ್ದವು. ನೋಟ ಹರಿಸಿದಲ್ಲೆಲ್ಲ ಅಲ್ಲಿ ಹಸಿರು ಕಂಗೊಳಿಸುತ್ತಿತ್ತು. ಅಳಿಲಿನ 'ಚೆಕ್ ಚೆವ್', ಹಕ್ಕಿಗಳ ಚಿಲಿಪಿಲಿ ಆಗಾಗ ಕೇಳಿಬರುತ್ತಿತ್ತು.

ಒಂದು ಸಂಜೆ ಪುಟ್ಟ ಮನೆಯ ಅಂಗಳದಲ್ಲಿ ಆಡುತ್ತಿದ್ದ. ಅಕ್ಕ ಸ್ವಾತಿ ಜೊತೆಗಿದ್ದಳು. ಆಟ ಜೋರಾಗಿ ಸಾಗಿತ್ತು. ಆಗಲೇ ಹತ್ತಿರದ ಮರದಿಂದ ವಸ್ತುವೊಂದು ಕೆಳಗೆ ಬಿದ್ದಂತೆ ಕಂಡಿತು. ಕ್ಷಣದೊಳಗೆ ಕಾಗೆಯೊಂದು ಹಾರಿ ಬಂತು. 'ಕಾ ಕಾ' ಎಂದು ಕೂಗಿತು. ಅಲ್ಲಿ ಬಿದ್ದಿದ್ದ ಏನನ್ನೋ ಎತ್ತಿಕೊಂಡು, ಹಾರಿಹೋಯಿತು. ಪುಟ್ಟ ಇದನ್ನು ನೋಡುತ್ತಲೇ ಇದ್ದ. ಅವನ ಕುತೂಹಲ ಕೆರಳಿತು. ಅವನು ಅತ್ತ ಓಡಿದ. ಸುತ್ತ ಒಮ್ಮೆ ಕಣ್ಣಾಡಿಸಿದ. ಉಣ್ಣೆಯ ಚೆಂಡಿನಂಥ ವಸ್ತುವೊಂದು ಅಲ್ಲಿತ್ತು. ಪುಟ್ಟ ಬಗ್ಗಿ ನೋಡಿದ. ಅದು ಪುಟಾಣಿ ಅಳಿಲ ಮರಿ ಎನ್ನುವುದು ಅವನಿಗೆ ತಿಳಿಯಿತು. ಕೆಳಕ್ಕೆ ಬಿದ್ದು ಅದಕ್ಕೆ ಪೆಟ್ಟಾಗಿರಬೇಕು. ಆದರೆ ಅದು ಸತ್ತಿರಲಿಲ್ಲ. ಅದರ ದೇಹ ನಡುಗುತ್ತಿತ್ತು.

"ಅಕ್ಕಾ, ಅಕ್ಕಾ, ಇಲ್ಲಿ ಬಾ. ಇಲ್ಲೊಂದು ಅಳಿಲ ಮರಿ ಬಿದ್ದುಕೊಂಡಿದೆ. ಬೇಗ ಬಾ" ಪುಟ್ಟ ಕೂಗಿ ಹೇಳಿದ. ಅಕ್ಕ ಅವನ ಬಳಿಗೆ ಓಡಿ ಬಂದಳು. "ಆಗ ಎರಡು ಮರಿಗಳು ಕೆಳಗೆ ಬಿದ್ದಿರಬೇಕು. ಒಂದನ್ನು ಕಾಗೆ ಒಯ್ದಿರಬೇಕು. ಇದೊಂದು ಇಲ್ಲಿ ಉಳಿದಿದೆ" ಪುಟ್ಟ ವಿವರಿಸಿದ.

ಸ್ವಾತಿ, ಅಳಿಲ ಮರಿಯನ್ನು ನೋಡಿದಳು. ನಡುಗುತ್ತಲೇ ಅದು ನೆಲದಲ್ಲಿ ಬಿದ್ದುಕೊಂಡಿತ್ತು. "ಅಯ್ಯೋ ಪಾಪ! ಅದಕ್ಕೆ ಎಷ್ಟು ನೋವಾಗಿತ್ತೋ ಏನೋ" ಎಂದಳು ಅವಳು. "ಈಗ ಏನು ಮಾಡೋಣ? ಇಲ್ಲೇ ಬಿಟ್ಟರೆ ಇದನ್ನೂ ಕಾಗೆ ಒಯ್ದು ಬಿಟ್ಟೀತು" ತಮ್ಮ ಕೇಳಿದ. ಮಕ್ಕಳಿಬ್ಬರೂ ಯೋಚಿಸತೊಡಗಿದರು. ಅಳಿಲ ಮರಿಯ ಮೇಲೆ ಅವರಿಗೆ ಕರುಣೆ ಮೂಡಿತ್ತು. ಅದನ್ನು ಮನೆಗೆ ಒಯ್ಯಲು ಅವರು ನಿರ್ಧರಿಸಿದರು. ಆದರೆ ಹೇಗೆ ಒಯ್ಯಬೇಕು? ಯಾವ ರೀತಿಯಲ್ಲಿ? ಅದೇ ಅವರಿಗೊಂದು ಸಮಸ್ಯೆಯಾಯಿತು. ಅವರು ಯೋಚನೆಗೆ ಒಳಗಾದರು. ಆಗ ಪುಟ್ಟನಿಗೊಂದು ಉಪಾಯ ಹೊಳೆಯಿತು.

ತತ್‌ಕ್ಷಣ ಪುಟ್ಟ ಮನೆಗೆ ಓಡಿದ, ರಟ್ಟಿನ ತುಂಡು ಒಂದನ್ನು ಹುಡುಕಿ ತಂದ; ಅಳಿಲ ಮರಿಯನ್ನು ಮೆಲ್ಲನೆ ಎತ್ತಿ, ರಟ್ಟಿನ ಮೇಲೆ ಇರಿಸಿದ; ಎಚ್ಚರಿಕೆಯಿಂದ ಮರಿಯನ್ನು ತನ್ನ ಮನೆಗೆ ತಂದ.

"ಅಮ್ಮಾ, ನೋಡಮ್ಮಾ, ಅಳಿಲ ಮರಿಯೊಂದು ಮರದಿಂದ ಕೆಳಕ್ಕೆ ಬಿತ್ತು. ಇದರ ಜೊತೆಯನ್ನು ಕಾಗೆ ಹೊತ್ತು ಒಯ್ದಿತು. ಇದು ಅಲ್ಲೇ ಇದ್ದರೆ ಕಾಗೆಯ ಬಾಯಿಗೆ ಬೀಳುತ್ತದೆ. ಅದಕ್ಕಾಗಿಯೇ ನಾವಿದನ್ನು ಮನೆಗೆ ತಂದೆವು. ಹೇಳಮ್ಮಾ, ಇದನ್ನು ನಾವು ಎಲ್ಲಿಡಬೇಕು? ಅವನು ಅಮ್ಮನನ್ನು ಕೇಳಿದ.



ಅಮ್ಮ ಅಳಿಲ ಮರಿಯನ್ನು ನೋಡಿದರು. "ಅಯ್ಯೋ, ತೀರಾ ಪುಟ್ಟ ಮರಿ ಇದು. ಇದನ್ನು ಏನು ಮಾಡುತ್ತೀರಿ? ಎಲ್ಲಿ ಇಡುತ್ತೀರಿ? ಹೇಗೆ ಸಾಕುತ್ತೀರಿ? ನಾಯಿ - ಬೆಕ್ಕುಗಳಿಂದ ಇದನ್ನು ಹೇಗೆ ರಕ್ಷಿಸುತ್ತೀರಿ? ಅಮ್ಮ ಪೇಚಾಡಿಕೊಂಡರು.

"ಹಾಗಾದರೆ ನಾವೇನು ಮಾಡಬೇಕಿತ್ತು? ಇದನ್ನು ಅಲ್ಲೇ ಸಾಯಲು ಬಿಡಬೇಕಿತ್ತೇ?" ದನಿ ಏರಿಸಿ ಕೇಳಿದಳು ಸ್ವಾತಿ. ಅವಳಿಗೆ ಕೋಪ ಬಂದಿತ್ತು. ಮಕ್ಕಳಿಗೆ ಏನು ಹೇಳಲಿ ಎನ್ನುವುದು ಅಮ್ಮನಿಗೂ ತಿಳಿಯದಾಯಿತು. ಅವರು ಸಹ ಯೋಚನೆಗೆ ಒಳಗಾದರು. ಅಷ್ಟರಲ್ಲಿ ಅವರ ಹಿರಿಯ ಮಗ ರಮೇಶನ ಪ್ರವೇಶವಾಯಿತು.

"ಅರೆ, ನೀವೆಲ್ಲ ಇದೇನು ಹೀಗೆ ನಿಂತು ಬಿಟ್ಟಿದ್ದೀರಿ?" ಆಶ್ಚರ್ಯದಿಂದ ಅವನು ಕೇಳಿದ. ಆಗಲೇ ಎದುರಿಗಿದ್ದ ಪುಟ್ಟ ಅಳಿಲ ಮರಿ ಅವನ ಕಣ್ಣಿಗೆ ಬಿತ್ತು. "ಅಯ್ಯೋ, ಈ ಚಿಕಣಿ ಮರಿ ಎಲ್ಲಿತ್ತು? ಯಾರು ತಂದರು ಇದನ್ನು?" ಅವನು ಮತ್ತೆ ವಿಚಾರಿಸಿದ. ನಡೆದ ಸಂಗತಿಯನ್ನೆಲ್ಲ ಅಮ್ಮ ವಿವರಿಸಿ ಹೇಳಿದರು. "ನೀನಾದ್ರೂ ಹೇಳೋ ರಮೇಶಾ, ಈ ಪುಟ್ಟ ಮರಿಯನ್ನು ಎಲ್ಲಿ ಇರಿಸುವುದು? ಹಾಲು ಕುಡಿಯಲಿಕ್ಕೂ ತಿಳಿಯದ ಮರಿಯಿದು. ಇದನ್ನು ಹೇಗೆ ಬದುಕಿಸುವುದು?" ಅಮ್ಮ ಕೇಳಿದರು.

"ಮುಚ್ಚಳವಿರುವ ಸರಿಗೆಯ ಬುಟ್ಟಿ ಇದೆಯಲ್ಲ? ಅದರಲ್ಲಿ ಹತ್ತಿಯನ್ನೊ ಬಟ್ಟೆಯನ್ನೊ ಹರಡಬೇಕು, ಮರಿಯನ್ನು ಒಳಗಡೆ ಇರಿಸಬೇಕು. ಮೇಲುಗಡೆಗೆ ಮುಚ್ಚಳ ಮುಚ್ಚಿ, ಬುಟ್ಟಿಯನ್ನು ಎತ್ತರದಲ್ಲಿ ತೂಗುಹಾಕಬೇಕು. ಆಗ ಏನೂ ತೊಂದರೆಯಾಗದು" ಸಮಸ್ಯೆಗೊಂದು ಪರಿಹಾರ ಸೂಚಿಸಿದ ರಮೇಶ.

'ಹೌದಮ್ಮಾ ಅಣ್ಣ ಹೇಳಿದ್ದೇ ಸರಿ. ಹಾಗೇ ಮಾಡೋಣ' ಮಕ್ಕಳೂ ದನಿಗೂಡಿಸಿದರು.

"ಅಂತೂ ಒಂದು ಸಮಸ್ಯೆ ಪರಿಹಾರವಾಯಿತು. ಆದರೆ ಇನ್ನೊಂದು ಇದೆಯಲ್ಲ? ಈ ಮರಿಗೆ ಹಾಲು ಕುಡಿಸುವ ಬಗೆ ಹೇಗೆ? ಯಾರು ಕುಡಿಸುವುದು? ಯಾವ ರೀತಿಯಲ್ಲಿ?" ಮತ್ತೆ ಬಂತು ಅಮ್ಮನ ಪ್ರಶ್ನೆ.

"ಅಕ್ಕ ಇದರ ಬಾಯಿ ಅಗಲಿಸಿ ಹಿಡಿಯಲಿ. ಚಮಚದಲ್ಲಿ ನಾನು ಹಾಲು ಹೊಯ್ಯುತ್ತೇನೆ" ಪುಟ್ಟ ತನ್ನ ಸಲಹೆ ನೀಡಿದ.

"ಅಯ್ಯಯ್ಯೋ, ಅದು ನನ್ನಿಂದಾಗದು. ನೀನು ಅದರ ಬಾಯಿ ಅಗಲಿಸಿ ಹಿಡಿ. ಹಾಲು ನಾನು ಹೊಯ್ಯುತ್ತೇನೆ." ಸ್ವಾತಿ ತಿದ್ದುಪಡಿ ಸೂಚಿಸಿದಳು.

“ಮೊದಲು ಆ ಸರಿಗೆಯ ಬುಟ್ಟಿಯನ್ನು ಇಲ್ಲಿ ತನ್ನಿ. ಈ ಮರಿಯನ್ನು ಸುರಕ್ಷಿತವಾಗಿ ಅದರಲ್ಲಿ ಇರಿಸಿಬಿಡಿ. ಮತ್ತೆ ಇದಕ್ಕೆ ಹಾಲು ಕುಡಿಸುವ ವಿಚಾರ ಯೋಚಿಸದರಾಯಿತು” ರಮೇಶ ಹೇಳಿದ. ಸ್ವಾತಿ ಒಳಗೆ ಹೋಗಿ, ಸರಿಗೆಯ ಬುಟ್ಟಿ ತಂದಳು. ಅಮ್ಮ ತನ್ನ ಹಳೆಯ ಸೀರೆಯ ತುಂಡನ್ನು ತಂದು, ಅದನ್ನು ಮಡಚಿಕೊಟ್ಟರು. ಸ್ವಾತಿ ಅದನ್ನು ಬುಟ್ಟಿಯೊಳಗೆ ಹರಡಿದಳು. ಒಡನೆ ಪುಟ್ಟ ಅಳಿಲ ಮರಿಯನ್ನು ಮೆಲ್ಲನೆ ಎತ್ತಿ, ಬುಟ್ಟಿಯೊಳಗೆ ಇರಿಸಿದ. ರಮೇಶ ಬುಟ್ಟಿಯ ಮುಚ್ಚಳವನ್ನು ಮುಚ್ಚಿ, ಮೇಲುಗಡೆಯ ಜಂತಿಗೆ ಅದನ್ನು ತೂಗ ಹಾಕಿದ.

“ನನಗೆ ಕೆಲಸವಿದೆ. ನಾನಿನ್ನು ಬರುತ್ತೇನೆ.” ಎನ್ನುತ್ತ ಅವನು ಅಲ್ಲಿಂದ ಹೊರಟುಹೋದ.

ಇನ್ನೂ ಒಂದು ಸಮಸ್ಯೆ ಉಳಿದು ಬಿಟ್ಟಿತಲ್ಲ? ಈ ಪುಟ್ಟ ಮರಿಗೆ ಹಾಲುಣಿಸುವ ಬಗೆ ಹೇಗೆ? ಇದರ ಬಗ್ಗೆ ಉಳಿದವರ ಯೋಚಿಸತೊಡಗಿದರು.

“ತಾಯಿ ಅಳಿಲಿನ ಮೊಲೆಗೆ ಬಾಯಿ ಹಾಕಿ ಹಾಳು ಚೀಪುವುದು ಮಾತ್ರ ಈ ಮರಿಗೆ ಗೊತ್ತಿರಬಹುದು’ ಅಮ್ಮ ಅಭಿಪ್ರಾಯ ಸೂಚಿಸಿದರು.

“ಅಣ್ಣನಲ್ಲಿ ಪೆನ್ನಿಗೆ ಶಾಯಿ ತುಂಬಿಸುವ ಹಳೆಯ ಫಿಲ್ಲರ್ ಇರಬಹುದಲ್ಲ? ಅದರಲ್ಲಿ ಹಾಲು ತುಂಬಿಸೋಣ. ಅದರ ತುದಿ ಸ್ವಲ್ಪ ಹತ್ತಿಯನ್ನು ಸಿಕ್ಕಿಸಿ, ಅಳಿಲ ಮರಿಯ ಮೂತಿಗೆ ತಾಗಿ ಇರಿಸೋಣ. ಫಿಲ್ಲರನ್ನು ತುಸು ಒತ್ತಿದರೆ, ಒಳಗಿನ ಹಾಲು ತಟಕು ತಟಕಾಗಿ ಹೊರಬರುವುದು. ಆಗ ಮರಿ ಅದನ್ನು ಚೀಪುವುದು ನೋಡೋಣ” ಸ್ವಾತಿ ಸಲಹೆ ನೀಡಿದಳು.

“ಹಾಂ, ಹೌದು, ಅದೇ ಸರಿಯಾದ ಉಪಾಯ” ಪುಟ್ಟನು ಒಪ್ಪಿಕೊಂಡ. ಕೂಡಲೇ ಅಳಿಲ ಮರಿಗೆ ಹಾಲು ಕುಡಿಸುವ ಪ್ರಯೋಗ ಅವರು ಸಿದ್ಧತೆ ನಡೆಸಿದರು. ಬಹಳ ಪ್ರಯತ್ನದ ಬಳಿಕ ಅವರ ಪ್ರಯೋಗ ಯಶಸ್ವಿಯಾಯಿತು. ಚೇತರಿಸಿಕೊಂಡ ಅಳಿಲ ಮರಿ, ನಿಧಾನವಾಗಿ ಹಾಲು ಚೀಪತೊಡಗಿತು. ಮಕ್ಕಳಿಗೆ ಎದುರಾದ ಸಮಸ್ಯೆಯೊಂದು ಹೀಗೆ ಪರಿಹಾರ ಕಂಡಿತು.

ಅಂದಿನಿಂದ ಸ್ವಾತಿ ಮತ್ತು ಪುಟ್ಟ, ಅಳಿಲ ಮರಿಯ ಆರೈಕೆಗೆ ನಿಂತರು, ಪ್ರೀತಿಯಿಂದ ಅದನ್ನು ನೋಡಿಕೊಂಡರು. ಮೊದಲಿಗೆ ಹಾಲು ಮಾತ್ರ ಅದಕ್ಕೆ ಸಾಕಾಗುತ್ತಿತ್ತು. ಮತ್ತೇನನ್ನೂ ಅದು ಸೇವಿಸುತ್ತಿದ್ದಿಲ್ಲ. ಮುಂದೆ ಕ್ರಮೇಣ ಅದು ಬಾಳೆಹಣ್ಣು, ಮಾವಿನ ಹಣ್ಣು ಇತ್ಯಾದಿಗಳನ್ನೂ ತಿನ್ನತೊಡಗಿತು. ದಿನದಿಂದ ದಿನಕ್ಕೆ ಅದು ಬೆಳೆದು ದೊಡ್ಡದಾಯಿತು. ಅದಕ್ಕೆ ಹಾಲು - ಹಣ್ಣು ಕೊಡುವ ಕೆಲಸ, ಹೊಲಸಾದಾಗ ಅದರ ಗೂಡನ್ನು (ಬುಟ್ಟಿ) ಸ್ವಚ್ಛ ಮಾಡುವ ಕೆಲಸ ಎಲ್ಲವನ್ನೂ ಮಕ್ಕಳು ನೋಡಿಕೊಂಡರು. ಅಳಿಲಿನ ಒಡನಾಟ ಅವರಿಗೆ ಖುಷಿಕೊಡುತ್ತಿತ್ತು. ಆ ಮರಿ ಸಹ ಮಕ್ಕಳ ಬಗ್ಗೆ ಪ್ರೀತಿಯನ್ನು ಬೆಳೆಸಿಕೊಂಡಿತು. ಅವರ ದನಿ ಕೇಳಿದರೆ ಸಾಕು, ಅದು ಎದ್ದು ಬರುತ್ತಿತ್ತು, ಗೂಡಿನ ಬಾಗಿಲು ತೆರೆದೊಡನೆ, ಅವರ ಹೆಗಲಿಗೆ ಅದು ಜಿಗಿಯುತ್ತಿತ್ತು. ತಲೆಯ ಮೇಲಕ್ಕೂ ಏರುತ್ತಿತ್ತು. ಆಗ ಅವರಿಗೆ ಕಚಗುಳಿ ಇಟ್ಟಂತೆ ಆಗುತ್ತಿತ್ತು. ಹೀಗೆ ಅಳಿಲ ಮರಿ ಮತ್ತು ಮಕ್ಕಳ ಒಡನಾಟ ಮುಂದುವರಿಯಿತು. ನಾಯಿ-ಬೆಕ್ಕುಗಳು ಅಳಿಲ ಮರಿಯ ಬಳಿಗೆ ಬರದಂತೆ ಮಕ್ಕಳು ಎಚ್ಚರಿಕೆ ವಹಿಸುತ್ತಿದ್ದರು. ಶಾಲೆಗೆ ಹೋಗುವ ಮೊದಲು ಅದನ್ನು ಗೂಡಿನೊಳಗೆ ಇರಿಸಿ, ಮುಚ್ಚಳ ಹಾಕಲು ಅವರು ಮರೆಯುತ್ತಿರಲಿಲ್ಲ.

ಒಂದು ದಿನ ಸ್ವಾತಿ ಮತ್ತು ಪುಟ್ಟ ಶಾಲೆಯಿಂದ ಮನೆಗೆ ಹಿಂದಿರುಗುತ್ತಿದ್ದರು. ದಾರಿ ಸಾಗುತ್ತಿದ್ದಂತೆ ಅವರೊಳಗೆ ಭಾರೀ ಚರ್ಚೆಯೊಂದು ನಡೆಯುತ್ತಿತ್ತು. “ಅಳಿಲ ಮರಿ ಈಗ ದೊಡ್ಡದಾಗಿದೆ. ಅದನ್ನು ನಮ್ಮ ತೋಟದಲ್ಲಿ ಬಿಟ್ಟು ಬಿಡೋಣ. ಇನ್ನು ಅದು ಸ್ವತಂತ್ರವಾಗಿ ಬದುಕಲಿ” ಸ್ವಾತಿ ಹೇಳುತ್ತಿದ್ದಳು.

“ನಿನಗೆ ಸೋತು ಹೋಗಿದ್ದರೆ ಹೇಳು. ನೀನಿನ್ನು ಅದರ ಕೆಲಸ ಮಾಡಬೇಕಿಲ್ಲ. ನಾನೊಬ್ಬನೇ ಮಾಡುತ್ತೇನೆ. ಅದು ನನಗೆ ಬೇಕು ಪುಟ್ಟ ವಾದಿಸುತ್ತಿದ್ದ. ಬಹಳ ಹೊತ್ತು ಅವರೊಳಗೆ ವಾಗ್ವಾದ ನಡೆದಿತ್ತು. ಕೊನಗೆ “ಅಮ್ಮನನ್ನು ಕೇಳೋಣ. ಅವರು ಹೇಳಿದಂತೆ ಮಾಡೋಣ” ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದರು.

ಅಂದು ಮನೆಯ ಮೆಟ್ಟಲು ಏರುತ್ತಿದ್ದಂತಯೇ ಸ್ವಾತಿ ಅಮ್ಮನನ್ನು ಕರೆದಳು. "ಅಮ್ಮಾ, ನಮ್ಮ ಅಳಿಲ ಮರಿ ಈಗ ದೊಡ್ಡದಾಗಿದೆ. ಅದಕ್ಕೆ ನಮ್ಮ ಸಹಾಯ ಅಗತ್ಯವಿಲ್ಲ. ಇನ್ನು ಅದನ್ನು ಬಿಟ್ಟು ಬಿಡೋಣವೇ?" ಅವಳು ಕೇಳಿದಳು.

ಮಗಳ ಮಾತು ಕೇಳಿ ಅಮ್ಮನಿಗೆ ಆಶ್ಚರ್ಯವಾಯಿತು. ಮಗಳು ಇಂದು ಹೀಗೇಕೆ ಹೇಳುತ್ತಿದ್ದಾಳೆ ಎನ್ನುವುದು ಅವರಿಗೆ ಅರ್ಥವಾಗಲಿಲ್ಲ. ಅವಳ ಯೋಚನೆಯಂತೂ ಸರಿಯಾದುದೇ. ಕೆಲವು ಸಮಯದ ಹಿಂದೆಯೇ ಅವರು ಹಾಗೆ ಯೋಚಿಸಿದ್ದರು. ಅಳಿಲಿನ ಬಗ್ಗೆ ಮಕ್ಕಳಿಗಿರುವ ಪ್ರೀತಿಯನ್ನು ತಿಳಿದು, ಅವರು ಹಿಂಜರಿದಿದ್ದರು ಅಷ್ಟೇ. ಈಗ ಅವರಿಗೆ ಸಂತೋಷವೇ ಆಯಿತು. "ಒಳ್ಳೆಯದು. ಹಾಗೇ ಮಾಡೋಣ. ಅಳಿಲನ್ನು ಬಿಟ್ಟು ಬಿಡೋಣ." ಅವರು ಹೇಳಿದರು ಮತ್ತೆ ತುಸು ತಡೆದು," ಅದಿರಲಿ, ಇಂದು ಈ ಯೋಚನೆ ಏಕೆ ಬಂತು? ಹೇಗೆ ಬಂತು?" ಅವರು ಕೇಳಿದರು.

"ಅಮ್ಮಾ, ಇಂದು ನಮ್ಮ ಟೀಚರ್ "ಪಂಜರ ಪಕ್ಷಿ" ಕವನ ಓದಿದರು. ಪಂಜರದ ಬಂಧನದಲ್ಲಿದ್ದ ಪಕ್ಷಿಯ ಕೊರಗನ್ನು ಮನಮುಟ್ಟುವಂತೆ ಅವರು ವಿವರಿಸಿದರು. "ಪ್ರತಿಯೊಂದು ಜೀವಿಯೂ ಸ್ವಾತಂತ್ರ್ಯವನ್ನು ಪ್ರೀತಿಸುತ್ತದೆ. ಮೃಗ ಪಕ್ಷಿಗಳು ಸಹ ಸ್ವತಂತ್ರವಾಗಿರಲು ಬಯಸುತ್ತವೆ. ಬಂಧನಕ್ಕೆ ಒಳಗಾದಾಗ ಅವು ತಮ್ಮ ಸ್ವಾತಂತ್ರ್ಯದಿಂದ ವಂಚಿತವಾಗುತ್ತವೆ. ತಮ್ಮ ಬಳಗದ ಸಹವಾಸ ಸುಖವನ್ನು ಕಳೆದುಕೊಳ್ಳುತ್ತವೆ. ಹಾಗಾಗಿ ಆಹಾರ, ಆಶ್ರಯ ಸಿಕ್ಕಿದರೂ, ಬಂಧನದಲ್ಲಿ ಅವು ಕೊರಗುತ್ತಲೇ ಇರುತ್ತವೆ" ಎಂದರು ಅವರು. ಹಾಗಾಗಿ ನಾನು ಈ ತೀರ್ಮಾನಕ್ಕೆ ಬಂದೆ. ನಮ್ಮ ಅಳಿಲಿಗೂ ಸ್ವಾತಂತ್ರ್ಯ ಕೊಟ್ಟು ಬಿಡೋಣ. ಆಗದೆ ಅಮ್ಮಾ?" ಅವಳು ಇನ್ನೊಮ್ಮೆ ಕೇಳಿದಳು.



"ನನ್ನ ಸಂಪೂರ್ಣ ಒಪ್ಪಿಗೆ ಇದೆ ಮಗೂ. "ನಮ್ಮ ಮಕ್ಕಳು ಅಳಿಲ ಮರಿಯನ್ನು ಬದುಕಿಸಿ ಒಳ್ಳೆಯ ಕೆಲಸ ಮಾಡಿದರು. ಅದು ಸಂತೋಷದ ಸಂಗತಿ. ಆದರೆ ಈಗ ಅಳಿಲು ದೊಡ್ಡದಾಗಿದೆ. ಇನ್ನೆಷ್ಟು ದಿನ ಅದನ್ನು ಬಂಧಿಸಿ ಇರಿಸುವುದು?" ಎಂದು ಮೊನ್ನೆ ಅಪ್ಪನೂ ಕೇಳುತ್ತಿದ್ದರು" ಎಂದರು ಅಮ್ಮ.

ಇವರ ಸಂಭಾಷಣೆ ಪುಟ್ಟನನ್ನು ರೇಗಿಸಿತು. "ಅಮ್ಮಾ ಅಳಿಲಿನ ಎಲ್ಲ ಕೆಲಸಗಳನ್ನೂ ನಾನು ಮಾಡುತ್ತೇನೆ. ಬೇರೆ ಯಾರೂ ಮಾಡಬೇಕಾಗಿಲ್ಲ. ಅಳಿಲು ನನಗೆ ಬೇಕು" ಅವನು ಅಸಮ್ಮತಿ ಸೂಚಿಸಿದ.

"ಪುಟ್ಟಾ, ನೀನು ಅಳಿಲಿನ ಸೇವೆ ಮಾಡುತ್ತೀ ನಿಜ. ಆದರೆ ಅದನ್ನು ಜೈಲಿನಲ್ಲೇ ಇರಿಸುತ್ತೀಯಲ್ಲ? ಇದರಿಂದ ಅಳಿಲಿಗೆ ಸಂತೋಷವಾಗುತ್ತದೆಯೇ? ಸಾಯುವ ತನಕವೂ ಅದು ಬಂಧನದಲ್ಲೇ ಕೊಳೆಯಬೇಕೇ? ಅದರ ಸ್ಥಾನದಲ್ಲಿ ನೀನೇ ಇದ್ದರೆ, ಹೇಗಾದೀತು ನಿನಗೆ? ಯೋಚಿಸಿ ನೋಡು" ಮಗನಿಗೆ ಅಮ್ಮ ಬುದ್ಧಿ ಹೇಳಿದರು.

"ನಾವು ಒಂದು ಕೆಲಸ ಮಾಡೋಣ. ಮನೆಯ ಪಕ್ಕದ ಮರದಲ್ಲಿ ಅಳಿಲುಗಳು ಆಗಾಗ ಕೂಗುತ್ತ ಇರುತ್ತವೆ. ಅಂಥ ಹೊತ್ತಿನಲ್ಲಿ, ನಮ್ಮ ಅಳಿಲನ್ನೂ ಮರದ ಬುಡದಲ್ಲಿ ಬಿಟ್ಟು ಬಿಡೋಣ. ಅದು ಹಿಂದೆ ಮನೆಗೆ ಬಂದರೆ, ಅದನ್ನು ನಾವೇ ಇರಿಸಿಕೊಳ್ಳೋಣ. ಮರದ ಮೇಲೇರಿ ಅದು ಅಲ್ಲಿದ್ದ ಅಳಿಲುಗಳನ್ನು ಸೇರಿಕೊಂಡರೆ, ನಾವು ಅದರ ಆಸೆ ಬಿಟ್ಟು ಬಿಡೋಣ." ಸ್ವಾತಿ ಒಂದು ಪರಿಹಾರ ಸೂಚಿಸಿದಳು.

"ಇದು ಸರಿಯಾದ ಮಾತು.  ಇದನ್ನು ಒಪ್ಪಿಕೊಳ್ಳೋಣ. ಪುಟ್ಟ ಅಳಿಲಿಗೆ ನಾವು ಹಾಲು ಹಣ್ಣು ಕೊಟ್ಟರೆ ಸಾಕೇ? ಅದಕ್ಕೂ ಸ್ವಾತಂತ್ರ್ಯ ಸಿಗಬೇಡವೇ? ದಿನವೂ ಅದು ಕೊರಗುತ್ತಿದ್ದರೆ ನಮಗೆ ಸಂತೋಷವೇ? ಅದಕ್ಕೆ ನಿನ್ನ ಸ್ನೇಹವೇ ಬೇಕಿದ್ದರೆ ಅದು ಹಿಂದೆ ಬರಲಿ, ಸ್ವಾತಂತ್ರ್ಯ ಬೇಕಿದ್ದರೆ ಹೊರಟು ಹೋಗಲಿ. ಒಂದು ವೇಳೆ ಅದು ಹಿಂದೆ ಬಂದರೆ, ಅದನ್ನು ನೀನೇ ಸಾಕುವೆಯಂತೆ. ಆಗದೆ ಪುಟ್ಟಾ?" ಅಮ್ಮಾ ಸಮಾಧಾನ ಹೇಳಿದರು. ಕೊನೆಗೆ ಅರೆಮನಸ್ಸಿನಿಂದಲೇ ಪುಟ್ಟ ಇದಕ್ಕೆ ಒಪ್ಪಿಗೆ ನೀಡಿದ.

ತುಸು ಹೊತ್ತು ಕಳೆಯಿತು. ಆಗಲೇ ಮರದ ಮೇಲಿಂದ ಅಳಿಲಿನ ಕೂಗು ಕೇಳಿ ಬಂತು. ಸ್ವಾತಿ ಮತ್ತು ಪುಟ್ಟ ಗೂಡಿನ ಬಳಿಗೆ ಬಂದರು. ಗೂಡನ್ನು ಮರದ ಬಳಿ ಇರಿಸಿ , ಅದರ ಮುಚ್ಚಳ ತೆಗೆದರು;  ಅಳಿಲಿಗೊಂದು ಮುದ್ದುಕೊಟ್ಟು ಅದನ್ನು ಮರದ ಕೊಂಬೆಯ ಮೇಲೆ ಇರಿಸಿದರು. ಮರದ ಮೇಲಿನ ಅಳಿಲು ಕೂಗುತ್ತಲೇ ಇತ್ತು . ಕೆಳಗಿದ್ದ ಅಳಿಲಿಗೂ ಅದು ಕೇಳಿಸಿತು. ಅದು ತಡಮಾಡಲಿಲ್ಲ. ಸರಸರನೆ ಮರ ಹತ್ತಿತು. ಅರ್ಧದಷ್ಟು ಮೇಲೇರಿದ ಅದು, ಒಮ್ಮೆ ಮಕ್ಕಳತ್ತ ನೋಡಿತು. ಮತ್ತೆ ಮುಂದುವರಿದು, ಮರದಲ್ಲಿದ್ದ ಅಳಿಲನ್ನು ಕೂಡಿಕೊಂಡಿತು; ಮರದ ಹಸುರೆಲೆಗಳ ಮಧ್ಯೆ ಕಣ್ಮರೆಯಾಯಿತು.

"ನಿಜ ಅಮ್ಮಾ. ಅಳಿಲಿಗೂ ಸ್ವಾತಂತ್ರ್ಯ ಬೇಕಿತ್ತು. ನನ್ನನ್ನು ಬಿಟ್ಟು ಅದು ಹೊರಟೆ ಹೋಯಿತು" ಪುಟ್ಟ ಹೇಳಿದ. ಅವನ ಮುಖಬಾಡಿತ್ತು, ಮುಖ್ಯವಾದ ಏನನ್ನೋ ಕಳೆದುಕೊಂಡ ಅನುಭವ ಅವನದಾಗಿತ್ತು.

"ಸತ್ತು ಹೋಗಬಹುದಾಗಿದ್ದ ಅಳಿಲಿನ ಜೀವ ಉಳಿಸಿ, ಒಳ್ಳೆಯ ಕೆಲಸ ಮಾಡಿದ್ದೀರಾ. ಅದಕ್ಕಾಗಿ ಖುಷಿಪಡಬೇಕು ನೀವು." ಮಕ್ಕಳನ್ನು ಅಮ್ಮ ಸಮಜಾಯಿಸಿದರು. "ಸ್ವಾತಂತ್ರ್ಯದ ಸುಖ ಎಲ್ಲಕ್ಕಿಂತ ದೊಡ್ಡದು. ಮೃಗ-ಪಕ್ಷಿಗಳೂ ಸ್ವಾತಂತ್ರ್ಯವನ್ನು ಬಯಸುತ್ತವೆ." ಅವರು ಹೇಳಿದರು. ಮಕ್ಕಳಿಗೂ ಆ ಮಾತು ನಿಜ ಎನಿಸಿತು.

* * *

## ಚಿನ್ನಕ್ಕಿಂತ ಅನ್ನ ಮುಖ್ಯ

ಪಮ್ಮಿ ಸಾಧು ಸ್ವಭಾವದ ಹುಡುಗಿ; ತುಂಬ ಒಳ್ಳೆಯವಳು. ಆದರೆ ಚಿನ್ನದ ಮೇಲೆ ಮಾತ್ರ ಭಾರೀ ಪ್ರೀತಿ ಅವಳಿಗೆ. ಬಗೆ ಬಗೆಯ ಚಿನ್ನದ ಆಭರಣಗಳು ತನಗೆ ಇರಬೇಕು, ಅವುಗಳನ್ನು ತಾನು ಧರಿಸುತ್ತಿರಬೇಕು. ತನ್ನ ಆಭರಣಗಳನ್ನು ಕಂಡು ಎಲ್ಲರೂ ಮೆಚ್ಚಬೇಕು; ತನ್ನನ್ನು ಹೊಗಳಬೇಕು. ಇದು ಅವಳ ಹಂಬಲವಾಗಿತ್ತು. ಚಿನ್ನದ ಹುಚ್ಚೇ ಅವಳಿಗೆ ಹಿಡಿದಿತ್ತು. ಯಾವಾಗಲೂ ಅವಳು ಆಭರಣಗಳ ಬಗೆಗೇ ಮಾತಾಡುತ್ತಿದ್ದಳು. ಚಿನ್ನದ ಕುರಿತೇ ಯೋಚಿಸುತ್ತಿದ್ದಳು. ತಾನು ಮುಟ್ಟಿದ್ದೆಲ್ಲ ಚಿನ್ನ ಆಗಿದ್ದರೆ.... ಎಷ್ಟು ಒಳ್ಳೆಯದಿತ್ತು! ಇಂಥ ಹುಚ್ಚು ಯೋಚನೆಗಳೇ ಮೂಡುತ್ತಿದ್ದುವು ಅವಳ ಮನಸ್ಸಿನಲ್ಲಿ. ಹೀಗಿರುವಾಗ ಒಂದು ದಿನ ಏನಾಯಿತು ಗೊತ್ತೇ?

ಪಮ್ಮಿ ಒಬ್ಬಳೇ ಮನೆಯಲ್ಲಿದ್ದಳು. ಅವಳು ದೇವರ ಪಠದೆದುರು ದೀಪ ಹಚ್ಚಿ ಇರಿಸಿದ್ದಳು. ಕೈಜೋಡಿಸಿ, ಕಣ್ಣುಮುಚ್ಚಿ, ಪ್ರಾರ್ಥನೆ ಮಾಡುತ್ತಿದ್ದಳು. ಆಗ ಫಕ್ಕನೆ ಅವಳ ಮನದಲ್ಲಿ ಮೂಡಿ ಬಂತು ಚಿನ್ನದ ನೆನಪು.

"ಹಿಂದಿನ ಕಾಲದಲ್ಲಿ ದೇವರು ಭಕ್ತರ ಎದುರು ಕಾಣಿಸಿಕೊಳ್ಳುತ್ತಿದ್ದರಂತೆ. ಭಕ್ತರಿಗೆ ವರಗಳನ್ನೂ ನೀಡುತ್ತಿದ್ದರಂತೆ. ಹಾಗೆ, ಈಗ ನನಗೂ ದೇವರು ಕಾಣಿಸಿಕೊಂಡಿದ್ದರೆ ...? ನಾನು ಮುಟ್ಟಿದ್ದೆಲ್ಲ ಚಿನ್ನವಾಗುವಂತೆ ವರಕೊಟ್ಟಿದ್ದರೆ?... ಎಷ್ಟು ಬಂಗಾರದ ರಾಶಿ ಹಾಕಬಹುದಿತ್ತು! ಎಷ್ಟು ಆಭರಣಗಳನ್ನು ಧರಿಸಬಹುದಿತ್ತು...." ಹೀಗೆ ಸಾಗಿತ್ತು ಅವಳ ಯೋಚನೆ. ಅಷ್ಟರಲ್ಲಿ ವಿಶೇಷ ಸಂಗತಿಯೊಂದು ನಡೆದು ಹೋಯಿತು. ಏನದು?

ಪಮ್ಮಿಯ ಮನೆ ಜಗ್ಗನೆ ಬೆಳಗಿತು. ಬಂಗಾರದ ಬೆಳಕೊಂದು ಮನೆಯಲ್ಲಿ ತುಂಬಿಕೊಂಡಿತು. ಆ ಬೆಳಕಿನಲ್ಲಿ ನಗು ಮೊಗದ ದೇವರು ಅವಳೆದುರು ಕಾಣಿಸಿಕೊಂಡರು. "ಪಮ್ಮೀ, ನಿನಗೇನು ಆಸೆಯಿದೆ, ಕೇಳಮ್ಮಾ. ನಿನ್ನಾಸೆಯನ್ನು ನಾನು ಪೂರೈಸುತ್ತೇನೆ" ಅವರು ಹೇಳಿದರು.

ಪಮ್ಮಿ ಕಣ್ಣರಳಿಸಿ ನೋಡಿದಳು. ಹೌದು, ದೇವರು ಅವಳೆದುರು ನಿಂತಿದ್ದಾರೆ! "ಏನು ಬೇಕಮ್ಮಾ, ಕೇಳಿಕೋ" ಎನ್ನುತ್ತಿದ್ದಾರೆ. ಅವಳಿಗೆ ಆಶ್ಚರ್ಯವಾಯಿತು. ಅದಕ್ಕಿಂತ ಹೆಚ್ಚು ಸಂತೋಷವೂ ಆಯಿತು.

"ದೇವರಿಗೆ ನನ್ನಾಸೆ ತಿಳಿದೇ ಇದೆ. ಆದರೆ ನನ್ನ ಬಾಯಿಂದಲೇ ಅದನ್ನು ಕೇಳುವ ಆಸೆ ಅವರಿಗೆ. ಹಾಗೇ ಆಗಲಿ. ನನ್ನಾಸೆಯನ್ನು ಹೇಳಿಯೇ ಬಿಡುತ್ತೇನೆ." ಮನಸ್ಸಿನಲ್ಲೇ ಅವಳು ನಿಶ್ಚಯಿಸಿಕೊಂಡಳು. ಬಳಿಕ, "ದೇವಾ ನನಗೆ ತುಂಬ ಚಿನ್ನಬೇಕು. ನಾನು ಮುಟ್ಟಿದ್ದೆಲ್ಲ ಚಿನ್ನ ಆಗುವಂತೆ ವರಕೊಟ್ಟು ಬಿಡು. ಮತ್ತೇನೂ ಬೇಡುವುದಿಲ್ಲ" ಅವಳು ಪ್ರಾರ್ಥಿಸಿದಳು.



"ಒಳ್ಳೆಯದು, ನಿನ್ನಾಸೆ ನೆರವೇರಲಿ" ದೇವರು ಹೇಳಿದರು. ಹಾಗೆ ಹೇಳುತ್ತಿದ್ದಂತೆ, ಅವರು ಕಣ್ಮರೆಯಾದರು. ಪಮ್ಮಿ ಕಣ್ಣುಜ್ಜಿಕೊಂಡು, ಮತ್ತೆ ಮತ್ತೆ ನೋಡಿದಳು; ಸುತ್ತಮುತ್ತ ಕಣ್ಣಾಡಿಸಿದಳು. ಇಲ್ಲ, ದೇವರು ಎಲ್ಲೂ ಕಾಣಿಸಲಿಲ್ಲ. "ವರಕೊಟ್ಟ ದೇವರು ಕ್ಷಣಕಾಲವೂ ನಿಲ್ಲಲಿಲ್ಲ" ಪಮ್ಮಿ ತನಗೆ ತಾನೇ ಹೇಳಿಕೊಂಡಳು. ದೇವರು ಕೊಟ್ಟ ವರವನ್ನು ಪರೀಕ್ಷಿಸಬೇಕು ಎನಿಸಿತು ಅವಳಿಗೆ. ಆದರೆ ಅಷ್ಟರಲ್ಲೇ ಗೋಡೆಯ ಗಡಿಯಾರದತ್ತ ಹೊರಳಿತು ಅವಳ ನೋಟ. ಅವಳ ಎದೆ ಧಸಕ್ಕೆಂದಿತು. ಗಂಟೆ ಆಗಲೇ ೯-೪೦ ದಾಟಿತ್ತು.

"ಓಹ್, ಶಾಲೆಗೆ ಹೊತ್ತಾಯಿತು. ಮೊದಲು ಊಟ ತೀರಿಸಿಬಿಡುತ್ತೇನೆ." ಅವಳು ಎಂದುಕೊಂಡಳು. ತತ್‌ಕ್ಷಣ ಅವಳು ಅಡುಗೆ ಮನೆಗೆ ನಡೆದಳು, ತನ್ನ ಊಟದ ತಟ್ಟೆಯನ್ನು ಕೈಗೆತ್ತಿ ಕೊಂಡಳು. ಅವಳ ಕೈ ಸೋಕಿದುದೇ ತಡ, ಊಟದ ತಟ್ಟೆ ಬಂಗಾರದ ತಟ್ಟೆಯಾಯಿತು! ಪಮ್ಮಿಗೆ ಖುಷಿಯೋ ಖುಷಿ.

"ಓಹ್, ದೇವರು ಕೊಟ್ಟ ವರ ನಿಜವಾಯಿತು!" ಅವಳು ಉದ್ಗರಿಸಿದಳು. ತಟ್ಟೆಯನ್ನು ಕೆಳಗಿಟ್ಟು, ಅನ್ನದ ಪಾತ್ರೆಗೆ ಕೈ ಹಾಕಿದಳು. ಅವಳು ಮುಟ್ಟಿದುದೇ ತಡ, ಅದು ಸಹ ಬಂಗಾರದ ಪಾತ್ರೆಯಾಯಿತು. ಪಮ್ಮಿಗಾದ ಸಂತೋಷ ಹೇಳಿತೀರದು. ಖುಷಿಯಿಂದಲೇ ಅವಳು ಸಟ್ಟುಗವನ್ನು ಕೈಗೆತ್ತಿಕೊಂಡಳು. ಅದು ಬಂಗಾರದ ಸಟ್ಟುಗವಾಯಿತು!

"ಹಾಂ, ಇದೂ ಬಂಗಾರದವಾಯಿತಲ್ಲಾ! ಇರಲಿ. ಇದರಿಂದಲೇ ಅನ್ನ ಹಾಕಿಕೊಳ್ಳುತ್ತೇನೆ." ಅವಳೆಂದಳು; ಪಾತ್ರೆಯಲ್ಲಿದ್ದ ಅನ್ನಕ್ಕೆ ಸಟ್ಟುಗ ಹಾಕಿದಳು. 'ಕಟಕ್' ಸದ್ದು ಕೇಳಿಸಿತು. ಗಾಬರಿಗೊಂಡ ಅವಳು ಪಾತ್ರೆಯೊಳಗೆ ಇಣುಕಿ ನೋಡಿದಳು. ಅಲ್ಲಿ ಅನ್ನ ಇರಲಿಲ್ಲ; ಅನ್ನದ ಅಗುಳೆಲ್ಲ ಬಂಗಾರವಾಗಿತ್ತು!.

“ಅಯ್ಯೋ ದೇವರೇ, ಇದನ್ನು ಹೇಗೆ ತಿನ್ನಲಿ? ಅವಳು ತನ್ನನ್ನೇ ತಾನೇ ಕೇಳಿಕೊಂಡಳು. ಅವಳು ಹೆದರಿದಳು. ಅವಳ ಗಂಟಲ ಪಸೆ ಆರಿದಂತೆ ಅನಿಸಿತು . ಅವಳು ನೀರು ಕುಡಿಯ ಬಯಸಿ, ಒಂದು ತೋಠವನ್ನು ಎತ್ತಿಕೊಂಡಳು. ಅದೂ ಬಂಗಾರವಾಯಿತು. ಕುಡಿಯಲು ನೀರೆತ್ತಿಕೊಂಡಾಗ, ಅದು ಸಹ ಬಂಗಾರದ ನೀರಾಯಿತು.

“ಅಯ್ಯೋ ದೇವರೇ, ಇದೇನು ಆಗಿ ಹೋಯಿತು? ಇನ್ನು ನಾನು ಏನನ್ನು ತಿನ್ನಲಿ? ಏನನ್ನು ಕುಡಿಯಲಿ? ಹೇಗೆ ಜೀವ ಉಳಿಸಿಕೊಳ್ಳಲಿ?” ಹುಡುಗಿ ಗೋಳಾಡ ತೊಡಗಿದಳು. ಅವಳ ದೇಹ ಥರಗುಟ್ಟಿ ನಡುಗ ತೊಡಗಿತು.

ಆಗಲೇ ಪಮ್ಮಿಯ ಅಮ್ಮ ಒಳಗೆ ಬಂದರು. ‘ಕಾರ್ಖಾನೆಗೆ ಇಂದು ರಜೆ ಕೊಟ್ಟಿದ್ದಾರೆ. ನಾನು ಬೇಗನೆ ಬಂದುಬಿಟ್ಟೆ’ ಎಂದರು ಅವರು. ಅಮ್ಮನನ್ನು ಕಂಡುದೇ ತಡ, ಪಮ್ಮಿಗೆ ದುಃಖ ಒತ್ತರಿಸಿ ಬಂತು. “ಅಮ್ಮಾss” ಎನ್ನುತ್ತ ಅವಳು ಅತ್ತ ಧಾವಿಸಿದಳು. ಅಮ್ಮನನ್ನು ಬಿಗಿದಪ್ಪಿದಳು. ತತ್ ಕ್ಷಣ ಅವಳ ಅಮ್ಮನೂ ಬಂಗಾರದ ಬೊಂಬೆಯಾಗಿ, ನೆಲಕ್ಕೆ ಉರುಳಿದರು. ಪಮ್ಮಿಯ ತಲೆಗೆ ಸಿಡಿಲು ಬಡಿದಂತಾಯಿತು.

“ಅಯ್ಯೋ, ನನ್ನಮ್ಮನನ್ನು ನಾನೇ ಕೊಂದೆನೇ? ಇನ್ನು ನನ್ನ ಜೊತೆಗೆ ಇರುವವರು ಯಾರು? ಪ್ರೀತಿಯಿಂದ ನನ್ನನ್ನು ‘ಪಮ್ಮಿ” ಎಂದು ಕರೆಯುವವರು ಯಾರು? ನನಗೆ ಬೇಕದುದನ್ನು ಒದಗಿಸುವವರು ಯಾರು? ನಾನಿನ್ನು ಯಾರನ್ನು ನಂಬಿ ಬದುಕಲಿ? ನನ್ನ ಚಿನ್ನದ ಹುಚ್ಚಿನಿಂದ ಎಂಥ ಅನರ್ಥವಾಯಿತು! ದೇವಾ, ನನಗೆ ಅಮ್ಮ ಬೇಕು; ನನಗೆ ಅನ್ನಬೇಕು. ಚಿನ್ನಬೇಡ. ದಯವಿಟ್ಟು ನಿನ್ನ ವರವನ್ನು ಹಿಂದೆ ಪಡೆದುಕೋ. ನನ್ನ ತಪ್ಪನ್ನು ಕ್ಷಮಿಸಿ, ಕಾಪಾಡು ಅಳುತ್ತಲೇ ಅವಳು ಪ್ರಾರ್ಥಿಸಿಕೊಂಡಳು. ಅವಳ ದನಿ ನಡುಗುತ್ತಿ ಕಣ್ಣುಗಳಿಂದ ಕಂಬನಿ ಸುರಿಯುತ್ತಿತ್ತು. ಬಹಳ ಹೊತ್ತು ಅವಳು ಪ್ರಾರ್ಥಿಸುತ್ತಲೇ ಇದ್ದಳು.

“ಏನಮ್ಮಾ, ನೀನು ಕೇಳಖಿದ ವರ ನಿನಗೆ ಸಿಗಲಿಲ್ಲವೇ. ಇನ್ನೂ ಯಾಕೆ ಅಳುತ್ತಿದ್ದೀಯಾ?” ದಿನ ಕೇಳಿ, ಪಮ್ಮಿ ಕಣ್ಣು ತೆರೆದಳು. ಎದುರಿಗೆ ದೇವರು ನಿಂತಿದ್ದರು.

“ದೇವಾ, ನಾನು ಬುದ್ಧಿ ಇಲ್ಲದವಳು. ಹಾಗಾಗಿ ಎಲ್ಲಕ್ಕಿಂತ ಚಿನ್ನ ಮುಖ್ಯ ಎಂದುಕೊಂಡಿದ್ದೆ. ಕೇಳಬಾರದ ವರ ಕೇಳಿ, ತಪ್ಪು ಮಾಡಿದ್ದೆ. ನನಗೀಗ ಬುದ್ಧಿ ಬಂದಿದೆ. ಚಿನ್ನಕ್ಕಿಂತ ಅನ್ನ ಮುಖ್ಯ, ಅಮ್ಮ ಮುಖ್ಯ ಎನ್ನುವುದು ಅರ್ಥವಾಗಿದೆ. ದಯವಿಟ್ಟು  ನಿಮ್ಮ ವರವನ್ನು ಹಿಂದೆ ಪಡೆಯಿರಿ, ನನ್ನ ತಪ್ಪನ್ನು ಕ್ಷಮಿಸಿರಿ” ದೈನ್ಯದಿಂದ ಮತ್ತೆ ಅವಳು ಬೇಡಿಕೊಂಡಳು.

“ಹೌದು ಮಗೂ, ಬದುಕಿಗೆ ಚಿನ್ನಕ್ಕಿಂತ ಅನ್ನ ಮುಖ್ಯ; ಪ್ರೀತಿ ಮುಖ್ಯ ಮುಖ್ಯ. ಕೊನಗೆಗೂ ಈ ಸತ್ಯವನ್ನು ನೀನು ತಿಳಿದುಕೊಂಡೆಯಲ್ಲಾ ನನಗೆ ಸಂತೋಷವಾಗಿದೆ. ನಿನಗೆ ಕೊಟ್ಟ ವರವನ್ನು ಹಿಂದೆ ಪಡೆದಿದ್ದೇ ನಿನ್ನನ್ನು ಕ್ಷಮಿಸಿದ್ದೇನೆ. ಅತಿ ಆಸೆಯನ್ನು ಬಿಡು. ಎಲ್ಲರನ್ನೂ ಪ್ರೀತಿಸು ಗುಣವಂತೆಯಾಗಿ ಬಾಳು.” ದೇವರು ಪಮ್ಮಿಯನ್ನು ಹರಸಿದರು.

ಆಗಲೇ, “ಬಕ್ ಬಕ್ ಬೌ” ಮನೆಯ ನಾಯಿ ಬೊಗಳಿತು. ನಿದ್ದೆಯಲ್ಲಿದ್ದ ಪಮ್ಮಿಗೆ ಎಚ್ಚರಾಯಿತು. ಅವಳೊಂದು ಕನಸು ಕಂಡಿದ್ದಳು. ಎಂದೋ ಒಮ್ಮೆ ಅವಳು ಕೇಳಿದ್ದ ಕತೆ, ಕನಸಿನಲ್ಲಿ ಪುನರಾವರ್ತನೆಗೊಂಡಿತ್ತು.

## ಭೂಮಿಗೆ ವರ ಈ ಮರ

ತಿಮ್ಮ ಶಾಲೆಗೆ ಹೊರಟಿದ್ದ. ಎಂದಿಗಿಂತ ಮೊದಲೇ ಅವನು ಅಂಥು ಹೊರಟು ಬಂದಿದ್ದ. ಅವನು ಹಾಗೆ ಹೊರಟು ಬರಲು ಒಂದು ಕಾರಣವೂ ಇತ್ತು. ಏನದು?

ತಿಮ್ಮ ಶಾಲೆಯಿಂದ ಬರುವ ದಾರಿಯಲ್ಲಿ ಒಂದು ಮಾವಿನ ಮರವಿತ್ತು. ಬಹಳ ದೊಡ್ಡ ಮರ ಅದು. ಆ ಮರದಲ್ಲಿ ನೂರಾರು ಕಾಯಿಗಳು ಜೋತಾಡುತ್ತಿದ್ದವು. ಹೆಚ್ಚಿನ ಕಾಯಿಗಳು ಬಲಿತಿದ್ದವು. ಎತ್ತರದ ಒಂದು ಗೆಲ್ಲಿನಲ್ಲಿ ನಾಲ್ಕಾರು ಹಣ್ಣುಗಳೂ ನೇತಾಡುತ್ತಿದ್ದವು. ಕಲ್ಲೆಸೆದು,

ಅವುಗಳನ್ನು ಅವನು ಕಡೆವಬಹುದಿತ್ತು. ಆದರೆ ಅವನ ಸಂಗಡಿಗರೂ ಆಗ ಜೊತೆಗಿದ್ದರಲ್ಲ? ಹಣ್ಣುಗಳನ್ನು ಕೆಡವಿದರೆ, ಅವರಿಗೂ ಅದರಲ್ಲಿ ಪಾಲು ಕೊಡಬೇಕಲ್ಲ? ಅವನಿಗೆ ಅದು ಇಷ್ಟವಿರಲಿಲ್ಲ. ಹಾಗಾಗಿ ಅವನು ಆಗ ನೆಟ್ಟಗೆ ಮನೆಗೆ ಬಂದಿದ್ದ. ಗೆಳೆಯರ ಗಮನಕ್ಕೆ ಬರದ ಆ ಹಣ್ಣುಗಳು, ರಾತ್ರೆ ಕೆಳಗೆ ಬೀಳಬಹುದು. ಎಲ್ಲರಿಗಿಂತ ಮೊದಲು ತಾನು ಅಲ್ಲಿಗೆ ಹೋಗಬೇಕು, ಆ ಹಣ್ಣುಗಳ ಹೆಕ್ಕಿ ತಿನ್ನಬೇಕು. ಒಂದು ವೇಳೆ ಅವು ಮರದಲ್ಲೇ ಇದ್ದರೆ? ಏನಾದರೂ ಹಂಚಿಕೆ ಹೂಡಬೇಕು; ಆ ಹಣ್ಣುಗಳು ಕೆಳಕ್ಕೆ ಬೀಳುವ ಹಾಗೆ ಮಾಡಬೇಕು. ಬಾಯಿ ಚಪ್ಪರಿಸುತ್ತ ಅವುಗಳನ್ನು ತಾನು ತಿನ್ನಬೇಕು. ಇದು ಅವನ ಆಸೆಯಾಗಿತ್ತು; ಅಂಥ ಆಸೆಯಿಂದಲೇ ಅಂದು ಅವನು ಬೇಗನೆ ಮನೆ ಬಿಟ್ಟಿದ್ದ; ದಾಪುಗಾಲಿಟ್ಟು ನಡೆಯತೊಡಗಿದ್ದ.

ಮಾವಿನ ಮರದ ಬಳಿಗೆ ಬಂದ ತಿಮ್ಮ, ತಲೆಯೆತ್ತಿ ಮೇಲೆ ನೋಡಿದ. ಅವನು ಯೋಚಿಸಿದ್ದ ಹಾಗೆ, ಹಣ್ಣುಗಳು ಕೆಳಗೆ ಬಿದ್ದಿರಲಿಲ್ಲ. ಗೆಲ್ಲಿನಲ್ಲೇ ಅವು ಜೋತಾಡುತ್ತಿದ್ದವು. ಎಲ್ಲವು ಬಂಗಾರದ ಬಣ್ಣದ ಹಣ್ಣುಗಳು. “ಛೇ, ಒಂದು ಹಣ್ಣೂ ಕೆಳಗೆ ಬಿದ್ದಿಲ್ಲವಲ್ಲ!” ತಿಮ್ಮ ತನಗೆ ತಾನೇ ಹೇಳಿಕೊಂಡ.

ಮರ ದೊಡ್ಡದಿತ್ತು. ಹಣ್ಣುಗಳು ಎತ್ತರದಲ್ಲಿದ್ದವು. ಮರ ಏರುವುದು ಅವನಿಗೆ ಸಾಧ್ಯವಿರಲಿಲ್ಲ. ಉದ್ದದ ದೋಟಿ ಇದ್ದರೆ ಕೆಳಗಿಂದಲೇ ಹಣ್ಣುಗಳನ್ನು ಕೊಯ್ಯಬಹುದಿತ್ತು. ಆದರೆ ದೋಟಿಯೂ ಇಲ್ಲವಲ್ಲ? ಏನು ಮಾಡೋಣ? ತಿಮ್ಮ ಯೋಚಿಸಿದ. “ಕಲ್ಲು ಹೊಡೆದೇ ಹಣ್ಣುಗಳನ್ನು ಕೆಡವಬೇಕು. ಬೇರೆ ದಾರಿಯಿಲ್ಲ” ಅವನು ನಿರ್ಧರಿಸಿದ. ತತ್ ಕ್ಷಣ ಅವನು ಅತ್ತಿತ್ತ ಕಣ್ಣಾಡಿಸಿದ, ಅಲ್ಲಿದ್ದ ಕೆಲವರು ಕಲ್ಲುಗಳನ್ನು ಹೆಕ್ಕಿ ತಂದ, ನೋಟ ಹಿಡಿದು, ಒಂದೊಂದೇ ಕಲ್ಲನ್ನು ಹಣ್ಣುಗಳತ್ತ ಬೀಸತೊಡಗಿದ.

ಹಾಗೆ ಅಟವನ್ನು ಮೂರೋ ನಾಲ್ಕೋ ಕಲ್ಲುಗಳನ್ನು ಎಸೆದಿರಬೇಕು. ಅಷ್ಟರಲ್ಲೇ, “ಏಯ್, ಯಾರದು? ಏನೋ, ನನ್ನ ಮಂಡೆಗೆ ಕಲ್ಲು ಹಾಕುತ್ತೀಯಾ?” ಎಂಬ ದನಿ ಕೇಳಿಸಿತು. ಮರುಕ್ಷಣದಲ್ಲಿ ಮರದ ಮರೆಯಿಂದ ಅಜ್ಜನೊಬ್ಬ ಎದ್ದು ಬರುವುದೂ ಕಾಣಿಸಿತು.

ತಿಮ್ಮ ಗಾಬರಿಗೊಂಡ.  ತಾನು ಎಸೆದ ಕಲ್ಲು ಅಜ್ಜನ ತಲೆಗೆ ಬಿದ್ದಿರಬೇಕು. ಅವನು ಗಾಯಗೊಂಡಿರಬೇಕು ಎಂದು ಅವನು ಹೆದರಿದ. ತಾನು ತಪ್ಪು ಮಾಡಿದೆ ಎನಿಸಿತು ಅವನಿಗೆ. ಅಜ್ಜ ಸಿಟ್ಟುಗೊಂಡಿರಬಹುದು, ತನ್ನನ್ನು ಶಿಕ್ಷಿಸಬಹುದು ಎಂದು ಅವನು ಯೋಚಿಸಿದ. ತನ್ನ ಬಳಿಗೆ ನಡೆದು ಬರುತ್ತಿದ್ದ ಅಜ್ಜನನ್ನೇ ನೋಡತೊಡಗಿದ.

ಅಜ್ಜ ತಿಮ್ಮನನ್ನು ಸಮೀಪಿಸಿದ. “ಏನೋ ತಮ್ಮಾ, ಯಾಕೆ ನೀನು ಕಲ್ಲು ಹೊಡೆದೆ?” ಅವನು ಕೇಳಿದ. ಅವನ ತಲೆಗೆ ಪೆಟ್ಟು ತಗಲಿರಬೇಕು. ತನ್ನ ಕರವಸ್ತ್ರವನ್ನು ಅವನು ತಲೆಗೆ ಒತ್ತಿ ಹಿಡಿದಿದ್ದ.

ಅಜ್ಜ, ‘ತಮ್ಮ’ ಎಂದುದನ್ನು ಕೇಳಿ ತಿಮ್ಮನಿಗೆ ಸ್ವಲ್ಪ ಧೈರ್ಯ ಬಂತು. ಆದರೆ ಅವನ ಬಾಯಿಂದ ಮಾತು ಮಾತ್ರ ಹೊರಬರಲಿಲ್ಲ. ಅಜ್ಜನನ್ನೇ ಮಿಕಿಮಿಕಿ ನೋಡುತ್ತ ಅವನು ನಿಂತುಬಿಟ್ಟಿದ್ದ.

“ಹೇಳೋ ತಮ್ಮಾ, ನೀನು ಯಾಕೆ ಕಲ್ಲು ಹೊಡೆದೆ?” ಅಜ್ಜ ಮತ್ತೆ ಪ್ರಶ್ನೆ ಹಾಕಿದ.

‘ಹಣ್ಣಿಗಾಗಿ’ ಮೆಲ್ಲನೆ ಹೇಳಿದ ತಿಮ್ಮ. ಅವನ ದನಿ ನಡುಗುತ್ತಿತ್ತು. ಅದನ್ನು ಅಜ್ಜ ಗಮನಿಸಿದ.  ಹುಡುಗ ಹೆದರಿದ್ದಾನೆ ಎನಿಸಿತು ಅವನಿಗೆ . ‘ಹೆದರ ಬೇಡವೋ ತಮ್ಮಾ. ನಾನು ನಿನಗೇನೂ ಮಾಡುವುದಿಲ್ಲ. ಆದರೆ ಒಂದು ಮಾತು. ನಾನು ಕೇಳುವ ಪ್ರಶ್ನೆಗಳಿಗೆ ಮಾತ್ರ ನೀನು ಉತ್ತರ ಹೇಳಬೇಕು’ ಷರತ್ತು ಹಾಕಿದ ಅಜ್ಜ.

‘ಹೂಂ’ ಆಗಬಹುದು ಎನ್ನುವಂತೆ ತಲೆಯಾಡಿಸಿದ ತಿಮ್ಮ.

‘ಸರಿ ಹಾಗಾದರೆ, ಈಗ ಹೇಳು, ಈ ಮಾವಿನ ಮರವಿದೆಯಲ್ಲ? ಇದರಿಂದ ನಮಗೇನು ಸಿಗುತ್ತದೆ?” ಅಜ್ಜ ಕೇಳಿದ. “ಹಣ್ಣುಗಳು, ಕಾಯಿಗಳು, ಮಿಡಿಗಳು...” ಮಾತು ನಿಲ್ಲಿಸಿದ ತಿಮ್ಮ

“ಹೂಂ, ಮುಂದುವರಿಸು. ಅರ್ಧದಲ್ಲೇ ನಿಲ್ಲಿಸಬೇಡ” ಅಜ್ಜ ಹುರಿದುಂಬಿಸಿದ.

“ಮರದಿಂದ ನಮಗೆ ನೆರಳು ಸಿಗುತ್ತದೆ. ಹಾಗೆಯೇ ಸೊಪ್ಪು ತರಗೆಲೆ, ಕಟ್ಟಿಗೆ ….” ತಿಮ್ಮ ತಡವರಿಸಿದ. ಮತ್ತೆ ಏನು ಹೇಳಬೇಕೆಂದೇ ಅವನಿಗೆ ತೋಚಲಿಲ್ಲ.

“ಇನ್ನೇನೂ ನೆನಪಿಗೆ ಬರುತ್ತಿಲ್ಲವೇ? ಹಾಗಾದರೆ ನಾನು ಹೇಳುತ್ತೇನೆ ಕೇಳಿ ಬಿಡು. ಈ ಮರ ಇದೆಯಲ್ಲ? ಇದು ಭೂಮಿಗೆ, ಭೂಮಿಯಲ್ಲಿರುವ ನಮಗೆ ದೇವರು ಕೊಟ್ಟ ಒಂದು ವರ. ಇದ್ದು ಸಾವಿರಾರು ಜೀವಿಗಳಿಗೆ ಆಹಾರ, ಆಶ್ರಯ ಎಲ್ಲವನ್ನೂ ಒದಗಿಸುವುತ್ತದೆ. ನಮ್ಮ ಉಸಿರಾಟಕ್ಕೆ ಬೇಕಾದ ಶುದ್ಧ ಗಾಳಿಯನ್ನು ದೊರಕಿಸುತ್ತದ. ಮಳೆ ನೀರು ಭೂಮಿಯಲ್ಲಿ ಇಂಗಲು ನೆರವಾಗುತ್ತದೆ. ಹೆಚ್ಚು ಕಾಲ ನೆಲದಲ್ಲಿ ನೀರ ಪಸೆ ಉಳಿವಂತೆ ಮಾಡುತ್ತದೆ. ನೀರ ಒರತೆಯನ್ನು ಬಲಗೊಳಿಸುತ್ತದೆ. ಮೋಡಗಳನ್ನು ತಡೆದು, ಹೆಚ್ಚು ಮಳೆ ಸುರಿವುದಕ್ಕೂ ಕಾರಣವಾಗುತ್ತದೆ. ಹೀಗೆ ಮರದಿಂದಾಗುವ ಉಪಕಾರ ಬಹಳವಿದೆ.” ಅಜ್ಜ ವಿವಿರಿಸಿದ. ಮತ್ತೆ

“ಈಗ ನೀನೇ ಹೇಳು ತಮ್ಮಾ, ಈ ಮರಕ್ಕಾಗಿ ನಾವೇನು ಮಾಡಿದ್ದೇವೆ? ಇದಕ್ಕೆ ನಾವೇನು ನೀಡಿದ್ದೇವೆ?” ಅಜ್ಜ ಕೇಳಿದ.



“ಏನೂ ಇಲ್ಲ” ಸಹಜವಾಗಿಯೇ ಹೇಳಿದ ತಿಮ್ಮ.

“ಹಾಂ, ಸುಳ್ಳಾಡಬೇಡ ಹುಡುಗಾ. ಸರಿಯಾಗಿ ಯೋಚಿಸಿ, ಉತ್ತರ ಹೇಳು. ಈ ಮರಕ್ಕಾಗಿ ನಾನೇನೂ ಮಾಡಿಲ್ಲ. ನಾನೇನೂ ಕೊಟ್ಟಿಲ್ಲ ಇದು ನಿಜ. ಆದರೆ ಇದಕ್ಕೆ ನೀನೇನೂ ಮಾಡಿಲ್ಲವೇ? ನೀನೇನು ಕೊಟ್ಟಿಲ್ಲವೇ? ಯೋಚಿಸಿ ಹೇಳು’ ಎಂದ ಅಜ್ಜ. ಅವನು ತಿಮ್ಮನ ಮುಖವನ್ನೇ ದಿಟ್ಟಿಸುತ್ತಿದ್ದ. ತುಂಟ ನಗು ಅವನ ಮುಖದ ಮೇಲಿತ್ತು.

ತಿಮ್ಮ ಗಲಿಬಿಲಿಗೊಂಡ. ತಾನೇನು ಮಾಡಿದ್ದೆ? ಯಾವ ಸುಳ್ಳು ಮಾತು ಆಡಿದ್ದೆ? ಅವನು ಯೋಚಿಸಿದ. ತತ್‌ಕ್ಷಣ ಅವನು ಮಾಡಿದ ತಪ್ಪು ಅವನಿಗೆ ತಿಳಿದು ಹೋಯಿತು. ಈ ಮರಕ್ಕೆ ಕಲ್ಲು ಹೊಡೆದವನು ಅವನೇ ಅಲ್ಲವೇ? ಅವನಿಗೆ ನಾಚಿಕೆಯಾಯಿತು. ಅವನು ತಲೆ ತಗ್ಗಿಸಿದ.

“ಹೇಳೋ ತಮ್ಮಾ, ಈ ಮರಕ್ಕೆ ನೀನೇನು ಕೊಟ್ಟೆ ಹೇಳು? ಅಜ್ಜ ಮತ್ತೆ ಕೇಳಿದ.

‘ಕಲ್ಲೇಟು’ ತಿಮ್ಮ ಒಪ್ಪಿಕೊಂಡ. ಈಗ ಅವನು ನಿಜವನ್ನೇ ನುಡಿದಿದ್ದ.

‘ನೋಡು ತಮ್ಮಾ, ಹೂಬಿಟ್ಟು, ಮಿಡಿ, ಕಾಯಿ ಹಣ್ಣುಗಳನ್ನು ಹೊತ್ತು ನಿಂತ ಈ ಮರ, ಈ ಯಾವುದನ್ನೂ ತನಗಾಗಿ ಬಳಸುವುದಿಲ್ಲ ತನ್ನಲ್ಲಿರುವ ಎಲ್ಲವನ್ನೂ ನಮಗಾಗಿ, ಇತರ ಜೀವಿಗಳಿಗಾಗಿ ಕೊಟ್ಟು ಬಿಡುತ್ತದೆ. ಇಂಥ ಮರಕ್ಕೆ ನಾವು ಕಲ್ಲು ಹೊಡೆಯುತ್ತೇವೆ. ಇದನ್ನು

ಗಾಯಗೊಳಿಸುತ್ತೇವೆ. ಇದಕ್ಕೆ ನೋವು ಕೊಡುತ್ತೇವೆ. ಎಷ್ಟೋ ಬಾರಿ ಇದನ್ನು ಕಡಿದು, ಉರುಳಿಸಿ ಬಿಡುತ್ತೇವೆ, ನಾಶಪಡಿಸುತ್ತೇವೆ. ಇದು ಸರಿಯೇ ತಮ್ಮಾ? ಯೋಚಿಸಿ, ಉತ್ತರ ಹೇಳಬೇಕು ನೀನು' ಎಂದ ಅಜ್ಜ.

'ಇದು ತಪ್ಪು ಅಜ್ಜಾ. ನಿಜವಾಗಿಯೂ ತಪ್ಪು' ಒಪ್ಪಿಕೊಳ್ಳುತ್ತೇನೆ' ತಿಮ್ಮ ಹೇಳಿದ. ತನ್ನ ತಪ್ಪಿಗಾಗಿ ಅವನು ಪಶ್ಚಾತ್ತಾಪ ಪಡುತ್ತಿದ್ದ.

"ಇನ್ನೊಂದು ಸಂಗತಿ ಇದೆ. ಅದನ್ನೂ ನಿನಗೆ ನಾನು ಹೇಳಬೇಕು." ಅಜ್ಜ ಮುಂದುವರಿಸಿದ. "ನೀನು ಮರದ ಹಣ್ಣಿಗೆಂದು ಕಲ್ಲು ಹೊಡೆದಿದ್ದೆ. ಮರದ ಹಿಂದುಗಡೆ ನೆರಳಿತ್ತಲ್ಲ? ಅಲ್ಲಿ ನಾನು ಕೂತಿದ್ದೆ. ಅದು ನಿನಗೆ ತಿಳಿದಿರಲಿಲ್ಲ, ನಿಜ. ಆದರೆ ಮರಕ್ಕೆಂದು ನೀನು ಎಸೆದ ಕಲ್ಲು, ನನ್ನ ತಲೆಗೆ ಬಿದ್ದು ಪೆಟ್ಟಾಯಿತು; ನೆತ್ತರು ಸುರಿಯಿತು. ಈ ನನ್ನ ಕರವಸ್ತ್ರವನ್ನು ನೋಡು" ಅಜ್ಜ, ತನ್ನ ಕೈಯಲ್ಲಿದ್ದ ಬಟ್ಟೆಯ ತುಂಡನ್ನು ತೋರಿಸಿದ. ನೆತ್ತರಲ್ಲಿ ನೆನೆದು, ಅದು ಕೆಂಪಗಾಗಿತ್ತು. ತಿಮ್ಮನ ಎದೆ ಮತ್ತೂ ಡವಗುಟ್ಟ ತೊಡಗಿತು. ತಾನು ಎಂಥ ತಪ್ಪು ಮಾಡಿಬಿಟ್ಟೆ ಎಂದು ಅವನ ಮನ ಮರುಗಿತು. ಅವನ ಮುಖ ಬಿಳಚಿಕೊಂಡಿತು.

ಅಜ್ಜ ಮತ್ತೆ ಹೇಳಿದ, 'ನೀನಿನ್ನೂ ಚಿಕ್ಕವನು, ಹೆಚ್ಚಿನ ತಿಳಿವಳಿಕೆ ಇಲ್ಲದವನಲು. ಗೊತ್ತಿಲ್ಲದೆ ನೀನು ತಪ್ಪು ಮಾಡಿದ್ದೀಯಾ. ಅದನ್ನು ನಾನು ಬಲ್ಲೆ. ಹಾಗಾಗಿ ನಿನ್ನನ್ನು ಕ್ಷಮಿಸಿದ್ದೇನೆ. ಆದರೆ, ಎಲ್ಲರೂ ಹೀಗೆ ಮಾಡುತ್ತಾರೆ ಎಂದುಕೊಳ್ಳಬೇಡ. ಕಲ್ಲೇಟಿಗೆ ಇದಕ್ಕಿಂತ ದೊಡ್ಡ ಗಾಯವೂ ಆಗಬಹುದಲ್ಲ? ಆಗ ಸಿಟ್ಟಿನ ಕೈಯಲ್ಲಿ ಬುದ್ಧಿಕೊಟ್ಟವರು ಏನು ಮಾಡಬಹುದು? ಹೇಗೆ ಸೇಡು ತೀರಿಸಿಕೊಳ್ಳಬಹುದು ಹೇಳುವುದು ಸಾಧ್ಯವೇ? ಇಲ್ಲವಲ್ಲ? ಆದುದರಿಂದ ಹೇಳುತ್ತಿದ್್ಏ ಮಗೂ, ಚೆನ್ನಾಗಿ ಯೋಚಿಸಿ ಕೆಲಸ ಮಡು. ನಿನ್ನಿಂದ ಇಂಥ ತಪ್ಪು ಇನ್ನೊಮ್ಮೆ ಆಗದಿರಲಿ" ಅಜ್ಜ ಮಾತು ಮುಗಿಸಿದ.

"ಇಲ್ಲ, ಅಜ್ಜಾ, ಇನ್ನೆಂದೂ ಇಂಥ ಕೆಲಸ ಮಾಡುವುದಿಲ್ಲ. ನಿಮಗೆ ನಾನು ಮಾತುಕೊಡುತ್ತೇನೆ. ನನ್ನ ಮಾತನ್ನು ನಂಬಿ. ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ" ತಿಮ್ಮ ಕೈಮುಗಿದು ಬೇಡಿಕೊಂಡ. ಅವನಿಗೆ ಈಗ ತನ್ನ ತಪ್ಪಿನ ಅರಿವಾಗಿತ್ತು. ಪಶ್ಚಾತ್ತಾಪದಿಂದ ಅವನ ಮನ ಬೇಯುತ್ತಿತ್ತು.

"ನಾನು ಆಗಲೇ ಹೇಳಿಲ್ಲವೇ ಮಗೂ? ತಿಳಿಯದೆ ನೀನು ತಪ್ಪು ಮಾಡಿದ್ದೀಯಾ. ನಿನ್ನನ್ನು ನಾನು ಸಂಪೂರ್ಣ ಕ್ಷಮಿಸಿದ್ದೇನೆ. ಶಾಲೆಗೆ ಹೋಗುವ ಹುಡುಗ ನೀನು. ಚೆನ್ನಾಗಿ ಕಲಿ. ಒಳ್ಳೆಯವನಾಗಿ ಬಾಳು. ಸಾಧ್ಯವಾದರೆ ಪ್ರತಿವರ್ಷ ಒಂದೆರಡು ಗಿಡಗಳನ್ನಾದರೂ ನೆಟ್ಟು ಬೆಳೆಸಲು ಯತ್ನಿಸು. ದೇವರು ನಿನ್ನನ್ನು ಕಾಪಾಡಲಿ" ಅಜ್ಜ ತಿಮ್ಮನನ್ನು ಹರಸಿದ; ಪ್ರೀತಿಯಿಂದ ಅವನ ಬೆನ್ನ ಮೇಲೆ ಕೈಯಾಡಿಸಿದ.

"ನಿಮ್ಮ ಮಾತನ್ನು ನಡೆಸಿಕೊಡುತ್ತೇನೆ ಅಜ್ಜಾ., ಈ ಮಳೆಗಾಲದಲ್ಲೇ ನಾಲ್ಕು ಗಿಡಗಳನ್ನಾದರೂ ಖಂಡಿತ ನೆಡುತ್ತೇನೆ. ಬೇಸಗೆಯಲ್ಲಿ ನೀರೆರೆದು, ಅವುಗಳನ್ನು ಬೆಳೆಸುತ್ತೇನೆ, ಉಳಿಸುತ್ತೇನೆ. ತಿಮ್ಮ ಭರವಸೆ ನೀಡಿದ.

* * *

## ನಾವೆಲ್ಲರೂ ಒಂದೇ

ಹರೀಶ ಸುಮಾರು ಹದಿಮೂರು ವಯಸ್ಸಿನ ಹುಡುಗ. ಅವನು ಹಳ್ಳಿಯಲ್ಲೇ ಹುಟ್ಟಿ ಬೆಳೆದವನು. ಹುಟ್ಟೂರಿನ ಶಾಲೆಯಲ್ಲಿ ಅವನು ಏಳನೆಯ ತರಗತಿ ಪಾಸು ಮಾಡಿದ್ದ. ಅವನ ಹಳ್ಳಿಯಲ್ಲಿ ಹೈಸ್ಕೂಲ್ ಇರಲಿಲ್ಲ. ಹಾಗಾಗಿ ಅವನು ಪಟ್ಟಣದಲ್ಲಿದ್ದ ತನ್ನ ಅಜ್ಜನ ಮನೆಗೆ ಬಂದಿದ್ದ. ಅಜ್ಜ ಅಜ್ಜಿಯರ ಜೊತೆ ಇದ್ದು, ಹೈಸ್ಕೂಲ್ ಶಿಕ್ಷಣ ಪಡೆಯ ಬಯಸಿದ್ದ.

ಹರೀಶನ ಅಜ್ಜಿ ಮನೆ ಇದ್ದುದು ಪಟ್ಟಣದ ವಸತಿ ಪ್ರದೇಶ ಒಂದರಲ್ಲಿ. ಮನೆಯ ಎದುರಲ್ಲೇ ರಸ್ತೆ ಹಾದುಹೋಗುತ್ತಿತ್ತು. ರಸ್ತೆಯ ಇಕ್ಕಡೆಗಳಲ್ಲೂ ನೂರಾರು ವಾಸದ ಮನೆಗಳಿದ್ದವು. ಎಲ್ಲ ಜಾತಿಮತಗಳ ಜನ ಅಲ್ಲಿ ವಾಸಿಸುತ್ತಿದ್ದರು. ವಸತಿ ಪ್ರದೇಶದ ಒಂದು ಕೊನೆಯಲ್ಲಿ ಒಂದು ದೇವಾಲಯವಿತ್ತು. ಇನ್ನೊಂದು ಭಾಗದಲ್ಲಿ ಒಂದು ಮಸೀದಿ ಇತ್ತು. ದೇವಾಲಯದ ಸುತ್ತಮುತ್ತ ಹಿಂದೂಗಳು ಹೆಚ್ಚಿನ

ಸಂಖ್ಯೆಯಲ್ಲಿದ್ದರು. ಮಸೀದಿಯ ಪ್ರದೇಶದಲ್ಲಿ ಮುಸ್ಲೀಂ ಮನೆಗಳ ಸಂಖ್ಯೆ ಅಧಿಕವಾಗಿತ್ತು. ಆದರೂ ಅಲ್ಲಿ ಮತೀಯ ಕಲಹಗಳು ನಡೆಯುತ್ತಿರಲಿಲ್ಲ. ಜನರೆಲ್ಲ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಕೂಡಿ ಬಾಳುತ್ತಿದ್ದರು.

ಇಂಥ ಪಟ್ಟಣದಲ್ಲಿ ಕಳೆದ ವರ್ಷ ಒಂದು ಘಟನೆ ನಡೆಯಿತು. ಗಣೇಶೋತ್ಸವದ ನಾಲ್ಕನೆಯ ದಿನವದು. ಗಣಪತಿಯ ಮೆರವಣಿಗೆಯೊಂದು ರಸ್ತೆಯಲ್ಲಿ ಸಾಗುತ್ತಿತ್ತು. ಅದು ಮಸೀದಿಯ ಬಳಿಗೆ ಬಂದಾಗ, ಯಾರೋ ಕಿಡಿಗೇಡಿಗಳು ಮೆರವಣಿಗೆಯ ಮೇಲೆ ಕಲ್ಲು ತೂರಿದರು. ಮೆರವಣಿಗೆಯಲ್ಲಿದ್ದ ಜನ ಪ್ರತಿಭಟಿಸಿದರು. ಗಲಭೆಗೆ ಅಷ್ಟು ಸಾಕಾಯಿತು. ಎರಡು ದಿನಗಳ ಕಾಲ ಕಲ್ಲು ತೂರಾಟ ಬೆಂಕಿ ಹಚ್ಚುವುದು, ಹೊಡೆತ, ಚೂರಿ ಇರಿತ, ಮಾರಾಮಾರಿಗಳಂಥ ಅಪ್ರಿಯ ಘಟನೆಗಳು ಅಲ್ಲಿ ನಡೆದವು. ಶಾಲೆ ಕಾಲೇಜುಗಳು, ಅಂಗಡಿ ಹೋಟೆಲುಗಳು ಎಲ್ಲ ಮುಚ್ಚಿದವು. ಕೊನಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡರು. ಹಲವಾರು ಮಂದಿಗಳನ್ನು ಬಂಧಿಸಿದರು. ಹಿಂಸೆ ಮರುಕಳಿಸದಂತೆ ಎಚ್ಚರವಹಿಸಿದರು. ಆದರೆ ಅಷ್ಟರಲ್ಲೇ ಕೆಲವು ಮಂದಿ ಅಮಾಯಕರು ಜೀವ ಕಳೆದುಕೊಂಡಿದ್ದರು. ನಿರ್ದೋಷಿಗಳನೇಕರು ಪೊಲೀಸರ ಲಾಟಿ ಏಟು ತಿಂದಿದ್ದರು. ಬಹಳ ಜನ ಕಷ್ಟ ನಷ್ಟ ಅನುಭವಿಸಿದ್ದರು. ಕೋಮುಸೌಹಾರ್ದತೆ ಕದಡಿತ್ತು. ಪಟ್ಟಣಿಗರಲ್ಲಿ ಒಬ್ಬರನ್ನೊಬ್ಬರು ಸಂದೇಹದಿಂದ ನೋಡುವಂತಾಗಿತ್ತು. ಇಂಥ ಪರಿಸ್ಥಿತಿಯಿಂದ ಬಹಳ ಮಂದಿ ಹಿರಿಯರು, ಸಜ್ಜನರು ನೊಂದುಕೊಂಡಿದ್ದರು. ಅಂಥವರಲ್ಲಿ ಹರೀಶನ ಅಜ್ಜ ರಾಮರಾಯರೂ ಒಬ್ಬರು.

ರಾಮರಾಯರು ಒಬ್ಬ ನಿವೃತ್ತ ಶಿಕ್ಷಕರು. ಸುಮಾರು ನಾಲ್ಕು ದಶಕಗಳ ಕಾಲ ಅವರು ಶಿಕ್ಷಕರಾಗಿ ದುಡಿದಿದ್ದರು. ಶಿಕ್ಷಣ ಇಲಾಖೆಯಲ್ಲಿ ಪ್ರಾಮಾಣಿಕರಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ ಒಂದು ಗಂಡು ಒಂದು ಹೆಣ್ಣು ಮಕ್ಕಳಿದ್ದರು. ಇಬ್ಬರಿಗೂ ಮದುವೆಯಾಗಿತ್ತು. ಮಗಳು ದೂರದ ಹಳ್ಳಿಯಲ್ಲಿ ಗಂಡನ ಮನೆಯಲ್ಲಿದ್ದಳು. ಇಂಜಿನಿಯರ್ ಮಗ ತನ್ನ ಹೆಂಡತಿ ಮಕ್ಕಳೊಡನೆ ಅಮೇರಿಕಾದಲ್ಲಿದ್ದ. ಆಗಾಗ ಫೋನ್ ಮಾಡಿ,ಕ ಅವನ ಹೆತ್ತವರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದ. ಮಗಳ ಮಗ ಹರೀಶ್ ಸದ್ಯ ಅವರ ಜೊತೆ ಇರಲು ಬಂದಿದ್ದ. ಇದರಿಂದ ಅಜ್ಜ ಅಜ್ಜಿಯರಿಗೆ ಸಂತೋಷವಾಗಿತ್ತು.

ಶಿಕ್ಷಕರಾಗಿದ್ದ ರಾಮರಾಯರು ಎರಡು ಕೋಣೆಗಳ ಸಣ್ಣ ಮನೆಯಲ್ಲೇ ದಿನ ಕಳೆದಿದ್ದರು. ಮಗ ಅಮೆರಿಕಾದಲ್ಲಿ ಉದ್ಯೋಗ ಹಿಡಿದ ಬಳಿಕ, ಅವನ ಒತ್ತಾಯಕ್ಕೆ ಮಣಿದು, ಅವರು ದೊಡ್ಡದೊಂದು ಮಾಳಿಗೆ ಮನೆ ಕಟ್ಟಿಸಿದ್ದರು. ಮಗನೇ ಅದಕ್ಕೆ ಹಣ ಕಳುಹಿಸಿದ್ದ. ಅವನಿಗಾಗಿ ಎಲ್ಲ ಅನುಕೂಲತೆಗಳುಳ್ಳ ದೊಡ್ಡ ಕೋಣೆಯೊಂದು ಮಾಳಿಗೆಯಲ್ಲಿತ್ತು. ಮಗನ ಉಪಯೋಗಕ್ಕೆಂದೇ ಅಪ್ಪ ಅದನ್ನು ಸಜ್ಜುಗೊಳಿಸಿದ್ದರು. ಹೊಸ ಮನೆಗೆ ಬಂದ ಮೇಲೂ ಅವರು ತಮ್ಮ ಹಳೆಮನೆಯನ್ನು ಉಳಿಸಿಕೊಂಡಿದ್ದರು. ಕೆಲವು ಸಮಯ ಅದು ಖಾಲಿಯಾಗಿಯೇ ಉಳಿದಿತ್ತು. ಎರಡು ವರ್ಷಗಳ ಹಿಂದೆ ಆ ಮನೆಯನ್ನೂ ಅವರು ಬಾಡಿಗೆಗೆ ಕೊಟ್ಟರು. ಮುಸ್ಲಿಂ ಕುಟುಂಬವೊಂದು ಅದರಲ್ಲಿ ವಾಸಿಸತೊಡಗಿತು. ಅದು ನಡೆದುದು ಹೀಗೆ-

ಒಂದು ದಿನ ಮಿಲಿಟರಿ ಪೋಷಾಕಿನ ಯುವಕನೊಬ್ಬ ಮಾಸ್ತರರ ಮನೆಗೆ ಬಂದ; “ಮಾಸ್ತರರು ಇದ್ದಾರೆಯೇ? ಅಂಗಳದಲ್ಲೇ ನಿಂತು ಅವನು ವಿಚಾರಿಸಿದ.

“ಇದ್ದಾರೆ, ಬನ್ನಿ, ಕೂತುಕೊಳ್ಳಿ. ಅಜ್ಜನನ್ನು ಕರೆಯುತ್ತೇನೆ’ ಎನ್ನುತ್ತ, ಹರೀಶ್ ಅಜ್ಜನನ್ನು ಕರೆದ. “ಅಜ್ಜಾ, ನಿಮ್ಮನ್ನು ಕೇಳಿಕೊಂಡು ಯಾರೋ ಬಂದಿದ್ದಾರೆ” ಅವನು ಹೇಳಿದ.

ಅಜ್ಜ ಹೊರಗೆ ಬಂದರು, “ಯಾರಪ್ಪಾ? ಏನು ಬೇಕಾಗಿತ್ತು?” ಎಂದು ವಿಚಾರಿಸಿದರು. ‘ನಮಸ್ಕಾರ ಸಾರ್’ ಎನ್ನುತ್ತ ಯುವಕ ಒಳಗೆ ಬಂದ. “ನನ್ನ ಪರಿಚಯ ಸಿಗಲಿಲ್ಲವೇ ಸಾರ್?” ಅವನು ಕೇಳಿದ.

“ಅದನ್ನೇ ಯೋಚಿಸುತ್ತಿದ್ದೇನೆ. ನೆನಪಿಗೆ ಬರುತ್ತಿಲ್ಲ” ಎಂದರು ಮಾಸ್ತರರು.

“ಸಾರ್, ನಾನು ಹಸನ್. ಬೆಳ್ಳೂರು ಶಾಲೆಯಲ್ಲಿ ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ. ಏಳನೆಯ ತರಗತಿಯಲ್ಲಿ ನೀವು ನನಗೆ ಕಲಿಸಿದ್ದಿರಿ” ಅವನು ತನ್ನ ಪರಿಚಯ ಹೇಳಿಕೊಂಡ. ‘ಕಳೆದ ಹತ್ತು ವರ್ಷಗಳಿಂದ ನಾನು ಭಾರತೀಯ ಸೇನೆಯಲ್ಲಿ ಸೇವೆಸಲ್ಲಿಸುತ್ತಿದ್ದೇನೆ ಅವನು ಸೇರಿಸಿದ.

ಆಗ ಮಾಸ್ತರರಿಗೆ ಅವನ ಗುರುತು ಹತ್ತಿತು. ಅವನ ಬಗ್ಗೆ ಅವನ ಕುಟುಂಬದ ಬಗ್ಗೆ ಅವರು ಪ್ರೀತಿಯಿಂದ ವಿಚಾರಿಸಿದರು. ಕಾಫಿ ನೀಡಿ, ಅವನನ್ನು ಸತ್ಕರಿಸಿದರು.

“ಸಾರ್, ನಾನೊಂದು ಕೆಲಸದ ಮೇಲೆ ಬಂದಿದ್ದೇನೆ. ನಿಮ್ಮಿಂದ ನನಗೊಂದು ಸಹಾಯ ಆಗಬೇಕು” ಅವನು ವಿಜ್ಞಾಪಿಸಿಕೊಂಡ.

“ಹೇಳಪ್ಪಾ, ನನ್ನಿಂದ ಆಗುವ ಕೆಲಸ ಎಂದಾದರೆ, ಖಂಡಿತ ಮಾಡಿಕೊಡುತ್ತೇನೆ. ನನ್ನಿಂದ ಏನಾಗಬೇಕು ಹೇಳು?” ಅವರು ಕೇಳಿದರು.

“ಸಾರ್, ನನ್ನ ಮನೆ ಹಳ್ಳಿಯಲ್ಲಿದೆ. ನನ್ನ ಮಗ ಮೊನ್ನೆ ತಾನೇ ಏಳನೆಯ ತರಗತಿ ಪಾಸು ಮಾಡಿದ್ದಾನೆ. ಅವನನ್ನು ಹೈಸ್ಕೂಲಿಗೆ ಸೇರಿಸಬೇಕೆಂಬ ಆಸೆ ನನ್ನದು. ಆದರೆ ನಮ್ಮೂರಲ್ಲಿ ಹೈಸ್ಕೂಲ್ ಇಲ್ಲ. ಹೈಸ್ಕೂಲಿಗಾಗಿ ಇಲ್ಲಿಗೇ ಬರಬೇಕು. ಹಾಗಾಗಿ ನಾನು ಈ ಪಟ್ಟಣದಲ್ಲೇ ಬಿಡಾರ ಹುಡುಕುತ್ತಿದ್ದೇನೆ. ನನ್ನ ಮನೆಯಲ್ಲಿ ವಯಸ್ಸಾಗಿರುವ ನನ್ನ ಅಮ್ಮ, ನನ್ನ ಹೆಂಡತಿ ಮತ್ತು ಮಗ ಮೂರು ಮಂದಿ ಇದ್ದಾರೆ. ಸದ್ಯ ನಾನು ಕೆಲಸ ಮಾಡುವುದು ಕಾಶ್ಮೀರ ವಿಭಾಗದಲ್ಲಿ. ಒಂದೆರಡು ದಿನಗಳಲ್ಲಿ ನಾನು ಅಲ್ಲಿಗೆ ಹೋಗಿ, ಕೆಲಸಕ್ಕೆ ಸೇರಬೇಕಾಗಿದೆ. .ಈ ಊರಲ್ಲಿ ನನಗೆ ಪರಿಚಿತರು ಯಾರೂ ಇಲ್ಲ. ನಿಮ್ಮಲ್ಲಿ ಸಣ್ಣದೊಂದು ಮನೆ ಖಾಲಿ ಇದೆ ಎಂಬ ವಿಚಾರ ತಿಳಿದೆ. ಅದನ್ನು ನನಗೆ ನೀವು ಬಾಡಿಗೆಗೆ ಕೊಡಬೇಕು. ನನ್ನ ಕುಟುಂಬದ ಹಿತಚಿಂತಕರಾಗಿ , ರಕ್ಷಕರಾಗಿ ನೀವು ಇರಬೇಕು. ಇದು ನಿಮ್ಮಲ್ಲಿ ನನ್ನ ಪ್ರಾರ್ಥನೆ. ನಿಮ್ಮಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ, ಗೌರವವಿದೆ. ಹಾಗಾಗಿ ನಿಮ್ಮ ಬಳಿಗೆ ಬಂದಿದ್ದೇನೆ. ದಯವಿಟ್ಟು ಉಪಕಾರ ಮಾಡುವಿರಾ? ನೀವು ಹೇಳಿದ ಬಾಡಿಗೆ ನಿಮಗೆ ಸಿಗುವಂತೆ ವ್ಯವಸ್ಥೆ ಮಾಡುತ್ತೇನೆ. ಹೇಳಿ ಸಾರ್, ನನ್ನ ಪ್ರಾರ್ಥನೆಯನ್ನು ನಡೆಸಿಕೊಡುವಿರಾ?” ಅವನು ಬೇಡಿಕೊಂಡ.

ಮಾಸ್ತರರು ಕ್ಷಣಕಾಲ ಯೋಚಿಸಿದರು. “ಸರಿಯಪ್ಪಾ, ನೀನು ಹೇಳಿದ ಹಾಗೇ ಆಗಲಿ. ನೀನು ನನ್ನ ಶಿಷ್ಯ, ದೇಶ ರಕ್ಷಣೆಗಾಗಿ ದುಡಿವವನು. ನಿನಗೆ ನೆರವು ನೀಡಬೇಕಾದುದು ನನ್ನ ಕರ್ತವ್ಯ. ನನ್ನ ಮೊಮ್ಮಗ ಹರೀಶ್ ಸಹ ಇನ್ನು ಹೈಸ್ಕೂಲ್ ಸೇರುವವನು ನಿನ್ನ ಮಗನೂ ಬಂದರೆ, ಮತ್ತೂ ಒಳ್ಳೆಯದಾಯಿತು. ಅವರಿಬ್ಬರೂ ಜೊತೆಯಾಗಿ ಹೋಗಿಬರುತ್ತಾರೆ.” ಅವರು ಭರವಸೆ ನೀಡಿದರು.

ಮುಂದಿನ ಎರಡು ದಿನಗಳೊಳಗೆ ಹಸನ್ ತನ್ನ ಮನೆಯವರನ್ನು ಅಲ್ಲಿಗೆ ಕರೆತಂದಿದ್ದ. ಅವನ ರಜೆ ಆಗಲೇ ಮುಗಿದಿತ್ತು.

“ಸಾರ್, ನಾನು ನಾಳೆ ಬೆಳಗ್ಗೆ ಹೊರಟುಬಿಡುತ್ತೇನೆ. ಇನ್ನು ನನ್ನ ಕುಟುಂಬಕ್ಕೆ ನೀವೇ ಸಂರಕ್ಷಕರು. ನನ್ನ ಅಮ್ಮನಲ್ಲಿ ಹಣಕೊಟ್ಟಿರುತ್ತೇನೆ. ನಿಮ್ಮ ಮೊಮ್ಮಗನ ಜೊತೆ, ನಮ್ಮ ಹುಡುಗನನ್ನೂ ಶಾಲೆಗೆ ಸೇರಿಸಿ ಉಪಕಾರ ಮಾಡಬೇಕು ನೀವು” ಹಸನ್ ಕೈಮುಗಿದು ಕೇಳಿಕೊಂಡಿದ್ದ. ಮಾಸ್ತರರು ಒಪ್ಪಿ ತಲೆಯಾಡಿಸಿದ್ದರು. “ನೀನೇನೂ ಹೆದರಬೇಡಪ್ಪಾ. ನಿಶ್ಚಿಂತೆಯಿಂದ ಹೋಗಿ ಬಾ. ದೇವರು ನಿನ್ನನ್ನು ಕಾಪಾಡಲಿ.” ಎಂದು ಅವರು ತುಂಬು ಮನದಿಂದ ಹರಸಿ, ಅವನನ್ನು ಬೀಳ್ಕೊಂಡಿದ್ದರು. ಮರುದಿನವೇ ಹಸನ್ ಅಲ್ಲಿಂದ ಹೊರಟು ಹೋಗಿದ್ದ.

ಹೀಗೆ ಮುಸ್ಲಿಂ ಕುಟುಂಬವೊಂದು ಮಾಸ್ತರರ ಆಸರೆಗೆ ಬಂದಿತ್ತು. ಎರಡು ಕುಟುಂಬಗಳೂ ತುಂಬ ಅನ್ಯೋನ್ಯವಾಗಿದ್ದವು. ಹರೀಶ್ ಮತ್ತು ಹಮೀದ್ ಇಬ್ಬರೂ ಹೈಸ್ಕೂಲ್ ಸೇರಿದ್ದರು. ಎಂಟನೆಯ ತರಗತಿಯ ಒಂದೇ ವಿಭಾಗದಲ್ಲಿ ಇಬ್ಬರೂ ಕಲಿಯುತ್ತಿದ್ದರು. ಅವಳಿ ಸೋದರರಂತೆ ಅವರಿಬ್ಬರೂ ಜೊತೆಯಾಗಿ ಶಾಲೆಗೆ ಹೋಗುತ್ತಿದ್ದರು. ಜೊತೆಗೂಡಿಯೇ ಹಿಂದಿರುಗುತ್ತಿದ್ದರು. ಜೊತೆಗೂಡಿಯೇ ಇರುತ್ತಿದ್ದರು. ಆಟ-ಪಾಠ-ಮನೆಗೆಲಸಗಳನ್ನು ಸಹ ಜೊತೆಯಾಗಿದ್ದೇ ಅವರು ಪೂರೈಸುತ್ತಿದ್ದರು. ಅವರಿಬ್ಬರೊಳಗೆ ವಿಶೇಷ ಪ್ರೀತಿ - ವಿಶ್ವಾಸಗಳಿದ್ದವು. ಆತ್ಮೀಯ ಗೆಳೆಯರು ಅವರಾಗಿದ್ದರು.



ಹಸನ್ ಕುಟುಂಬ ಮಾಸ್ತರರ ಆಸರೆಗೆ ಬಂದು ಒಂದು ವರ್ಷ ಕಳೆದಿತ್ತು. ಅಷ್ಟರಲ್ಲೇ ಗಣೇಶೋತ್ಸವ ಬಂದಿತ್ತು. ಅನಿರೀಕ್ಷಿತ ಹಿಂಸೆ ಗಲಭೆಗಳು ಪಟ್ಟಣದಲ್ಲಿ ನಡೆದು ಹೋಗಿದ್ದವು. ಆದರೆ ಆಗ ಮಾಸ್ತರರಿಗೆ, ಅವರ ಮನೆಯವರಿಗೆ ಯಾವುದೇ ಸಮಸ್ಯೆ ಎದುರಾಗಿರಲಿಲ್ಲ, ಅವರು ಸಂಕಟಕ್ಕೆ ಸಿಲುಕಿರಲಿಲ್ಲ. ಕಾರಣ ಗೊತ್ತೇ? ಆ ಬಾರಿ, ಗಲಭೆಗೆ ಎರಡು ದಿನಗಳ ಮೊದಲು ಹಳ್ಳಿಯಲ್ಲಿದ್ದ ಹಮೀದನ ಅಜ್ಜನಿಗೆ, ಅಂದರೆ ತಾಯಿಯ ಅಪ್ಪನಿಗೆ, ರೋಗ ಉಲ್ಬಣಿಸಿತ್ತು. ಅವರು ಬದುಕಿ ಉಳಿವ ಆಸೆಯಿಲ್ಲ ಎಂದು ಅಲ್ಲಿಂದ ವಾರ್ತೆ ಬಂದಿತ್ತು. ಹಾಗಾಗಿ ಅವರೆಲ್ಲ ಹಳ್ಳಿಗೆ ಹೋಗಿಬಿಟ್ಟಿದ್ದರು. ಇಲ್ಲಿ ಗಲಾಟೆ ಆರಂಭವಾದೊಡನೆ ಮಾಸ್ತರರು ಎಚ್ಚತ್ತುಕೊಂಡು, ಹಳ್ಳಿಗೆ ವಾರ್ತೆ ಮುಟ್ಟಿಸಿದ್ದರು. ಗಲಭೆಗಳೆಲ್ಲ ತಣ್ಣಗಾಗುವ ವರೆಗೆ ಹಳ್ಳಿಯಲ್ಲೇ ಇರುವಂತೆ ಅವರಿಗೆ ಸಲಹೆ ನೀಡಿದ್ದರು. ಇಲ್ಲಿ ಎಲ್ಲವೂ ಯಥಾಸ್ಥಿತಿಗೆ ಬಂದ ಬಳಿಕವೇ ಆ ಕುಟುಂಬ ಇಲ್ಲಿಗೆ ಹೊರಟು ಬಂದಿತ್ತು. ಹಾಗಾಗಿ ಆ ಬಾರಿ ಅವರೆಲ್ಲ ನಿಶ್ಚಿಂತರಾಗಿದ್ದರು. ಗಲಭೆಯ ಬಿಸಿ ಯಾರಿಗೂ ತಟ್ಟಿರಲಿಲ್ಲ.

ದಿನಗಳು ಉರುಳುತ್ತಿದ್ದವು. ತಿಂಗಳಿಗೊಮ್ಮೆ ಹಸನ್ ತನ್ನ ಮನೆಯವರಿಗೆ ಪತ್ರ ಬರೆಯುತ್ತಿದ್ದ. ಅದಕ್ಕೆ ಸಮಯ ಸಿಗದಿದ್ದರೆ, ಮಾಸ್ತರರ ಮನೆಗೆ ಫೋನ್ ಮಾಡಿ, ಕ್ಷೇಮ ಸಮಾಚಾರ ತಿಳಿಸುತ್ತಿದ್ದ. ಇಲ್ಲಿನ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದ; ಮನೆಯವರ ಖರ್ಚಿಗೆ ಹಣವನ್ನೂ ಕಳುಹಿಸುತ್ತಿದ್ದ. ಅದರಲ್ಲಿ ಮಾಸ್ತರರಿಗೆ ಕೊಡಬೇಕಾದ ಬಾಡಿಗೆ ಹಣವೂ ಸೇರಿರುತ್ತಿತ್ತು. ತೀರ ಕಡಿಮೆ ಬಾಡಿಗೆಗೆ ಮನೆ ಒದಗಿಸಿಕೊಟ್ಟ ಬಗ್ಗೆ ಮಾಸ್ತರರಿಗೆ ಹಸನ್ ಆಭಾರಿಯಾಗಿದ್ದ. ಮಾಸ್ತರರು ಅವನ ಕುಟುಂಬದ ಸಂರಕ್ಷಕರೂಫ ಆಗಿದ್ದರಲ್ಲ? ಹಾಗಾಗಿ ಹಸನ್‌ನ ಪ್ರತಿ ಸಂದೇಶದಲ್ಲೂ ಮಾಸ್ತರರಿಗೆ ಪ್ರತ್ಯೇಕ ವಂದನೆ ತಿಳಿಸಲು ಅವನೆಂದೂ ಮರೆಯುತ್ತಿರಲಿಲ್ಲ. ಅಂತೂ ಸಮಯ ಸರಿಯುತ್ತಿತ್ತು. ಆ ಎರಡೂ ಕುಟುಂಬಗಳ ಬದುಕು ನೆಮ್ಮದಿಯಿಂದ ಸಾಗುತ್ತಿತ್ತು.

ಒಂದು ದಿನ ಎಂದಿನಂತೆ ಹರೀಶ್ ಮತ್ತು ಹಮೀದ್ ಶಾಲೆಗೆ ಹೊರಡುತ್ತಿದ್ದರು. ಆಗಲೇ ನೆರೆಮನೆಯವರು ಯಾರೋ ಓಡಿ ಬಂದರು. ಹೊಸತೊಂದು ಸುದ್ದಿಯನ್ನು ಬಿತ್ತರಿಸಿದರು. ದೇವಸ್ಥಾನದ ಬಾಗಿಲಲ್ಲಿ ಯಾರೋ ದುರಾತ್ಮರು ದನದ ಮಾಂಸ ಇರಿಸಿದ್ದಾರಂತೆ. ಅದರಿಂದ ಹಿಂದೂಗಳು ರೊಚ್ಚಿಗೆದ್ದು, ದೇವಾಲಯದ ಬಳಿ ಒಟ್ಟುಗೂಡಿದ್ದಾರಂತೆ. ಅತ್ತ ಮಸೀದಿಯ ಬಳಿಯೂ ನೂರಾರು ಯುವಕರು ಜಮಾಯಿಸಿದ್ದಾರಂತೆ. ಅಂಗಡಿ ಹೋಟೇಲುಗಳವರು ಬಾಗಿಲು ಮುಚ್ಚುತ್ತಿದ್ದಾರಂತೆ . ಈ ಬಾರಿ ಹಿಂದಿನ ಗಲಾಟೆಗಿಂತಲೂ ಹೆಚ್ಚಿನ ಅನಾಹುತ ಆಗಲಿದೆಯಂತೆ' ಇದು ಅವರು ತಂದ ವಾರ್ತೆಯ ಸಾರಾಂಶ.

ಈ ವಾರ್ತೆ ಹಬ್ಬಿದುದೇ ತಡ, ಹೊರಗೆ ಹೊರಟಿದ್ದ ಹೆಂಗಸರು, ಮಕ್ಕಳು ಗಡಬಡಿಸಿ ಹಿಂದೆ ಬಂದರು; ತಮ್ಮ ತಮ್ಮ ಮನೆಗಳೊಳಗೆ ಸೇರ ತೊಡಗಿದರು. ಮನೆಗಳಲ್ಲೇ ಇದ್ದವರು ಕಿಟ್ಟ ಬಾಗಿಲುಗಳನ್ನು ಮುಚ್ಚಿದರು. “ಬೇಡ ಮಕ್ಕಳೇ, ಈ ಹೊತ್ತು ಶಾಲೆಗೆ ಹೋಗಬೇಡಿರಿ. ಗಲಭೆ ಕಡಿಮೆಯಾಗುವ ವರೆಗೆ ಮನೆ ಬಿಟ್ಟು ಹೋಗಬಾರದು ನೀವು.” ಹಿರಿಯರು ಮಕ್ಕಳಿಗೆ ತಾಕೀತು ಮಾಡಿದರು ಹರೀಶ್ - ಹಮೀದ್ ಸಹ ಶಾಲೆಯ ಡ್ರೆಸ್ ಕಳಚಿದರು; ಮನೆಯ ಮಾಮೂಲಿ ಅಂಗಿ ಚಡ್ಡಿ ತೊಟ್ಟುಕೊಂಡರು. ಕಾತರದಿಂದ ಅವರು ಹೊರಗೆ ಇಣುಕಿ ನೋಡತೊಡಗಿದರು. ಎಲ್ಲ ಕಡೆ ಹೆಂಗಸರು ಮಕ್ಕಳು, ಮುದುಕರು ಮನೆ ಸೇರಿದ್ದರು. ಯುವರಕು ಮಾತ್ರ ಹೊರಗೆ ಧಾವಿಸುತ್ತಿದ್ದರು.

ಪಟ್ಟಣವೆಲ್ಲ ಅಲ್ಲೋಲ ಕಲ್ಲೋಲವಾಗಿತ್ತು. ಎರಡೂ ಕೋಮಿಗೆ ಸೇರಿದ್ದ ಯುವಕರು ರಸ್ತೆಗಿಳಿದಿದ್ದರು. ಕೆಲವು ಕಡೆ ಚೂರಿ ಇರಿತಗಳು ನಡೆದಿದ್ದವು. ಕೆಲವು ಕಟ್ಟಡಗಳು ಬೆಂಕಿಗೆ ಆಹುತಿಯಾಗಿದ್ದವು. ಕೆಲವು ಕಡೆ ಬಡಿಗೆ, ಕತ್ತಿ, ಖಡ್ಗಗಳಿಂದ ಹಲ್ಲೆ ನಡೆಸಿದ್ದರು. ಹಿಂದೂಗಳು ಹೆಚ್ಚಿದ್ದ ಕಡೆ ಮುಸ್ಲಿಂ ಕುಟುಂಬಗಳು ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಇರುವ ಕಡೆ ಹಿಂದೂಗಳು ಹೆಚ್ಚು ತೊಂದರೆಗೆ ಒಳಗಾಗಿದ್ದರು. ರಸ್ತೆಗಳಲ್ಲಿ ವಾಹನಗಳ ಓಡಾಟ ಸಂಪೂರ್ಣ ಬಂದ್ ಆಗಿತ್ತು. ಶಾಲೆ ಕಾಲೇಜುಗಳು , ಸರಕಾರ ಕಚೇರಿಗಳು ಎಲ್ಲ ಮುಚ್ಚಿದ್ದವು. ಪಟ್ಟಣದ ವಿವಿಧ ಭಾಗಗಳಿಂದ ಹಿಂಸೆಯ ವರದಿಗಳು ಬರುತ್ತಲೇ ಇದ್ದವು.

ಈಗ ಮಾಸ್ತರರ ಮನೆಯವರು, ಹಸನ್‌ನ ಮನೆಯವರು ಎಲ್ಲರೂ ಚಿಂತೆಗೆ ಒಳಗಾದರು. ಉಳಿದ ಎಲ್ಲರಿಗಿಂತಲೂ ಹೆಚ್ಚಿನ ಜವಾಬ್ದಾರಿ ಮಾಸ್ತರರ ಮೇಲಿತ್ತು. ಕಾರಣ, ಮುಸ್ಲಿಂ ಕುಟುಂಬವೊಂದು ಅವರ ಆಸರೆಯಲ್ಲಿತ್ತು. ಹಾಗಾಗಿ ಅವರು ಅತಿ ಹೆಚ್ಚು ಚಿಂತೆಗೆ ಒಳಗಾದರು. "ಇಲ್ಲಿ ಮುಸ್ಲಿಂ ಕುಟುಂಬ ಒಂದಿರುವುದು ಈ ಭಾಗದ ಜನಕ್ಕೆ ಗೊತ್ತೇ ಇದೆ. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟವರು ಇಲ್ಲಿಗೂ ಬಂದರೆ? ಅನಾಹುತವೇನಾದರೂ ನಡೆದು ಹೋದರೆ? ನನ್ನ ಮೇಲೆ ಹಸನ್ ಇರಿಸಿದ ನಂಬಿಕೆಗೆ ದ್ರೋಹ ಮಾಡಿದಂತೆ ಆಗುವುದಿಲ್ಲವೇ: ಗಲಭೆಯ ಆರಂಭ ಆಗಿ ಹೋಗಿದೆ. ಈಗ ಇವರನ್ನು ಹಳ್ಳಿಗೆ ಕಳುಹಿಸುವುದೂ ಸಾಧ್ಯವಾಗದು. ಜನಕ್ಕೆ ಇವರು ಇಲ್ಲಿರುವ ಸುಳಿವು ಸಿಕ್ಕಿದರೂ ಅನಾಹುತ ನಡೆದು ಹೋದೀತು. ಏನು ಮಾಡೋಣ?..." ಅವರು ಯೋಚಿಸುತ್ತಲೇ ಇದ್ದರು.

ಅತ್ತ ಹಮೀದ್ ಮತ್ತು ಮನೆಯವರು ಎಲ್ಲರಿಗಿಂತ ಹೆಚ್ಚು ಹೆದರಿದ್ದರು. ಹಿಂದೂಗಳ ಈ ವಠಾರದಲ್ಲಿ ಅವರದೊಂದೇ ಮುಸ್ಲಿಂ ಕುಟುಂಬ. ಗಂಡಸರು ಯಾರೂ ಮನೆಯಲ್ಲಿಲ್ಲ. ಇರುವವರೆಂದರೆ ಒಬ್ಬ ಹುಡುಗ ಮತ್ತು ಇಬ್ಬರು ಹೆಂಗಸರು. ಕಿಡಿಗೇಡಿಗಳು ಏರಿ ಬಂಧರೆ ವಯಸ್ಸಾದ ಮಾಸ್ತರರು ಸಹ ಏನೂ ಮಾಡುವಂತಿಲ್ಲ. ಅಲ್ಲಾಹುವೇ ತಮ್ಮನ್ನು ಕಾಪಾಡಬೇಕು ಎಂದು ಅವರು ಮೊರೆಯಿಡುತ್ತಿದ್ದರು.

ಹರೀಶನ ಚಡಪಡಿಕೆಯಂತೂ ಹೇಳಿತೀರದು. ತನಗಿಂತ ಹೆಚ್ಚಾಗಿ ಅವನು ಹಮೀದ್ ಮತ್ತು ಅವನ ಅಮ್ಮ-ಅಜ್ಜಿ ಅವರ ಬಗ್ಗೆ ಚಿಂತಿಸುತ್ತಿದ್ದ. ದುಷ್ಟರು ಯಾರಾದರೂ ಥಕ್ಕನೆ ಬಂದು ಆ ಮನೆಗೆ ನುಗ್ಗಿದರೆ? ಅಥವಾ ಆ ಮನೆಗೆ ಬೆಂಕಿ ಹಚ್ಚಿದರೆ? .. ಇಂಥ ಯೋಚನೆಗಳೇ ಅವನನ್ನು ಕಾಡತೊಡಗಿದವು. ಅವನಿಗೆ ಇನ್ನೂ ತಡೆಯಲಾಗಲಿಲ್ಲ. 'ಅಜ್ಜನಲ್ಲಿ ಈ ಬಗ್ಗೆ ಮಾತಾಡಬೇಕು. ಅವರೇನು ಹೇಳುತ್ತಾರೋ ಕೇಳಬೇಕು' ಅವನು ನಿರ್ಧರಿಸಿದ. ತತ್‌ಕ್ಷಣ ಅವನು ತನ್ನ ಅಜ್ಜನ ಬಳಿಗೆ ಬಂದ.

ಏನು ಬಂದೆ ಹರೀಶಾ? ಏನಾದರೂ ಹೇಳಲಿತ್ತೇನು? 'ಅಜ್ಜ ಕೇಳಿದರು. 'ಅಜ್ಜಾ, ಹಮೀದನ ಮನೆಯಲ್ಲಿ ಗಂಡಸರು ಯಾರೂ ಇಲ್ಲ. ಅವರು ಭಾರೀ ಹೆದರಿಕೊಂಡಿದ್ದಾರೆ. ಅವನ ಅಜ್ಜಿ ಆಗಲೇ ಮುಸು ಮುಸು ಅಳುತ್ತಿದ್ದರಂತೆ" ಹರೀಶ್ ವರದಿ ಒಪ್ಪಿಸಿದ. 'ಅವರು ಸಹ ನಮ್ಮ ಮನೆಯಲ್ಲೇ ಇದ್ದರೆ ಆಗದೆ ಅಜ್ಜಾ?' ಅವನು ಅಜ್ಜನನ್ನು ಕೇಳಿದ.

'ನಾನು ಸಹ ಇದನ್ನೇ ಯೋಚಿಸುತ್ತಿದ್ದೆ ಮಗೂ. ನೀನು ಬಂದುದು ಒಳ್ಳೆಯದಾಯಿತು. ಈಗಲೇ ನೀನು ಅಜ್ಜಿಯ ಬಳಿಗೆ ಹೋಗಬೇಕು. ಅವರನ್ನು ಇಲ್ಲಿಗೆ ಕರೆತರಬೇಕು' ಅವರು ಹೇಳಿದರು. ಕೂಡಲೇ ಹರೀಶ್ ಹಮೀದನ ಮನೆಗೆ ಬಂದ; ಅಜ್ಜಿಯನ್ನು ಕರೆತಂದ.

'ನೋಡಿ ತಾಯೇ, ಪಟ್ಟಣದಲ್ಲಿ ಪುನಃ ಗಲಭೆ ಆರಂಭವಾಗಿದೆ. ಯಾವಾಗ ಏನಾದೀತೋ ಹೇಳ ಬರುವುದಿಲ್ಲ. ನಿಮ್ಮ ಮಗ ನಿಮ್ಮ ಮೂವರ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿ ಹೋಗಿದ್ದಾನೆ. ಅವನು ನನ್ನ ಮೇಲೆ ಇರಿಸಿದ ನಂಬಿಕೆ ಹುಸಿಯಾಗಬಾರದು. ಆದಕಾರಣ ಈ ಮಾತು ಹೇಳುತ್ತಿದ್ದೇನೆ. ನೀವು ಈಗಲೇ ನಿಮ್ಮ ಬಿಡಾರಕ್ಕೆ ಹೋಗಬೇಕು. ಮೂರು ನಾಲ್ಕು ದಿನಗಳ ಮಟ್ಟಿಗೆ ನಿಮಗೆ ಬೇಕಾಗುವ ಬಟ್ಟೆ ಬರೆ, ಅಡುಗೆ ಪಾತ್ರೆಗಳು, ತಟ್ಟೆ ಬಟ್ಟಲು, ಗ್ಯಾಸ್ ಒಲೆ, ಬೆಂಕಿಪೆಟ್ಟಿಗೆ, ಚಿಮಿಣಿ ಇವುಗಳನ್ನು ತೆಗೆದಿರಿಸಬೇಕು. ನಾನು ಈ ಮನೆಯ ಹಿಂಬಾಗಿಲನ್ನು ತೆರೆದಿರಿಸುತ್ತೇನೆ. ಅದರ ಮೂಲಕ ನೀವು ನಿಮ್ಮ ವಸ್ತುಗಳೊಡನೆ, ಮೇಲೆ ಮಾಳಿಗೆಯ ದೊಡ್ಡ ಕೋಣೆ ಸೇರಿಕೊಳ್ಳಬೇಕು. ನಾನು ಹೇಳುವವರೆಗೆ ನೀವು ಅಲ್ಲೇ ಇರಬೇಕು. ಅಲ್ಲಿ ಹೆಚ್ಚು ಸದ್ದು ಮಾಡಬಾರದು. ಲೈಟ್ ಹಚ್ಚಬಾರದು. ಕತ್ತಲಾದಾಗ ಮೇಣದ ಬತ್ತಿ ಅಥವಾ ಚಿಮಿಣಿ ದೀಪ ಮಾತ್ರ ಉರಿಸಬೇಕು. ಕಿಟಕಿ ಬಾಗಿಲುಗಳು ಮುಚ್ಚಿಯೇ ಇರಲಿ. ಪರದೆಗಳನ್ನು ಇಳಿಸಿಬಿಡಿ. ನೀವು ಅಲ್ಲಿರುವುದು ಹೊರಗಿನವರ ಗಮನಕ್ಕೆ ಬರಬಾರದು. ನಾಲ್ಕು ದಿನಗಳ ಕಾಲ ನಿಮಗೆ ಸ್ವಲ್ಪ ತೊಂದರೆಯಾದೀತು. ಕ್ಷಮಿಸಿ. ಸದ್ಯ ಬೇರೆ ದಾರಿ ಇಲ್ಲ. ದಯವಿಟ್ಟು ಸಹಕರಿಸಬೇಕು ನೀವು. ನಿಮ್ಮ ಬಿಡಾರದ ಬೀಗವನ್ನು ನನ್ನಲ್ಲಿ ಕೊಟ್ಟು ಬಿಡಿರಿ. ನಿಮ್ಮ

ಬಿಡಾರಕ್ಕೆ ಬ ಈಗ ನಾನು ಹಾಕುತ್ತೇನೆ. ಬೀಗದ ಕೈ ನಾನೇ ಇರಿಸಿಕೊಳ್ಳುತ್ತೇನೆ. ಅನಿವಾರ್ಯ ವಸ್ತು ಏನಾದರೂ ಬೇಕಾದರೆ, ಹಮೀದನ ಮೂಲಕ ತಿಳಿಸಿರಿ. ಬೇಕಾದುದನ್ನು ನಾವು ಒದಗಿಸಿಕೊಡುತ್ತೇವೆ. ನೆನಪಿಡಿ . ನಿಮ್ಮಲ್ಲಿ ಯಾರೂ ಹೊರಕ್ಕೆ ಕಾಣಿಸಿಕೊಳ್ಳಬಾರದು. ಗಲಭೆ ಕಡಿಮೆಯಾದಾಗ ನಾನೇ ನಿಮಗೆ ತಿಳಿಸುತ್ತೇನೆ. ಆಗ ನೀವು ಕೆಳಗೆ ಬರಬಹುದು. ಆಗಬಹುದಲ್ಲ?" ಮಾಸ್ತರರು ಕೇಳಿದರು.

ಅಜ್ಜಿಗೂ ಅವರ ಮಾತು ಸರಿ ಎನಿಸಿತು. "ನಿಮ್ಮ ಉಪಕಾರ ನಾವೆಂದೂ ಮರೆಯುವುದಿಲ್ಲ ರಾಯರೇ, ನೀವು ಹೇಳಿದಂತೆ ನಡೆದುಕೊಳ್ಳುತ್ತೇವೆ." ಅವರು ಸಮ್ಮತಿ ಸೂಚಿಸಿದರು. ತಾಸು ಹೊತ್ತು ಕಳೆವ ಮೊದಲೇ ಹಸನ್‌ನ ಕುಟುಂಬವು ಮಾಸ್ತರರ ಮನೆಯ ಮಾಳಿಗೆ ಸೇರಿಕೊಂಡಿತು. ಕತ್ತಲಾಗುತ್ತಿದ್ದಂತೆ ಮಾಸ್ತರರೇ ಬಾಡಿಗೆ ಮನೆಗೆ ಬೀಗ ಹಾಕಿಬಂದರು.

ಗಲಭೆ ಎರಡನೆಯ ದಿನಕ್ಕೆ ಕಾಲಿಟ್ಟಿತು. ಹಿಂದಿನ ದಿನಕ್ಕಿಂತಲೂ ಹೆಚ್ಚಿನ ಅನಾಹುತಗಳು ಅಂದು ಸಂಭವಿಸಿದವು. ಅಲ್ಲಲಿ ಹೊಡೆದಾಟಗಳು, ಚೂರಿ ಇರಿತಗಳು ನಡೆದವು. ಹಲವಾರು ಮಂದಿ ಗಾಯಗೊಂಡರು. ಎರಡು ಮೂರು ಕಡೆ ಕಿಡಿಗೇಡಿಗಳು ಅಂಗಡಿಗಳನ್ನು ಲೂಟಿ ಮಾಡಿದರು; ಕಟ್ಟಡಗಳಿಗೆ ಬೆಂಕಿ ಹಚ್ಚಿದರು. ಇಬ್ಬರು ಅಮಾಯಕರು ಜೀವ ಕಳೆದುಕೊಂಡರು. ಸಾಕಷ್ಟು ಪೋಲೀಸರು ಪಟ್ಟಣದಲ್ಲಿ ಇರಲಿಲ್ಲ. ಆದುದರಿಂದ ಗಲಭೆಯನ್ನು ಹತ್ತಿಕ್ಕಲು ಅವರು ಒದ್ದಾಡಬೇಕಾಯಿತು. ಹೆಚ್ಚಿನ ಪೋಲೀಸ್ ಬಲಕ್ಕಾಗಿ ತುರ್ತು ಕರೆ ಹೋಗಿತ್ತು. ಆದರೆ ಅದಿನ್ನೂ ಪಟ್ಟಣಕ್ಕೆ ಬಂದಿರಲಿಲ್ಲ. ಹಾಗಾಗಿ ಎರಡನೆಯ ದಿನವೂ ಪಟ್ಟಣದಲ್ಲಿ ಅರಾಜಕತೆ ಮುಂದುವರಿಯಿತು.

ಗಲಭೆಯ ಮೂರನೆಯ ದಿನ ಮುಂಜಾನೆ ಹೆಚ್ಚುವರಿ ಪೋಲಿಸ್ ಪಡೆ ಪಟ್ಟಣದಲ್ಲಿ ಬಂದಿಳಿಯಿತು. ಒಡನೆ "ನಿಷೇಧಾಜ್ಞೆಯನ್ನು ಪಟ್ಟಣದಲ್ಲಿ ಜಾರಿಗೊಳಿಸಲಾಗಿದೆ. ನಾಗರಿಕರು ಯಾರೂ ಬೀದಿಗಿಳಿಯಬಾರದು" ಎಂಬ ಘೋಷಣೆ ಹೊರಬಿತ್ತು. ಶಾಂತಿಪಾಲನೆಯ ಕಾರ್ಯ ಚುರುಕುಗೊಂಡಿತು. ಗುಂಪು ಗೋಚರಿಸಿದ ಕಡೆ ಪೋಲಿಸರು ಧಾವಿಸಿದರು. ಜನರನ್ನು ಚದರಿಸಿದರು. ವಿರೋಧಿಸಿದವರ ಮೇಲೆ ಲಾಟಿ ಬೀಸಿದರು. ಅನಿವಾರ್ಯ ಎನಿಸಿದಾಗ, ಅವರು ಗಾಳಿಯಲ್ಲಿ ಗುಂಡು ಹಾರಿಸಿದರು. ಕೆಲವು ಮಂದಿ ಜಖಂಗೊಂಡರು. ಅಂತೂ ಮೂರನೆಯ ದಿನ ಪರಿಸ್ಥಿತಿ ಹತೋಟಿಗೆ ಬಂತು. ಜಿಲ್ಲಾಧಿಕಾರಿಗಳು, ಶಾಸಕರು, ಗಣ್ಯರು ಶಾಂತಿ ಸಭೆ ನಡೆಸಿದರು; ಶಾಂತಿ ಕಾಪಾಡಲು ಸಹಕರಿಸಬೇಕೆಂದು ಸಾರ್ವಜನಿಕರಿಗೆ ಕರೆನೀಡಿದರು. ನಿಧಾನವಾಗಿ ಪಟ್ಟಣವು ಯಥಾಸ್ಥಿತಿಗೆ ಹಿಂದಿರುಗಿತು. ಸಂಜೆಯ ವೇಳೆಗೆ ಬಸ್ ಸಂಚಾರವೂ ಆರಂಭಗೊಂಡಿತು.

ನಾಲ್ಕನೆಯ ದಿನ ಬೆಳಿಗ್ಗೆ ಮಾಸ್ತರರು ರೇಡಿಯೋ ಹಚ್ಚಿದರು. "ಪಟ್ಟಣದಲ್ಲಿ ಸಂಪೂರ್ಣ ಶಾಂತಿ ನೆಲೆಸಿದೆ. ರಾತ್ರಿ ಸಹ ಯಾವುದೇ ಅಹಿತಕರ ಘಟನೆ ನಡೆದ ಬಗ್ಗೆ ವರದಿ ಬಂದಿಲ್ಲ" ಎಂಬ ವಾರ್ತೆ ಕೇಳಿ ಅವರಿಗೆ ಸಮಾಧಾನವಾಯಿತು. ವಾರ್ತಾಪ್ರಸಾರ ಕೇಳುತ್ತಿದ್ದ ಹರೀಶನಿಗೂ ಖುಶಿಯಾಯಿತು. "ಗಲಭೆ ನಿಂತಿದೆಯಲ್ಲ ಅಜ್ಜಾ. ಇನ್ನು..." ಅವನು ಮಾತೆತ್ತಿದ.

'ಗೊತ್ತಾಯಿತು ಮಗೂ. ಇನ್ನು ಹಮೀದ್ ಮತ್ತು ಮನೆಯವರನ್ನು ಕೆಳಗೆ ಕರೆಯಬಹುದಲ್ಲ ಎನ್ನುವ ಅಭಿಪ್ರಾಯ ನಿನ್ನದು. ಅದು ತಪ್ಪಲ್ಲ ಮಗೂ. ಆದರೂ ಸಂಜೆಯವರೆಗೆ ಕಾದುನೋಡೋಣ. ಪರಿಸ್ಥಿತಿ ಶಾಂತವಾಗಿಯೇ ಇದ್ದರೆ, ಮತ್ತೆ ಅವರು ಬಿಡಾರಕ್ಕೆ ಬರಲಿ. ಸಂಜೆ ಅವರು ಹಳ್ಳಿಯಿಂದ ಹಿಂದಿರುಗಿದ್ದಾರೆ ಎಂದೇ ಜನರು ತಿಳಿವಂತಾಗಲಿ. ನಮ್ಮ ಮನೆಯಲ್ಲೇ ಅವರು ಇದ್ದರು ಎನ್ನುವುದು ಹೊರಗಿನವರೆಗೆ ಗೊತ್ತಾಗದಿರುವುದೇ ಒಳ್ಳೆಯದು" ಅಜ್ಜ ಹೇಳಿದರು. ಹರೀಶನಿಗೂ ಇದು ಸರಿ ಎನಿಸಿತು. "ಅಗತ್ಯಬಿದ್ದರೆ, ಇನ್ನೊಂದು ಬಾರಿಗೂ ಈ ಯೋಜನೆ ಉಪಯೋಗಕ್ಕೆ ಬಂದೀತಲ್ಲ?" ಅವನು ಯೋಚಿಸಿದ. ಆ ಹಗಲು ಹಾಗೇ ಕಳೆದು ಹೋಯಿತು. ಪಟ್ಟಣ ಶಾಂತವಾಗಿತ್ತು.

ರಾತ್ರೆ ಊಟವಾದೊಡನೆ ಅಜ್ಜ ಹರೀಶನನ್ನು ಕರೆದರು. 'ಹೋಗು ಮಗೂ, ಹಮೀದ್ ಮತ್ತು ಮನೆಯವರನ್ನು ಕೆಳಗೆ ಬರಲು ಹೇಳು. ನಾನು ಹಿಂಬಾಗಿಲು ತೆರೆದಿಡುತ್ತೇನೆ. ಅವರು ಬಿಡಾರ ಸೇರಿಕೊಳ್ಳಲಿ' ಎಂದರು ಅಜ್ಜ. ಹರೀಶ್ ಹಮೀದನ ಅಜ್ಜಿಗೆ ವಾರ್ತೆ ಮುಟ್ಟಿಸಿದ.

ಸದ್ದು ಮಾಡದೆ ಅವರೆಲ್ಲ ಕೆಳಗೆ ಬಂದರು. "ನಮ್ಮ ಜೀವ ಉಳಿಸಿದಿರಿ ರಾಯರೆ, ಅಲ್ಲಾಹು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ" ತುಂಬು ಮನದಿಂದ ಅಜ್ಜಿ ಮಾಸ್ತರರಿಗೆ ಕೃತಜ್ಞತೆ ಸಲ್ಲಿಸಿದರು..

"ನಮ್ಮನ್ನೆಲ್ಲ ಕಾಪಾಡಿದಿರಿ ರಾಯರೇ. ನಿಮ್ಮ ಉಪಕಾರವನ್ನು ನಾವೆಂದೂ ಮರೆಯುವುದಿಲ್ಲ." ಹಮೀದನ ಅಮ್ಮನೂ ದನಿಗೂಡಿಸಿದರು. ಅವರ ದನಿ ಗದ್ಗಗವಾಗಿತ್ತು.

"ಎಲ್ಲರನ್ನೂ ಕಾಪಾಡುವವನು ಆ ದೇವನೊಬ್ಬನೇ. ನಾವೆಲ್ಲ ಅವನ ಮಕ್ಕಳು. ಸೋದರರಂತೆ, ಪ್ರೀತಿಯಿಂದ ಕೂಡಿ ಬಾಳಬೇಕಾದವರು. ನಮ್ಮ ಧರ್ಮಗಳು ಬೇರೆ ಬೇರೆ ಯಾದರೇನು? ಅವುಗಳ ಸಾರ ತತ್ವ ಒಂದೇ ಇದೆ. "ಎಲ್ಲರನ್ನೂ ಪ್ರೀತಿಸು. ಒಳ್ಳೆಯದನ್ನೇ ಯೋಚಿಸು. ಒಳ್ಳೆಯ ಕೆಲಸಗಳನ್ನೇ ಮಾಡು" ಎಂದೇ ಅವು ಬೋಧಿಸುತ್ತವೆ. ಮೂರ್ಖರಿಗೆ, ಧಮಾಂಧರಿಗೆ ಇದು ಅರ್ಥವಾಗುವುದಿಲ್ಲ. ಯಾರ ಬುದ್ಧಿಯ ಮಾತೂ ಅವರಿಗೆ ನಾಟುವುದಿಲ್ಲ. ಹಾಗಾಗಿ ಇಂಥ ಅನರ್ಥಗಳು ಆಗಾಗ ನಡೆಯುತ್ತವೆ. 'ಸಬ್‌ಕೋ ಸನ್ಮತಿ ದೇ ಭಗವಾನ್' ಎಂದು ಗಾಂಧೀಜಿ ಪ್ರಾರ್ಥಿಸುತ್ತಿದ್ದರಲ್ಲ? ಹಾಗೆ ನಾವೂ ಪ್ರಾರ್ಥಿಸೋಣ. ಭಗವಂತ ಎಲ್ಲರಿಗೂ ಒಳ್ಳೆಯ ಬುದ್ಧಿಕೊಡಲಿ. ಅಂತೂ ಸದ್ಯ ಬಂದ ಕಂಟಕ ದೂರಾಯಿತಲ್ಲ? ಹಸನ್ ನನ್ನ ಮೇಲೆ ಇರಿಸಿದ ವಿಶ್ವಾಸವನ್ನು ಉಳಿಸಿಕೊಂಡೆನಲ್ಲ? ಅದಕ್ಕಾಗಿ ಸಂತೋಷಪಡುತ್ತೇನೆ. ಹೋಗಿ ತಾಯೀ ಇನ್ನು ನಿಶ್ಚಿಂತೆಯಿಂದ ನಿದ್ದೆ ಮಾಡಿರಿ" ಮಾಸ್ತರರು ಅವರನ್ನು ಕಳುಹಿಸಿಕೊಟ್ಟರು. ಅಷ್ಟು ಹೊತ್ತು ಹರೀಶ್ ಮತ್ತು ಹಮೀದ್ ಖುಷಿಯಿಂದ ಪರಸ್ಪರ ತಬ್ಬಿಕೊಂಡೇ ನಿಂತಿದ್ದರು.



ಭಾರತ ಮಾತೆಯ ಪ್ರೀತಿಯ ಮಕ್ಕಳು
ನಾವೆಲ್ಲರು ಒಂದೇ,
ನಾವೆಲ್ಲರು ಒಂದೇ ……
ಎಂದು ಹಾಡುತ್ತಲೇ ಇದ್ದರು.

* * *

# ಮಕ್ಕಳಿಗಾಗಿ ಪರಿಸರ ಕತೆಗಳು

## ಉಪಕಾರ ಸ್ಮರಣೆ

ಕಳೆದ ಸುಮಾರು ೫೦ ವರುಷಗಳಿಂದ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಅಳಿಲ ಸೇವೆ ಸಲ್ಲಿಸುತ್ತ ಬಂದಿರುವ ನನಗೆ ನನ್ನ ಆತ್ಮೀಯರಾದ ಕಿನ್ನಿಗೋಳಿ ಯುಗಪುರುಷ ಪ್ರಕಟಣಾಲಯದ ಉಡುಪ ಬಂಧುಗಳು ನಿರಂತರ ಬೆಂಬಲ ನೀಡಿದ್ದಾರೆ. ನನ್ನ ೫೦ಕ್ಕಿಂತ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ, ಉಪಕಾರ ಮಾಡಿದ್ದಾರೆ.

ನಾಡಿನ ಮಕ್ಕಳು, ಹೆತ್ತವರು, ಶಿಕ್ಷಕ ಬಂಧು, ಭಗಿನಿಯರು ನನ್ನ ಪುಸ್ತಕಗಳನ್ನು ಕೊಂಡು ಓದಿ, ಮೆಚ್ಚುಗೆ ಸೂಚಿಸಿ, ನನ್ನಲ್ಲಿ ಉತ್ಸಾಹ ತುಂಬಿದ್ದಾರೆ. ಸಹೃದಯಿಗಳೂ, ಸಾಹಿತ್ಯ ಪ್ರೇಮಿಗಳೂ ಆದ **ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು,** ಮೂಲ್ಕಿ, ಶ್ರೀ ಬೊಳುವಾರು **ಮಾಧವ ನಾಯಕ್,** ಪುತ್ತೂರು, **ಕನ್ನಡ ಪೂಜಾರಿ ಕಣ್ಣನ್, ಹಿರೇಮಗಳೂರು,** ಇವರು ಸ್ವಯಂಪ್ರೇರಣೆಯಿಂದ ಆರ್ಥಿಕ ನೆರವು ನೀಡಿ, ಪ್ರೋತ್ಸಾಹಿಸಿದ್ದಾರೆ. ಇವರೆಲ್ಲರ ಉಪಕರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ದ.ಕ. ಪರಿಸರಾಸಕ್ತರ ಒಕ್ಕೂಟದ ಅಧ್ಯಕ್ಷರೂ "ನಿಸರ್ಗ" ಪತ್ರಿಕೆಯ ಸಂಪಾದಕರೂ ನನ್ನ ಆತ್ಮೀಯ ಸಾಹಿತಿ ಮಿತ್ರರೂ ಆದ ಶ್ರೀ ಶಂಪಾ ದೈತೋಟ ಅವರು ಇದೀಗ ಹೊರಬರುತ್ತಿರುವ "ಪರಿಸರ ಕತೆಗಳು" ಪುಸ್ತಕದ ಉಪಯುಕ್ತತೆಯ ಬಗ್ಗೆ ಮೆಚ್ಚುನುಡಿಯಾಡಿ, ಶುಭ ಹಾರೈಸಿದ್ದಾರೆ.

ನನ್ನ ಕಲಾವಿದ ಮಿತ್ರ ಬಾಲ ಮಧುರ ಕಾನನ, ಬೇಳ (ಕಾಸರಗೋಡು) ಅವರು ಅಂದವಾದ ಚಿತ್ರಗಳನ್ನು ಬರೆದುಕೊಟ್ಟು, ಈ ಪುಸ್ತಕಕ್ಕೆ ಹೆಚ್ಚಿನ ಮೆರುಗು ನೀಡಿದ್ದಾರೆ.

"ಉದಯವಾಣಿ", "ತರಂಗ", "ವಿಜಯಕರ್ನಾಟಕ" ಪತ್ರಿಕೆಗಳ ಸಂಪಾದಕರು ಈ ಪುಸ್ತಕದ ಕೆಲವು ಕತೆಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ.

ಅನುಭವಿಗಳನೇಕರು ತಮ್ಮ ಭಾಷಣ, ಲೇಖನ, ಪತ್ರಿಕಾ ವರದಿಗಳ ಮೂಲಕ ಮಾಹಿತಿ ಸಂಗ್ರಹಿಸಲು ನನಗೆ ನೆರವಾಗಿದ್ದಾರೆ.

ದಿನಾರ್ ಗ್ರಾಫಿಕ್ಸ್, ಮೂಡಬಿದಿರೆ ಅವರು ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟು ಸಹಕರಿಸಿದ್ದಾರೆ. ಇವರೆಲ್ಲರಿಗೂ ನನ್ನ ತುಂಬು ಹೃದಯದ ವಂದನೆಗಳು

**ಪಳಕಳ ಸೀತಾರಾಮ ಭಟ್ಟ**
ಶಿಶುಸಾಹಿತ್ಯಮಾಲೆ
ಮಿತ್ತಬೈಲು
೦೫.೦೬.೨೦೦೦

# ಮುನ್ನುಡಿ – ಶುಭನುಡಿ

ಶಿಶು ಸಾಹಿತ್ಯ ರಚನೆಯಲ್ಲಿ ಪಳಗಿದ ಕೈ ಪಳಕಳ ಸೀತಾರಾಮ ಭಟ್ಟರದು. ಈಗಾಗಲೇ ಅವರು ಮಕ್ಕಳಿಗಾಗಿ ಸುಮಾರು ತೊಂಬತ್ತರಷ್ಟು ಕೃತಿಗಳನ್ನು ರಚಿಸಿ, ಜನಪ್ರಿಯರಾಗಿದ್ದಾರೆ. ವಿಚಾರ ಪ್ರಚೋದಕವೂ ವೈವಿಧ್ಯಪೂರ್ಣವೂ ಆದ ಅವರ ಕೃತಿಗಳು ನಿತ್ಯನೂತನವಾಗಿವೆ. ಸರಳ ಸುಂದರ ಶೈಲಿಯಲ್ಲಿದ್ದು, ನಿರ್ದಿಷ್ಟ ಉದ್ದೇಶ ಸಾಧನೆಯಲ್ಲಿ ಯಶ ಪಡೆಯುತ್ತವೆ. ದಶಕದ ಹಿಂದೆ ಮಕ್ಕಳಿಗಾಗಿಯೇ ಅವರು ರಚಿಸಿದ ಕೃತಿಯೊಂದು (ಸಂಬಳವಿಲ್ಲದ ಸೇವಕ - ಭೂಮಿಯೆಲ್ಲ ಬಂಗಾರ) ಕನ್ನಾಡ ಜನಪ್ರಿಯ ಕೃಷಿಪತ್ರಿಕೆಯೆಂದು ಹೆಸರಾದ "ಅಡಿಕೆ ಪತ್ರಿಕೆ"ಯ ಬಳಗವು ಸಾವಿರಾರು ಮೈಲಿಗಳ ಓಡಾಟ ನಡೆಸಿ, ಕೃಷಿ ಕ್ಷೇತ್ರದಲ್ಲಿ ಎರೆಹುಳುಗಳ ಪಾತ್ರದ ಬಗ್ಗೆ ಸಮಗ್ರ ಅಧ್ಯಯನ ಮಾಡಿ, ಸಚಿತ್ರ ಲೇಖನ ಮಾಲೆಯನ್ನೇ ಪ್ರಕಟಿಸಲು ಕಾರಣವಾದುದನ್ನು ಇಲ್ಲಿ ಸ್ಮರಿಸಬಹುದು.

ಸದ್ಯ ನಮ್ಮ ಮುಂದಿರುವ "ಪರಿಸರ ಕತೆಗಳು" ಸಂಗ್ರಹದಲ್ಲಿ ಒಟ್ಟು ಹತ್ತು ಕತೆಗಳಿವೆ. "ಒಂದು ಕಪ್ಪೆಯ ಕಥೆ - ವ್ಯಥೆ" ಎಳೆಯ ತಲೆಯೊಳಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ನುಸುಳಿಸಿ, ನಿಜ ಬದುಕಿನ ಅರಿವು ಮೂಡಿಸುತ್ತದೆ." ಪರಿಸರ ಉಳಿಸು, ಎಲ್ಲರೂ ಉಳಿಯುತ್ತೇವೆ" ಎಂಬ ಸಂದೇಶವನ್ನೂ ಸಾರುತ್ತದೆ. "ಮಾದನ ಶಪಥ"ವು ಅಜ್ಞನಾಗಿದ್ದರೂ ಸರಳ ಸಜ್ಜನನಾಗಿದ್ದ ಮರುಕಟುಕನೊಬ್ಬನ ಮನಃಪರಿವರ್ತನೆಯ ಬಗೆಯನ್ನು ತಿಳಿಸುತ್ತದೆ. "ಸಣ್ಣ ಹಕ್ಕಿಯ ದೊಡ್ಡ ಕೆಲಸ" ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಳಸಿ, ಭತ್ತದ ಬೆಳೆಯ ಸರ್ವನಾಶ ಅನುಭವಿಸಿದ ಚೀನಾದ ಜನರ ಬೋಳೇತನದ ಕತೆಯಾಗಿದೆ. "ಸಹಕಾರದ ಸುಖ" ಪ್ರಾಣಿ - ಪಕ್ಷಿಗಳ ನಿಸರ್ಗಸಹಜ ಅವಲಂಬನೆಯನ್ನು  ತೋರಿಸುತ್ತದೆ. "ರಮೇಶಣ್ಣ ಮೇಸ್ತ್ರು ಆದಾಗ" ಜನ, ಬೇರು ಸಹಿತ ಕಿತ್ತೊಗೆಯಬೇಕೆನ್ನುವ ಯುಪಟೋರಿಯಂ ಸಸ್ಯದ ಗುಣಾವಗುಣಗಳನ್ನೆಲ್ಲ ಕತೆಯಾಗಿಸಿ, ತಿಳಿಸಿಕೊಡುತ್ತದೆ. "ಗುಬ್ಬಚ್ಚಿಯ ಗೋಳು" ಕರಾವಳಿ - ಮಲೆನಾಡುಗಳ ಮನೆ ಮನೆಗಳಲ್ಲಿ ಮುದ್ದಾಗಿ ಚಿಲಿಪಿಲಿಗುಟ್ಟುತ್ತ ಇದ್ದ ಗುಬ್ಬಚ್ಚಿಗಳು ಈಗ ಕಣ್ಮರೆಯಾಗಿರಲು ಕಾರಣಗಳನ್ನು ಬಿಚ್ಚಿಡುತ್ತದೆ. "ಹೆಸರು ತಂದ ಮಕ್ಕಳು" ಸಣ್ಣ  ಊರಿನ ಶಾಲೆಯ ಸಣ್ಣ ಮಕ್ಕಳ ದೊಡ್ಡ ಕಾರ್ಯ, ಎಲ್ಲ ಊರುಗಳ ದೊಡ್ಡವರೂ ಸೇರಿ ಮಾಡಬೇಕಾದ ಇಂದಿನ ಅನಿವಾರ್ಯ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಹೀಗೆ ಇಲ್ಲಿನ ಪ್ರತಿಯೊಂದು ಕತೆಯಲ್ಲೂ ನಮಗೆ ಒಂದಲ್ಲ ಒಂದು ಸಂದೇಶವಿದೆ., ಎಚ್ಚರಿಕೆ ಇದೆ.

ಒಟ್ಟಿನಲ್ಲಿ ಹೇಳುವುದಾದರೆ ಇದು "ಜೀವೋ ಜೀವಸ್ಯ ಜೀವನಂ" ಎಂಬ ವೇದಾಂತದ ಅಂತರಾರ್ಥವನ್ನು ಮೆದುಮನದಾಳದಲ್ಲಿ ಪ್ರತಿಷ್ಠಾಪಿಸಬಲ್ಲ ಸಾರ್ಥಕಗಾಥೆ, ಬಾಲ ಮಧುರ ಕಾನನರ ಸಂದರ್ಭೋಚಿತ ಚಿತ್ರಗಳಿಂದ ಕಳೆಏರಿಸಿಕೊಂಡಿರುವ ಬಾಳ ಕಲಾಮಾತೆ.

ಈ "ಪರಿಸರ ಕತೆಗಳು" ಪಳಕಳರು ಎಳೆಯರಿಗಾಗಿ ಬೆಳೆಸಿ ನೀಡಿದ ರಸಬಾಳೆಯ ಗೊನೆಯಾದರೂ ಹಳೆಬರು ಸಹ ಸವಿದು ಅರಗಿಸಿಕೊಳ್ಳಬಹುದಾದ ಸ್ವಾದಿಷ್ಟ ಫಲವಾಗಿದೆ. ಇದು ಪರಿಸರ ಕುರಿತಾದ ನಿರಂತರ ಕಲಿಕೆಯ ರಸಘಟ್ಟಿ. ತಮಗಾಗಿ, ತಮ್ಮ ಮಕ್ಕಳಿಗಾಗಿ ಹೆತ್ತವರೆಲ್ಲ ಕೊಂಡಿಟ್ಟುಕೊಳ್ಳಬೇಕಾದ್ದು., ಶಿಕ್ಷಣ ಇಲಾಖೆ, ಸರಕಾರ ಕೊಂಡು ಸಹಕರಿಸಬೇಕಾದ್ದು.

ಪಳಕಳರ ಪುಸ್ತಕಕ್ಕೆ ನನ್ನ ಮುನ್ನುಡಿಯ ಅಗತ್ಯವಿಲ್ಲ. ಆದರೂ ಆತ್ಮೀಯತೆಯಿಂದ ಅವರು ಕೇಳಿದರು., ಅಭಿಮಾನದಿಂದ ನಾನು ಬರೆದೆ. ಅದು ನನ್ನ ಸೌಭಾಗ್ಯ. ಈ ಅವಕಾಶಕ್ಕಾಗಿ ನಾನು ಅವರಿಗೆ ಋಣಿ. ಅವರು ಇನ್ನಷ್ಟು ರಚನಾತ್ಮಕ ಕಾರ್ಯ ನಡೆಸುವಂತಾಗಲಿ ಎಂಬುದು ನನ್ನ ಮಹದಾಸೆ.

"ಲೋಕಾಃ ಸಮಸ್ತಾಃ ಸುಖಿನೋ ಭವಂತು" ಎಂದು-

**ಶಂಪಾ ದೈದೋಟ, ಪಾಣಾಜೆ.**

# ಒಂದು ಕಪ್ಪೆಯ ಕಥೆ – ವ್ಯಥೆ



ಹಿಂದಿನ ರಾತ್ರಿ ಮಳೆ ಸುರಿದಿತ್ತು. ವರ್ಷದ ಮೊದಲ ಮಳೆ ಅದು. ಜೋರಾಗಿಯೇ ಸುರಿದಿತ್ತು. ಮಲಗಿದ್ದ ಕಿಟ್ಟನೂ ಆಗ ಎಚ್ಚರಗೊಂಡಿದ್ದ. ಮತ್ತೆ ಪುನಃ ನಿದ್ರೆಗೆ ಜಾರಿದ್ದ.

ಮರುದಿನ ಬೆಳಗ್ಗೆ ಕಿಟ್ಟನಿಗೆ ಬೇಗನೆ ಎಚ್ಚರಾಯಿತು. ರಾತ್ರಿ ಮಳೆ ಸುರಿದುದು ಅವನ ನೆನಪಿಗೆ ಬಂತು. "ನಮ್ಮ ಹಳೆಯ ಕೆರೆ ಬತ್ತಿ ಹೋಗಿತ್ತಲ್ಲ.? ಅದರಲ್ಲಿ ನೀರಾಗಿದೆಯೇ ನೋಡಬೇಕು" ಎನಿಸಿತು ಅವನಿಗೆ. ಒಡನೆ ಅವನು ಅಮ್ಮನನ್ನು ಕೂಗಿದ. "ಅಮ್ಮಾ, ತೋಟದ ಕಡೆಗೆ ಹೋಗಿ ಬರುತ್ತೇನೆ." ಎಂದು ಹೇಳಿದ.. ಮನೆಯಿಂದ ಹೊರಟು ತೋಟಕ್ಕೆ ಬಂದ.

ಹಳೆಯ ಕೆರೆಯಲ್ಲಿ ಹೂಳು ತುಂಬಿತ್ತು. ಕಿಟ್ಟ ಇಣುಕಿ ನೋಡಿದ. ತಟಕು  ನೀರೂ ಅಲ್ಲಿರಲಿಲ್ಲ. ಮಣ್ಣು ಮಾತ್ರ ನೆನೆದಿತ್ತು. ಕಿಟ್ಟನಿಗೆ ನಿರಾಸೆಯಾಯಿತು. ಅವನು ಮನೆಗೆ ಹಿಂದಿರುಗಿ ಬರುವವನಿದ್ದ. ಆಗಲೇ ಅವನಿಗೆ "ಡ್ರಾಂಕ್... ಡ್ರಾಂಕ್....ಡ್ರಾಂಕ್" ಕೂಗು ಕೇಳಿಸಿತು. ಅವನು ಅತ್ತ ನೋಡಿದ. ಕಪ್ಪೆ ಕಾಣಿಸಲಿಲ್ಲ. ಆದರೆ ಅದರ ಕೂಗು ಇನ್ನೊಮ್ಮೆ ಕೇಳಿಸಿತು. ಕೆರೆಯ ಬದಿಯ ಬಿರುಕಿನಿಂದ ಸದ್ದು ಕೇಳಿ ಬರುತ್ತಿತ್ತು. ಕಿಟ್ಟ ಕೆಳಗೆ ಇಳಿದು ಬಂದ., ಬಿರುಕಿನತ್ತ ಬಗ್ಗಿ ನೋಡಿದ. ಕಪ್ಪೆಯೊಂದು ಅಲ್ಲಿ ತಬ್ಬಿ ಕೂತಿತ್ತು.

"ಏನು ಹುಡುಗಾ, ಯಾರನ್ನು ಹುಡುಕುತ್ತಿರುವಿ?" ಅದು ಪ್ರಶ್ನಿಸಿತು. "ನಿನ್ನ ಕೂಗು ಕೇಳಿಸಿತು. ನೀನು ಎಲ್ಲಿ ಅಡಗಿದ್ದೀ ಎಂದು ನೋಡುತ್ತಿದ್ದೇನೆ. ಬಾ, ಬಿರುಕಿನಿಂದ ಹೊರಗೆ ಬಾ. ಮಾತಾಡೋಣ". ಕಿಟ್ಟ, ಕಪ್ಪೆಯನ್ನು ಕರೆದ.

"ಕೆಲವರು ಕೆಟ್ಟ ಹುಡುಗರು ಇರುತ್ತಾರೆ. ಅವರು ಕಲ್ಲು ಹೊಡೆದು ನಮಗೆ ತೊಂದರೆ ಕೊಡುತ್ತಾರೆ. ಅದೇ ಹೆದರಿಕೆ ನನಗೆ." ಕಪ್ಪೆ ಭಯ ತೋಡಿಕೊಂಡಿತು.

"ನಾನು ಕೆಟ್ಟವನಲ್ಲ. ನಿನಗೆ ತೊಂದರೆ ಕೊಡುವುದಿಲ್ಲ. ಹೊರಗೆ ಬಾ." ಕಿಟ್ಟ ಭರವಸೆ ನೀಡಿದ. ಕಪ್ಪೆ ಹೊರಕ್ಕೆ ಜಿಗಿಯಿತು.

'ಹೂ, ಹೊರಗೆ ಬಂದಿದ್ದೇನೆ ನೋಡು. ನಿನಗೇನು ಹೇಳಲಿದೆಯೋ ಹೇಳಿಬಿಡು". ಎಂದಿತು ಅದು.

"ಕಳೆದ ರಾತ್ರಿ ಮಳೆ ಬಂದಿತ್ತಲ್ಲ.?" ಅದು ನಿನಗೆ ಗೊತ್ತೇ.?" ಕಿಟ್ಟ ಕೇಳಿದ. "ಮಳೆ ಬರುವ ಸೂಚನೆಯನ್ನೂ ನಾನು ಗ್ರಹಿಸಬಲ್ಲೆ. ಮತ್ತೆ ಮಳೆ ಬಂದುದು ಗೊತ್ತಾಗದೆ ಇರುತ್ತದೆಯೇ?" ಕಪ್ಪೆ ಮರು ಪ್ರಶ್ನೆ ಹಾಕಿತು.

"ಇಷ್ಟು ದಿನ ನೀನು ಎಲ್ಲಿದ್ದೆ.? ಏನು ಮಾಡುತ್ತಿದ್ದೆ.?" ಕಿಟ್ಟ ಕುತೂಹಲ ವ್ಯಕ್ತಪಡಿಸಿದ.

“ಇಷ್ಟು ದಿನ ಕಲ್ಲುಗಳ ಎಡೆಯಲ್ಲೋ ಮಣ್ಣಿನ ಅಡಿಯಲ್ಲೋ ವಿಶ್ರಾಂತಿ ಪಡೆಯುತ್ತಿದ್ದೆ., ನಿದ್ದೆ ಮಾಡುತ್ತಿದ್ದೆ.” ಕಪ್ಪೆ ಹೇಳಿತು.

“ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ನಿಮ್ಮವರು ಕಾಣಿಸುತ್ತಿದ್ದರು. ಈಗ ಕಾಣಿಸುವುದಿಲ್ಲವಲ್ಲ.!” ಕಿಟ್ಟ ಕೇಳಿದ.

“ಇದ್ದವರು ಕಾಣಿಸಿಕೊಳ್ಳುತ್ತಾರೆ. ಇಲ್ಲದಿದ್ದವರು ಹೇಗೆ ಕಾಣಿಸಿಕೊಂಡಾರು?” ಕಪ್ಪೆ ಪ್ರಶ್ನೆ ಹಾಕಿತು. ಅದರ ಮಾತು ಕಿಟ್ಟನಿಗೆ ಅರ್ಥವಾಗಲಿಲ್ಲ. ಅವನು ಕಪ್ಪೆಯನ್ನೇ ಮಿಕಿಮಿಕಿ ನೋಡತೊಡಗಿದ.

ಕಪ್ಪೆ ಹೇಳಿತು. “ಪ್ರಾಣಿ -ಪಕ್ಷಿಗಳಂತೆ ಈಗ ನಮ್ಮವರ ಸಂಖ್ಯೆಯೂ ಕಡಿಮೆಯಾಗಿದೆ. ಮೊದಲಿನಂತೆ ನಾವೀಗ ಕಾಣ ಸಿಗುವುದಿಲ್ಲ.”

“ಯಾಕೆ ಹೀಗಾಯಿತು.? ಇದಕ್ಕೇನು ಕಾರಣ?” ಕಿಟ್ಟ ವಿಚಾರಿಸಿದ.

“ಏನು ಕಾರಣ ಎನ್ನಬೇಡ. ಯಾರು ಕಾರಣ ಎಂದು ಕೇಳು. ಒಂದೇ ಮಾತಿನಲ್ಲಿ ಉತ್ತರಕೊಡುತ್ತೇನೆ.” ಎಂದಿತು ಕಪ್ಪೆ.

“ಹೂಂ, ಹಾಗೇ ಆಗಲಿ. ಯಾರು ಕಾರಣ ಹೇಳಿಬಿಡು “ಕಿಟ್ಟ ಕೇಳಿಕೊಂಡ.

“ನೀವು, ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುವ ಮನುಷ್ಯರು” ಕಿಟ್ಟನನ್ನೇ ತೋರಿಸುತ್ತಾ ಹೇಳಿತು ಕಪ್ಪೆ.

“ಅಂದರೆ, ಮನುಷ್ಯರಿಗೆ ನೀನು ಉಪಕಾರ ಮಾಡುತ್ತೀ. ಅವರು ನಿನಗೆ ಅಪಕಾರ ಮಾಡುತ್ತಾರೆ. ಇದು ನಿನ್ನ ಮಾತಿನ ಅರ್ಥವೇ?” ಅವನು ಕೇಳಿದ.

“ಹೌದು, ಅದನ್ನು ವಿವರಿಸಿ ಹೇಳಬೇಕೇ?” ಪ್ರಶ್ನಿಸಿತು ಕಪ್ಪೆ.

“ದಯವಿಟ್ಟು ಹಾಗೆ ಮಾಡು” ಕಿಟ್ಟ ಬೇಡಿಕೊಂಡ.

“ಸರಿ, ನಾನು ಹೇಳುವುದನ್ನು ಕಿವಿಗೊಟ್ಟು ಕೇಳು. ನಾವು, ಕಪ್ಪೆಗಳು, ಹೊಟ್ಟೆಬಾಕರು ನಿಜ. ದಿನವೂ ನಮ್ಮ ಸರಿತೂಕದ ಕ್ರಿಮಿಕೀಟಗಳನ್ನು ನಾವು ತಿಂದು ಮುಗಿಸುತ್ತೇವೆ. ಇವುಗಳಲ್ಲಿ ಹಲವು ರೈತರ ಬೆಳೆಗಳಿಗೆ ಹಾನಿ ಮಾಡುವವು. ಇನ್ನು ಕೆಲವು ರೋಗರುಜಿನಗಳನ್ನು ಹರಡುವವು. ಅಂದರೆ ನಾವು ರೈತರ ಬೆಳೆಗಳ ರಕ್ಷಣೆಗೂ ನೆರವಾಗುತ್ತೇವೆ. ರೋಗರುಜಿನಗಳನ್ನು ತಡೆಯುವಲ್ಲಿಯೂ ಸಹಾಯ ಮಾಡುತ್ತೇವೆ. ಕೆಲವು ರೋಗಗಳ ಚಿಕಿತ್ಸೆಯಲ್ಲಿ ಔಷಧಿಗಾಗಿ ಸಹ ನಮ್ಮನ್ನು ಬಳಸುತ್ತಾರೆ. ಕೆಲವು ಸಂಶೋಧನೆಗಳಲ್ಲಿ ನಮ್ಮನ್ನು ಉಪಯೋಗಿಸುತ್ತಾರೆ. ಕೆಲವೆಡೆ ನಮ್ಮ ಆಹಾರವನ್ನೂ ಜನ ಇಷ್ಟಪಟ್ಟು ತಿನ್ನುತ್ತಾರೆ. ವಿವಿಧ ರೀತಿಗಳಲ್ಲಿ ಮನುಷ್ಯರಿಗೆ ನಾವು ಉಪಕಾರ ಮಾಡುತ್ತೇವೆ. ಆದರೆ ಅವರು ಮಾತ್ರ ನಮಗೆ ಕೇಡು ಬಗೆಯುತ್ತಾರೆ, ಅಪಕಾರವನ್ನೇ ಮಾಡುತ್ತಾರೆ.” ಬೇಸರ ವ್ಯಕ್ತಪಡಿಸಿತು ಕಪ್ಪೆ.

“ನಾವು ಮನುಷ್ಯರು, ನಿಮಗೇನು ಅಪಕಾರ ಮಾಡುತ್ತೇವೆ? ಅದನ್ನೂ ಹೇಳಿಬಿಡು.” ಕಿಟ್ಟ ಮತ್ತೆ ಕೇಳಿಕೊಂಡ.



“ಭೂಮಿಯಲ್ಲಿ ಮನುಷ್ಯರ ಸಂಖ್ಯೆ ಹೆಚ್ಚಿದ ಹಾಗೆ, ಕೃಷಿ ವಿಸ್ತರಿಸಿತು. ಕಾಡು ಕಡಿಮೆಯಾಯಿತು. ಕೈಗಾರಿಕೆಗಳು ಬೆಳೆದವು. ಕೃಷಿಹೆಚ್ಚಿದಂತೆ ರಾಸಾಯನಿಕಗಳ, ಕೀಟನಾಶಕಗಳ ಬಳಕೆ ಹೆಚ್ಚಿತು. ಕೈಗಾರಿಕೆಗಳು ಬೆಳೆದಂತೆ ಯಂತ್ರೋಪಕರಣಗಳ ಉಪಯೋಗ ಹೆಚ್ಚಿತು. ಕೃಷಿಯಲ್ಲಿ ಬಳಸಿದ ರಾಸಾಯನಿಕ - ಕೀಟನಾಶಕಗಳಿಂದಾಗಿ, ವಾಹನಗಳು, ಯಂತ್ರಗಳು ಹೊರಬಿಡುವ ಧೂಳು, ಹೊಗೆ, ಕಶ್ಮಲ, ವಿಷಾನಿಲಗಳಿಂದಾಗಿ, ಗಾಳಿ ಕೆಟ್ಟಿತು. ನೀರು ಮಲಿನಗೊಂಡಿತು. ಆಹಾರ ವಿಷಯುಕ್ತವಾಯಿತು. ನಾವು ಕಪ್ಪೆಗಳು ಉಸಿರಾಡುವುದು ಚರ್ಮದ ಮೂಲಕ. ವಿಷವಸ್ತುಗಳಿಂದ ಕೂಡಿದ ಗಾಳಿ ಮತ್ತು ನೀರು ಚರ್ಮದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಚರ್ಮ ರೋಗಗಳಿಗೆ ನಾವು ತುತ್ತಾಗುತ್ತೇವೆ. ನಮ್ಮ ಚರ್ಮಕ್ಕೆ ಅಪಾಯ ತಟ್ಟುತ್ತದೆ. ನಮ್ಮ ಉಸಿರಾಟಕ್ಕೆ ತೊಡಕಾಗುತ್ತದೆ. ಬಹಳ ಮಂದಿ ನಮ್ಮವರು ಸಾವಿಗೆ ಈಡಾಗುತ್ತಾರೆ. ವಿಷಾಹಾರ ಸೇವನೆಯಿಂದಲೂ ನಮ್ಮವರು ಸಾಯುತ್ತಾರೆ. ಮಲಿನಗಾಳಿ, ನೀರು, ಆಹಾರ ಸೇವಿಸಿದವರು ತತ್‌ಕ್ಷಣ ಸಾಯದೆ ಇರಬಹುದು. ಆದರೆ, ಕ್ರಮೇಣ ನಮ್ಮ ಶಕ್ತಿ ಕುಂದುತ್ತದೆ. ಆರೋಗ್ಯ ಕೆಡುತ್ತದೆ. ನಾವು ಇರಿಸುವ ಮೊಟ್ಟೆಗಳ ಸಂಖ್ಯೆ ಕಡಿಮೆಯಾಗುತ್ತದೆ. ಇರಿಸಿದ ಮೊಟ್ಟೆಗಳೂ ಒಡೆಯುವುದಿಲ್ಲ. ಒಡೆದರೂ ಅಂಗವಿಕಲ ಮರಿಗಳು ಹುಟ್ಟಿಕೊಳ್ಳುತ್ತವೆ. ಅವು ಬದುಕಿ ಉಳಿಯುವುದಿಲ್ಲ. ನಮ್ಮ ಸಂತತಿ ಬೆಳೆಯುವುದಿಲ್ಲ. ದಿನದಿನಕ್ಕೆ ನಮ್ಮ ಸಂಖ್ಯೆ ಕಡಿಮೆಯಾಗುತ್ತಿದೆ. ಏನು ಹುಡುಗಾ, ನನ್ನ ಪುರಾಣ ಕೇಳಿ ಬೇಸರವಾಯಿತೆ ನಿನಗೆ?” ಕಪ್ಪೆ ಕಿಟ್ಟನನ್ನು ಪ್ರಶ್ನಿಸಿತು.

“ಇಲ್ಲಪ್ಪಾ ಇಲ್ಲ, ನಾನು ಕಿವಿಗೊಟ್ಟು ಕೇಳುತ್ತಲೇ ಇದ್ದೇನೆ. ಈಗ ನಿಮ್ಮವರು ಹೆಚ್ಚು ಸಂಖ್ಯೆಯಲ್ಲಿ ಕಾಣಸಿಗುವುದಿಲ್ಲ. ಅದಕ್ಕೆ ಕಾರಣವೇನು ಎನ್ನುವುದು ನನಗೆ ತಿಳಿದಂತಾಯಿತು” ಕಿಟ್ಟ ಹೇಳಿದ.

“ಪೂರ್ಣ ತಿಳಿದಂತೆ ಆಗಲಿಲ್ಲ ಹುಡುಗಾ. ತಿಳಿಯಬೇಕಾದುದು ಇನ್ನೂ ಇದೆ.” ಕಪ್ಪೆ ಹೇಳಿತು.

“ಇನ್ನೂ ಇದೆ? ಏನದು?” ಕಿಟ್ಟ ಕುತೂಹಲ ತೋರಿದ.

“ಹಣದ ಆಸೆಯಿಂದ ಈ ಮನುಷ್ಯರು ನಮ್ಮನ್ನೂ ಹಿಡಿದು ಮಾರಾಟ ಮಾಡುತ್ತಾರೆ. ಪ್ರತಿವರ್ಷ ಸಾವಿರಾರು ಟನ್ನುಗಳಷ್ಟು ಕಪ್ಪೆ ಆಹಾರ ಇಲ್ಲಿಂದ ಪರದೇಶಗಳಿಗೆ ರಫ್ತಾಗುತ್ತದೆ. ಅದರಲ್ಲೂ ನಮ್ಮ ಕಾಲುಗಳಿಗೆ ವಿಶೇಷ ಬೇಡಿಕೆಯಂತೆ. ನಿನಗಿದು ಗೊತ್ತೇ? ಒಂದು ಕೆ.ಜಿ. ಕಪ್ಪೆ ಕಾಲು ಸಿಗಲು ೩೦ ಮಂದಿ ನಮ್ಮವರು ಜೀವ ಬಿಡಬೇಕಾಗುತ್ತದೆ. ಹಾಗಾದರೆ ಸಾವಿರಾರು ಟನ್‌ಭಾರ ತೂಗಲು ನಮ್ಮಲ್ಲಿ ಎಷ್ಟು ಮಂದಿಯನ್ನು ಸಾಯಿಸುತ್ತಾರೆ, ನೀನೇ ಲೆಕ್ಕ ಹಾಕಿಕೋ,.”

“ಇನ್ನೂ ಹೇಳಬೇಕೆಂದರೆ, ಇಂದು ಹಸಿರು ಪರಿಸರ ನಾಶವಾಗಿದೆ. ಭೂಮಿಯ ಮೇಲಿನ ಓಜೋನ್‌ಪದರ ತೆಳ್ಳಗಾಗಿದೆ. ನೆಲದ ಮೇಲೆ ಬೀಳುವ ಅಲ್ಟ್ರಾವಾಯಿಲೆಟ್‌ವಿಶೇಷ ಕಿರಣಗಳು ನಮಗೆ ಅಪಾಯ ತಂದೊಡ್ಡುತ್ತವೆ. ಹಾಗೆಯೇ ಮಿತಿಮೀರಿದ ಕೈಗಾರಿಕಾ ತಾಜ್ಯಗಳು ಇಂದು ವಾತಾವರಣ ಸೇರುತ್ತವೆ. ಇದರಿಂದಾಗಿ ಆಮ್ಲ ಮಳೆಸುರಿಯುವುದೂ ಇದೆ. ಇದು ಸಹ ನಮಗೆ ಹಾನಿ ಉಂಟು ಮಾಡುತ್ತದೆ.

ನಮ್ಮ ಸಂತತಿ ನಾಶಕ್ಕೆ ಇಂಥ ಹಲವು ಹತ್ತು ಕಾರಣಗಳಿವೆ. ಎಲ್ಲಕ್ಕೂ ಮೂಲ ಕಾರಣ ಮನುಷ್ಯ. ಅವನು ಮಾಡಿದ ಅನ್ಯಾಯದ ಫಲವಿದು. ಇದಕ್ಕೆ ತಕ್ಕ ಶಿಕ್ಷೆ ಅವನಿಗೂ ಆಗದಿರದು." ದನಿ ಎತ್ತರಿಸಿ ಹೇಳಿತು ಕಪ್ಪೆ. ಅದಕ್ಕೆ ಭಾರೀ ಕೋಪ ಬಂದಿತ್ತು.

"ಮನುಷ್ಯರಿಗೆ ಶಿಕ್ಷೆಯಾಗುವುದೇ? ಏನು ಹೇಳುತ್ತಿರುವೆ ನೀನು?" ಕಿಟ್ಟ ಪ್ರಶ್ನಿಸಿದ.

"ನಾನು ನಿಜವನ್ನೇ ಹೇಳುತ್ತಿದ್ದೇನೆ. ಮನುಷ್ಯರ ಅನ್ಯಾಯಕ್ಕೆ ತಕ್ಕ ಶಿಕ್ಷೆ ಆಗಿಯೇ ತೀರುವುದು. ಇಷ್ಟರಲ್ಲಿಯೇ ಅಂತಹ ಸೂಚನೆಗಳು ಕಾಣಿಸತೊಡಗಿವೆ." ದೃಢವಾಗಿ ಹೇಳಿತು ಕಪ್ಪೆ.

"ಅವರನ್ನು ಯಾರು ಶಿಕ್ಷಿಸುತ್ತಾರೆ? ಹೇಗೆ? ಅಂತಹ ಯಾವ ಸೂಚನೆಗಳು ಕಾಣಿಸಿಕೊಂಡಿವೆ.?" ಕೆಲವು ಪ್ರಶ್ನೆಗಳನ್ನು ಒಂದೇ ಉಸುರಿಗೆ ಕೇಳಿದ ಕಿಟ್ಟ.

"ಪರಿಸರ ಕೆಡಿಸಿದವರನ್ನು ಪ್ರಕೃತಿಯೇ ಶಿಕ್ಷಿಸುತ್ತದೆ. ಮನುಷ್ಯರು ಪರಿಸರವನ್ನು ಕೆಡಿಸಿದರು. ಪರಿಣಾಮವಾಗಿ ನಮ್ಮ ಸಂತತಿ ಕ್ಷೀಣಿಸಿತು. ನಮ್ಮನ್ನು ತಿಂದು ಬದುಕುವ ಹಾವು, ಹಕ್ಕಿಗಳಿಗೆ ಆಹಾರದ ಅಭಾವ ತಲೆದೋರಿತು. ಇನ್ನೊಂದೆಡೆ ಕೀಟನಾಶಕಗಳಿಗೆ ಬಗ್ಗದ ಕ್ರಿಮಿಕೀಟಗಳೂ ಹುಟ್ಟಿಕೊಂಡವು. ಬೆಳೆಗಳಿಗೆ ಕೀಟಬಾಧೆ ಹೆಚ್ಚಿತು. ಮಲೇರಿಯಾ ಮೊದಲಾದ ರೋಗಗಳು ಮತ್ತೆ ತಲೆ ಎತ್ತಿದವು. ಇಂಥ ಸಮಸ್ಯೆಗಳು ಇನ್ನಷ್ಟು ಹೆಚ್ಚಲಿವೆ. ಆಗ ಮನುಷ್ಯ ಭಾರೀ ಒದ್ದಾಡಬೇಕಾಗುತ್ತದೆ. ಆದರೇನು? ಆಗ ಅಳಿದು ಹೋದ ನಮ್ಮವರು ಬರುವುದೂ ಇಲ್ಲ, ನಾವೆಲ್ಲ ಬದುಕಿ ಇರುವುದೂ ಇಲ್ಲ. ನಮ್ಮ ಪಾಲಿಗೆ ಎಲ್ಲವೂ ಮುಗಿದುರುತ್ತದೆ. "ಹೀಗೆ ಹೇಳುತ್ತಾ ಕಪ್ಪೆ ನಿಟ್ಟುಸಿರುಬಿಟ್ಟಿತು. ಅದಕ್ಕೆ ಅಳು ಬರುವುದೊಂದು ಬಾಕಿ.

ಅಯ್ಯೋ ಪಾಪ ಎನಿಸಿತು ಕಿಟ್ಟನಿಗೆ. ಕಾತರದಿಂದ ಅವನು ಕೇಳಿದ "ಕಪ್ಪೆಯಣ್ಣಾ, ನಿನಗಾಗಿ ನಾನೇನು ಮಾಡಲಿ ಹೇಳು.?"

"ಪರಿಸರವನ್ನು ಉಳಿಸು, ಆಗ ನೀವು-ನಾವು ಎಲ್ಲರೂ ಉಳಿಯುತ್ತೇವೆ." ಎಂದಿತು ಕಪ್ಪೆ. ಅಷ್ಟು ಹೇಳಿ ಅದು ಹಿಂದಕ್ಕೆ ಜಿಗಿಯಿತು. ತನ್ನ ಜಾಗ ಸೇರಿಕೊಂಡಿತು.

ಆಗಲೇ ಕಿಟ್ಟನ ಅಮ್ಮ ಅವನನ್ನು ಕರೆಯುವುದು ಕೇಳಿಸಿತು.

"ಬಂದೆ ಅಮ್ಮಾ." ಎನ್ನುತ್ತ ಅವನು ಮನೆಯ ಕಡೆ ನಡೆಯತೊಡಗಿದ.

"ಪರಿಸರ ಉಳಿಸು, ಎಲ್ಲರೂ ಉಳಿಯುತ್ತೇವೆ" ಈ ಮಾತು ಅವನ ಕಿವಿಗಳಲ್ಲಿ ಗುಯಿಂಗುಡುತ್ತಲೇ ಇತ್ತು.

***

# ಮಾದನ ಶಪಥ



ಮಾದ ಒಬ್ಬ ಹಳ್ಳಿಗ. ಹಿಂದೆ ಅವನು ಮರ ಕಡಿವ ಕೆಲಸ ಮಾಡುತ್ತಿದ್ದ. “ಮರ ಕಡಿವ ಮಾದ” ಎಂದೇ ಜನ ಅವನನ್ನು ಕರೆಯುತ್ತಿದ್ದರು . ಆದರೆ ಇಂದು ಅವನು ಮರ ಕಡಿಯುವುದಿಲ್ಲ. ಆ ಕೆಲಸವನ್ನೇ ಅವನು ಬಿಟ್ಟು ಬಿಟ್ಟಿದ್ದಾನೆ. ಯಾರು ಎಷ್ಟು ಒತ್ತಾಯಿಸಿದರೂ ಅವನು ಮರಕಡಿಯಲು ಒಪ್ಪುವುದಿಲ್ಲ. “ಅದೊಂದನ್ನು ಬಿಟ್ಟು ಬೇರೆ ಯಾವುದೇ ಕೆಲಸ ಹೇಳಿ, ತರ್ತ್ಕ್ಷನ ಮಾಡಿಕೊಡುತ್ತೇನೆ.” ಎನ್ನುತ್ತಾನೆ ಅವನು. ಅವನಲ್ಲಿ ಈ ಬದಲಾವಣೆ ಹೇಗಾಯಿತು?. ಯಾರಿಂದಾಯಿತು.? ನಿಮಗೆ ಗೊತ್ತೇ.?

ಎಂದಿನಂತೆ ಆ ದಿನವೂ ಮಾದ ಬೇಗನೆ ಎದ್ದಿದ್ದ. ಬೆಳಗಿನ ಊಟವನ್ನು ತೀರಿಸಿದ್ದ. ತನ್ನ ಕತ್ತಿ, ಕೊಡಲಿಗಳನ್ನು ಹರಿತಗೊಳಿಸಿ ಇರಿಸಿದ್ದ. ಇನ್ನೇನು ಮರಕಡಿಯಲು ಹೊರಡುವವನಿದ್ದ. ಅಷ್ಟರಲ್ಲಿ ಹತ್ತು ಹನ್ನೆರಡು ಮಂದಿಗಳ ಗುಂಪೊಂದು ಅವನೆದರು ಪ್ರತ್ಯಕ್ಷವಾಯಿತು. ಆ ಗುಂಪಿನಲ್ಲಿ ಕೆಲವು ಯುವಕರಿದ್ದರು. ಕೆಲವು ಯುವತಿಯರಿದ್ದರು. ಕೆಲವು ಮಕ್ಕಳೂ ಇದ್ದರು. ಅವರೆಲ್ಲರೂ ಶಾಲೆ, ಕಾಲೇಜುಗಳಿಗೆ ಹೋಗುವವರು.

ಮಾದ ಅವರನ್ನು ನೋಡಿದ. “ಯಾರು ನೀವು? ಏನು ಬಂದಿರಿ?” ಎಂದು ಅವರನ್ನು ವಿಚಾರಿಸಿದ. “ನಾವು ವೃಕ್ಷ ಮಿತ್ರರು” ಅಂದರೆ ಮರಗಿಡಗಳ ಗೆಳೆಯರು. ಗಿಡಮರಗಳನ್ನು ಬೆಳೆಸಲು, ಉಳಿಸಲು ಹೆಣಗುವವರು. ಈಗ ನಿಮ್ಮ ಸಹಾಯ ಬೇಡಲು ಬಂದಿದ್ದೇವೆ.” ಅವರ ಮುಂದಾಳು ಹೇಳಿದ.

“ಏನು, ಸಹಾಯ ಕೇಳಲು ಬಂದಿದ್ದೀರಾ? ನನ್ನಿಂದ ನಿಮಗೇನು ಸಹಾಯವಾದೀತು?” ಮಾದ ಆಶ್ಚರ್ಯ ವ್ಯಕ್ತಪಡಿಸಿದ.

“ಮಾದಣ್ಣಾ, ಮರ ಕಡಿಯುವುದು ನಿಮ್ಮ ವೃತ್ತಿ. ಮರಗಳನ್ನು ರಕ್ಷಿಸುವುದು ನಮ್ಮ ಉದ್ದೇಶ. ನಮ್ಮ ಉದ್ದೇಶ ಈಡೇರಬೇಕಾದರೆ ನೀವು ಮರಗಳನ್ನು ಕಡಿಯಬಾರದು. ಅದಕ್ಕಾಗಿ ನಿಮ್ಮನ್ನು ಕೇಳಿಕೊಳ್ಳಲು ಬಂದಿದ್ದೇವೆ, ನಾವು.” ಒಬ್ಬ ಯುವಕ ವಿವರಿಸಿದ.

“ಅಯ್ಯೋ ಇದು ಹೇಗೆ ಸಾಧ್ಯ.? ಮರ ಕಡಿಯುವುದೇ ನನ್ನ ಉದ್ಯೋಗ. ಅದರಿಂದಲೇ ಬದುಕವವ ನಾನು. ಆ ಕೆಲಸ ಮಾಡದಿದ್ದರೆ ಉಣ್ಣಲು ಅನ್ನ ಎಲ್ಲಿಂದ ಬರಬೇಕು.? ನಾನು, ನನ್ನವರು ಹೇಗೆ ಬದುಕಬೇಕು?” ಗಾಬರಿಗೊಂಡು ಪ್ರಶ್ನಿಸಿದ ಮಾದ.

“ಮಾದಣ್ಣಾ ಊರಲ್ಲಿ ಉದ್ಯೋಗಗಳು ಎಷ್ಟಿಲ್ಲ ಹೇಳಿ? ಈ ಮರಕಡಿಯುವುದನ್ನು ಬಿಟ್ಟು ಬೇರೆ ಯಾವ ಕೆಲಸವನ್ನಾದರೂ ಮಾಡಬಹುದಲ್ಲಾ?” ಇನ್ನೊಬ್ಬ ಯುವಕ ಪ್ರಶ್ನೆ ಹಾಕಿದ.

ಆದರೆ ಮಾದ ಸುಮ್ಮನಿರುತ್ತಾನೆಯೇ.? “ನೋಡಿರಪ್ಪಾ, ನಾನು ನಿಮ್ಮ ಹಾಗೆ ಹೆಚ್ಚು ಓದಿದವನಲ್ಲ. ಹೆಚ್ಚು ತಿಳಿದವನೂ ಅಲ್ಲ. ಈಗ, ಮರಗಳ ಮೇಲೆ ನಿಮಗೇಕಿಷ್ಟು ಕಾಳಜಿ? ಮರಗಳನ್ನು ನಾವೇಕೆ ಕಡಿಯಬಾರದು? ಸ್ವಲ್ಪ ವಿವರಿಸಿ ಹೇಳುತ್ತೀರಾ?” ಅವನು ಮತ್ತೆ ಕೇಳಿದ.

“ಮಾದಣ್ಣಾ, ನಾವೆಲ್ಲಾ ಒಂದು ಗಳಿಗೆ ಕುಳಿತು ಮಾತಾಡೋಣ”. ಎನ್ನುತ್ತಾ ಗುಂಪಿನ ಮುಂದಾಳು ಚಾವಡಿ ಏರಿದ. ಉಳಿದವರು ಅವನನ್ನು ಹಿಂಬಾಲಿಸಿದರು. ಎಲ್ಲರೂ ಚಾವಡಿಯಲ್ಲಿ ಕೂತರು. ಮಾದ ನಿಂತೇ ಇದ್ದ. ಅವರು ಅವನನ್ನೂ ಕೂತುಕೊಳ್ಳುವಂತೆ ಕೇಳಿಕೊಂಡರು. ಅವರೆದುರು ಅವನೂ ಕೂತುಬಿಟ್ಟ. ಆಗ ಆ ಯುವಕನೇ ಮತ್ತೆ ಮಾತು ಮುಂದುವರಿಸಿದ,

“ಮಾದಣ್ಣಾ, ನಮ್ಮ ಬದುಕಿಗೆ ಬಲು ಮುಖ್ಯ ವಸ್ತು ಒಂದಿದೆ. ಅದು ಯಾವುದು ಹೇಳಿ ನೋಡೋಣ.”

“ಗಾಳಿ” ಮಾದ ಉತ್ತರಕೊಟ್ಟ

“ಸರಿಯಾಗಿ ಹೇಳಿದಿರಿ, ಮಾದಣ್ಣಾ. ನಾವು ಜೀವಿಸಿರಲು ಗಾಳಿ ಬೇಕು. ಆ ಗಾಳಿ ಶುದ್ಧವಾಗಿರಬೇಕು. ಮರಗಳು ಗಾಳಿಯ ಮಲಿನತೆಯನ್ನು ತೊಲಗಿಸುತ್ತವೆ. ಶುದ್ದಗಾಳಿಯನ್ನು ನಮಗೆ ಒದಗಿಸಿಕೊಡುತ್ತವೆ” ಅವನು ಹೇಳಿದ.

“ಮರಗಳಿಂದ ನಮಗೆ ಹೂ ಹಣ್ಣು, ಕಾಯಿ, ಬೀಜಗಳಂಥ ವಸ್ತುಗಳು ದೊರೆಯುತ್ತವೆ.” ಇನ್ನೊಬ್ಬ ಹೇಳಿದ.

“ಮನೆಕಟ್ಟಲು ಬೇಕಾಗುವ ಜಂತಿ, ಪಕಾಸು, ಬಾಗಿಲು, ಕಿಟಕಿಗಳನ್ನು ನಾವು ಮರದಿಂದ ತಯಾರಿಸಿಕೊಳ್ಳುತ್ತೇವೆ.” ಮತ್ತೊಬ್ಬ ಸೇರಿಸಿದ.

“ಬೆಂಚು, ಕುರ್ಚಿ, ಮೇಜು ಇತ್ಯಾದಿ ಪೀಠೋಪಕರಣಗಳಿಗೂ ಮರಗಳು ಬಳಸಲ್ಪಡುತ್ತವೆ.” ಯುವತಿಯೊಬ್ಬಳು ದನಿಗೂಡಿಸಿದಳು.

“ದನಗಳಿಗೆ ಮೇವನ್ನು, ಜನಗಳಿಗೆ ಉರುವಲು, ಔಷಧಗಳು, ಅಂಟು, ರಾಳ, ಗಂಧ ಮೊದಲಾದ ನೂರಾರು ವಸ್ತುಗಳನ್ನು ಸಹ ಮರಗಳೇ ಒದಗಿಸಿ ಕೊಡುತ್ತವೆ.” ಇನ್ನೊಬ್ಬಳು ಹೇಳಿದಳು.

“ಮರಗಳು ಮೋಡಗಳನ್ನು ತಡೆದು, ಹೆಚ್ಚು ಮಳೆ ಸುರಿಯುವಂತೆ ಮಾಡುತ್ತವೆ. ಮಳೆ ನೀರಿಗೆ ಭೂಮಿಯ ಮೇಲ್ಪದರದ ಮಣ್ಣು ಕೊಚ್ಚಿಹೋಗದಂತೆಯೂ ಅವು ರಕ್ಷಿಸುತ್ತವೆ. ಭೂಮಿ ನೀರನ್ನು ಹೆಚ್ಚು ಕಾಲ ಹಿಡಿದಿಟ್ಟುಕೊಳ್ಳಲು, ಮಳೆ ನೀರು ಭೂಮಿಯಲ್ಲಿ ಇಂಗಲು ಅವು ನೆರವಾಗುತ್ತವೆ. .ನಮ್ಮ ಪುಸ್ತಕದಲ್ಲಿ ಇದನ್ನೆಲ್ಲ ವಿವರಿಸಿದ್ದಾರೆ.” ಹುಡುಗನೊಬ್ಬ ತಾನು ಓದಿ ತಿಳಿದುದರ ವರದಿ ಒಪ್ಪಿಸಿದ.

“ಮರಗಳು ಸಾವಿರಾರು ಜೀವಜಂತುಗಳಿಗೆ ಆಹಾರವನ್ನೂ ಆಸರೆಯನ್ನೂ, ಒದಗಿಸಿಕೊಡುತ್ತವೆ.” ಎನ್ನುತ್ತ, ತಾನೂ ಸ್ವಲ್ಪ ತಿಳಿದುಕೊಂಡಿದ್ದೇನೆ ಎನ್ನುವುದನ್ನು ಹೊರಗೆಡಹಿದ ಇನ್ನೊಬ್ಬ ಹುಡುಗ,

“ಮಾದಣ್ಣಾ, ಭೂಮಿಗೆ ನೆರಳಿನ ತಂಪು ಸಿಗುವುದು ಮರಗಳಿಂದ, ನೆಲಕ್ಕೆ ಹಸುರು ಹೊದಿಕೆ ಬರುವುದು ಮರಗಳಿಂದ. ಮರಗಳ ಹಸುರು ಮರೆಯಾದಲ್ಲಿ, ನೀರ ಸೆಲೆ ಬತ್ತುತ್ತದೆ. ಕುಡಿಯಲಿಕ್ಕೂ ನೀರು ಸಿಗದ ಪರಿಸ್ಥಿತಿ ತಲೆದೋರುತ್ತದೆ. ಭೂಮಿ ಬರಡಾಗುತ್ತದೆ. ಹಾಗಾಗಿಯೇ “ಮರಗಳು ದೇವರ ವರಗಳು” ಎನ್ನುತ್ತಾರೆ, ತಿಳಿದವರು. ಇಂಥ ಮರಗಳನ್ನು ನಾವು ಸಾಧ್ಯವಾದಷ್ಟು ಉಳಿಸಬೇಕು, ಬೆಳೆಸಬೇಕು. ಒಂದು ಮರ ಕಡಿವ ಮೊದಲು ನಾಲ್ಕನ್ನು ಬೆಳೆಸಬೇಕು. ಹಾಗೆ ಮಾಡದೆ ಮರಗಳನ್ನು ಕಡಿಯುತ್ತಲೇ ಹೋದರೆ, ನಮ್ಮ ಭೂಮಿ ಮರುಭೂಮಿಯಾಗುತ್ತದೆ.” ಗುಂಪಿನ ಮುಂದಾಳು ಭಾರೀ ಕಳಕಳಿಯಿಂದ ವಿವರಿಸಿ ಹೇಳಿದ.



“ಮಾದಣ್ಣಾ, ನಿಮಗೀಗ ಮರಗಳ ಮಹತ್ವ ಅರ್ಥವಾಯಿತಲ್ಲ? ಇನ್ನು ನನ್ನದೊಂದು ಪ್ರಶ್ನೆಗೆ ಉತ್ತರ ಹೇಳಿ. ಈವರೆಗೆ ನೀವು ಎಷ್ಟು ಮರಗಳನ್ನು ಕಡಿದಿರಬಹುದು.?” ಇನ್ನೊಬ್ಬ ಯುವಕ ಮಾದನನ್ನು ಕೇಳಿದ.

“ಅದನ್ನು ಯಾರು ನೆನಪು ಇಟ್ಟಿದ್ದಾರೆ, ಸ್ವಾಮಿ? ಸುಮಾರು ನೂರು ಇನ್ನೂರು ಆಗಬಹುದೋ ಏನೋ?” ಮಾದ ಉತ್ತರ ಕೊಟ್ಟ.

“ಈವರೆಗೆ ನೀವು ಎಷ್ಟು ಮರಗಳನ್ನು ನೆಟ್ಟು ಬೆಳೆಸಿದ್ದೀರಿ? ಅದಾದರೂ ನೆನಪಿದೆಯೇ?” ಯುವಕ ಮತ್ತೆ ಪ್ರಶ್ನೆ ಹಾಕಿದ.

“ನನಗೆ ಸ್ವಂತ ಜಾಗವೇ ಇಲ್ಲವಲ್ಲ?. ನಾನೆಲ್ಲಿ ಮರ ಬೆಳೆಸಲಿ?” ಮಾದ ತನ್ನ ಅಸಾಹಾಯಕತೆ ತೋಡಿಕೊಂಡ.

“ಸ್ವಂತ ಜಾಗ ಇಲ್ಲದವರು, ಸರಕಾರಿ ಸ್ಥಳದಲ್ಲಾದರೂ ಗಿಡ ನೆಡಬಹುದು, ಬೆಳೆಸಬಹುದು. “ಮನಸ್ಸಿದ್ದಲ್ಲಿ ಮಾರ್ಗವಿದೆ” ಎನ್ನುವುದು ಸುಳ್ಳಲ್ಲ. ಆದರೆ ನೀವು ಮಾತ್ರ ಒಂದು ಮರವನ್ನೂ ಬೆಳೆಸಲಿಲ್ಲ. ನೂರಾರು ಮರಗಳನ್ನು ಕಡಿದು ಉರುಳಿಸಿದಿರಿ. ಬಲುದೊಡ್ಡ ತಪ್ಪು ಮಾಡಿದಿರಿ. ಅಲ್ಲವೆ ಮಾದಣ್ಣಾ?” ಕೆದಕಿ ಕೇಳಿದ ಇನ್ನೊಬ್ಬ ಯುವಕ.

“ಹೂಂ ಒಂದು ರೀತಿಯಲ್ಲಿ ಹೌದು,” ಮಾದ ತಲೆಯಾಡಿಸಿದ.

“ಇನ್ನೂ ಒಂದು ವಿಚಾರವಿದೆ, ಮಾದಣ್ಣಾ. ಇಂದು ಅನುಮತಿ ಇಲ್ಲದೆ ಮರ ಕಡಿಯಬಾರದು. ಅದು ತಪ್ಪು. ಆದರೆ ಈಗ ಎಷ್ಟೋ ಮಂದಿ ಅನುಮತಿ ಪಡೆಯದೆ ಮರ ಕಡಿಯುತ್ತಾರೆ.,. ಮಾರಾಟ ಮಾಡುತ್ತಾರೆ. ಇದು ಕಾನೂನಿಗೆ ವಿರುದ್ಧ. ಇಂಥ ಕೆಲಸದಲ್ಲಿ ಸಹಕರಿಸಿದಾಗ ನೀವೂ ಅಪರಾಧಿ ಆಗುತ್ತೀರಿ. ಈ ಬಗ್ಗೆ ಎಂದಾದರೂ ನೀವು ಯೋಚಿಸಿದ್ದು ಇದೆಯೇ?” ಮತ್ತೊಬ್ಬ ಯುವಕನ ಪ್ರಶ್ನೆ ಇದು.

“ಇಲ್ಲಪ್ಪಾ ಇಲ್ಲ, ಇಂಥ ಸಂಗತಿ ಒಂದೂ ನನಗೆ ಗೊತ್ತಿಲ್ಲ” ಮಾದ ಒಪ್ಪಿಕೊಂಡ.

“ಮಾದಣ್ಣಾ, ಈವರೆಗೆ ವಿಷಯ ಗೊತ್ತಿಲ್ಲದೆ ನೀವು ತಪ್ಪು ಮಾಡಿದಿರಿ. ಈಗ ನಿಮಗೆಲ್ಲ ಗೊತ್ತಾಗಿದೆ. ಇನ್ನಾದರೂ ಈ ಕೆಲಸ ನೀವು ಬಿಡಬಾರದೆ.?”

“ನಾನು ಮರಕಡಿಯದಿದ್ದರೇನು? ಇನ್ನೊಬ್ಬರು ಆ ಕೆಲಸ ಮಾಡುವುದಿಲ್ಲವೇ? ಆಗ ಮರಗಳು ಉಳಿಯುತ್ತವೆಯೇ?” ಮಾದ ಸಂದೇಹ ವ್ಯಕ್ತಪಡಿಸಿದ.

“ಊರಲ್ಲಿ ಮರ ಕಡಿಸುವವರ ಅಥವಾ ಕಡಿಯುವವರ ಸುಳಿವು ಸಿಕ್ಕಿದರೆ ಸಾಕು, ನಾವು ಅಲ್ಲಿಗೆ ಹೋಗುತ್ತೇವೆ., ಮರ ಕಡಿಯದಂತೆ ಅವರನ್ನು ಬೇಡುತ್ತೇವೆ, ಕಾಡುತ್ತೇವೆ, ಅವರ ಮನ ಒಲಿಸುತ್ತೇವೆ. ಅವರು ಮರಕಡಿಯದಂತೆ ಮಾಡುತ್ತೇವೆ. ಇದು ನಮ್ಮ ಪ್ರತಿಜ್ಞೆ. ಹೀಗೆ ಪ್ರತಿಜ್ಞೆ ಮಾಡಿಯೇ ನಿಮ್ಮ ಬಳಿಗೆ ಬಂದವರು ನಾವು. ಈಗ ಕೈಮುಗಿದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನೀವು ಯಾವ ಕೆಲಸವನ್ನಾದರೂ ಮಾಡಿ. ಆದರೆ ಮರ ಕಡಿಯುವುದನ್ನು ಬಿಟ್ಟು ಬಿಡಿ. ಇದು ನಮ್ಮೆಲ್ಲರ ಪ್ರಾರ್ಥನೆ.” ಎನ್ನುತ್ತಾ ಗುಂಪಿನ ಮುಂದಾಳು ಕೈಮುಗಿದು ಬೇಡಿಕೊಂಡ.

“ಹೌದು ಮಾದಣ್ಣಾ. ಅಷ್ಟು ಉಪಕಾರ ಮಾಡಬೇಕು, ನೀವು” ಎನ್ನುತ್ತ ಉಳಿದವರೂ ಮಾದನಿಗೆ ಕೈಮುಗಿದರು.

ಅವರ ಕಳಕಳಿಯ ಪ್ರಾರ್ಥನೆ ಮಾದನ ಮನವನ್ನು ಕರಗಿಸಿತು. “ಆಗಲಪ್ಪಾ ಆಗಲಿ, ನೀವು ಹೇಳಿದಂತೆಯೇ ಆಗಲಿ. ಮೇಲಿರುವ ಸೂರ್ಯದೇವನನ್ನು ನೋಡಿ ನಾನು ಮಾತುಕೊಡುತ್ತೇನೆ. ನಾನಿನ್ನು ಮರಕಡಿಯುವುದಿಲ್ಲ.” ಮಾದ ಶಪಥಮಾಡಿದ. ಅಂದಿನಿಂದ ಅವನು ಮರಕಡಿದುದನ್ನು ಯಾರೂ ಕಂಡಿಲ್ಲ.

## ಸಣ್ಣ ಹಕ್ಕಿಯ ದೊಡ್ಡ ಕೆಲಸ

ಬಹಳ ಹಿಂದಿನ ಕಾಲದ ಕತೆ ಇದು. ಒಂದು ಊರಲ್ಲಿ ಒಬ್ಬ ರಾಜ ಇದ್ದ. ಬಹಳ ಒಳ್ಳೆಯ ರಾಜ ಅವನು. ಪ್ರಜೆಗಳ ಮೇಲೆ ಅವನಿಗೆ ತುಂಬ ಪ್ರೀತಿ ಇತ್ತು. ತನ್ನ ಮಕ್ಕಳಂತೆ ಅವನು ಅವರನ್ನು ನೋಡಿಕೊಳ್ಳುತ್ತಿದ್ದ. ಅವರ ಸುಖಕ್ಕಾಗಿ ಅವನು ಶ್ರಮಿಸುತ್ತಿದ್ದ.

ಒಂದು ದಿನ ಊರ ರೈತರೆಲ್ಲ ರಾಜನ ಬಳಿಗೆ ಬಂದರು. “ಮಹಾಸ್ವಾಮಿ, ಊರಲ್ಲಿ ಗುಬ್ಬಿಗಳು ಬಹಳ ಹೆಚ್ಚಾಗಿವೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಅವು ಹೊಲಗಳನ್ನು ಮುತ್ತುತ್ತವೆ. ನಮಗೆ ಕಷ್ಟನಷ್ಟ ಉಂಟು ಮಾಡುತ್ತವೆ. ಈ ಗುಬ್ಬಿಗಳನ್ನೆಲ್ಲ ಕೊಲ್ಲಿಸಬೇಕು. ನಮ್ಮ ಸಂಕಟವನ್ನು ಪರಿಹರಿಸಬೇಕು.” ಎಂದು ಬೇಡಿಕೊಂಡರು.

ಅರಸನು ಜನರ ಮಾತನ್ನು ಕಿವಿಗೊಟ್ಟು ಕೇಳಿದ. “ಗುಬ್ಬಿಗಳು ಕಾಳನ್ನು ತಿನ್ನುವುದೇನೋನಿಜ. ಆದರೆ ಅವು ಹುಳು ಹುಪ್ಪಟೆಗಳನ್ನು ತಿನ್ನುತ್ತವೆ. ನಮ್ಮ ಪೈರನ್ನು ರಕ್ಷಿಸುತ್ತವೆ. ನಮಗೆ ಉಪಕಾರ ಮಾಡುತ್ತವೆ. ಇದು ನಿಮಗೆ ಗೊತ್ತಿಲ್ಲವೇ?” ಅವರು ಅವರನ್ನು ಪ್ರಶ್ನಿಸಿದ.

“ಅದು ಗೊತ್ತಿದೆ ಮಹಾಸ್ವಾಮಿ. ಆದರೆ ಈಗ ಅವುಗಳ ಸಂಖ್ಯೆ ಮಿತಿ ಮೀರಿದೆ. ಅವು ಮಾಡುವ ಉಪಕಾರಕ್ಕಿಂತ ಅಪಕಾರವೇ ಹೆಚ್ಚಾಗಿದೆ. ಅವುಗಳ ಹಾವಳಿಯನ್ನು ತಡೆಗಟ್ಟಲೇಬೇಕು. ಇಲ್ಲವಾದರೆ ನಾವಿನ್ನು ಕೃಷಿ ಮಾಡುವ ಹಾಗೇ ಇಲ್ಲ.” ಜನ ಅರಿಕೆ ಮಾಡಿಕೊಂಡರು.

ಅರಸನು ಜನರ ಕೇಳಿಕೆಯನ್ನು ಮನ್ನಿಸಿದ. ಅವರ ಸಂಕಟವನ್ನು ಪರಿಹರಿಸುವ ಭರವಸೆ ನೀಡಿದ. ತತ್‌ಕ್ಷಣ ಅವನು ರಾಜ್ಯದಲ್ಲಿದ್ದ ಬೇಡ ಜನರನ್ನು ತನ್ನಲ್ಲಿಗೆ ಬರ ಮಾಡಿಕೊಂಡ ಹಳ್ಳಿ ಹಳ್ಳಿಗಳಿಗೆ ಹೋಗಿ ಗುಬ್ಬಿಗಳನ್ನೆಲ್ಲಾ ಸಂಹರಿಸುವಂತೆ ಅವರಿಗೆ ಅಪ್ಪಣೆ ಮಾಡಿದ. ಇತರ ಪ್ರಜೆಗಳು ಸಹ ಈ ಕೆಲಸದಲ್ಲಿ ಸಹಕರಿಸುವಂತೆ ಅವರಿಗೆ ಕರೆಕೊಟ್ಟ. “ಗುಬ್ಬಿಗಳನ್ನು ಕೊಲ್ಲುವ ಪ್ರತಿಯೊಬ್ಬನಿಗೂ ನಗದು ಬಹುಮಾನ ನೀಡಲಾಗುವುದು. ತ್ವರೆ ಮಾಡಿರಿ. ಕೊಂದ ಗುಬ್ಬಿಯ ಹೆಣವನ್ನು ಅರಮನೆಗೆ ಒಪ್ಪಿಸಿ, ನಗದು ಬಹುಮಾನ ಪಡೆಯಿರಿ .” ಎಂದು ಅವನು ಊರಲ್ಲಿ ಡಂಗುರ ಸಾರಿಸಿದ.

ಜನ ಡಂಗುರವನ್ನು ಕೇಳಿದರು. ಹಣದ ಆಸೆಗಾಗಿ ಅವರು ಗುಬ್ಬಿಗಳನ್ನು ಕೊಲ್ಲ ತೊಡಗಿದರು. ಕೆಲವರು ಬಾಣ ಬಿಟ್ಟು ಗುಬ್ಬಿಗಳನ್ನು ಕೊಂದರು. ಕೆಲವರು ಕಲ್ಲು ಹೊಡೆದು ಅವುಗಳನ್ನು ಸಾಯಿಸಿದರು. ಕೆಲವರು ವಿಷವಿಟ್ಟು ಅವುಗಳ ಜೀವ ತೆಗೆದರು. ಕೆಲವರು

ಉರುಳಿನಲ್ಲಿ ಬೀಳಿಸಿ, ಅವುಗಳ ಪ್ರಾಣ ಹೀರಿದರು. ಹೀಗೆ ದಿನವೂ ನೂರಾರು ಗುಬ್ಬಿಗಳ ಕೊಲೆಯಾಯಿತು. ಜನಕ್ಕೆ ದುಡ್ಡು ಸಿಕ್ಕಿತು. ಕ್ರಮೇಣ ಗುಬ್ಬಿಗಳ ಸಂಖ್ಯೆ ಕಡಿಮೆಯಾಯಿತು. ಅವುಗಳ ಪೀಡೆ ತೊಲಗಿತು. ಜನ ಖುಷಿ ಪಟ್ಟರು.

ದಿನಗಳು ಉರುಳಿದವು. ತಿಂಗಳುಗಳು ಕಳೆದು ಹೋದವು. ಊರ ಹೊಲಗದ್ದೆಗಳಲ್ಲಿ ಪೈರು ಪಚ್ಚೆಗಳು ಬೆಳೆದು ನಿಂತವು. ಗುಬ್ಬಿಗಳ ಹಾವಳಿ ಎಲ್ಲೂ ಕಾಣಿಸುತ್ತಿರಲಿಲ್ಲ. ಕೃಷಿಕರೆಲ್ಲ ಉತ್ತಮ ಫಸಲು ಪಡೆಯುವ ಕನಸು ಕಾಣ ತೊಡಗಿದರು. ಆದರೆ ಅವರ ಕನಸು ಕನಸಾಗಿಯೇ ಉಳಿಯಿತು. ಕಾರಣವೇನು ಗೊತ್ತೇ.?



ಹುಲುಸಾಗಿ ಬೆಳೆದ ಪೈರಲ್ಲಿ ಹಾರುವ ಹಾತೆಗಳು, ಮಿಡತೆಗಳು ಎಲ್ಲೆಲ್ಲೂ ಕಂಡುಬಂದವು. ದಿನದಿನಕ್ಕೆ ಅವುಗಳ ಸಂಖ್ಯೆ ಬೆಳೆಯಿತು. ಅರ್ಧಕ್ಕರ್ಧ ಪೈರನ್ನು ಅವು ತಿಂದು ನಾಶ ಮಾಡಿದವು. ಅವುಗಳನ್ನು ಹತೋಟಿಗೆ ತರಲು ಜನಗಳು ಹೆಣಗಾಡಿದರು. ಆದರೆ ಅವರ ಪ್ರಯತ್ನ ಫಲಿಸಲಿಲ್ಲ. ಬೆಳೆಸಿದ ಬೆಳೆಯ ಬಹುಪಾಲು ನಷ್ಟವಾಯಿತು. ರೈತರು ನಿರಾಶರಾದರು. ಅವರಿಗೆ ದಾರಿ ಕಾಣದಾಯಿತು. ಅವರು ಮತ್ತೆ ರಾಜನಲ್ಲಿಗೆ ಬಂದರು. ತಮ್ಮ ಸಂಕಟವನ್ನು ಅವನಲ್ಲಿ ತೋಡಿಕೊಂಡರು.

"ಹಿಂದೊಮ್ಮೆ ಗುಬ್ಬಿಗಳ ಮೇಲೆ ನೀವು ದೂರು ತಂದುದೂ ಇದೆ., ಗುಬ್ಬಿಗಳನ್ನೆಲ್ಲಾ ನಾಶಗೊಳಿಸಬೇಕು ಎಂದುದೂ ಇದೆ. ಆಗಲೇ "ಗುಬ್ಬಿಗಳು ಹುಳು ಹುಪ್ಪಟೆಗಳನ್ನು ತಿನ್ನುತ್ತವೆ. ನಮ್ಮ ಪೈರನ್ನು ರಕ್ಷಿಸುತ್ತವೆ. ಅವು ನಮಗೆ ಉಪಕಾರಿಗಳು" ಎಂದಿದ್ದೆ ನಾನು. ಆದರೆ ನೀವು ನನ್ನ ಮಾತಿಗೆ ಗಮನ ಕೊಡಲಿಲ್ಲ. ಗುಬ್ಬಿಗಳನ್ನು ನಾಶಗೊಳಿಸಲೇಬೇಕು ಎಂದು ಒತ್ತಾಯಿಸಿದಿರಿ. ಹಾಗಾಗಿಯೇ ಗುಬ್ಬಿಗಳ ಸಂಹಾರಕ್ಕೆ ನಾನು ಒಪ್ಪಿಗೆ ಸೂಚಿಸಿದ್ದೆ. ಅವುಗಳನ್ನು ಕೊಂದವರಿಗೆ ನಗದು ಬಹುಮಾನ ಘೋಷಿಸಿದ್ದೆ. ಆದರೆ ಈಗ, ಹೊಸತೊಂದು ಗಂಡಾಂತರ ಎದುರಾಗಿದೆ. ಹೀಗಾಗುವುದು ಸಹಜವೇ."

"ನಾವೆಲ್ಲ ಒಂದು ಮಾತನ್ನು ನೆನಪಿಡಬೇಕು. ಈ ಪ್ರಕೃತಿಯ ಜೀವರಾಶಿಗಳ ಇರುವಿಕೆಯಲ್ಲಿ ಒಂದು ವ್ಯವಸ್ಥೆ ಇದೆ., ಸಮತೋಲನ ಇದೆ. ಅದನ್ನು ಕೆಡೆಸಿದರೆ ಅನಾಹುತ ಆಗಿಯೇ ಆಗುತ್ತದೆ . ಗುಬ್ಬಿಗಳನ್ನು ನೀವು ನಾಶಗೊಳಿಸಿದಿರಿ. ಅದರ ಪರಿಣಾಮವಾಗಿಯೇ ಕ್ರಿಮಿಕೀಟಗಳು ಹೆಚ್ಚಿದವು. ಈಗ ಇವುಗಳ ಬಾಧೆ ತೊಲಗಬೇಕಾದರೆ ಖಾಲಿ ಬಿದ್ದ ಗುಬ್ಬಿಗಳ ಸ್ಥಾನ ತುಂಬಿ ಬರಬೇಕು. ಈ ಬಗ್ಗೆ ಯೋಚಿಸಿರಿ, ಕೆಲಸ ಮಾಡಿರಿ. ಆಗ ನಿಮ್ಮ ಸಮಸ್ಯೆ ತಾನಾಗಿಯೇ ಪರಿಹಾರವಾಗುತ್ತದೆ." ರಾಜ ವಿವರಿಸಿ ಹೇಳಿದ.

ಜನಕ್ಕೆ ಅರಸನ ಮಾತು ನಿಜ ಎನಿಸಿತು. "ನಮ್ಮ ಸಮಸ್ಯೆಯ ಮೂಲ ನಮಗೀಗ ಅರ್ಥವಾಗಿದೆ. ಇದರ ಪರಿಹಾರದ ಬಗೆಗು ನಾವೇ ಯೋಚಿಸುತ್ತೇವೆ" ಎನ್ನುತ್ತ ಅವರು ಅಲ್ಲಿಂದ ಹೊರಟು ಹೋದರು.

# ಕಾಗೆಯ ಮದುವೆ

ಹೊರಗಡೆಯಲ್ಲಿ "ಕಾ ಕಾ ಕಾ…" ಕೂಗು ಕೇಳಿಸಿತು. ಕಿಟ್ಟ ಮನೆಯಿಂದ ಹೊರಗೆ ಬಂದ . ಸುತ್ತ ಮುತ್ತ ನೋಡಿದ. ಬಾವಿಯ ದಂಡೆಯ ಮೇಲೆ ಕಾಗೆಯೊಂದು ಕೂತಿತ್ತು. ಕಿಟ್ಟ ಬಾವಿಯ ಬಳಿಗೆ ಬಂದ. ಕಾಗೆ ಅಲ್ಲಿ ಕೂತೇ ಇತ್ತು. ಕಿಟ್ಟ ಇನ್ನಷ್ಟು ಹತ್ತಿರಕ್ಕೆ ಬಂದ.

"ಇದೇನು ಕಾಗಕ್ಕಾ, ತಲೆಕೆಳಗೆ ಹಾಕಿ ಕೂತೇ ಇರುವೆಯಲ್ಲಾ?" ಅವನು ಕೇಳಿದ.

"ನಾನು ಕಾಗಕ್ಕ ಅಲ್ಲ, ಕಾಗಣ್ಣ. ಹೆಣ್ಣು ಕಾಗೆಯಲ್ಲ, ಗಂಡು ಕಾಗೆ" ಎಂದಿತು ಆ ಕಾಗೆ

"ಹೌದೆ? ನನಗದು ಗೊತ್ತೇ ಆಗಲಿಲ್ಲ." ಕಿಟ್ಟ ಒಪ್ಪಿಕೊಂಡ. "ಅದಿರಲಿ ನೀನು ತೆಪ್ಪಗೆ ಇಲ್ಲಿ ಕೂತಿರುವೆಯಲ್ಲ? ಏನು, ಬಹಳ ಬೇಸರವಾಗಿದೆಯೇ?" ಅವನು ಮತ್ತೆ ಕೇಳಿದ.

"ಹೌದು, ಬಹಳ ಬೇಸರವಾಗಿದೆ". ಕಾಗೆ ನಿಜ ನುಡಿದಿತ್ತು." ಏಕೆ, ನಿನ್ನ ಬೇಸರಕ್ಕೆ ಕಾರಣವೇನು?" ಕಿಟ್ಟ ವಿಚಾರಿಸಿದ.

ಮೊದಲಿಗೆ ಕಾಗೆ ಏನನ್ನೂ ಹೇಳಲಿಲ್ಲ. ಕಿಟ್ಟ ಮತ್ತಷ್ಟು ಒತ್ತಾಯಿಸಿದ. ಕೊನೆಗೆ ಕಾಗೆ ಬಾಯಿಬಿಟ್ಟಿತು.

"ಮೊನ್ನೆ ನಾನು ನೆರೆಯೂರಿಗೆ ಹೋಗಿದ್ದೆ. "ಅಲ್ಲೊಬ್ಬಳು ಚಂದದ ಕಾಗೆ ಕುಮಾರಿಯನ್ನು ನೋಡಿದೆ. ತುಂಬ ಒಳ್ಳೆಯವಳು. ಅವಳೂ ನನ್ನನ್ನು ನೋಡಿದಳು. ನಾವು ಒಬ್ಬರನ್ನೊಬ್ಬರು ಮೆಚ್ಚಿಕೊಂಡೆವು, ಪ್ರೀತಿಸಿದೆವು."

"ನಾವು ಮದುವೆಯಾಗೋಣವೇ?" ಎಂದು ನಾನು ಅವಳನ್ನು ಕೇಳಿದೆ.

"ನಾವು ಹಿರಿಯರ ಒಪ್ಪಿಗೆ ಪಡೆದಿಲ್ಲ. ಸ್ವಂತ ಮನೆ ಮಾಡಿಲ್ಲ, ಮತ್ತೆ ಹೇಗೆ ಮದುವೆಯಾಗಲಿ?" ಅವಳು ಮರು ಪ್ರಶ್ನೆ ಹಾಕಿದಳು.

"ಸರಿ, ಮೊದಲು ಹಿರಿಯರ ಒಪ್ಪಿಗೆ ಪಡೆಯೋಣ. ಮತ್ತೆ ಸ್ವಂತ ಮನೆ ಮಾಡೋಣ . ಆ ಬಳಿಕವೇ ಮದುವೆ ನಿಶ್ಚಯವಾಗಲಿ." ನಾನು ಒಪ್ಪಿಗೆ ಸೂಚಿಸಿದೆ.

"ಹಾಗಾದರೆ ಈಗ ಚಿಂತೆ ಏಕೆ ಹೇಳು? ಹಿರಿಯರು ಮದುವೆಗೆ ಒಪ್ಪಿಗೆ ಕೊಡಲಿಲ್ಲವೇ?" ಕಿಟ್ಟ ವಿಚಾರಿಸಿದ.

"ಹಿರಿಯರ ಒಪ್ಪಿಗೆಯೇನೋ ಸಿಕ್ಕಿತು. ಆದರೆ ಮನೆ ಮಾಡಲು ಇನ್ನೂ ಆಗಲಿಲ್ಲ.". ಕಾಗೇ ಪೇಚಾಡಿಕೊಂಡಿತು.

"ಅದೇಕೆ ಆಗಲಿಲ್ಲ?" ಕೇಳಿದ ಕಿಟ್ಟ

"ನಾವು ಹಕ್ಕಿಗಳು. ಮರದ ಮೇಲೆ ಗೂಡು ಕಟ್ಟಿ ವಾಸಿಸುವವರು. ಸದ್ಯ ಈ ಊರಲ್ಲಿ ಮರಗಳೇ ಇಲ್ಲವಲ್ಲ? ಮತ್ತೆ ನಾವು ಗೂಡನ್ನು ಎಲ್ಲಿ ಕಟ್ಟಲಿ? ಹೇಗೆ ಕಟ್ಟಲಿ, ಹೇಳು?" ಕಾಗೆ ಪ್ರಶ್ನಿಸಿತು.

"ಈ ಊರಲ್ಲಿ ಮರಗಳು ಯಾಕೆ ಇಲ್ಲ? ಇದ್ದ ಮರಗಳೆಲ್ಲ ಎಲ್ಲಿ ಹೋದವು?" ಕುತೂಹಲದಿಂದ ವಿಚಾರಿಸಿದ ಕಿಟ್ಟ.

“ಮನುಷ್ಯನಿಗೆ ಮನೆ ಮಠಗಳು ಬೇಕಲ್ಲ? ಕೆಲವರು ಅದಕ್ಕಾಗಿ ಮರಗಳನ್ನು ಕಡಿದರು. ಹಲವರು ಹಣಕ್ಕಾಗಿ ಮರಗಳನ್ನು ಕಡಿದು ಮಾರಿದರು . ಆದರೆ ಗಿಡಮರಗಳನ್ನು ನೆಟ್ಟು ಬೆಳೆಸಲು ಯಾರೂ ಮುಂದಾಗಲಿಲ್ಲ. ಹೀಗಾಗಿ ಊರೆಲ್ಲ ಬೋಳಾಯಿತು. ಗೂಡು ಕಟ್ಟಲು ಒಂದು ಮರವೂ ನಮಗೆ ಉಳಿಯಲಿಲ್ಲ.” ಕಾಗೆ ತನ್ನ ದುಃಖ ತೋಡಿಕೊಂಡಿತು.



“ಹಾಗಾದರೆ ಮುಂದೇನು ಮಾಡುತ್ತೀರಿ?” ಕಿಟ್ಟ ವಿಚಾರಿಸಿದ.

“ಮಾಡುವುದೇನು? ಮರಸಿಕ್ಕಾಗ ಮನೆ ಕಟ್ಟುವುದು. ಮನೆಕಟ್ಟಿಕೊಂಡ ಬಳಿಕ ಮದುವೆಯಾಗುವುದು.” ಬೇಸರದಿಂದ ಹೇಳಿತು ಕಾಗೆ.

“ಛೇ, ಹೀಗೆ ಆಗಬಾರದಿತ್ತು. ಮರಕಡಿವ ಪ್ರತಿಯೊಬ್ಬನೂ ಮರಗಳನ್ನು ಬೆಳೆಸಬೇಕಿತ್ತು. ಆಗ ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಅಲ್ಲವೇ?” ಕಿಟ್ಟ ಪ್ರಶ್ನಿಸಿದ.

“ಹೌದು, ಹಿಂದಿನವರಲ್ಲಿ ಹೆಚ್ಚು ಒಳ್ಳೆಯ ಬುದ್ಧಿ ಇತ್ತು. ದೂರಾಲೋಚನೆ ಇತ್ತು. ಕೆಲವು ಹಬ್ಬಗಳ ಸಂದರ್ಭಗಳಲ್ಲೂ ಅವರು ಗಿಡಮರಗಳನ್ನು ನೆಡುವ ಕ್ರಮ ಇರಿಸಿಕೊಂಡಿದ್ದರು. ಆದರೆ ಈಗಿನವರಿಗೆ ಅದೊಂದೂ ಇಲ್ಲ. ಇವರು ಎಲ್ಲ ಮರಗಳನ್ನೂ ಕಡಿದು ನಾಶ ಮಾಡಿದರು. ಒಂದು ಮರವನ್ನು ಕಡಿವ ಮೊದಲು ನಾಲ್ಕು ಸಸಿಗಳನ್ನಾದರೂ ನೆಟ್ಟು ಬೆಳೆಸಬೇಕು. ಹೀಗೊಂದು ನಿಯಮ ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಎಲ್ಲರೂ ಕಡ್ಡಾಯವಾಗಿ ಇದನ್ನು ಪಾಲಿಸಬೇಕು. ಆಗ ಮಾತ್ರ ಈ ಊರಲ್ಲಿ ಗಿಡಮರಗಳು ಉಳಿದಾವು. ಪರಿಸ್ಥಿತಿ ಸುಧಾರಿಸೀತು”. ಆವೇಶದಿಂದ ಹೇಳಿತು ಕಾಗೆ.

“ನಿನ್ನ ಮಾತು ನಿಜ ಕಾಗಣ್ಣಾ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಇಂದೇ ನಾನೊಂದು ಗಿಡ ನೆಡುತ್ತೇನೆ. ಎಚ್ಚರಿಕೆಯಿಂದ ಅದರ ಆರೈಕೆ ಮಾಡುತ್ತೇನೆ. ನನ್ನ ಗೆಳೆಯ ಗೆಳತಿಯರಿಗೂ ವಿಷಯ ತಿಳಿಸುತ್ತೇನೆ. ಪ್ರತಿಯೊಬ್ಬನೂ ವರುಷಕ್ಕೆ ಒಂದು ಗಿಡವನ್ನಾದರೂ ನೆಟ್ಟು ಬೆಳೆಸುವ ನಿಯಮ ಪಾಲಿಸುವಂತೆ ಯತ್ನಿಸುತ್ತೇನೆ. ನಮ್ಮ ಹಿರಿಯರಿಗೆ ಒಳ್ಳೆಯ ಬುದ್ಧಿ ಕೊಡುವಂತೆ ದೇವನಲ್ಲಿ ಪ್ರಾರ್ಥಿಸುತ್ತೇನೆ. ಇದು ನನ್ನ ಪ್ರತಿಜ್ಞೆ “ಕಿಟ್ಟ ಭರವಸೆ ನೀಡಿದ.

“ಜಾಣ ಹುಡುಗ ನೀನು. ದಯವಿಟ್ಟು ಹಾಗೆ ಮಾಡು. ಜನರೆಲ್ಲ ಗಿಡಮರಗಳನ್ನು ನೆಟ್ಟು ಬೆಳೆಸಲಿ. ಹಸಿರು ಗಿಡ ಮರಗಳಿಂದ ಊರು ಕಂಗೊಳಿಸಲಿ. ಅಂಥ ದಿನಕ್ಕಾಗಿ ನಾವು ಕಾಯುತ್ತೇವೆ. ಅಲ್ಲಿಯವರೆಗೆ ನಮ್ಮ ಮದುವೆಯನ್ನು ಮುಂದೂಡುತ್ತೇವೆ.” ಎಂದಿತು ಕಾಗೆ. ಹಾಗೆ ಹೇಳಿದ ಅದು ಪುರ್ರೆಂದು ಅಲ್ಲಿಂದ ಹಾರಿ ಹೋಯಿತು.

# ಸಾರ್ಥಕ ಬದುಕು

ತಿಪ್ಪ ಒಬ್ಬ ಕೂಲಿ. ಅವನು ಒಬ್ಬಂಟಿ. ಅವನಿಗೆ ಹೆಂಡತಿ ಮಕ್ಕಳು ಇರಲಿಲ್ಲ. ಬೆಟ್ಟದ ತಪ್ಪಲಿನ ಪುಟ್ಟ ಮನೆಯಲ್ಲಿ ಅವನು ವಾಸವಾಗಿದ್ದ.

ತಿಪ್ಪ ಬಹಳ ಶ್ರಮ ಜೀವಿ. ಸೋಮಾರಿಯಾಗಿ ಅವನೆಂದೂ ಸಮಯ ಕಳೆಯುತ್ತಿದ್ದಿಲ್ಲ. ಊರವರು ಕೆಲಸಕ್ಕೆ ಕರೆದಾಗ ಅವನು ಹೋಗುತ್ತಿದ್ದ., ಹೇಳಿದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದ. ಅವರು ಕೊಟ್ಟದ್ದನ್ನು ಪಡೆದು, ಮನೆಗೆ ಮರಳುತ್ತಿದ್ದ. ಕೆಲಸವಿಲ್ಲದ ದಿನಗಳಲ್ಲೂ ಅವನು ತೆಪ್ಪಗೆ ಕೂಡುತ್ತಿದ್ದಿಲ್ಲ. ಆಗ ಅವನು ತನ್ನ ಜಮೀನಿನಲ್ಲೇ ಏನಾದರೂ ಕೆಲಸದಲ್ಲಿ ತೊಡಗುತ್ತಿದ್ದ.

ತಿಪ್ಪನ ಮನೆಯ ಸುತ್ತಮುತ್ತಣ ಜಾಗ ಸಮತಟ್ಟಾಗಿತ್ತು. ಹಿಂದೆ ಅದು ಸರಕಾರಕ್ಕೆ ಸೇರಿದ ಭೂಮಿ. ತಿಪ್ಪ ಅಲ್ಲಿ ಸಣ್ಣದೊಂದು ಗುಡಿಸಲು ಕಟ್ಟಿಕೊಂಡ. ಬಳಿಕ ಅಲ್ಲಿದ್ದ ಬಳ್ಳಿ ಪೊದೆಗಳನ್ನೆಲ್ಲ ಸವರಿದ. ಮಳೆಗಾಲ ಆರಂಭವಾದಾಗ ಮಾವು, ಹಲಸು, ಗೇರು, ನೇರಳೆ, ಪೇರಳೆ, ತೆಂಗು ಇತ್ಯಾದಿ ಗಿಡಗಳನ್ನು ನೆಟ್ಟ. ಮತ್ತೆ ಆ ಜಾಗದ ಸುತ್ತ ಬೇಲಿ ಹಾಕಿದ. ಬಿಡುವಿನ ವೇಳೆಯಲ್ಲಿ ಅವನು ತಾನು ನೆಟ್ಟ ಗಿಡಗಳ ಆರೈಕೆ ಮಾಡಿದ. ಗಿಡಗಳು ಹುಲುಸಾಗಿ ಬೆಳೆದವು. ಕೆಲವು ಮರಗಳೂ ಹೂ ಬಿಟ್ಟವು. ಹಣ್ಣುಗಳನ್ನೂ ಕೊಟ್ಟವು. ಅಷ್ಟರಲ್ಲಿ ಆ ಜಾಗವು ತಿಪ್ಪನ ಹೆಸರಲ್ಲಿ ನೋಂದಣಿಯಾಗಿತ್ತು. ಅದು ಅವನ ಸ್ವಂತ ಆಸ್ತಿ ಎನಿಸಿತು.

ತಿಪ್ಪನಿಗೆ ಮಕ್ಕಳೆಂದರೆ ತುಂಬ ಇಷ್ಟ. ಅವರನ್ನು ಕಂಡರೆ ಅವನ ಮುಖ ಅರಳುತ್ತಿತ್ತು. ಅವನು ಪ್ರೀತಿಯಿಂದ ಅವರನ್ನು ಮಾತಾಡಿಸುತ್ತಿದ್ದ. ತಾನು ಬೆಳೆಸಿದ ಹಣ್ಣು ಹಂಪಲುಗಳನ್ನು ಅವರಿಗೆ ನೀಡುತ್ತಿದ್ದ. "ಬನ್ನಿ ಮಕ್ಕಳೆ, ನನ್ನ ತೋಟಕ್ಕೆ ಬನ್ನಿ. ಅಲ್ಲಿ ಖಾಲಿ ಜಾಗ ಇದೆ. ತಂಪಾದ ನೆರಳಿದೆ. ಬನ್ನಿ ಅಲ್ಲಿ ಆಡಿಕೊಳ್ಳಿ." ಎಂದು ಅವನು ಅವರನ್ನು ಕರೆಯುತ್ತಿದ್ದ. ಮಕ್ಕಳು ಅವನ ತೋಟದಲ್ಲಿ ಆಡುತ್ತಿದ್ದರೆ ಅವನಿಗಾಗುವ ಸಂತೋಷ ಅಷ್ಟಿಷ್ಟಲ್ಲ.



ಆಟವಾಡುವ ಮಕ್ಕಳು ಬಾಯಾರಿದರೆ, ತಿಪ್ಪ ಅವರಿಗೆ ಬೆಲ್ಲ-ನೀರು ಕೊಡುತ್ತಿದ್ದ. ಅವರು ಆಡುವ ಜಾಗವನ್ನು ಗುಡಿಸಿ, ಚೊಕ್ಕಟವಾಗಿ ಇಡುತ್ತಿದ್ದ. ಆಡುವ ಮಕ್ಕಳು ಬಿದ್ದು ಪೆಟ್ಟು ಮಾಡಿಕೊಂಡರೆ, ತಿಪ್ಪನೇ ಅವರನ್ನು ಉಪಚರಿಸುತ್ತಿದ್ದ. ಮಕ್ಕಳಿಗೂ ಹಾಗೆಯೇ. ತಿಪ್ಪನಲ್ಲಿ ಅವರಿಗೆ ಎಲ್ಲಿಲ್ಲದ ಪ್ರೀತಿ, ಸಲುಗೆ. "ತಿಪ್ಪಣ್ಣಾ , ತಿಪ್ಪಣ್ಣಾ" ಎಂದು ಅವರು ಅವನನ್ನು ಮುತ್ತಿಕೊಳ್ಳುತ್ತಿದ್ದರು. ಸಹಾಯ ಬೇಕಾದಾಗ ಅವನನ್ನು ಕೇಳುತ್ತಿದ್ದರು. ತಮಗೆ ಬೇಕಾದುದನ್ನು ಅವನಿಂದ ಪಡೆಯುತ್ತಿದ್ದರು. ಹೀಗೆ ತಿಂಗಳುಗಳು ಕಳೆದವು., ವರುಷಗಳು ಉರುಳಿ ಹೋದವು.

ತಿಪ್ಪ ಮುದುಕನಾದ. ಅವನಿಗೆ ಒಂದು ಚಿಂತೆ ಹತ್ತಿತು. "ನನಗೆ ಹೆಂಡತಿಯೂ ಇಲ್ಲ, ಮಕ್ಕಳೂ ಇಲ್ಲ. ನಾನು ಸತ್ತಮೇಲೆ ಈ ತೋಟ ಯಾರಿಗೇ ಸೇರಿ ಬಿಡುತ್ತದೆ. ಮತ್ತೆ ಮಕ್ಕಳು ಇಲ್ಲಿಗೆ ಬರುವಂತಿಲ್ಲ. ಹಿಗ್ಗಿ, ಹಾಡಿ ಇಲ್ಲಿ ನಲಿದಾಡುವಂತಿಲ್ಲ. ಹಾಗೆ ಆಗಬಾರದು. ಈ ತೋಟ ಎಂದೆಂದಿಗೂ ಊರ ಮಕ್ಕಳ ಉಪಯೋಗಕ್ಕೆ ಸಿಗಬೇಕು. ದಿನವೂ ಅವರು ಇಲ್ಲಿಗೆ ಬರಬೇಕು. ಖುಷಿಯಿಂಧ ಇಲ್ಲಿ

ಓಡಾಡಿಕೊಂಡು ಇರಬೇಕು. ಅದಕ್ಕಾಗಿ ಏನಾದರೊಂದು ವ್ಯವಸ್ಥೆ ಮಾಡಬೇಕು." ಹೀಗೆ ಅವನು ನಿರ್ಧರಿಸಿದ. ಬಳಿಕ ಊರ ಹಿರಿಯರನ್ನು ಅವನು ಭೇಟ್ಟಿ ಮಾಡಿ., ತನ್ನ ಮನದ ಆಸೆಯನ್ನು ಅವರಲ್ಲಿ ತೋಡಿಕೊಂಡ.

"ತಿಪ್ಪಾ, ಬಹಳ ಒಳ್ಳೆಯ ಆಸೆ ನಿನ್ನದು. ಅದು ನೆರವೇರುವಂತೆ ವ್ಯವಸ್ಥೆ ಮಾಡೋಣ. "ಹಿರಿಯರು ಭರವಸೆ ನೀಡಿದರು. ಅವನಿಂದ ಅವರು ಅಗತ್ಯವುಳ್ಳ ಕಾಗದ ಪತ್ರ ಮಾಡಿಸಿದರು. ಅಂದೇ "ತಿಪ್ಪನ ತೋಟದ ರಕ್ಷಣಾ ಸಮಿತಿ" ಎಂಬ ಒಂದು ಸಮಿತಿಯೂ ರಚನೆಗೊಂಡಿತು. ಮುಂದೆ ಕೆಲವೇ ದಿನಗಳಲ್ಲಿ ತಿಪ್ಪ ತೀರಿಕೊಂಡ.

ತಿಪ್ಪನ ಕೊನೆಯಾಸೆ ಇಂದಿಗೆ ಈಡೇರಿದೆ. ಅವನ ತೋಟದಲ್ಲಿ ಮಕ್ಕಳ ಕ್ರೀಡಾವನ ನಿರ್ಮಾಣವಾಗಿದೆ. ಸಂಜೆಯ ಹೊತ್ತು ಊರ ಮಕ್ಕಳೆಲ್ಲ ಅಲ್ಲಿ ಒಟ್ಟು ಸೇರುತ್ತಾರೆ, ಹಿಗ್ಗಿನಿಂದ ಹಾಡಿ, ಓಡಿ, ನಕ್ಕು, ನಲಿದಾಡುತ್ತಾರೆ. ಹೀಗೆ ಕೂಲಿ ತಿಪ್ಪನ ಬದುಕು ಸಾರ್ಥಕವಾಗಿದೆ. ಊರವರ ಮನದಲ್ಲಿ ಅವನ ನೆನಪು ಹಸಿರಾಗಿ ಉಳಿದಿದೆ.

ತಿಪ್ಪ ಧನಿಕನೂ ಆಗಿರಲಿಲ್ಲ; ಭೂಮಾಲಿಕನೂ ಆಗಿರಲಿಲ್ಲ. ಆದರೆ ಆತ ನೂರಾರು ಗಿಡಮರಗಳನ್ನು ನೆಟ್ಟು ಬೆಳೆಸಿದ. ನಾವು?

## ಸಹಕಾರದ ಸುಖ

ಊರ ಹೊರ ಭಾಗದಲ್ಲಿ ಒಂದು ಬಯಲು ಇತ್ತು. ಹುಲ್ಲಿನಿಂದ ತುಂಬಿದ ಬಯಲು ಅದು. ಸದಾ ಹಸಿರಾಗಿ ಕಂಗೊಳಿಸುತ್ತಿತ್ತು. ನೂರಾರು ದನಗಳಲು ಅಲ್ಲಿ ಮೇಯಲು ಬರುತ್ತಿದ್ದವು. ಅವುಗಳಲ್ಲಿ ಒಂದು ಮುದಿ ದನ ಇತ್ತು. ಉದ್ದ ಕೋಡಿನ ಕಾಳಿ ದನ ಅದು. ಕರುಹಾಕಿ ಹೆಚ್ಚು ಕಾಲ ಕಳೆದಿರಬೇಕು. ಅದು ಹಾಲು ಕೊಡುತ್ತಿರಲಿಲ್ಲ. ಹಾಗಾಗಿ ಮನೆಯವರು ಅದನ್ನು ಪ್ರೀತಿಯಿಂದ ನೋಡುತ್ತಿರಲಿಲ್ಲ. ಅದರ ಆರೈಕೆಯನ್ನೂ ಮಾಡುತ್ತಿರಲಿಲ್ಲ. ಯಾರಿಗೂ ಬೇಡವಾದ ಜೀವಿಯಾಗಿತ್ತು ಆ ದನ.

ದಿನವೂ ಆ ದನ ಬಯಲಿಗೆ ಬರುತ್ತಿತ್ತು. ಆದರೆ ಉಳಿದ ದನಗಳಂತೆ ಅದು ಹೆಚ್ಚು ಹೊತ್ತು ಹುಲ್ಲು ಮೇಯುತ್ತಿರಲಿಲ್ಲ. ಅದರ ಮೈಮೇಲೆ ಸಾವಿರಾರು ಉಣ್ಣೆಗಳಿದ್ದವು. ಅವು ದನಕ್ಕೆ ಕಚ್ಚುತ್ತಿದ್ದವು. ಅದರ ನೆತ್ತರು ಹೀರುತ್ತಿದ್ದವು. ಇದರಿಂದ ಆ ದನಕ್ಕೆ ತುಂಬ ನೋವು ಆಗುತ್ತಿತ್ತು. ಎಡೆಬಿಡದೆ ಅದರ ಮೈ ತುರಿಸುತ್ತಿತ್ತು. ಅದು ಆಗಾಗ ತನ್ನ ಮೈಯನ್ನು ನೆಕ್ಕಿಕೊಳ್ಳುತ್ತಿತ್ತು. ಹತ್ತಿರದ ಕಲ್ಲಿಗೋ ಮರಕ್ಕೋ ಮೈ ತಿಕ್ಕಿಕೊಳ್ಳುತ್ತಿತ್ತು. ಹೀಗೆ ಅದು ತುಂಬ ಕಷ್ಟ ಅನುಭವಿಸುತ್ತಿತ್ತು.. ಆದರೆ ಯಾರೂ ಅದನ್ನು ಗಮನಿಸುತ್ತಿರಲಿಲ್ಲ. ಅದರ ಸಹಾಯಕ್ಕೂ ಬರುತ್ತಿರಲಿಲ್ಲ.

ಆ ಬಯಲಿನ ಒಂದು ಕಡೆ ದೊಡ್ಡದೊಂದು ಮರ ಇತ್ತು. ಆ ಮರದಲ್ಲಿ ಕೆಲವು ಕಾಗೆಗಳು ವಾಸಿಸುತ್ತಿದ್ದವು. ಅವುಗಳಲ್ಲಿ ಒಂದು ಕಾಗೆ ಒಮ್ಮೆ ಆ ಕಾಳಿ ದನವನ್ನು ನೋಡಿತು. ಅದರ ಕುತೂಹಲ ಕೆರಳಿತು. ದನವು ಹಾಗೇಕೆ ಮಾಡುತ್ತದೆ ಎಂದು ಅದು ತಿಳಿಯ ಬಯಸಿತು.

ಒಡನೆ ಕಾಗೆ ದನದ ಬಳಿಗೆ ಹಾರಿತು. "ಕಾಳಮ್ಮಾ, ಕಾಳಮ್ಮಾ, ನೀನು ಹೆಚ್ಚು ಹೊತ್ತು ಮೇಯುವುದಿಲ್ಲ ಒಂದುಗಳಿಗೆ ಸುಮ್ಮನೆ ಕೂಡುವುದಿಲ್ಲ. ಯಾವಾಗಲೂ ಮೈನೆಕ್ಕಿಕೊಳ್ಳುತ್ತೀ, ಇಲ್ಲವೇ ತಿಕ್ಕಿಕೊಳ್ಳುತ್ತೀ. ಇದೇಕೆ ಹೀಗೆ? ನಿನಗೇನು ತೊಂದರೆ ಇದೆ?" ಎಂದು ಅದು ವಿಚಾರಿಸಿತು.

"ನನ್ನ ಮೈಯನ್ನೊಮ್ಮೆ ಸರಿಯಾಗಿ ನೋಡು. ಆಗ ನಿನಗೇ ತಿಳಿಯುತ್ತದೆ." ದನ ಉತ್ತರ ಕೊಟ್ಟಿತು.

ಕಾಗೆ ದನದ ಹತ್ತಿರಕ್ಕೆ ಕುಪ್ಪ ಳಿಸಿತು. ದನದ ಮೈಮೇಲೆ ನೋಟ ಹರಿಸಿತು. ಒಡನೆ , "ಅಬ್ಬಾ ಎಷ್ಟು ಉಣ್ಣೆಗಳು!" ಎಂದು ಅದು ಉದ್ಗಾರ ತೆಗೆಯಿತು.

“ಹೌದು ಕಾಗಕ್ಕಾ, ನೂರಾರು ಉಣ್ಣೆಗಳು ನನ್ನ ಮೈಮೇಲೆ ಇವೆ. ಅವು ನನಗೆ ಕಚ್ಚುತ್ತವೆ. ನನ್ನ ನೆತ್ತರು ಹೀರುತ್ತವೆ. ಕ್ಷಣಕ್ಷಣಕ್ಕೂ ನನ್ನನ್ನು ಕೊಲ್ಲುತ್ತವೆ. ಇದೇ ನನಗಿರುವ ತೊಂದರೆ.” ಎಂದಿತು ದನ.

“ಅಷ್ಟೇ ತಾನೇ? ನಿನಗೆ ನಾನು ಸಹಾಯ ಮಾಡುತ್ತೇನೆ. ಉಣ್ಣೆಗಳನ್ನು, ಕುಕ್ಕಿ ಕುಕ್ಕಿ ನಾನು ತಿಂದು ಬಿಡುತ್ತೇನೆ . ಆಗ ನನ್ನ ತೊಂದರೆ ದೂರವಾಗುತ್ತದೆ’ ಕಾಗೆ ಹೇಳಿತು.

“ಆದರೆ ಅದು ನಿನಗೆ ಸಾಧ್ಯವೇ? ಎಷ್ಟನ್ನು ನೀನು ಹೆಕ್ಕಬಲ್ಲೆ? ಎಷ್ಟನ್ನು ತಿನ್ನಬಲ್ಲೆ? ಇಂದು ನೂರು ಉಣ್ಣೆಗಳು ಕಡಿಮೆಯಾದರೆ ನಾಳೆ ಇನ್ನೂರು ಮತ್ತೆ ಸೇರಿಕೊಳ್ಳುತ್ತವೆ. ನಮ್ಮ ಹಟ್ಟಿ ಉಣ್ಣೆಗಳಿಂದ ತುಂಬಿ ಹೋಗಿದೆ.” ದನ ಬೇಸರ ವ್ಯಕ್ತಪಡಿಸಿತು.



“ಅದೇಕೆ ಹಾಗೆ? ನಿನ್ನ ಯಜಮಾನ ಹಟ್ಟಿಯನ್ನು ಗುಡಿಸುವುದಿಲ್ಲವೇ? ತಿಕ್ಕಿ ತಿಕ್ಕಿ ನಿನ್ನ ಮೈತೊಳೆಯುವುದಿಲ್ಲವೇ?” ಕಾಗೆ ಪ್ರಶ್ನಿಸಿತು.

“ನಾನು ಹಾಲು ಕೊಡುತ್ತಿದ್ದಾಗ ಎಲ್ಲವೂ ಸರಿಯಾಗಿತ್ತು. ಈಗ ನಾನು ಬತ್ತಿದ ದನ. ಯಾರಿಗೆ ಬೇಕು ಹೇಳು? ಯಜಮಾನ, ಯಜಮಾನಿ ಯಾರೂ ನನ್ನನ್ನು ಕಣ್ಣೆತ್ತಿ ನೋಡುವುದಿಲ್ಲ. ಈ ಉಣ್ಣೆಗಳಂತೂ ನನ್ನನ್ನು ತಿನ್ನುತ್ತಲೇ ಇರುತ್ತವೆ.” ದನ ತನ್ನ ಸಂಕಟ ಹೇಳಿಕೊಂಡಿತು.

“ಚಿಂತಿಸಬೇಡ ಕಾಳಮ್ಮಾ. ನೀನು ಸಹಕರಿಸಿ ಬಿಡು. ನಿನಗೆ ನೆಮ್ಮದಿ ನಾನು ನೀಡುತ್ತೇನೆ. ನನ್ನ ಮಾತನ್ನು ನಂಬು.” ಕಾಗೆ ಧೈರ್ಯ ಹೇಳಿತು.

“ನಾನೇನು ಮಾಡಬೇಕು.? ನಿನಗೆ ಹೇಗೆ ಸಹಕಾರ ನೀಡಬೇಕು?” ದನ ಪ್ರಶ್ನೆ ಹಾಕಿತು.

“ಮುಂದೆ ಬಂದರೆ ಹಾಯಬೇಡ. ಹಿಂದೆ ಬಂದರೆ ಒದೆಯಬೇಡ. ನಾನು ಬಳಿಗೆ ಬಂದಾಗ ನೀನು ಸುಮ್ಮನೆ ನಿಂತು ಬಿಡು. ಈ ಉಣ್ಣೆಗಳಿಂದ ನಿನ್ನನ್ನು ನಾನು ರಕ್ಷಿಸುತ್ತೇನೆ .” ಕಾಗೆ ಮತು ಕೊಟ್ಟಿತು. ದನ ಅದಕ್ಕೆ ಒಪ್ಪಿಕೊಂಡಿತು.

ಒಡನೆಕಾಗೆ” ಕಾಕಾಕಾ..” ಎಂದು ಗಟ್ಟಿಯಾಗಿ ಕೂಗಿತು. ಕ್ಷಣದೊಳಗೆ ಅದರ ಬಳಗದ ಕೆಲವು ಕಾಗೆಗಳು ಅಲ್ಲಿ ಒಟ್ಟಾದವು. ಅವು ತಮ್ಮೊಗಳಗೆ ಏನೋ ಮಾತಾಡಿಕೊಂಡವು. ಮತ್ತೆ ನಿಮಿಷದೊಳಗೆ ಅವುಗಳ ಕೆಲಸ ಆರಂಭವಾಯಿತು. ದನಕ್ಕೆ ನೋವಾಗದಂತೆ ಅವು ಹೆಕ್ಕಿ, ಹೆಕ್ಕಿ ಉಣ್ಣೆಗಳನ್ನು ತಿನ್ನತೊಡಗಿದವು. ತಾಸು ಹೊತ್ತು ಕಳೆವಷ್ಟರಲ್ಲಿ ಅರ್ಧಕ್ಕರ್ಧ ಉಣ್ಣೆಗಳು ಕಾಗೆಗಳ ಹೊಟ್ಟೆ ಸೇರಿದ್ದವು. ದನದ ಸಂಕಟ ತುಂಬ ಕಡಿಮೆಯಾಗಿತ್ತು. ಕಾಗೆಗಳಿಗೆ ವಂದಿಸಿ , ಅದು ತನ್ನ ಹಟ್ಟಿಗೆ ಹೊರಟು ಹೋಯಿತು.

ಅಂದಿನಿಂದ ಆ ಪ್ರಾಣಿ -ಪಕ್ಷಿಗಳ ನಂಟು ಬೆಳೆಯಿತು. ಪ್ರತಿ ದಿನವೂ ದನ ಆ ಮರದ ಬುಡಕ್ಕೆ ಬರುತ್ತಿತ್ತು., ತೆಪ್ಪಗೆ ಅಲ್ಲಿ ನಿಲ್ಲುತ್ತಿತ್ತು. ಕೂಡಲೇ ಕಾಗೆಗಳೂ ಅಲ್ಲಿ ಹಾಜರಾಗುತ್ತಿದ್ದವು. ದನದ ಮೈಮೇಲಿನ ಉಣ್ಣಿಗಳನ್ನು ಅವು ತಿನ್ನುತ್ತಿದ್ದವು. ಇದರಿಂದ ಕಾಗೆಗಳಿಗೆ ದಿನವೂ ಆಹಾರ ಸಿಗುತ್ತಿತ್ತು. ದನಕ್ಕೆ ಉಣ್ಣಿಗಳ ತೊಂದರೆ ತಪ್ಪುತ್ತಿತ್ತು. ಹೀಗೆ ಸಹಕಾರದ ಸುಖ ಅವುಗಳದಾಯಿತು.

ಇಂದಿಗೂ ಇಂತಹ ನೋಟಗಳು ಅಲ್ಲಲ್ಲಿ ಕಾಣಸಿಗುತ್ತವೆ. ನೀವು ನೋಡಿದ್ದೀರಾ?

## ತಿದ್ದಿಕೊಂಡ ತಪ್ಪು

ಒಬ್ಬ ಬಡವ ಇದ್ದ. ಅವನ ಹೆಸರು ತಿಮ್ಮ. ಕೂಲಿ ಕೆಲಸ ಮಾಡಿ ಅವನು ಜೀವನ ಸಾಗಿಸುತ್ತಿದ್ದ.

ತಿಮ್ಮನಿಗೆ ಒಮ್ಮೆ ಒಂದು ಬಾಳೆಗಿಡ ಸಿಕ್ಕಿತು. ಅವನು ಅದನ್ನು ಮನೆಗೆ ತಂದ. ಬಚ್ಚಲಿನ ಹಿಂದುಗಡೆ ಒಂದು ಗುಂಡಿ ತೋಡಿದ. ಅದಕ್ಕೆ ಬೂದಿ, ಗೊಬ್ಬರ ಹಾಕಿದ. ಅದರಲ್ಲಿ ಆ ಗಿಡವನ್ನು ನೆಟ್ಟ.

ದಿನಗಳು ಉರುಳಿದವು. ಬಾಳೆಗಿಡ ಜೀವ ಹಿಡಿಯಿತು. ಬೆಳೆಯತೊಡಗಿತು. ತಿಮ್ಮನಿಗೆ ಸಂತೋಷವಾಯಿತು.

ಒಮ್ಮೆ ತಿಮ್ಮ ಬಾಳೆಗಿಡದ ಬಳಿಗೆ ಬಂದ. ಬಚ್ಚಲಿನ ನೀರು ಅದರ ಪಕ್ಕದಲ್ಲೇ ಹರಿದು ಹೋಗುತ್ತಿತ್ತು. ಅಲ್ಲಿನ ಮಣ್ಣು ಪಸೆಯ ಇಂದ ಕೂಡಿತ್ತು. ಆ ಮಣ್ಣಿನಲ್ಲಿ ನೂರಾರು ಎರೆಹುಳಗಳು ಇದ್ದವು.

ತಿಮ್ಮ ಎರೆಹುಳುಗಳನ್ನು ನೋಡಿದ. "ಬಾಳೆಗೆ ಹಾಕಿದ ಗೊಬ್ಬರವನ್ನೆಲ್ಲ ಅವು ತಿನ್ನುತ್ತವೆ. ಇನ್ನು ಬಾಳೆ ಸೊರಗಿ ಹೋಗುತ್ತದೆ." ಎಂದು ಅವನು ಯೋಚಿಸಿದ. ಅವನಿಗೆ ಎರೆಹುಳಗಳ ಮೇಲೆ ಸಿಟ್ಟು ಬಂತು. ಒಡನೆ ಅವನು ಮನೆಗೆ ಹಿಂದಿರುಗಿದ. ಡಿ.ಡಿ.ಟಿ. ಪೌಡರಿನ ತೊಟ್ಟೆಗಾಗಿ ಅವನು ಹುಡುಕಾಡಿದ. ಅದು ಅವನ ಕೈಗೆ ಸಿಕ್ಕಿತು. ಅದನ್ನು ಹಿಡಿದುಕೊಂಡು ಅವನು ಬಾಲೆಗಿಡದ ಕಡೆಗೆ ಹೆಜ್ಜೆ ಹಾಕಿದ. ಆಗಲೇ ಬಾಬು ಮಾಸ್ತರರು ಅವನಿಗೆ ಎದುರಾದರು.

"ಏನು ತಿಮ್ಮಾ, ಎಲ್ಲಿಗೆ ಹೊರಟೆ?" ಅವರು ಅವನನ್ನು ವಿಚಾರಿಸಿದರು.

"ಒಂದು ಬಾಳೆಗಿಡ ನೆಟ್ಟಿದ್ದೆ. ಅದಕ್ಕೆ ತುಂಬ ಗೊಬ್ಬರವನ್ನೂ ಹಾಕಿದ್ದೆ. ಈಗ ನೋಡಿದರೆ, ಬಾಳೆಯ ಬುಡದಲ್ಲಿ ಎರೆಹುಳುಗಳೇ ತುಂಬಿ ಹೋಗಿವೆ. ಬಾಳೆಗೆ ಹಾಕಿದ ಗೊಬ್ಬರವೆಲ್ಲ ಅವುಗಳ ಪಾಲಾಗುತ್ತದೆ. ಆ ಎರೆಹುಳಗಳಿಗೆ ಏನಾದರೂ ಮಾಡಬೇಕಲ್ಲ?" ತಿಮ್ಮ ಹೇಳಿದ

"ಏನು, ಎರೆಹುಳುಗಳೇ? ಅವುಗಳಿಗೆ ಏನು ಮಾಡಲು ಹೊರಟಿರುವೆ ನೀನು?" ಅವರು ಮತ್ತೆ ಕೇಳಿದರು.

"ಮಾಡುವುದೇನು? ಇರುವೆಗಳಿಗಾಗಿ ತಂದು ಇರಿಸಿದ ಡಿ.ಡಿ.ಟಿ. ಇದೆ. ಅದನ್ನ ಉ ಎರೆಹುಳುಗಳ ಮೇಲೆ ಹಾಕಿ ಬಿಡುತ್ತೇನೆ. ಎಲ್ಲ "ಪಡ್ಚ" ಆಗುತ್ತವೆ." ಎಂದ ತಿಮ್ಮ.


"ಬೇಡ ತಿಮ್ಮಾ, ಹಾಗೆ ಮಾಡಬೇಡ. ಎರೆಹುಳಗಳು ಅಪಕಾರಿಗಳಲ್ಲ. ಅವು ನಮಗೆ ಉಪಕಾರಿಗಳು., ನಮ್ಮ ಮಿತ್ರರು" ಮಾಸ್ತರರು ಹೇಳತೊಡಗಿದರು.

"ಏನು, ಎರೆಹುಳುಗಳು ಉಪಕಾರಿಗಳೇ? ಅವು ನಮಗೇನು ಉಪಕಾರ ಮಾಡುತ್ತವೆ.? ಹೇಗೆ ಉಪಕಾರ ಮಾಡುತ್ತವೆ.?" ತಿಮ್ಮ ಕುತೂಹಲ ವ್ಯಕ್ತಪಡಿಸಿದ.

“ತಿಮ್ಮಾ, ಎರೆಹುಳಗಳು ಮಣ್ಣನ್ನು ತಿನ್ನುತ್ತವೆ. ಮಣ್ಣಿನೊಡನೆ ಕೊಳೆತ ಎಲೆ, ಹುಲ್ಲು, ತರಕಾರಿ ಇತ್ಯಾದಿಗಳನ್ನೂ ಮುಕ್ಕುತ್ತವೆ. ಜೀರ್ಣವಾಗದ ಆಹಾರ ಮತ್ತು ಮಣ್ಣನ್ನು ಅವು ಹೊರಚೆಲ್ಲುತ್ತವೆ. ಇದನ್ನು “ಕುಪ್ಪಲು ಮಣ್ಣು” ಎನ್ನುತ್ತಾರೆ. ಬಹಳ ಸಾರವತ್ತಾದ ಗೊಬ್ಬರ ಇದು.” ಮಾಸ್ತರರು ವಿವರಿಸಿದರು.

“ಹೌದೇ? ಈ ಸಂಗತಿ ನನಗೆ ಗೊತ್ತೇ ಇರಲಿಲ್ಲ.” ತಿಮ್ಮ ಒಪ್ಪಿಕೊಂಡ

“ಇಷ್ಟು ಮಾತ್ರವಲ್ಲ ತಿಮ್ಮಾ, ಎರೆಹುಳಗಳು ನೆಲದ ಮೇಲೆಲ್ಲಾ ಬಿಲಗಳನ್ನು ಕೊರೆಯುತ್ತವೆ. ಭೂಮಿಯನ್ನು ಉಳುವ ಕೆಲಸವನ್ನೂ ಅವು ಮಾಡುತ್ತವೆ. ಇದರಿಂದ ಮಣ್ಣಿನಲ್ಲಿ ಗಾಳಿ-ನೀರುಗಳ ಸಂಚಾರಕ್ಕೆ ಅನುಕೂಲವಾಗುವುದು. ಮರಗಿಡಗಳು ಬೇರು ಬಿಡುವುದಕ್ಕೂ ಸಹಾಯವಾಗುವುದು. ಮಣ್ಣಿನಲ್ಲಿ ಎರೆಹುಳಗಳು ಹೆಚ್ಚಿದಷ್ಟೂ ಮಣ್ಣಿನ ಸಾರ ಹೆಚ್ಚುವುದು. ಇಳುವರಿ ಅಧಿಕಗೊಳ್ಳುವುದು. ಇದು ಉಪಕಾರವಲ್ಲವೇ? ಇಷ್ಟು ಉಪಕಾರ ಮಾಡುವ ಎರೆಹುಳಗಳನ್ನು ನಾವು ಕೊಲ್ಲಬಹುದೇ?” ಮಾಸ್ತರರು ಪುಟ್ಟ ಭಾಷಣವನ್ನೇ ಮಾಡಿಬಿಟ್ಟರು.



ಈಗ ತಿಮ್ಮನಿಗೆ ತನ್ನ ತಪ್ಪಿನ ಅರಿವಾಯಿತು. “ಮಾಸ್ತರರೇ, ನನಗೆ ಇದೊಂದೂ ತಿಳಿದಿರಲಿಲ್ಲ. ಹಾಗಾಗಿಯೇ ನಾನು ಎರೆಹುಳಗಳನ್ನು ಕೊಲ್ಲ ಹೊರಟಿದ್ದೆ. ಇಂದು ನಾನು ದೊಡ್ಡದೊಂದು ತಪ್ಪು ಮಾಡಿಬಿಡುತ್ತಿದ್ದೆ. ನೀವು ವಿಷಯ ತಿಳಿಸಿ ಉಪಕಾರ ಮಾಡಿದಿರಿ. ನನ್ನ ತಪ್ಪನ್ನು ತಿದ್ದಿಕೊಳ್ಳುತ್ತೇನೆ. ಈ ಎರೆಹುಳಗಳ ಗೌಜಿಯಲ್ಲಿ ನೀವೇನು ಬಂದಿರಿ ಎಂದೂ ವಿಚಾರಿಸಲಿಲ್ಲ, ನಾನು.  ಬನ್ನಿ, ಚಾವಡಿಯಲ್ಲಿ ಕೂತು ಮಾತಾಡೋಣ.” ಎನ್ನುತ್ತ ಅವನು ಹಿಂದಿರುಗಿ ನಡೆಯತೊಡಗಿದ. ಮಾಸ್ತರರು ಅವನನ್ನು ಹಿಂಬಾಲಿಸಿದರು.

## ರಮೇಶಣ್ಣ ಮೇಸ್ತ್ರು ಆದಾಗ

ಸಂಜೆಯ ಹೊತ್ತು ಅದು. ಗೋಪಿ, ಕಿಟ್ಟ, ಕಮಲಿ ತೋಟದಲ್ಲಿ ಆಡುತ್ತಿದ್ದರು. ಆಗ ಫಕ್ಕನೆ ಕಿಟ್ಟನ ದನಿ ಕೇಳಿಬಂತು. “ಅಮ್ಮಾ ಗೋಪಿಯ ಕೈಗೆ ಕತ್ತಿ ತಾಗಿತು. ನೆತ್ತರು ಸುರಿಯುತ್ತಿದೆ” ಅವನು ಕೂಗಿ ಹೇಳಿದ.

ಸೀತಮ್ಮ ಏನೋ ಕೆಲಸದಲ್ಲಿದ್ದರು. ಮಗನ ಮಾತು ಅವರಿಗೆ ಅರ್ಥವಾಗಲಿಲ್ಲ. ಅವರು ಹಿರಿಯ ಮಗ ರಮೇಶನನ್ನು ಕರೆದರು.

“ಒಮ್ಮೆ ತೋಟಕ್ಕೆ ಹೋಗಿ ಬಾ ಮಗೂ. ಮಕ್ಕಳು ಏನು ಮಾಡಿಕೊಂಡಿದ್ದಾರೆ ಸ್ವಲ್ಪ ವಿಚಾರಿಸು.” ಅವರು ಹೇಳಿದರು. ಒಡನೆ ರಮೇಶ ತೋಟಕ್ಕೆ ಹೋದ. “ಏನು ಕಿಟ್ಟಾ, ಯಾಕೆ ಕರೆದೆ?” ಅವನು ವಿಚಾರಿಸಿದ.

“ಗೋಪಿಯ ಕೈಗೆ ಕತ್ತಿ ತಾಗಿದೆ. ನೆತ್ತರು ಸುರಿಯುತ್ತಿದೆ” ಅವನು ಇನ್ನೊಮ್ಮೆ ಹೇಳಿದ.

“ಕತ್ತಿ ತಾಗಿತೇ? ಎಲ್ಲಿತ್ತು ಅದು? ಹೇಗೆ ತಾಗಿತು? ನೀವೇನು ಕತ್ತಿ ಹಿಡಿದು ಆಟವಾಡಿದ್ದೇ?” ಒಂದೇ ಬಾರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ ರಮೇಶಣ್ಣ.

“ಕ್ರಿಕೆಟ್ಆಡಲು ನಮಗೆ ಬ್ಯಾಟು ಬೇಕಿತ್ತು. ಗೋಪಿ, ಸೋಗೆಯ ದಿಂಡಿನಿಂದ ಬ್ಯಾಟು ತಯಾರಿಸುತ್ತಿದ್ದ. ಆಗ ಕತ್ತಿ ತಾಗಿ, ಗಾಯವಾಯಿತು” ಕಿಟ್ಟ ವಿವರಣೆ ನೀಡಿದ. ಒಡನೆ,

“ಸರಿ, ಈಗ ಬಂದು ಬಿಡುತ್ತೇನೆ.” ಎನ್ನುತ್ತ ರಮೇಶಣ್ಣ ಅತ್ತಿತ್ತ ನೋಡಿದ. ಬೇಲಿ ಬದಿಯ ಹಸಿರು ಗಿಡಗಳು ಅವನ ಕಣ್ಣಿಗೆ ಬಿದ್ದವು. ಅವನು ಅವುಗಳ ಬಳಿಗೆ ನಡೆದ. ಒಂದು ಹಿಡಿ ಹಸಿರೆಲೆಗಳನ್ನು ಕಿತ್ತು ತಂದು, ಅವುಗಳನ್ನು ಹಿಸುಕಿ ಹಿಂಡಿದ. ಗೋಪಿಯ ಗಾಯಕ್ಕೆ ರಸವನ್ನು ಹಚ್ಚಿದ. ಬಳಿಕ ಅವನು,

“ಬಾ ಗೋಪೀ, ಇಲ್ಲಿ ಮರದಡಿ ಸ್ವಲ್ಪ ಕೂತಿರೋಣ. ನೋವು ಈಗ ಕಡಿಮೆಯಾಗುತ್ತದೆ” ಎನ್ನುತ್ತ ಗೋಪಿಯನ್ನು ಅಲ್ಲಿ ಕೂರಿಸಿದ. ತಾನೂ ಕುಳಿತುಕೊಂಡ. ಕಿಟ್ಟ, ಕಮಲಿಯರೂ ಅಲ್ಲಿ ಕೂತುಬಿಟ್ಟರು.

ತುಸು ಹೊತ್ತು ಕಳೆಯಿತು. ಗಾಯದ ರಕ್ತ ಸ್ರಾವ ನಿಂತಿತು. ಕಿಟ್ಟನಿಗೆ ಆಶ್ಚರ್ಯವಾಯಿತು “ರಮೇಶಣ್ಣಾ, ಇದೆಂಥ ಮದ್ದು ಮಾಡಿದೆ ನೀನು? ಗಾಯದಿಂಥ ನೆತ್ತರು ಬರುವುದು ನಿಂತೇ ಹೋಯಿತಲ್ಲಾ!” ಅವನು ಸೋಜಿಗ ವ್ಯಕ್ತಪಡಿಸಿದ.

ರಮೇಶಣ್ಣ ಬೇಲಿ ಬದಿಯ ಗಿಡಗಳತ್ತ ಬೊಟ್ಟು ಮಾಡಿದ. “ಅವು ಯುಪಟೋರಿಯಂ ಗಿಡಗಳು. ಅವುಗಳ ಎಲೆಗಳಲ್ಲಿ ಮದ್ದಿನ ಗುಣವಿದೆ. ಅವುಗಳ ರಸ ಹಚ್ಚಿದರೆ ರಕ್ತಸ್ರಾವ ನಿಲ್ಲುತ್ತದೆ. ಗಾಯ ವಾಸಿಯಾಗುತ್ತದೆ” ಅವನು ವಿವರಿಸಿದ.

“ಹೌದೇ,? ನನಗಿದು ಗೊತ್ತೇ ಇರಲಿಲ್ಲ” ಕಿಟ್ಟ ಹೇಳಿದ.

“ನನಗೂ ಗೊತ್ತಿರಲಿಲ್ಲ” ಕಮಲಿಯೂ ದನಿಗೂಡಿಸಿದಳು.

“ಮನುಷ್ಯರಿಗೆ ಮಾತ್ರವಲ್ಲ ಕಿಟ್ಟಾ, ಪ್ರಾಣಿಗಳ ಗಾಯಕ್ಕೂ ಇದನ್ನು ಬಳಸಬಹುದು”

ರಮೇಶಣ್ಣ ಮಾತು ಸೇರಿಸಿದ.

“ಅಂದರೆ ಈ ಯುಪಟೋರಿಯಂನಿಂದಲೂ ನಮಗೊಂಲದು ಉಪಯೋಗಿವದೆ. ಅಲ್ಲವೇ ರಮೇಶಣ್ಣಾ?” ಕಿಟ್ಟ ಮತ್ತೆ ಕೇಳಿದ.

“ಒಂದಲ್ಲ, ಕೆಲವು ಬಗೆಯ ಉಪಯೋಗಗಳಿವೆ, ಕಿಟ್ಟಾ. ಇತರ ಸಸ್ಯಗಳಂತೆ ಇದು ಸಹ ಆಮ್ಲಜನಕವನ್ನು ಒದಗಿಸುತ್ತದೆ. ಮಳೆ ನೀರಿಗೆ ಭೂಮಿಯ ಮೇಲ್ಮಣ್ಣು ಕೊಚ್ಚಿ ಹೋಗುವುದನ್ನು ತಡೆಯುತ್ತದೆ. ಇದರಲ್ಲಿ ವಿಷಕಾರಕ ಗುಣವಿದೆ. ಹಾಗಾಗಿ ಇದರಿಂದ ಕೀಟನಾಶಕ ತಯಾರಿಸಬಹುದು. ಇದರ ದಂಟುಗಳಲ್ಲಿ ನಾರಿನಂಶವಿದೆ. ಆದುದರಿಂದ ಇದನ್ನು ಪ್ಲೈವುಡ್‌ತಯಾರಿಕೆಗೂ ಬಳಸಿಕೊಳ್ಳಬಹುದು. ಕಂಪೋಸ್ಟ್‌ಗೊಬ್ಬರ ತಯಾರಿಯಲ್ಲೂ ಇದನ್ನು ಉಪಯೋಗಿಸಬಹುದು” ರಮೇಶಣ್ಣ ವಿವರಸಿ ಹೇಳಿದ.

“ಹಾಗಾದರೆ ಮನೆಯ ಸುತ್ತಮುತ್ತ ನಾವು ಈ ಗಿಡಗಳನ್ನು ನೆಟ್ಟು ಬೆಳೆಸಬಹುದು. ಅವುಗಳಿಂದ ಪ್ರಯೋಜನ ಪಡೆಯಬಹುದು. ಅಲ್ಲವೆ ರಮೇಶಣ್ಣಾ? ” ಕಮಲಿ ವಿಚಾರಿಸಿದಳು.

“ಊಹುಂ, ಯಾರೂ ಈ ಗಿಡಗಳನ್ನು ನೆಡುವುದಿಲ್ಲ. ನೆಡಬೇಕಾಗಿಯೂ ಇಲ್ಲ” ಎಂದ ರಮೇಶಣ್ಣ “ಯಾಕೆ, ಯಾಕೆ ನೆಡಬಾರದು?” ಕಮಲಿಯ ಕುತೂಹಲದ ಪ್ರಶ್ನೆ.

“ಯುಪಟೋರಿಯಂ ಗಿಡಗಳು ತಮ್ಮಷ್ಟಕ್ಕೆಯೇ ಬೆಳೆಯುತ್ತವೆ. ಬಲು ಬೇಗೆ ಬೆಳೆಯುತ್ತವೆ, ಹರಡುತ್ತವೆ. ಒಂದೇ ಒಂದು ಗಿಡದಿಂದ ಒಂದೆರಡು ವರುಷಗಳಲ್ಲಿ ಲಕ್ಷಗಟ್ಟಲೆ ಗಿಡಗಳು ಹುಟ್ಟಿಕೊಳ್ಳುತ್ತವೆ. ಗಾಳಿಯಲ್ಲಿ ಇದರ ಬೀಜಗಳು ಒಂದು, ಒಂದೂವರೆ ಕಿ.ಮೀ. ದೂರಕ್ಕೆ ಹರಡಬಲ್ಲವು. ಬಿಸಿಲಿನ ಜಾಗದಲ್ಲಿ ಈ ಗಿಡಗಳು ಬಲು ಹುಲುಸಾಗಿ ಬೆಳೆಯಬಲ್ಲವು. ಹೆಚ್ಚು ಸಾರವಿಲ್ಲದ ಮಣ್ಣಿನಲ್ಲೂ ಇವು ಹುಟ್ಟಿ, ಬದುಕಬಲ್ಲವು. ಹಾಗಾಗಿ ಇವುಗಳನ್ನು ಬೆಳೆಸಲು ಯಾರೂ ಯತ್ನಿಸಬೇಕಾಗಿಲ್ಲ, ಯತ್ನಿಸುವುದೂ ಇಲ್ಲ. ಹಾಗೆ ಮಾಡಿದರೆ ನಮಗೆಯೇ ತೊಂದರೆ ಹೆಚ್ಚು” ರಮೇಶಣ್ಣ ಕಾರಣಗಳನ್ನು ವಿವರಿಸಿದ.



ಏನು, ಯುಪಟೋರಿಯಂನಿಂದ ನಮಗೆ ತೊಂದರೆಯೇ? ಹೇಗೆ ತೊಂದರೆ? ಏನು ತೊಂದರೆ?” ಪ್ರಶ್ನೆ ಹಾಕಿದ ಕಿಟ್ಟ

“ಹಿಪಟೋರಿಯಂನಿಂದ ನಮಗಾಗುವ ಉಪಕಾರಕ್ಕಿಂತ ಅಪಕಾರವೇ ಹೆಚ್ಚು. ಯಾಕೆ ಗೊತ್ತೇ? ಮನುಷ್ಯ ಮಾತ್ರವಲ್ಲ ದನ, ಆಡು, ಕುರಿ ಇಂತಹ ಯಾವ ಪ್ರಾಣಿಯೂ ಇದನ್ನು ತಿನ್ನುವುದಿಲ್ಲ. ಮನುಷ್ಯರಿಗೂ ಪ್ರಾಣಿಗಳಿಗೂ ಇದು ಹಲವಾರು ಆರೋಗ್ಯದ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಬಲು ಬೇಗೆ ಬೆಳೆಯುವ ಈ ಗಿಡವು ಮಣ್ಣಿನ ಸಾರವನ್ನು ಹೀರಿ, ಭೂಮಿಯನ್ನು ಬರಡಾಗಿಸುತ್ತದೆ. ವಿಷಕಾರಕ ಗುಣಗಳಿಂದ ಕೂಡಿದ ಇದು ಪರಿಸರದ ಆರೋಗ್ಯ ಸೂಚಕವಾದ ಚಿಟ್ಟೆಗಳನ್ನೂ ದೂರಕ್ಕೆ ಓಡಿಸುತ್ತದೆ. ಇದರ ಸಂಪರ್ಕಕ್ಕೆ ಬಂದ ಜನರಿಗೆ, ದನಗಳಿಗೆ, ತುರಿಕೆ ಉಂಟಾಗುತ್ತದೆ. ಈ ಗಿಡ ಒಣಗಿದಾಗ ಸುತ್ತ ಮುತ್ತಣ ಗಾಳಿಯಲ್ಲಿ ಇದರ ಬೀಜಗಳು ಸೇರಿಕೊಳ್ಳುತ್ತವೆ. ಉಸಿರಾಟದ ಗಾಳಿಯೊಡನೆ ಅವು ಶ್ವಾಸಕೋಶ ಸೇರಿದಾಗ ನಮಗೆ ಅಲರ್ಜಿ ಉಂಟಾಗುತ್ತದೆ, ಉಬ್ಬಸ ಕಾಣಿಸಿಕೊಳ್ಳುತ್ತದೆ. ಇಂತಹ ಹಲವು ಕಾರಣಗಳಿಂದಾಗಿ ನಮಗಿದು ಅಪಾಯಕಾರಿಯಾಗಿದೆ. ಇದರ ನಾಶಕ್ಕೆ ಅಲ್ಲದಿದ್ದರೂ ಹತೋಟಿಗೆ ನಾವು ಪ್ರಯತ್ನಿಸಬೇಕಾಗಿದೆ” ಪುಟ್ಟದೊಂದು ಭಾಷಣವನ್ನೇ ಮಾಡಿದ ರಮೇಶಣ್ಣ

“ಒಂದು ಗಿಡದಿಂದ ಲಕ್ಷಕ್ಕಿಂತ ಹೆಚ್ಚು ಗಿಡಗಳು ಹುಟ್ಟುತ್ತವೆ ಎಂದು ನೀನೇ ಹೇಳಿದೆಯಲ್ಲಾ? ಹಾಗಿರುವಾಗ, ಇದನ್ನು ನಾಶಗೊಳಿಸಲು ಸಾಧ್ಯವೇ?” ಕಿಟ್ಟ ಸಂದೇಹ ವ್ಯಕ್ತಪಡಿಸಿದ.

“ಎಲ್ಲರೂ ಹಟಹಿಡಿದು ಯತ್ನಿಸಬೇಕು. ಎಲ್ಲ ಬಗೆಯ ಪ್ರಯತ್ನಗಳನ್ನೂ ಮಾಡಬೇಕು. ಆಗ ಅದು ಸಾಧ್ಯವಾದೀತು” ರಮೇಶಣ್ಣ ಹೇಳಿದ.

“ನಿನ್ನ ಮಾತು ಅರ್ಥವಾಗಲಿಲ್ಲ ರಮೇಶಣ್ಣಾ. ಸ್ವಲ್ಪ ವಿವರಿಸಿ ಹೇಳುತ್ತೀಯಾ?” ಕಮಲಿ ಬೇಡಿಕೊಂಡಳು.

ಅಷ್ಟರಲ್ಲಿ ಅಮ್ಮನ ದನಿ ಕೇಳಿಸಿತು. “ರಮೇಶಾ, ಕಿಟ್ಟಾ ಇನ್ನೂ ಅಲ್ಲೇ ಇದ್ದೀರಾ? ಬನ್ನಿ, ಮನೆಗೆ ಬನ್ನಿ.” ಅವರು ಕರೆಯುತ್ತಿದ್ದರು.

“ಬರುತ್ತೇವೆ ಅಮ್ಮಾ. ಈಗ ಬಂದು ಬಿಡುತ್ತೇವೆ”

ರಮೇಶಣ್ಣ ಕೂಗಿ ಹೇಳಿದ. ಮತ್ತೆ ಅವನು ಗೋಪಿಯಾ ಕಡೆಗೆ ನೋಡಿ,

“ಈಗ ಹೇಗಿದೆ ಗೋಪೀ? ನೋವು ಕಡಿಮೆಯಾಯಿತೇ?” ಅವನು ವಿಚಾರಿಸಿದ

ಗೋಪಿ ಅಲ್ಲಿ ಕೂತು ಗಾಯಕ್ಕೆ ಗಾಳಿ ಊದುತ್ತಲೇ ಇದ್ದ. “ಹೂಂ ಅಣ್ಣಾ, ನೋವು ಸ್ವಲ್ಪ ಕಡಿಮೆಯಾಯಿತು” ಅವನು ಹೇಳಿದ. ಆಗಲೇ ಕಮಲಿ ಎದ್ದಳು.

“ಅಣ್ಣಾ ಮನೆಗೆ ಹೋಗುವ ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಟ್ಟುಬಿಡು. “ಯುಪಟೋರಿಯಂ ನಾಶ ಅಥವಾ ಹತೋಟಿ ಹೇಗೆ ಸಾಧ್ಯ? ಅದಕ್ಕಾಗಿ ನಾವೇನು ಮಾಡಬೇಕು? ಹೇಳಿ ಬಿಡು” ಅವಳು ಕೇಳಿಕೊಂಡಳು.

“ಮಳೆಗಾಲ ಆರಂಭವಾದ ಕೆಲವೇ ದಿನಗಳಲ್ಲಿ ಯುಪಟೋರಿಯಂ ಗಿಡಗಳು ಹುಟ್ಟಿಕೊಳ್ಳುತ್ತವೆ. ನಾಲ್ಕಾರು ತಿಂಗಳೊಳಗೆ ಅವು ಬೆಳೆದು ಗಟ್ಟಿಗಿಡಗಳಾಗುತ್ತವೆ. ಆಮೊದಲೇ ಅವುಗಳನ್ನು ಬೇರು ಸಹಿತ ಕಿತ್ತು ಬಿಡಬೇಕು. ಬೇರಿನ ಜೊತೆ ಕಿತ್ತುಬಂದ ಮಣ್ಣನ್ನು ಅಲ್ಲೇ ಮೆಟ್ಟಿ ಬಿಡಬೇಕು. ಇದು ಸುಲಭದ ಕೆಲಸ. ಆದರೆ ಇಲ್ಲೊಂದು ಅಪಾಯವಿದೆ. ಅದೇನು ಗೊತ್ತೇ? ಗಿಡಗಳನ್ನು ಬೇರು ಸಹಿತ ಕೀಳುವುದರಿಂದ ಭೂಮಿಯ ಮೇಲ್ಮಣ್ಣು ಮಳೆ ನೀರಿಗೆ ಕೊಚ್ಚಿ ಹೋಗುವ ಸಾಧ್ಯತೆ ಇದೆ. ಆದುದರಿಂದ ಪ್ರತಿ ಬಾರಿ ಹೂ ಬಿಡುವ ಮೊದಲೇ ಈ ಗಿಡಗಳನ್ನು ಕತ್ತರಿಸಿ ಎಸೆಯಬೇಕು ಇಲ್ಲವೆ ಕಂಪೋಸ್ಟ್ಅಥವ ಹಸಿರು ಗೊಬ್ಬರವಾಗಿ ಬಳಸಿಕೊಳ್ಳಬೇಕು. ಎಡೆಬಿಡದೆ ಕೆಲವು ವರ್ಷಗಳ ಕಾಲ ಈ ಕೆಲಸ ನಡೆಯುತ್ತಲೇ ಇರಬೇಕು. ಆಗ ಮಾತ್ರ ಈ ಗಿಡಗಳ ಸಂಖ್ಯೆಯನ್ನು ಹತೋಟಿಗೆ ತರಬಹುದು.

ಇನ್ನೂ ಹೇಳಬೇಕೆಂದರೆ, ನೆರಳಿನ ಜಾಗದಲ್ಲಿ ಯುಪಟೋರಿಯಂ ಹುಲುಸಾಗಿ ಬೆಳೆಯುವುದಿಲ್ಲ. ಹಾಗಾಗಿ ಖಾಲಿ ಜಾಗ ಇದ್ದಲ್ಲಿ ನಾವು ಹೆಚ್ಚು ಹೆಚ್ಚು ಗಿಡಮರಗಳನ್ನು ನೆಟ್ಟು, ಬೆಳೆಸಬೇಕು. ಚಗಟೆ ಗಿಡ ಜಾಸ್ತಿ ಇದ್ದಲ್ಲಿ ಯುಪಟೋರಿಯಂ ಕಾಟ ಕಡಿಮೆ. ಅದು ಪರಿಸರದ ಆರೋಗ್ಯಕ್ಕೆ ಸಹಕಾರಿಯೂ ಹೌದು. ಆದುದರಿಂದ ಚಗಟೆ ಗಿಡಗಳನ್ನು ಹೆಚ್ಚು ಬೆಳೆಯಲು ಬಿಡಬೇಕು. ಇಂಥ ಇತರ ವಿಧಾನಗಳ ಬಗೆಗೂ ನಾವು ಚಿಂತಿಸಬೇಕು., ಕಾರ್ಯಕ್ರಮ ಕೈಗೊಳ್ಳಬೇಕು. ಆದರೆ ಒಂದು ಮಾತಂತೂ ಸತ್ಯ. ಈ ಯುಪಟೋರಿಯಂ ನಿರ್ಮೂಲನ ಒಬ್ಬಿಬ್ಬರಿಂದ ಆಗುವ ಕೆಲಸವಲ್ಲ. ಇದಕ್ಕೆ ಸಾಮೂಹಿಕ ಪ್ರಯತ್ನ ಅಗತ್ಯ. ಶಾಲೆ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರೆಲ್ಲ ಬಿಡುವಿನ ವೇಳೆಯನ್ನು ಇದಕ್ಕಾಗಿ ವಿನಿಯೋಗಿಸಬೇಕು. ಸಾರ್ವಜನಿಕರೂ ಸಹಕರಿಸಬೇಕು. ಕೆಲವೆಡೆ ಇಂತಹ ಪ್ರಯತ್ನಗಳು ಈಗಾಗಲೇ ಆರಂಭಗೊಂಡಿವೆ. ಎಲ್ಲ ಕಡೆ ಎಡೆಬಿಡದೆ ಈ ನಿರ್ಮೂಲನ ಕಾರ್ಯ ನಡೆಯಬೇಕು. ಆಗ ಈ ನಮ್ಮ ಉದ್ದೇಶ ಈಡೇರುವುದು, ಸಾಧ್ಯ. “ರಮೇಶಣ್ಣ ವಿವರಿಸಿದ.

ಅಷ್ಟರಲ್ಲಿ ಇನ್ನೊಮ್ಮೆ ಅಮ್ಮನ ಕರೆ ಕೇಳಿಸಿತು. ಎಲ್ಲರೂ ಎದ್ದು ಮನೆ ಕಡೆಗೆ ನಡೆಯತೊಡಗಿದರು. ಹಾಗೆ ನಡೆಯುತ್ತಲೇ ಕಿಟ್ಟ ಇನ್ನೊಂದು ಪ್ರಶ್ನೆ ಹಾಕಿದ, “ರಮೇಶಣ್ಣಾ, ಈ ಯುಪಟೋರಿಯಂ ನಮ್ಮ ದೇಶದ ಸಸ್ಯವೇ? ಇದರ ಮೂಲ ಎಲ್ಲಿ?”

“ಇದರ ಮೂಲ ದಕ್ಷಿಣ ಅಮೇರಿಕ. ಅಲ್ಲಿಂದ ನಾವು ತರಿಸಿದ ಗೋಧಿಯೊಂದಿಗೆ ಇದು ಇಲ್ಲಿಗೆ ಬಂದರಿಬೇಕು. ಈಗ ದೇಶದ ನಾನಾ ಭಾಗಗಳಲ್ಲಿ ಈ ಸಸ್ಯ ಹರಡಿಕೊಂಡಿದೆ. ನಮ್ಮ ಪರಿಸರವನ್ನು ಹಾಳು ಮಾಡುತ್ತಿದೆ. ಇದನ್ನು ನಾವು ತಡೆಯಬೇಕು. ಇಲ್ಲವಾದರೆ ಅಪಾಯ ಖಂಡಿತ” ರಮೇಶಣ್ಣ ಮಾತು ಮುಗಿಸಿದ.

“ಇಂದು ರಮೇಶಣ್ಣ ಮಾಸ್ತರ್ ಆದರು., ತೋಟದಲ್ಲೊಂದು ಪಾಠ ನಡೆಯಿತು.” ಕಮಲಿ ನಗೆಯಾಡಿದಳು. ಆಗಲೇ ಅವರು ಮನೆ ಬಾಗಿಲಿಗೆ ಬಂದಿದ್ದರು. “ಬನ್ನಿ ಮಕ್ಕಳೇ, ಬೇಗ ಬನ್ನಿ. ಕಾಫಿ ಆರಿ ಹೋಗುತ್ತಿದೆ.” ಎನ್ನುತ್ತ ಅಮ್ಮ ಅವರನ್ನು ಬರಮಾಡಿಕೊಂಡರು.

## ಗುಬ್ಬಚ್ಚಿಯ ಗೋಳು

ಪುಟ್ಟನ ಮನೆ ಇದ್ದುದು ಮಲೆನಾಡಿನ ಒಂದು ಹಳ್ಳಿಯಲ್ಲಿ. ಅವನ ಮನೆಯ ಹಿಂದುಗಡೆ ಒಂದು ಗುಡ್ಡ ಇತ್ತು. ದೊಡ್ಡ ಗುಡ್ಡ ಅದು. ಹಿಂದೆ ಕಾಡಿನಿಂದ ತುಂಬಿತ್ತು. ಈಗ ಕಾಡನ್ನು ಕಡಿದಿದ್ದರು. ಗುಡ್ಡ ಬೋಳಾಗಿತ್ತು. ಅಲ್ಲಲ್ಲಿ ಬಿದರ ಮೆಳೆಗಳು ಮಾತ್ರ ಉಳಿದಿದ್ದವು.

ಒಂದು ಸಂಜೆ ಪುಟ್ಟ ಮನೆಯಿಂದ ಹೊರಟ. ಗುಡ್ಡದ ದಾರಿ ಹಿಡಿದು ನಡೆಯತೊಡಗಿದ. ಬಹಳ ಹೊತ್ತು ನಡೆದ ಅವನು ಗುಡ್ಡದ ನೆತ್ತಿ ಸೇರಿದ. ಒಂದು ಬಾರಿ ಸುತ್ತೆಲ್ಲ ಕಣ್ಣು ಹಾಯಿಸಿದ. ಆಗಲೇ ಗುಬ್ಬಚ್ಚಿಯೊಂದು ಅವನ ಕಣ್ಣಿಗೆ ಬಿತ್ತು. ಹತ್ತಿರದ ಬಿದರ ಮೆಳೆಯಲ್ಲಿ ಅದು ಕೂತಿತ್ತು. ಆದರ ಕತ್ತಿನಲ್ಲಿ ಕಪ್ಪು ಮಚ್ಚೆ ಇತ್ತು. ಅದು ಗಂಡು ಗುಬ್ಬಚ್ಚಿ ಎನ್ನುವುದು ಅವನಿಗೆ ತಿಳಿದು ಹೋಯಿತು.

ಬಹಳ ದಿನಗಳಿಂದ ಪುಟ್ಟನು ಗುಬ್ಬಚ್ಚಿಯನ್ನೇ ಕಂಡಿರಲಿಲ್ಲ. ಹಿಂದೆ ಮನೆಮನೆಗಳಲ್ಲಿ ಅವು ಕಾಣಸಿಗುತ್ತಿದ್ದವು. ಈಗ ಅವು ನಾಪತ್ತೆಯಾಗಿವೆ. ಈ ಗುಬ್ಬಚ್ಚಿಗಳು ಎಲ್ಲಿಗೆ ಹೋದವು? ಏಕೆ ಹೋದವು? ತಿಳಿಯಬೇಕು. ಎನಿಸಿತು ಪುಟ್ಟನಿಗೆ. ಒಡನೆ ಅವನು ಬಿದಿರ ಮೆಳೆಯ ಹತ್ತಿರಕ್ಕೆ ಬಂದ.

“ಗುಬ್ಬಣ್ಣಾ, ಗುಬ್ಬಣ್ಣಾ, ನೀನು ಇಲ್ಲೇನು ಮಾಡುತ್ತಿರುವೆ?” ಅವನು ಗುಬ್ಬಚ್ಚಿಯನ್ನು ವಿಚಾರಿಸಿದ.

“ಬಿದಿರ ಮೆಳೆಯಲ್ಲಿ ನನ್ನ ಗೂಡು ಇದೆ. ನನ್ನಾಕೆ ಗೂಡಿನ ಒಳಗೆ ಇದ್ದಾಳೆ. ಮರಿಗಳಿಗೆ ಗುಟುಕು ಕೊಡುತ್ತಿದ್ದಾಳೆ. ಅವಳಿಗಾಗಿ ನಾನು ಕಾಯುತ್ತಿದ್ದೇನೆ.” ಗುಬ್ಬಚ್ಚಿ ಹೇಳಿತು.

“ಹಿಂದೆ ಊರ ಮನೆಗಳಲ್ಲಿ ನೀವು ಕಾಣಸಿಗುತ್ತಿದ್ದಿರಿ. ಈಗ ನಿಮ್ಮ ಪತ್ತೆಯೇ ಇಲ್ಲವಲ್ಲ!”. ಪುಟ್ಟ ಕೇಳಿದ.

“ಹೌದು, ನಾವೀಗ ಊರು ಬಿಟ್ಟಿದ್ದೇವೆ.” ಎಂದಿತು ಗುಬ್ಬಚ್ಚಿ

“ಏಕೆ? ಅಲ್ಲಿ ನಿಮಗೇನು ತೊಂದರೆಯಾಯಿತು.?” ಪುಟ್ಟ ಕುತೂಹಲ ತೋರಿದ.


“ಹಿಂದೆ ಹೆಚ್ಚು ಹುಲ್ಲ ಮನೆಗಳಿದ್ದವು. ಸೂರಿನೆಡೆಯಲ್ಲಿ ಗೂಡು ಕಟ್ಟುವುದು ಸುಲಭವಿತ್ತು. ಈಗ ಹಂಚಿನಮನ - ಕಾಂಕ್ರಿಟ್‌ಕಟ್ಟಡಗಳೇ ಜಾಸ್ತಿ” ಗುಬ್ಬಚ್ಚಿ ಹೇಳಿತು.

“ಅಯ್ಯೋ, ಅಷ್ಟಕ್ಕಾಗಿ ನೀವು ಊರು ಬಿಟ್ಟಿರಾ?” ಕಿಟ್ಟ ಪ್ರಶ್ನಿಸಿದ

“ನಾವು ಊರು ಬಿಡಲು ಕಾರಣಗಳು ಹಲವು ಇವೆ. ಅವುಗಳಲ್ಲಿ ಬಲು ಮುಖ್ಯವಾದುದು ಪರಿಸರದ ನಾಶ. ಎಲ್ಲ ಕಡೆ ಈಗ ಪರಿಸರ ಕೆಟ್ಟುಹೋಗಿದೆ. ಅದರ ಪರಿಣಾಮ ನಮ್ಮ ಮೇಲಾಗಿದೆ”. ಗುಬ್ಬಚ್ಚಿ ಹೇಳಿತು.

“ನಿನ್ನ ಮಾತು ಅರ್ಥವಾಗಲಿಲ್ಲ. ಸ್ವಲ್ಪ ವಿವರಿಸಿ ಹೇಳುತ್ತೀಯಾ?” ಪುಟ್ಟ ಕೇಳಿಕೊಂಡ.

ನೋಡು ತಮ್ಮಾ, “ಬದುಕಲು ನಿಮ್ಮ ಹಾಗೆ ನಮಗೂ ಗಾಳಿ ಬೇಕು. ನೀರು ಬೇಕು. ಆಹಾರ-ಆಸರೆ ಬೇಕು. ಈಗ ನಾವು ಸೇವಿಸುವ ಗಾಳಿ ವಿಷಗಾಳಿ ಯಾಗಿದೆ. ವಿಷ ಅನಿಲಗಳು, ಹೊಗೆ, ಧೂಳು ಎಲ್ಲ ಇದರಲ್ಲಿ ಸೇರಿಕೊಂಡಿವೆ. ಗಾಳಿಯನ್ನು ಶುದ್ಧಗೊಳಿಸಬಲ್ಲ ಮರಗಳು, ಕಾಡುಗಳು ನಾಶಗೊಂಡಿವೆ. ನಮಗೆ ಆಸರೆಯೇ ಇಲ್ಲದಂತಾಗಿದೆ. ಬಗೆಬಗೆಯ ರಾಸಾಯನಿಕಗಳು, ಕ್ರಿಮಿನಾಶಕಗಳು, ಕಾರ್ಖಾನೆಗಳಿಂದ ಹೊರಬರುವ ಕಲ್ಮಷಗಳು ನಾವು ಕುಡಿವ ನೀರನ್ನು ಮಲಿನಗೊಳಿಸಿವೆ. ಅಂಥ ನೀರನ್ನು ನಾವು ಸೇವಿಸಬೇಕಾಗಿದೆ. ಇಂದಿನ ಕೃಷಿಕರು ಬೆಳೆಗಳಿಗೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಧಾರಾಳ ಬಳಸುತ್ತಾರೆ. ಇದರಿಂದಾಗಿ ನಾವು ತಿನ್ನುವ ಕಾಳುಕಡಿ, ತರಕಾರಿ, ಹಣ್ಣುಹಂಪಲು ಎಲ್ಲವೂ ಮಲಿನಗೊಳ್ಳುತ್ತವೆ. ಇವು ಸಹ ನಮಗೆ ಹಾನಿ ಉಂಟುಮಾಡುತ್ತವೆ. ತಮಗೆ ತೊಂದರೆ ಕೊಡುವ ಜಿರಳೆ, ನೊಣ, ಸೊಳ್ಳೆ, ಇಲಿ, ಹೆಗ್ಗಣಗಳನ್ನು ಕೊಲ್ಲಲು ಜನರು ವಿಷ ಬೆರೆಸಿದ ತಿಂಡಿ ತಿನಸುಗಳನ್ನು ಇರಿಸುತ್ತಾರೆ. ಕೆಲವು ಬಾರಿ ಅಂಥ ವಸ್ತುಗಳನ್ನು ನಾವು ತಿಂದು ಬಿಡುತ್ತೇವೆ. ವಿಷಾಹಾರ ತಿಂದು ಸತ್ತ ಜೀವಿಗಳೂ ಕೆಲವೊಮ್ಮೆ ನಮ್ಮ ಹೊಟ್ಟೆ ಸೇರುತ್ತವೆ. ಇಂಥ ಕಾರಣಗಳಿಂದಾಗಿ ನಮ್ಮ ಸಂತತಿ ಅಳಿಯುತ್ತಾ ಇದೆ” ನಿಟ್ಟುಸಿರು ಬಿಟ್ಟಿತು ಗುಬ್ಬಚ್ಚಿ.



“ನಿಮ್ಮವರ ಸಂಖ್ಯೆ ಕಡಿಮೆಯಾಗುವುದಕ್ಕೆ ಇಷ್ಟು ಕಾರಣಗಳಿವೆ. ಅಲ್ಲವೇ?” ಪುಟ್ಟ ಆಶ್ಚರ್ಯ ವ್ಯಕ್ತಪಡಿಸಿದ.

“ಇಷ್ಟೇ ಅಲ್ಲ ತಮ್ಮಾ, ಇನ್ನೂ ಇವೆ. “ಗುಬ್ಬಚ್ಚಿ ಹೇಳಿತು. ಕ್ಷಣಕಾಲ ಬಿಟ್ಟು ಅದು ಮುಂದುವರಿಸಿತು.” ನಾವು ಸಣ್ಣ ಜೀವಿಗಳು, ದುರ್ಬಲರು. ಹಾಗಾಗಿ ಕೆಲವು ಮೃಗಗಳು, ಪಕ್ಷಿಗಳು, ಹಾವುಗಳು ನಮ್ಮನ್ನು ಹಿಡಿದು ತಿನ್ನುತ್ತವೆ. ಕೆಲವೆಡೆ ಮನುಷ್ಯರೂ ನಮ್ಮನ್ನು ಬೇಟೆಯಾಡುತ್ತಾರೆ. ಆಸೆಪಟ್ಟು ನಮ್ಮ ಮಾಂಸವನ್ನು ತಿನ್ನುತ್ತಾರೆ. ಇಷ್ಟೆಲ್ಲ ಸಂಕಟಗಳನ್ನು ಎದುರಿಸಿ ನಾವು ಬಾಳಬೇಕು ನೋಡು. ನಮ್ಮ ಹೆಚ್ಚಿನ ಸಂಕಟಗಳಿಗೆ ನಿಮ್ಮವರೇ ಕಾರಣ. ನಾವು ಸೇವಿಸುವ ಗಾಳಿ, ನೀರು , ಆಹಾರ ಎಲ್ಲವನ್ನೂ ಅವರು ಹಾಳು ಮಾಡಿದರು. ಹಸಿರು ಪರಿಸರವನ್ನು ಅಳಿಸಿದರು. ಹಾಗಾಗಿ ನಮ್ಮವರ ಸಂಖ್ಯೆ ತುಂಬ ಕಡಿಮೆಯಾಗಿದೆ. ಹಳ್ಳಿ ಮನೆಗಳಲ್ಲೂ ನಾವಿಂದು ಕಾಣ ಸಿಗುವುದಿಲ್ಲ. ಮಲೆನಾಡಿನಲ್ಲಿ, ಮರಮುಟ್ಟುಗಳು ಉಳಿದಿರುವಲ್ಲಿ ಮಾತ್ರ ಅಳಿದು ಉಳಿದ ನಮ್ಮವರು ಕಾಣಸಿಗುತ್ತಾರೆ. ಇವು ನಾಶಹೊಂದಿದರೆ ನಾವೂ ನಾಶವಾಗುತ್ತೇವೆ. ನಮ್ಮ ಬಗ್ಗೆ ಯಾರು ಚಿಂತಿಸುತ್ತಾರೆ, ಹೇಳು?”

ಇಷ್ಟು ಹೇಳುವಾಗಲೇ ಅದರ ಗಂಟಲು ಕಟ್ಟಿತು. ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕಿತು. ಅದನ್ನು ಕಂಡು ಪುಟ್ಟನ ಮನಸ್ಸು ಭಾರವಾಯಿತು.

“ಹೌದು, ಗುಬ್ಬಚ್ಚಿಯಂಥ ಸಣ್ಣಜೀವಿಯ ಬಗ್ಗೆ ಯಾರು ಚಿಂತಿಸುತ್ತಾರೆ?” ಪುಟ್ಟ ತನಗೆ ತಾನೇ ಪ್ರಶ್ನೆ ಕೇಳಿಕೊಂಡ. ಉತ್ತರ ಮಾತ್ರ ಸಿಗಲಿಲ್ಲ.

# ಹೆಸರು ತಂದ ಮಕ್ಕಳು

ಅದೊಂದು ಸಣ್ಣ ಊರು. ಸುಮಾರು ನೂರು ಮನೆಗಳುಅಲ್ಲಿದ್ದವು. ಜನಸಂಖ್ಯೆ ಎಂಟು ನೂರನ್ನು ದಾಟಿರಲಿಲ್ಲ. ಆದರೂ ಆ ಊರು ಸುದ್ದಿ ಮಾಡಿತು. ಒಳ್ಳೆಯ ಹೆಸರನ್ನೂ ಪಡೆಯಿತು. ಅದಕ್ಕೆ ಕಾರಣರಾದವರು ಅಲ್ಲಿನ ಮಕ್ಕಳು. ಅದು ಹೇಗೆ? ಅವರೇನು ಮಾಡಿದರು?

ಆ ಊರಿನ ಹೃದಯ ಭಾಗದಲ್ಲಿ ಒಂದು ಶಾಲೆ ಇತ್ತು. ಆದರ್ಶ ಗುರುಗಳೊಬ್ಬರು ಅದರ ಮುಖ್ಯಸ್ಥರಾಗಿದ್ದರು. ಐವರು ಸಹಾಯಕರೊಂದಿಗೆ ಅವರು ಅಲ್ಲಿ ದುಡಿಯುತ್ತಿದ್ದರು. ಊರಿನ ಎಲ್ಲ ಚಟುವಟಿಕೆಗಳಿಗೆ ಕೇಂದ್ರವಾಗಿತ್ತು ಆ ಶಾಲೆ.

ಒಂದು ದಿನ ಶಾಲೆಯಲ್ಲಿ ಗಣ್ಯರೊಬ್ಬರ ಭಾಷಣವಿತ್ತು. ಪ್ಲಾಸ್ಟಿಕ್‌ನ ಬಳಕೆಯ ಅಪಾಯದ ಬಗ್ಗೆ ಅವರು ಭಾಷಣ ಮಾಡುತ್ತ, ವಿವರಿಸಿ ಹೇಳಿದರು "ನಾವು ನಮ್ಮ ಅನುಕೂಲಕ್ಕೆಂದು ಪ್ಲಾಸ್ಟಿಕನ್ನು ಸೃಷ್ಟಿಸಿದೆವು, ಬಹುಬಗೆಯಲ್ಲಿ ಅದನ್ನು ಬಳಸುತ್ತ ಬಂದೆವು. ಇಂದು ಬಹು ಉಪಯೋಗಿಯಾಗಿರುವ ಪ್ಲಾಸ್ಟಿಕ್‌ನಮ್ಮ ಭೂಮಿಗೆ, ನಮ್ಮ ಪರಿಸರಕ್ಕೆ ತುಂಬ ಹಾನಿ ಉಂಟು ಮಾಡುತ್ತಿದೆ. ಮಣ್ಣಿನ ಒಳಗಿರಲಿ, ಹೊರಗಿರಲಿ, ಪ್ಲಾಸ್ಟಿಕ್‌ಕೊಳೆಯುವುದಿಲ್ಲ. ನೀರಲ್ಲಿ ಕರಗುವುದಿಲ್ಲ. ಸುಧೀರ್ಘಕಾಲ ಅದು ಇದ್ದ ಹಾಗೇ ಉಳಿಯುತ್ತದೆ, ಪರಿಸರವನ್ನು ಅಂದಗೆಡಿಸುತ್ತದೆ, ಭೂಮಿಯಲ್ಲಿ ನೀರು ಇಂಗಲು ಅಡ್ಡಿಯಾಗುತ್ತದೆ. ಭೂಗರ್ಭದ ಒರತೆಗಳನ್ನು ಅದು ತಡೆಯುತ್ತದೆ. ಪ್ಲಾಸ್ಟಿಕ್‌ಇದ್ದಲ್ಲಿ ಎರೆಹುಳುಗಳು ಇರುವುದಿಲ್ಲವಾದ ಕಾರಣ, ಮಣ್ಣಿನ ಫವಲತ್ತತೆ ಕಡಿಮೆಯಾಗುತ್ತದೆ. ಸಸ್ಯಗಳಿಗೆ ನೆಲದಲ್ಲಿ ಬೇರು ಇಳಿಸಲಿಕ್ಕೂ ಅದು ತಡೆಯೊಡ್ಡುತ್ತದೆ.

"ರಸ್ತೆ ಬದಿಯ ಚರಂಡಿಗಳಲ್ಲಿ, ನೀರಕೊಳವೆಗಳಲ್ಲಿ ನಿಲುಕಿಕೊಂಡ ಪ್ಲಾಸ್ಟಿಕ್, ನೀರ ಹರಿವನ್ನು ಅಡ್ಡಗಟ್ಟುತ್ತದೆ. ನೀರು ನಿಂತಲ್ಲಿ ಕ್ರಿಮಿಕೀಟಗಳು ಹುಟ್ಟಿಕೊಳ್ಳುತ್ತವೆ. ರೋಗರುಜಿನಗಳು ಕಾಣಿಸಿಕೊಳ್ಳುತ್ತವೆ. ಪ್ಲಾಸ್ಟಿಕ್‌ತಿಂದ ಜಿಂಕೆ, ದನ ಮೊದಲಾದ ಪ್ರಾಣಿಗಳು ಪ್ರಾಣಾಪಾಯಕ್ಕೆ ಒಳಗಾಗುತ್ತವೆ. ಪ್ಲಾಸ್ಟಿಕ್‌ಆಟಿಕೆಗಳಿಂದ ಮಕ್ಕಳ ದೇಹದ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. ನಮ್ಮ ತಾಯಂದಿರ ಎದೆಹಾಲಲ್ಲೂ ಪ್ಲಾಸ್ಟಿಕ್‌ಅಂಶ ಗೋಚರಿಸತೊಡಗಿದೆ. ಆಹಾರ ವಸ್ತುಗಳನ್ನು ಒಯ್ಯಲು ಬಣ್ಣ ಬಣ್ಣದ ಪ್ಲಾಸ್ಟಿಕ್-ಪಾಲಿಥಿನ್‌ಚೀಲಗಳನ್ನು ಬಳಸುವುದು ಇನ್ನಷ್ಟು ಅಪಾಯಕಾರಿ. ಏಕೆಂದರೆ ಅವುಗಳಲ್ಲಿರುವ ಸೀಸ, ಕ್ಯಾಡ್ಮಿಯಂ ಮೊದಲಾದವು ಆಹಾರ ವಸ್ತುಗಳ ಜೊತೆಗೆ ನಮ್ಮ ದೇಹವನ್ನು ಸೇರುತ್ತವೆ. ಪರಿಣಾಮವಾಗಿ, ನಾವು ಕ್ಯಾನ್ಸರ್, ಮೂತ್ರಕೋಶದ ಸಮಸ್ಯೆಗಳಂಥ ತೊಂದರೆಗಳಿಗೆ ಒಳಗಾಗುತ್ತೇವೆ."

"ಬೆಂಕಿಯಲ್ಲಿ ಸುಟ್ಟು, ಪ್ಲಾಸ್ಟಿಕ್‌ವಸ್ತುಗಳನ್ನು ನಾಶಗೊಳಿಸುವುದು ಸಹ ಅಪಾಯಕಾರಿಯೇ. ಕಾರಣ, ಪ್ಲಾಸ್ಟಿಕ್‌ವಸ್ತುಗಳನ್ನು ಸುಟ್ಟಾಗ ಕಾರ್ಬನ್‌ಮೊನಾಕ್ಸೈಡ್, ಕ್ಲೋರಿನ್‌ಇತ್ಯಾದಿ ಹಲವು ಬಗೆಯ ವಿಷಾನಿಲಗಳು ಹೊರಬಂದು, ಗಾಳಿಯಲ್ಲಿ ಸೇರುತ್ತವೆ., ನಮ್ಮ ವಾತಾವರಣವನ್ನು ಕೆಡಿಸಿಬಿಡುತ್ತವೆ. ಅಷ್ಟೇ ಅಲ್ಲ, ಸುಟ್ಟಾಗ ಪ್ಲಾಸ್ಟಿಕ್‌ತನ್ನ ಸ್ವರೂಪವನ್ನು ಮಾತ್ರ ಬದಲಾಯಿಸಿ, ಮುದ್ದೆಯಾಗಿ ಮಣ್ಣಿನಲ್ಲಿಯೇ ಉಳಿದುಬಿಡುತ್ತದೆ. ಕೈಗಾರಿಕಾ ಕಶ್ಮಲಗಳಲ್ಲೂ ಪ್ಲಾಸ್ಟಿಕ್‌ಪಾಲು ಬಲು ದೊಡ್ಡದು. ಪ್ಲಾಸ್ಟಿಕ್‌ನಮಗರಿಯದಂತೆ ನಮ್ಮ ದೇಹಕ್ಕೆ ವಿಷ ಉಣಿಸುತ್ತದೆ. ನಮ್ಮ ನೀರು, ಮಣ್ಣು, ಆಹಾರ ಎಲ್ಲವನ್ನೂ ವಿಷವಾಗಿಸುತ್ತದೆ. ಪರಿಸರವನ್ನು ಹಾಳುಗೆಡಹುತ್ತದೆ. ಆದುದರಿಂದ ಕೆಲವು ದೇಶಗಳು ಪ್ಲಾಸ್ಟಿಕ್‌ಚೀಲಗಳ ಬಳಕೆಗೆ ನಿಷೇಧ ಹೇರಿವೆ. ನಮ್ಮ ದೇಶದ ಕೆಲವು ರಾಜ್ಯಗಳೂ ಅಂಥ ಪ್ರಯತ್ನ ನಡೆಸಿವೆ. ಆದರೆ ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ಬಗ್ಗೆ ಮೌನ ವಹಿಸಿವೆ. ಪ್ಲಾಸ್ಟಿಕ್‌ಉದ್ಯಮ ಲಕ್ಷಗಟ್ಟಲೆ ಜನಕ್ಕೆ ಉದ್ಯೋಗ ಒದಗಿಸುತ್ತಿರುವ ಕಾರಣ ಅವು ಹಿಂದೆ ಮುಂದೆ ನೋಡುತ್ತಿರಬಹುದು. ಆದರೆ ನಾವು ತೆಪ್ಪಗಿರಬಾರದು"

"ನಮ್ಮ ಹಿತ ಕಾಪಾಡಲು ನಾವು ಮುಂದಾಗಬೇಕು. ಜನಕ್ಕೆ ನಾವು ನಿಜಸ್ಥಿತಿಯನ್ನು ತಿಳಿಸಬೇಕು. ಪ್ರತಿಯೊಂದು ಊರಿನ ಶಾಲಾ ಕಾಲೇಜುಗಳ ಶಿಕ್ಷಕರೂ ವಿದ್ಯಾರ್ಥಿ ವಿದ್ಯಾರ್ಥಿಲನಿಯರೂ ಈ ಕೆಲಸಕ್ಕೆ ಮುಂದಾಗಬೇಕು. ವಿವಿಧ ಸೇವಾ ಸಂಸ್ಥೆಗಳು ಸಹಕರಿಸಬೇಕು. ತಮ್ಮ ತಮ್ಮ ಊರುಗಳಲ್ಲಾದರೂ ಪ್ಲಾಸ್ಟಿಕ್‌ಅತಿ ಬಳಕೆಯಾಗುವುದನ್ನು ತಡೆಯಬೇಕು. ನಾಗರಿಕರ ಮನ ಒಲಿಸಿ, ಅವರ ಸಹಕಾರ ಪಡೆದು, ಈ ಕೆಲಸ ನಡೆಯಬೇಕು. ಸಾಮೂಹಿಕ ಪ್ರಯತ್ನದಿಂದ ಇದು ಸುಲಭ ಸಾಧ್ಯ ಆಗಬಹುದು. ಸದ್ಯ ಈ ಶಾಲೆಯ ಗುರುಗಳೂ

ಮಕ್ಕಳೂ ಈ ಊರಲ್ಲಿ ಈ ಕೆಲಸ ಆರಂಭಿಸಬೇಕು. ಉಳಿದವರಿಗೆ ಮಾದರಿ ಹಾಕಿಕೊಡಬೇಕು. ಆಗ ಮಾತ್ರ ಇಂದಿನ ಭಾಷಣ ಸಾರ್ಥಕವಾಗುವುದು. ಹೇಳಿ, ನೀವು ಈ ಕೆಲಸ ಮಾಡುವಿರಾ?" ಅವರು ಪ್ರಶ್ನಿಸಿದರು.

"ನಮ್ಮ ಮಕ್ಕಳು ಮುಂದೆ, ಬಂದರೆ ಅವರಿಗೆ ದಾರಿ ತೋರಲು ನಾವು ಸಿದ್ಧರಿದ್ದೇವೆ" ಮುಖ್ಯ ಗುರುಗಳು ಮಾತುಕೊಟ್ಟರು.

"ಹೇಳಿ ಮಕ್ಕಳೇ, ನಿಮ್ಮ ಊರಲ್ಲಿ ನೀವು ಈ ಕೆಲಸ ಮಾಡುವಿರಾ? " ಭಾಷಣಕಾರರು ಮಕ್ಕಳನ್ನೇ ನೋಡುತ್ತ ಮತ್ತೆ ಪ್ರಶ್ನಿಸಿದರು.

"ಆಗಲಿ, ಸಾರ್, ನಮ್ಮ ಪ್ರಯತ್ನ ನಾವು ಮಾಡುತ್ತೇವೆ" ಮಕ್ಕಳೂ ದನಿಗೂಡಿಸಿದರು.

"ಒಳ್ಳೆಯದು. ಇದನ್ನು ಹೇಗೆ ಸಾಧಿಸುತ್ತೀರಿ ಎನ್ನುವುದು ನಿಮಗೂ ನಿಮ್ಮ ಗುರುಗಳಿಗೂ ಬಿಟ್ಟ ವಿಚಾರ. ನಿಮಗೆ ಯಶಸ್ಸು ಸಿಗಲಿ. ಪ್ಲಾಸ್ಟಿಕ್‌ಮುಕ್ತ ಊರು ನಿಮ್ಮದಾಗಲಿ. ಮುಂದಿನ ಬಾರಿ ಇಲ್ಲಿಗೆ ಬಂದಾಗ ನಿಮ್ಮ ಯಶಸ್ಸನ್ನು ಕಣ್ಣಾರೆ ಕಾಣುವ ಭಾಗ್ಯ ನಮ್ಮದಾಗಲಿ" ಭಾಷಣಕಾರರು ಮತು ಮುಗಿಸಿದರು. ಕೊನೆಗೆ ವಂದನೆ ಸಲ್ಲಿಸಿದ ಮುಖ್ಯ ಗುರುಗಳು, "ಈ ಕೆಲಸವನ್ನು ನಾವು ಹೇಗೆ ಮಾಡಬಹುದು ಎನ್ನುವ ಬಗ್ಗೆ ಎಲ್ಲ ಮಕ್ಕಳೂ ಯೋಚಿಸಿಕೊಂಡಲು ಬರಬೇಕು. ನಾಳೆ ನಿಶ್ಚಿತ ಕಾರ್ಯಕ್ರಮಗಳ ಕುರಿತು ನಿರ್ಧರಿಸೋಣ" ಎಂದರು. ಅಲ್ಲಿಗೆ ಅಂದಿನ ಕಾರ್ಯಕ್ರಮ ಮುಕ್ತಾಯಗೊಂಡಿತು.

ಮರುದಿನ ಎಂದಿನಂತೆ ಮಕ್ಕಳು ಶಾಲೆಗೆ ಬಂದರು. ಸಂಜೆಯವರೆಗೆ ಅಂದಿನ ಪಾಠಗಳು ನಡೆದವು. ಅಂದು ಶಾಲೆಬಿಟ್ಟ ಬಳಿಕ ಸಮಾಲೋಚನೆಯ ಸಭೆ ನಡೆಯಿತು. ಎಲ್ಲ ಶಿಕ್ಷಕರೂ ಮಕ್ಕಳೂ ಹಾಜರಿದ್ದರು.

"ಪ್ಲಾಸ್ಟಿಕ್‌ಹಾವಳಿಯ ಬಗ್ಗೆ ನೀವೆಲ್ಲ ತಿಳಿದೇ ಇದ್ದೀರಿ. ಅದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಇದು ಹೇಗೆ ಸಾಧ್ಯ? ಈ ಬಗ್ಗೆ ಶಿಕ್ಷಕರೂ ಮಕ್ಕಳೂ ಸಲಹೆ ಸೂಚನೆಗಳನ್ನು ನೀಡಬೇಕು. ಸೂಕ್ತ ಕಂಡುದನ್ನು ಪಟ್ಟಿ ಮಾಡೋಣ. ಕಾರ್ಯಸೂಚಿಗೆ ಅನುಸಾರವಾಗಿ ಕೆಲಸ ಆರಂಭಿಸೋಣ" ಮುಖ್ಯ ಗುರುಗಳು ಮೊದಲ ಮಾತು ಹೇಳಿದರು.

ಮರುಗಳಿಗೆಯಲ್ಲೇ ಶಿಕ್ಷಕರಿಂದ, ಮಕ್ಕಳಿಂದ ಹಲವಾರು ಸೂಚನೆಗಳು ಬಂದವು. ಆ ಬಗ್ಗೆ ಸಾಕಷ್ಟು ಚರ್ಚೆಯೂ ನಡೆಯಿತು.

"ಶಾಲೆಯಲ್ಲಿ ಊರ ಹಿರಿಯರ ಸಭೆ ಕರೆಯಬೇಕು. ಅವರಿಗೆಲ್ಲ ಗುರುಗಳೇ ಪ್ಲಾಸ್ಟಿಕ್‌ನಿಷೇಧದ ಅಗತ್ಯವನ್ನು ತಿಳಿಹೇಳಬೇಕು. ಉಳಿದ ಕೆಲಸ ನಾವು ಮಾಡುತ್ತೇವೆ" ಇದು ಮಕ್ಕಳೆಲ್ಲರ ಅಭಿಪ್ರಾಯವಾಗಿತ್ತು. ಅದನ್ನು ಶಿಕ್ಷಕರೂ ಒಪ್ಪಿಕೊಂಡರು. ಅಂತೂ ಸಭೆ ಕೊನೆಗೊಳ್ಳುವ ಮೊದಲು, ಅವರ ಕಾರ್ಯಸೂಚಿ ಸಿದ್ಧವಾಯಿತು.



ಮುಂದಿನ ವಾರದ ಒಂದು ದಿನ ಶಾಲೆಯಲ್ಲಿ ಊರವರ ಸಭೆ ನಡೆಯಿತು. ಪಂಚಾಯತಿ ಮುಖ್ಯರು ಅಧ್ಯಕ್ಷತೆ ವಹಿಸಿದ್ದರು. ಊರ ಪ್ರಮುಖರೂ ಮಕ್ಕಳ ಹೆತ್ತವರೂ ಸಭೆಯಲ್ಲಿ ಹಾಜರಿದ್ದರು. ದಿನದ ದುಡಿಮೆಗೆ ರಜೆ ಮಾಡಲು ಆಗದ ಬಡವರು, ದಿನಗೂಲಿಯವರು ಮಾತ್ರ ಅಂದು ಬಂದಿರಲಿಲ್ಲ. ನೆರೆದವರಿಗೆ ಮುಖ್ಯ ಗುರುಗಳೇ ಸಭೆಯ ಉದ್ದೇಶವನ್ನು ತಿಳಿಯಪಡಿಸಿದರು. ಪ್ಲಾಸ್ಟಿಕ್‌ನಿಂದಾಗುವ ಹಾನಿಯ ಬಗ್ಗೆ ಮನಮುಟ್ಟುವಂತೆ ಅವರು ವಿವರಿಸಿ ಹೇಳಿದರು. “ನಾವು ನಮಗಾಗಿ, ನಮ್ಮ ಮಕ್ಕಳ ಹಿತಕ್ಕಾಗಿ, ಪ್ಲಾಸ್ಟಿಕ್‌ಬಳಕೆಯನ್ನು, ಅದರಲ್ಲೂ ಮುಖ್ಯವಾಗಿ ಬಣ್ಣ ಬಣ್ಣದ ಪ್ಲಾಸ್ಟಿಕ್‌ಪಾಲಿಥಿನ್‌ಚೀಲಗಳ ಬಳಕೆಯನ್ನು ಕೈಬಿಡಬೇಕು. ಅದರ ಹಾವಳಿಯಿಂದ ನಮ್ಮ ಊರನ್ನು ರಕ್ಷಿಸಬೇಕು. ಈ ದಿಸೆಯಲ್ಲಿ ನೀವೆಲ್ಲರೂ ಸೂಕ್ತ ಸಲಹೆ, ಸೂಚನೆ, ಸಹಕಾರಗಳನ್ನು ನೀಡಬೇಕು” ಎಂದು ಪ್ರಾರ್ಥಿಸಿದರು. ಸಭಾಧ್ಯಕ್ಷರು ಮುಖ್ಯ ಗುರುಗಳ ಮಾತನ್ನು ಅನುಮೋದಿಸಿ, ಅದಕ್ಕೆ ತನ್ನ ಬೆಂಬಲ ಘೋಷಿಸಿದರು. ವಿದ್ಯಾವಂತ ಯುವಕರನೇಕರು ತಮ್ಮ ಸಂಪೂರ್ಣ ಸಹಕಾರದ ಭರವಸೆ ನೀಡಿದರು. ಹಲವಾರು ಸಭಿಕರಿಂದಲೂ ಉಪಯುಕ್ತ ಸಲಹೆ ಸೂಚನೆಗಳು ಹರಿದು ಬಂದವು. ಸಭೆಯ ಕೊನೆಯಲ್ಲಿ ಮುಖ್ಯ ಗುರುಗಳ ಸೂಚನೆ ಮೇರೆಗೆ ಸಭಿಕರ ಪ್ರತಿಜ್ಞಾವಿಧಿ ನೇರವೇರಿತು. ಸಭಿಕರೆಲ್ಲ ಎದ್ದು ನಿಂತು,

೧. “ಇನ್ನು ಮುಂದೆ ನಾವು ಸಾಮಾನು ತರಲು ಬಟ್ಟೆಯ / ಗೋಣಿಯ ಚೀಲಗಳನ್ನೇ ಒಯ್ಯುತ್ತೇವೆ. ಅಥವಾ ಸಮಾಚಾರ ಪತ್ರಿಕೆಗಳ ಹಾಳೆಗಳನ್ನೋ ಅವುಗಳಿಂದ ಮಾಡಿದ ತೊಟ್ಟೆಗಳನ್ನೋ ಬಳಸುತ್ತೇವೆ.”

೨. “ಅನಿವಾರ್ಯ ಸಂದರ್ಭದಲ್ಲಿ ನಾವು ಮನೆಯಲ್ಲಿರುವ ಹಳೆಯ ಪ್ಲಾಸ್ಟಿಕ್‌ಚೀಲಗಳನ್ನು ಬಳಸಿದರೂ ಹೊಸ ಪ್ಲಾಸ್ಟಿಕ್-ಪಾಲಿಥಿನ್‌ಚೀಲಗಳನ್ನು ಊರೊಳಗೆ ತರುವುದಿಲ್ಲ.”

೩. “ಪ್ಲಾಸ್ಟಿಕ್- ಪಾಲಿಥಿನ್‌ಹಾಳೆಗಳಲ್ಲಿ ಸುತ್ತಿಕೊಟ್ಟ ಅಥವಾ ಅಂಥ ಚೀಲಗಳಲ್ಲಿ ಹಾಕಿಕೊಟ್ಟ ಯಾವ ವಸ್ತುವನ್ನೂ ನಾವು ಅಂಗಡಿಯಿಂದ ಪಡೆಯುವುದಿಲ್ಲ.”

೪. “ನಮ್ಮಲ್ಲಿರುವ ಪ್ಲಾಸ್ಟಿಕ್- ಪಾಲಿಥಿನ್‌ಹಾಳೆಗಳನ್ನು, ತುಂಡುಗಳನ್ನು, ಅಥವಾ ಚೀಲಗಳನ್ನು ಕಂಡ ಕಂಡಲ್ಲಿ ಎಸೆದು ನಾವು ಪರಿಸರವನ್ನು ಕೆಡಿಸುವುದಿಲ್ಲ” ಎಂದು ಪ್ರತಿಜ್ಞೆ ಸ್ವೀಕರಿಸಿದರು. ಅಲ್ಲಿಗೆ ಸಭಾ ಕಾರ್ಯಕ್ರಮ ಕೊನೆಗೊಂಡಿತು.

ಶಾಲೆಯಲ್ಲಿ ನಡೆದ ಸಭೆಯು ಊರವರಲ್ಲಿ ಪ್ಲಾಸ್ಟಿಕ್‌ಹಾವಳಿಯ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿತು. ಆದರೆ ಅಂದಿನ ಸಭೆಗೆ ಬರದವರೂ ಇದ್ದರಲ್ಲ? ಅಂಥವರಿಗೆ ವಿಷಯ ತಿಳಿಯಬೇಕಲ್ಲ? ಅಂಥವರ ಮನೆಗಳಿಗೆ ಮಕ್ಕಳೇ ಖುದ್ದಾಗಿ ಹೋದರು. ಸಭೆಯ ನಿರ್ಣಯಗಳನ್ನು ಅವರಿಗೂ ತಿಳಿಸಿದರು. ಈ ಕೆಲಸದಲ್ಲಿ ಸಹಕರಿಸಬೇಕೆಂದು ಅವರನ್ನೂ ಕೇಳಿಕೊಂಡರು. ಅಷ್ಟರಲ್ಲಿ ಇನ್ನೊಂದು ಸಮಸ್ಯೆ ಅವರ ಗಮನ ಸೆಳೆಯಿತು. ಯಾವುದದು? ಊರಲ್ಲಿ ಕಣ್ಣು ಹಾಯಿಸಿದಲ್ಲೆಲ್ಲ ಕಂಡುಬರುತ್ತಿದ್ದ ಬಣ್ಣ ಬಣ್ಣದ ಪ್ಲಾಸ್ಟಿಕ್- ಪಾಲಿಥಿನ್‌ಚೀಲಗಳು. ಅವುಗಳನ್ನು ಹಾಗೆಯೇ ಬಿಡಬಾರದಲ್ಲ? ಅದಕ್ಕಾಗಿ ಅವರು ಇನ್ನೊಂದು ಕಾರ್ಯಕ್ರಮ ಹಾಕಿಕೊಂಡರು. ಅದುವೇ “ಪ್ಲಾಸ್ಟಿಕ್‌ಹೆಕ್ಕುವ ಕಾರ್ಯಕ್ರಮ”

ಮಕ್ಕಳು ತಮ್ಮನ್ನು ತಾವೇ ಹಲವು ಪಂಗಡಗಳಾಗಿ ಹಂಚಿಕೊಂಡರು. ಪ್ರತಿಪಂಗಡಕ್ಕೂ ಮುಂದಾಳವನ್ನು ಆರಿಸಿಕೊಂಡರು. ಬಳಿಕ ಒಂದು ರಜಾದಿನ ಅವರು ಕೈಯಲ್ಲಿ ಚೀಲ ಹಿಡಿದು ಊರಲ್ಲೆಲ್ಲ ಸುತ್ತಾಡಿದರು. ತಮ್ಮ ಕಣ್ಣಿಗೆ ಬಿದ್ದ ಪ್ಲಾಸ್ಟಿಕ್- ಪಾಲಿಥಿನ್‌ಚೀಲಗಳು, ಹಾಳೆಗಳು, ತುಂಡುಗಳು ಎಲ್ಲವನ್ನೂ ಹೆಕ್ಕಿ ತಂದರು. ಕೊನೆಗೆ ಅವುಗಳನ್ನು ಒಂದು ಗುಂಡಿಯೊಳಗೆ ಹಾಕಿ, ಮಣ್ಣು ಮುಚ್ಚಿಬಿಟ್ಟರು. ಈಗ ಊರ ಪರಿಸರ ಸ್ವಲ್ಪ ಮಟ್ಟಿಗೆ ಪ್ಲಾಸ್ಟಿಕ್‌ಮುಕ್ತವಾಯಿತು.

ಊರಿನ ಎಲ್ಲ ಭಾಗಗಳ ಮಕ್ಕಳೂ ಶಾಲೆಯಲ್ಲಿದ್ದರು. ಊರಲ್ಲಿ ಯಾರೂ ಪ್ಲಾಸ್ಟಿಕ್‌ಬಳಸದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನೂ ಅವರು ವಹಿಸಿಕೊಂಡರು. ಅದಕ್ಕಾಗಿ ಅವರು ತಮ್ಮದೊಂದು “ಕಾವಲು ಸಮಿತಿ” ಯನ್ನು ರಚಿಸಿಕೊಂಡರು. ಪ್ಲಾಸ್ಟಿಕ್‌ಬಳಸಿದ ವಾರ್ತೆಸಿಕ್ಕಿದೊಡನೆ ಮಕ್ಕಳು ಆ ಮನೆಗೆ ಹೋಗುತ್ತಿದ್ದರು. ನಿಜಸಂಗತಿ ತಿಳಿಯುತ್ತಿದ್ದರು. ಕಾಡಿ, ಬೇಡಿ, ಮನವೊಲಿಸಿ ಮತ್ತೆ ಮನೆಯವರು ಪ್ಲಾಸ್ಟಿಕ್‌ಬಳಸದಂತೆ ನೋಡಿಕೊಳ್ಳುತ್ತಿದ್ದರು. ಪ್ಲಾಸ್ಟಿಕ್- ಪಾಲಿಥಿನ್‌ಚೀಲಗಳಲ್ಲಿ ಹಾಕಿದ ಕಾಫಿಪುಡಿ, ಸಕ್ಕರೆ, ಬೆಲ್ಲ,

ಬಿಸ್ಕತ್, ಅಕ್ಕಿ, ಬೇಳೆ, ಮೀನು, ತರಕಾರಿ ಯಾವುದೂ ಊರೊಳಗೆ ಪ್ರವೇಶಿಸದಂತೆ ಅವರು ಎಚ್ಚರವಹಿಸಿದರು. ಯಾರೋ ಒಬ್ಬಿಬ್ಬರು ಮಕ್ಕಳ ಕಿರಿಕಿರಿಗೆ ಸಿಟ್ಟುಗೊಂಡು ಅವರಿಗೆ ಬೆದರಿಕೆ ಹಾಕಿದರು. ಮಕ್ಕಳು ತೆಪ್ಪಗಿರಲಿಲ್ಲ. ಕಪಿ ಸೇನೆಯ ಹಾಗೆ ಅವರೆಲ್ಲರೂ ಆ ಮನೆಯ ಎದುರು ಜಮಾಯಿಸಿದರು. ಅಲ್ಲಿ ಧರಣಿಕೂತರು. ಕೊನೆಗೆ ಮನೆಯವರೇ ತಮ್ಮ ತಪ್ಪನ್ನು ಒಪ್ಪಿಕೊಂಡರು. ಮಕ್ಕಳಲ್ಲಿ ಕ್ಷಮೆ ಕೋರಿದರು. ಹೀಗೆ ಸಾಗಿತು ಮಕ್ಕಳ ಪ್ಲಾಸ್ಟಿಕ್‌ವಿರೋಧಿ ಚಳವಳಿ. ಅಂತೂ ಆರು ತಿಂಗಳು, ವರ್ಷದೊಳಗೆ ಮಕ್ಕಳ ಸಾಮೂಹಿಕ ಪ್ರಯತ್ನ ಫಲ ನೀಡಿತು. ಊರು ಪ್ಲಾಸ್ಟಿಕ್‌ಮುಕ್ತವಾಯಿತು.

ಒಂದು ದಿನ ಯಾರೋ ಪತ್ರಕರ್ತರು ಆ ಊರಿಗೆ ಬಂದರು. ಅಲ್ಲಿ ನಡೆದ ಕೆಲಸವನ್ನು ಕಂಡು ಅವರು ಖುಶಿಪಟ್ಟರು. ಅಲ್ಲಿನ ಮಕ್ಕಳ ಸಾಧನೆಯನ್ನು ಮನದುಂಬಿ ಹಾಡಿ ಹೊಗಳಿದರು. “ಜಿಲ್ಲೆಯ ಮೊತ್ತ ಮೊದಲ ಪ್ಲಾಸ್ಟಿಕ್‌ಮುಕ್ತ ಊರು” ಎಂದು ಆ ಊರಿನ ಬಗ್ಗೆ ಅವರು ಪರಿಚಯ ಲೇಖನ ಪ್ರಕಟಿಸಿದರು.

ಹೀಗೆ ತಮ್ಮ ಸಾಧನೆಯಿಂದಾಗಿ ಆ ಮಕ್ಕಳು ಸುದ್ದಿ ಮಾಡಿದರು. ಊರಿಗೆ ಹೆಸರು ತಂದರು. ಇಂಥ ಮಕ್ಕಳು ನಿಮ್ಮೂರಲ್ಲಿ ಇದ್ದಾರೆಯೇ?

***

# ಮಾದ ಮತ್ತು ಹುಲಿ

## ಲೇಖಕನ ಮಾತು

ಹಿಂದೆ ಸಣ್ಣವನಿದ್ದಾಗ ಬ್ರಾಹ್ಮಣನೂ ಹುಲಿಯೂ ಎಂಬ ಮಕ್ಕಳ ಕತೆ ಓದಿದ್ದೆ. ಇತ್ತೀಚೆಗೆ ಇಂಗ್ಲೀಷ್ ಭಾಷೆಯ ಮಕ್ಕಳ ಪುಸ್ತಕವೊಂದರಲ್ಲಿ ಎಂಬ ಕತೆಯನ್ನು ಓದಿದೆ, ಆ ಕತೆಗಳಲ್ಲಿ ಕೆಲವು ವ್ಯತ್ಯಾಸಗಳಿದ್ದರೂ ಖುಷಿ ಕೊಡಬಲ್ಲ ಆ ಕತೆಯನ್ನು ಪುಟ್ಟ ನಾಟಕ ರೂಪದಲ್ಲಿ ಬರೆದರೆ ಹೇಗೆ ಎಂಬ ಯೋಚನೆ ಮನದಲ್ಲಿ ಮೂಡಿತು. ಪರಿಣಾಮವಾಗಿ ಈ ಕಿರು ನಾಟಕ ರೂಪುಗೊಂಡಿತು.

ಈ ಕೃತಿಯ ಮರುಮುದ್ರಣ ಮತ್ತು ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತು ಪ್ರೋತ್ಸಾಹ ನೀಡಿರುವ ಆತ್ಮೀಯರಾದ ರಾಜ್ಯ-ರಾಷ್ಟ್ರ ಪ್ರಶಸ್ತಿ ವಿಜೇತರಾದ ಮತ್ತು ಮಕ್ಕಳ ಸಾಹಿತಿ ಶ್ರೀ ಅಪ್ಪಾಸ್ವಾಮಿಯವರಿಗೆ ಧನ್ಯವಾದಗಳು.

ಈ ಗ್ರಂಥವನ್ನು ಅಂದವಾಗಿ ಅಕ್ಷರ ಜೋಡಣೆ ಹಾಗೂ ಮುದ್ರಣ ಮಾಡಿಕೊಟ್ಟ ಮಿತ್ರರಿಗೂ ವಂದನೆಗಳು

**ಪಳಕಳ ಸೀತಾರಾಮಭಟ್ಟ**
ಮಿತ್ತಬೈಲು, (ದ.ಕ)

# ಪಾತ್ರ ವರ್ಗ

**೧. ಮಾದ**

**೨. ಹುಲಿ**

**೩. ಕಪಿಲೆ**

**೪. ಹೇಟೆ**

**೫. ಮಾವಿನ ಮರ**

**೬. ನದಿ**

**೭. ಮಂಗ**

**೮. ಮೇಳದವರು**

# ದೃಶ್ಯ – ೧

**ಮೇಳದವರು**

**ಪಟ್ಟಣದೆಡೆಗೆ ಹೋದ ಮಾದನು ಅಂದು**
**ದಟ್ಟಡವಿಯ ಹಾದು ಮನೆಕಡೆಗೆಂದು**
**ಬರುವಾಗ ಬೋನಿನ ಹುಲಿಯನು ಕಂಡು**
**ಸೆರೆಯಿಂದ ಬಿಡಿಸಿದ ಕನಿಕರಗೊಂಡು**
**ಮುಂದೇನು ನಡೆಯಿತು ನೋಡಿರಿ ನೀವು**
**ಚೆಂದs ನಾಟಕವಾಡಿ ತೋರ್ವೆವು ನಾವು**

**ತೆರೆಸರಿದಾಗ–**

[ಕಾಡು ಹಾದಿಯಲ್ಲಿ ಮಾದ]

**ಮಾದ :** ಮುಂಜಾನೆ ಪಟ್ಟಣಕ್ಕೆ ಹೋಗಿದ್ದೆ. ಈಗ ಸಂಜೆಗೆ ಹಿಂದಿರುಗುತ್ತಿದ್ದೇನೆ. ಮನೆ ಇನ್ನೂ ದೂರವಿದೆ, ಕತ್ತಲಾಗುವ ಮೊದಲು ಈ ಕಾಡು ದಾರಿಯನ್ನು ಮುಗಿಸಬೇಕು. ತಪ್ಪಿದರೆ ಹುಲಿ-ಸಿಂಹಗಳ ಬಾಯಿಗೆ ಬೀಳುವ ಪರಿಸ್ಥಿತಿ. ದೇವರೇ ಕಾಪಾಡಬೇಕು. (ಘುರ್ ಘುರ್ ಘುರ್ ಘುರ್ ಸದ್ದು) ಅಬ್ಬಾ ಇದೇಹನು ಸದ್ದು! ಹುಲಿಯದೆ? ಹಾಂ ಹೌದು ಹೌದು. ಹುಲಿ ಗುರುಗುಟ್ಟುವ ಸದ್ದು! ಹತ್ತಿರದಲ್ಲೆ ಕೇಳಿಸುತ್ತಿದೆ ಅಯ್ಯೋ, ಈಗೇನು ಮಾಡಲಿ? ಎಲ್ಲಿಗೆ ಓಡಲಿ? ಹೇಗೆ ಜೀವ ಉಳಿಸಿಕೊಳ್ಳಲಿ?

**ಹುಲಿ :** ಹೋಯ್, ಯಾರಪ್ಪಅದು?

**ಮಾದ :** ನ… ನ… ನ್ನಾ ನು ಮ…. ಮ…. ಮ್ಮಾದ.

**ಹುಲಿ :** ಯಾರು? ಮಾದಣ್ಣನೆ? ನಮಸ್ಕಾರ ಮಾದಣ್ಣ.

**ಮಾದ :** ನ… ನ… ನಮಸ್ಕಾರ. ಯಾರು ಮಾತಾಡುವುದು?

**ಹುಲಿ :** ನಾನು; ಹುಲಿಯಣ್ಣ. ಇಗೋ, ಇಲ್ಲಿದ್ದೇನೆ-ಬೋನಿನಲ್ಲಿ.

**ಮಾದ :** ಬೋನಿನಲ್ಲಿ?

**ಹುಲಿ :** ಹೌದು, ಬೋನಿನಲ್ಲಿ ಬಿದ್ದಿದ್ದೇನೆ. ದಯಮಾಡಿ ಇತ್ತ ಬಾ.

**ಮಾದ :** ಬೇಡಪ್ಪಾ, ಬೇಡ. ನಾನು ಬರುವುದಿಲ್ಲ.

**ಹುಲಿ :** ಬರುವುದಿಲ್ಲ? ಯಾಕೆ? ಅಷ್ಟೂ ಹೆದರಿಕೆಯ ನಿನಗೆ?

**ಮಾದ :** ದುಷ್ಟರಿಂದ ದೂರನಿರಬೇಕೆಂದು ಹಿರಿಯರು ಹೇಳುತ್ತಾರೆ.

**ಹುಲಿ :** ಆದರೆ ನಾನು ದುಷ್ಟನಲ್ಲ ಮಾದಣ್ಣ. ನಿನಗೆ ನಾನೇನೂ ಮಾಡುವುದಿಲ್ಲ. ದಯವಿಟ್ಟು ಹತ್ತಿರ ಬಾ. ಈ ಬೋನಿನ ಬಾಗಿಲು ತೆಗೆ. ಅಷ್ಟು ಉಪಕಾರ ಮಾಡು.

**ಮಾದ :** ನಾನು ನಿನ್ನ ಬಳಿ ಬರುವುದೂ ಇಲ್ಲ, ಬೋನಿನ ಬಾಗಿಲು ತೆರೆಯುವುದೂ ಇಲ್ಲ.

**ಹುಲಿ :** ನಿನ್ನ ದಮ್ಮಯ್ಯ. ಹಾಗೆ ಹೇಳಬೇಡ ಮಾದಣ್ಣ ನನ್ನ ಮೇಲೆ ಕರುಣೆ ಇಡು. ಬೋನಿನ ಬಾಗಿಲು ತೆರೆದು ಬಿಡು.

**ಮಾದ :** ಊಹುಂ. ಅದು ಸಾಧ್ಯವೇ ಇಲ್ಲ.

**ಹುಲಿ :** ಯಾಕಣ್ಣ? ಯಾಕೆ ಹಾಗೆ ಹೇಳುತ್ತಿಯಾ?

**ಮಾದ :** ನಾನು ಬಾಗಿಲು ತೆರೆದರೆ ನೀನು ಹೊರಗೆ ಬಂದು ಬಿಡುತ್ತಿ. ಮತ್ತೆ ನನ್ನನ್ನೇ ತಿಂದು ಬಿಡುತ್ತಿ ಅಷ್ಟೆ.

**ಹುಲಿ :** ಆಣೆಯಿಟ್ಟು ಹೇಳುತ್ತೇನೆ ಮಾದಣ್ಣ; ನಾನು ನಿನಗೇನೂ ಮಾಡುವುದಿಲ್ಲ. ಉಪಕಾರಕ್ಕೆ ಅಪಕಾರ ಮಾಡುವವ ನಾನಲ್ಲ. ನನ್ನ ಮಾತನ್ನು ನಂಬು. ನನ್ನನ್ನು ಸೆರೆಯಿಂದ ಬಿಡಿಸಿ ಕಾಪಾಡು. ದೇವರಾಣೆಗೂ ನಾನು ನಿನ್ನನ್ನು ನೋಯಿಸುವುದಿಲ್ಲ.

**ಮಾದ :** ಆಗಲಿ, ನಾನು ನಿನ್ನ ಮಾತನ್ನು ನಂಬುತ್ತೇನೆ. ನಿನ್ನನ್ನು ಸೆರಿಯಿಂದ ಬಿಡಿಸುತ್ತೇನೆ. ಆದರೆ ಕೊಟ್ಟ ಮಾತಿಗೆ ತಪ್ಪಬೇಡ. ನೆನಪಿರಲಿ.

**ಹುಲಿ :** ಖಂಡಿತಕ್ಕೂ ತಪ್ಪುವುದಿಲ್ಲ. ನಿನ್ನ ಉಪಕಾರ ಮರೆಯುವುದಿಲ್ಲ.

**ಮಾದ :** ನೋಡು, ಬೋನಿನ ಬಾಗಿಲು ತೆರೆದೇ ಬಿಟ್ಟೆ.

**ಹುಲಿ :** ನೋಡು, ನಾನು ಹೊರಗೆ ಬಂದೇ ಬಿಟ್ಟೆ (ಪಕ್ಕನೆ ಮಾದನನ್ನು ಹಿಡಿದುಕೊಳ್ಳುತ್ತ) ಏ ಬೆಪ್ಪು ತಕ್ಕಡೀ ಕೊನೆಗೂ ಸಿಕ್ಕಿ ಬಿದ್ದೆಯಲ್ಲಾ! ಇನ್ನು ನಿನ್ನನ್ನು ಬಿಡುವ ಹಾಗಿಲ್ಲ.

**ಮಾದ :** ಹುಲಿಯಣ್ಣಾ, ಇದೇನು ಹೇಳುತ್ತಿಯಾ? ಈಗ ತಾನೆ ದೇವರಾಣೆ ಹಾಕಿದೆಯಲ್ಲಾ?

**ಹುಲಿ :** ದೇವರ ಹೆಸರು ಹೇಳಿಯೇ ಕೆಲಸ ಮಾಡಿಸುವುದು ಬುದ್ಧಿವಂತರ ಲಕ್ಷಣ. ಅಷ್ಟೂ ಗೊತ್ತಿಲ್ಲವೆ ನಿನಗೆ?

**ಮಾದ :** ನನಗೇನೂ ಮಾಡುವುದಿಲ್ಲವೆಂದು ಮಾತು ಕೊಟ್ಟಿದ್ದಿಯಾ. ಕೊಟ್ಟ ಮಾತು ಅಷ್ಟು ಬೇಗ ಮರೆತು ಹೋಯಿತೆ?

**ಹುಲಿ :** ಸಿಟ್ಟುಗೊಂಡಾಗ ಮತ್ತು ಹೊಟ್ಟೆ ಹಸಿದಾಗ ಕೊಟ್ಟ ಮಾತು ಮರೆತು ಹೋಗುತ್ತದೆ. ಕೆಲವು ದಿನಗಳಿಂದ ನನಗೆ ಆಹಾರ ಸಿಕ್ಕಿಲ್ಲ. ನಾನು ತುಂಬ ಹಸಿದಿದ್ದೇನೆ; ಬಳಲಿದ್ದೇನೆ. ಹಸಿದವರಿಗೆ ಮೊದಲು ಆಹಾರ ಮತ್ತೆ ನೀತಿ ಪಾಠ.

**ಮಾದ :** ಹುಲಿಯಣ್ಣಾ, ಬೋನಿನ ಬಾಗಿಲು ತೆಗೆದು ನಿನ್ನನ್ನು ನಾನು ಬದುಕಿಸಿದೆ. ನೀನೀಗ ನನ್ನನ್ನೇ ತಿನ್ನುತ್ತೇನೆ ಅನ್ನುತ್ತೀಯಾ.

**ಹುಲಿ :** ಹೌದು. ಅದರಲ್ಲೇನು ತಪ್ಪು?

**ಮಾದ :** ಒಳ್ಳೆಯವರು ಅಪಕಾರಕ್ಕೂ ಉಪಕಾರ ಮಾಡುತ್ತಾರೆ. ನೀನು ಉಪಕಾರಕ್ಕೂ ಅಪಕಾರ ಬಗೆಯುತ್ತಿಯಲ್ಲಾ!

**ಹುಲಿ :** ಯಾರು ನಿನ್ನ "ಒಳ್ಳೆಯವರು" ಮನುಷ್ಯರೇನು?

**ಮಾದ :** ಇರಬಹುದಲ್ಲ. ಮನುಷ್ಯರೆಲ್ಲ ಕೆಟ್ಟವರೆಂಬುದು ನಿನ್ನ ಅಭಿಪ್ರಾಯವೆ?

**ಹುಲಿ :** ಮಾದ, ನೀನು ಮನುಷ್ಯ ನೋಡು. ಹಾಗಾಗಿ ನಿಮ್ಮ ಜಾತಿಯವರನ್ನೆಲ್ಲ ಸುಮ್ಮ ಸುಮ್ಮನೆ ಹೊಗಳುತ್ತಿರುವೆ. ಇತರ ಜೀವಿಗಳಲ್ಲಿರುವ ಒಳ್ಳೆಯತನ ಮನುಷ್ಯರಲ್ಲಿಲ್ಲ. ನಾಕು ದಿನ ಅನ್ನ ಹಾಕಿದವನನ್ನು ನಾಯಿಯಾದರೂ ನೆನೆಯುತ್ತದೆ. ಮನುಷ್ಯ ಮರೆಯುತ್ತಾನೆ. ಉಪಕಾರ ಸ್ಮರಣೆ ಅವನಲ್ಲಿಲ್ಲ. ಈ ಮಾತು ಸತ್ಯ.

**ಮಾದ :** ಇಲ್ಲ ಹುಲಿಯಣ್ಣಾ, ನಿನ್ನ ಮಾತನ್ನು ನಾನು ಒಪ್ಪುವುದಿಲ್ಲ ಅನುಕೂಲಕ್ಕೆ ತಕ್ಕ ಹಾಗೆ ನೀನೀಗ ಮಾತಾಡುತ್ತೀಯಾ ದಯವಿಟ್ಟು ಕೆಟ್ಟಯೋಚನೆ ಮಾಡಬೇಡ. ನನ್ನನ್ನು ಬಿಟ್ಟು ಬಿಡು.

**ಹುಲಿ :** ಮಾದಾ ಮನುಷ್ಯರೆಲ್ಲ ಉಪಕಾರಕ್ಕೆ ಪ್ರತಿ ಉಪಕಾರವನ್ನೇ ಮಾಡುವುದು ನಿಜವಾದರೆ ನಾನೂ ಹಾಗೆ ಮಾಡಲು ಸಿದ್ಧನಿದ್ದೇನೆ. ನಿನ್ನ ಉಪಕಾರಕ್ಕೆ ಪ್ರತಿಯಾಗಿ ನಿನ್ನನ್ನೂ ಬಿಟ್ಟು ಬಿಡುತ್ತೇನೆ. ಅದಕ್ಕಾಗಿ ನಾವೀಗ ಒಂದು ಪಂಥ ಕಟ್ಟೋಣ. ಕಾಡಿನಲ್ಲಿ ನಮಗೆದುರಾಗುವ ಐದು ಮಂದಿಯಲ್ಲಿ ವಿಚಾರಿಸೋಣ. ಅವರಲ್ಲಿ ಒಬ್ಬನಾದರೂ ಮನುಷ್ಯರ ಪ್ರತ್ಯುಪಕಾರ ಬುದ್ಧಿಯ ಬಗ್ಗೆ ಸಾಕ್ಷಿ ನುಡಿದರೆ ಸಾಕು. ನಿನ್ನನ್ನು ಏನೂ ಮಾಡುವುದಿಲ್ಲ. ಸರಿತಾನೆ?

**ಮಾದ :** ಆಗಲಿ ಹುಲಿಯಣ್ಣ, ಒಪ್ಪಿಕೊಳ್ಳುತ್ತೇನೆ.

**ಹುಲಿ :** ಸರಿ, ನಡೆ ಹಾಗಾದರೆ.

## ದೃಶ್ಯ – ೨

**ಮೇಳದವರು**

**ಹುಲಿಯಣ್ಣ ಬಿಂಕದಿ ನಡೆದನು ಮುಂದೆ**
**ಇಲಿಯಂತೆ ಮಾದನು ಸಾಗಿದ ಹಿಂದೆ**

**ತುಸುದೂರ ಬಂದಾಗ ಬಯಲಲ್ಲಿ ಒಂದು**
**ಹಸು ಮೇಯುತಿರುವುದ ಕಂಡರು ಅಂದು**

**ಹುಲಿ :** ನೋಡು ಮಾದಾ, ಮೊದಲ ಸಾಕ್ಷಿ ಸಿಕ್ಕೇಬಿಟ್ಟಿತು.

**ಮಾದ :** ಹೌದು. ದನವೊಂದು ಇದಿರಲ್ಲಿದೆ. ಆದರೆ ಆಶ್ಚರ್ಯ. ನಿನ್ನನ್ನು ನೋಡಿದರೂ ಅದು ಹೆದರಿದಂತೆ ಕಾಣುವುದಿಲ್ಲ.

**ಹುಲಿ :** ಆದುದರಿಂದ ನಾನೇ ಅದನ್ನು ಮೊದಲು ಮಾತಾಡಿಸುತ್ತೇನೆ "ಕಪಿಲಮ್ಮಾ, ಕಪಿಲಮ್ಮಾ, ಎಲ್ಲಿಗೆ ಹೊರಟಿದ್ದಿಯಾ?"

**ಕಪಿಲೆ :** ಊರು ಬಿಟ್ಟು ಹೊರಟಿದ್ದೇನೆ. ಸದ್ಯ ಕಾಡಿಗೆ ಬಂದಿದ್ದೇನೆ.

**ಮಾದ :** ದನಗಳಿಗೆ ಹುಲಿಯ ಹೆದರಿಕೆ ಬಹಳ. ಹುಲಿಯನ್ನು ಕಂಡರೆ ಊರು ಬಿಟ್ಟು ಓಡುತ್ತವೆ ಅವು, ಆದರೆ ………

**ಕಪಿಲೆ :** ಆದರೇನು? ಅದೇಕೆ ನಿಲ್ಲಿಸಿದೆ?

**ಮಾದ :** ನೀನು ಹುಲಿಯಣ್ಣನನ್ನು ಕಂಡರೂ ಹೆದರಲಿಲ್ಲ; ಓಡಿ ಹೋಗಲಿಲ್ಲ.

**ಕಪಿಲೆ :** ಹೋ, ಅದಕ್ಕಾಗಿ ನಿನಗೆ ಆಶ್ಚರ್ಯವೆ? ನೀನು ಹೇಳುವುದು ನಿಜ. ನನಗೆ ಹುಲಿಯ ಹೆದರಿಕೆ ಇಲ್ಲ.

**ಮಾದ :** ಕಾರಣ ಕೇಳಬಹುದೆ?

**ಕಪಿಲೆ :** ಜೀವದಲ್ಲಿ ಆಸೆ ಇರುವವರಿಗೆ ಮಾತ್ರ ಹೆದರಿಕೆ ಇರುತ್ತದೆ.

**ಮಾದ :** ಹಾಗಾದರೆ ನಿನಗೆ?

**ಕಪಿಲೆ :** ನನಗೆ ಜೀವದಾಸೆ ಇಲ್ಲ.

**ಹುಲಿ :** ಏನು, ನಿನಗೆ ಜೀವದಾಸೆ ಇಲ್ಲವೆ? ಅದೇಕೆ ಹಾಗೆ ಹೇಳುವೆ?

**ಕಪಿಲೆ :** ಅದರ ಕಾರಣ ಮತ್ತೆ ಹೇಳುತ್ತೇನೆ. ನೀವಿಬ್ಬರೂ ಜೊತೆಗೂಡಿ ಹೊರಟಿದ್ದೀರಿ, ಎಲ್ಲಿಗೆ? ಏಕೆ? ಅದನ್ನು ಮೊದಲು ತಿಳಿಸುವಿರಾ?

**ಹುಲಿ :** ಮನುಷ್ಯರಲ್ಲಿ ಉಪಕಾರಕ್ಕೆ ಪ್ರತಿ ಉಪಕಾರ ಮಾಡುವವರೇ ಹೆಚ್ಚು ಮಂದಿ ಎಂದು ಈ ಮನುಷ್ಯ ಹೇಳುತ್ತಾನೆ. ಅದು ಸತ್ಯವಲ್ಲ ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಯಾರ ಅನಿಸಿಕೆ ಸರಿ ಎಂಬುದನ್ನು ತಿಳಿಯಬೇಕಾಗಿದೆ. ಅದಕ್ಕಾಗಿ ನಿನ್ನನ್ನೀಗ ಕೇಳುತ್ತಿದ್ದೇವೆ. ನಿಹನ್ನ ಅಭಿಪ್ರಾಯವೇನು?

**ಕಪಿಲೆ :** ಹುಲಿಯಣ್ಣಾ, ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವನ್ನು ನಾನೂ ಒಪ್ಪಿಕೊಳ್ಳುತ್ತೇನೆ, ಅದು ನನ್ನ ಅನುಭವವೂ ಹೌದು.

**ಹುಲಿ :** ಏನದು ನಿನ್ನ ಅನುಭವ? ಅದನ್ನು ನಮ್ಮಲ್ಲಿ ಹಂಚಿಕೊಳ್ಳುವಿಯಾ?

**ಕಪಿಲೆ :** ಕಳೆದ ಹದಿನೈದು ವರ್ಷಗಳಿಂದ ನಾನೊಬ್ಬನ ಮನೆಯಲ್ಲಿದ್ದೇನೆ. ಅವನು ಭಾರೀ ಶ್ರೀಮಂತ ಬೇಕಷ್ಟು ಆಸ್ತಿ ಪಾಸ್ತಿ ಹಣಕಾಸು ಉಳ್ಳವ. ಅವನಲ್ಲಿರುವಾಗ ಹತ್ತು ಬಾರಿ ನಾನು ಕರು ಹಾಕಿದ್ದೆ. ಆ ಕರುಗಳಲ್ಲಿ ಆರು ಹೆಣ್ಣು, ನಾಲ್ಕು ಗಂಡು. ಆ ಶ್ರೀಮಂತನ ಹಟ್ಟಿ ತುಂಬ ಇದೆ ನನ್ನ ಸಂತಾನ. ಆ ಮನೆಯವರಿಗೆ ಕೊಡಗಟ್ಟಲೆ ಹಾಲು ಕೊಟ್ಟವಳು ನಾನು ಕರೆವ ಹಸುಗಳನ್ನು ಕೊಟ್ಟವಳೂ ನಾನೇ. ಅವರಿಗೆ ಉಳುವ ಎತ್ತುಗಳು ದೊರೆತುದು ನನ್ನಿಂದ, ಹೊಲಗದ್ದೆಗಳಿಗೆ ಗೊಬ್ಬರವೂ ನನ್ನಿಂದ. ಆದರೆ....

**ಮಾದ :** ಆದರೆ!!! ಎಂದು ನಿಲ್ಲಿಸಿಬಿಟ್ಟೆಯಲ್ಲ? ಮುಂದೇನಾಯಿತು ಹೇಳು?

**ಕಪಿಲೆ :** ಆಗುವುದೇನು ಮಣ್ಣು? ಕಾಲ ಮುಂದಾಯಿತು. ಶಕ್ತಿ ಹಿಂದಾಯಿತು. ಮತ್ತೆ ನಾನು ಕರು ಹಾಕಲಿಲ್ಲ. ಕೆಚ್ಚಲಿನ ಹಾಲು ಬತ್ತಿತ್ತು, ಈಗ....

**ಹುಲಿ :** ಏನಾಗಿದೆ ಈಗ?

**ಕಪಿಲೆ :** ಈಗ ನಾನು ಯಾರಿಗೂ ಬೇಡಾದವವಳು. ಯಾರೂ ನನ್ನನ್ನು ಪ್ರೀತಿಸುವುದಿಲ್ಲ. ಯಾರಿಗೂ ನನ್ನ ಮೇಲೆ ಕರುಣೆ ಇಲ್ಲ, ಮುದ್ದೆ ಮುದ್ದೆ ಹಿಂಡಿ ಇಡುತ್ತಿದ್ದ ಯಜಮಾನಿ ನನ್ನನ್ನೀಗ ಕಣ್ಣೆತ್ತಿಯೂ ನೋಡುವುದಿಲ್ಲ, ತಿನ್ನಲ್ಲು ಹುಲ್ಲು ಇಲ್ಲ, ಕುಡಿಯಲು ನೀರು ಇಲ್ಲ ಎನ್ನುವಂತಾಗಿದೆ ನನ್ನ ಸ್ಥಿತಿ.

**ಮಾದ :** ನಿನಗೆ ಮಕ್ಕಳು ಇರಬೇಕಲ್ಲವೆ? ಅವೂ ನಿನ್ನನ್ನು ಪ್ರೀತಿಸುವುದಿಲ್ಲವೆ?

**ಕಪಿಲೆ :** ಎಲ್ಲರೂ ಇದ್ದಾರೆ. ಈಗ ಮಾತ್ರ ಇದ್ದೂ ಇಲ್ಲದಂತೆ ಆಗಿದ್ದಾರೆ.

**ಹುಲಿ :** ಅದೇಕೆ ಹಾಗೆ ಹೇಳುತ್ತೀಯಾ?

**ಕಪಿಲೆ :** ಕೆಚ್ಚಲಿನ ಹಾಲು ಸಿಗುವಷ್ಟು ಕಾಲ ಮಕ್ಕಳಿಗೆ ನನ್ನಲ್ಲಿ ಪ್ರೀತಿ ಇತ್ತು. ಹಾಲು ಬತ್ತಿದಂತೆ ಅವರ ಪ್ರೀತಿಯೂ ಬತ್ತಿ ಹೋಯಿತು. ಈಗ ಹೆಣ್ಣು ಮಕ್ಕಳ ಪ್ರೀತಿ ತಮ್ಮ ಮಕ್ಕಳ ಕಡೆಗೆ. ಗಂಡು ಮಕ್ಕಳ ಪ್ರೀತಿ ಬೇರೆ ಹೆಣ್ಣುಗಳ ಕಡೆಗೆ.

**ಮಾದ :** ನಿನಗೆ ಮೊಮ್ಮಕ್ಕಳೂ ಇದ್ದಾರೆಯೆ?

**ಕಪಿಲೆ :** ಮೊಮ್ಮಕ್ಕಳು ಇದ್ದಾವೆ ನಿಜ. ಆದರೆ ಅವುಗಳಿಗೆ ನನ್ನ ಪರಿಚಯವೇ ಇಲ್ಲ.

**ಮಾದ :** ಅದೇಕೆ ಹಾಗಾಯಿತು?

**ಕಪಿಲೆ :** ನಾನೀಗ ಬತ್ತಿದ ದನ, ಮುದಿಗೊಡ್ಡು. ಎಲ್ಲರಿಗೂ ಭಾರವಾಗಿ ಬದುಕುವವಳು. ಹಟ್ಟಿಯಲ್ಲಿ ನನ್ನ ಸ್ಥಾನ ಕೊನೆಯದು. ಹಿಂಬದಿಯ ಮೂಲೆಯಲ್ಲಿ ಕಟ್ಟಿಬಿಡುತ್ತಾರೆ ನನ್ನನ್ನು. ಮಕ್ಕಳು ಮೊಮ್ಮಕ್ಕಳು ಒಂದು ಕಡೆಯಲ್ಲಿದ್ದರೆ ನಾನಿರುವುದು ಇನ್ನೊಂದು ಕಡೆಯಲ್ಲಿ, ಒಮ್ಮೆಮ್ಮೆ ಬೆಳಗು ಬೈಗುಗಳಲ್ಲಿ ಎಲ್ಲರೂ ಒಟ್ಟಾಗುವುದಿದೆ, ಆಗ ನೋಡಬೇಕು ಮೊಮ್ಮಕ್ಕಳ ರಂಪಾಟ! ಕೆಲವು ನನನಗೆ ಹಾಯುತ್ತವೆ. ಕೆಲವು ಒದೆಯಲಿಲಕ್ಕೂ ಸಿದ್ಧ, ಸೊಕ್ಕಿನ ಕೆಲವು ನನ್ನ ಮೇಲೆಯೇ ಹಾರುವುದಿದೆ, ನೋವಿನ ಸಂಗತಿಯೆಂದರೆ ಅವುಗಳಲ್ಲಿ ಹೆಚ್ಚಿನವಕ್ಕೆ ನನ್ನ ಪರಿಚಯವೂ ಇಲ್ಲ; ನನ್ನ ಮೇಲೆ ಪ್ರೀತಿಯೂ ಇಲ್ಲ. ಒಮ್ಮೊಮ್ಮೆ ನಾನೇಕೆ ಬದುಕಬೇಕು ಎನಿಸುತ್ತದೆ ನನಗೆ (ಅಳುವಳು)

**ಮಾದ :** ಅಳಬೇಡ ಕಪಿಲಮ್ಮ ; ಸಮಾಧಾನ ತಂದಕೊ. ನಿಜವಾಗಿಯೂ ಹೀಗೆ ಆಗಬಾರದಿತ್ತು.

**ಕಪಿಲೆ :** ಆಗ ಬಾರದ್ದು ಆಗಿ ಹೋಗಿದೆ ಅಣ್ಣಾ. ಅಷ್ಟೇ ಅಲ್ಲ….

**ಹುಲಿ :** ಇನ್ನೇನಿದೆ ಕಪಿಲಮ್ಮಾ ಹೇಳಲು ಇರುವವುದನ್ನೆಲ್ಲಲ ಹೇಳಿಬಿಡು.

**ಕಪಿಲೆ :** ನಿನ್ನೆ ತಾನೆ ನಮ್ಮ ಶ್ರೀಮಂತ ಯಜಮಾನನ ಮಾತು ಕೇಳಿಸಿಲಕೊಂಡೆ, ತಕ್ಷಣ ಆ ಮನೆಯ ಆಸೆಬಿಟ್ಟು ಹೊರಟು ಬಂದೆ.

**ಹುಲಿ :** ಯಜಮಾನ ಏನು ಹೇಳುತ್ತಿದ್ದ? ಯಾರೊಡನೆ?

**ಕಪಿಲೆ :** ನಿನ್ನೆ ಯಜಮಾನ ತನ್ನ ಹೆಂಡತಿಯೊಡನೆ ಮಾತಾಡುತ್ತಿದ್ದ. ನನ್ನ ಕುರಿತು ಅವರ ಮಾತುಕತೆ ನಡೆದಿತ್ತು. ನಾನು ಮುದಿಯಾಗಿದ್ದೇನೆ. ಇನ್ನು ಕರು ಹಾಕುವಂತಿಲ್ಲ; ಹಾಲು ಕೊಡುವಂತಿಲ್ಲ. ನನಗಾಗಿ ಮಾಡಿದ ಪೈಸೆ ವೆಚ್ಚವೂ ಹಿಂದೆ ಬರುವಂತಿಲ್ಲ. ಆದುದರಿಂದ…

**ಮಾದ :** ಆದುದರಿಂದ?

**ಕಪಿಲೆ :** ನನ್ನನ್ನು ಕಸಾಯಿಖಾನೆಗೆ ಅಟ್ಟಲು ಯೋಚಿಸುತ್ತಿದ್ದಾರೆ. ನನ್ನ ಸರ್ವಸ್ವವನ್ನೂ ನಾನು ಅವರಿಗೆ ನೀಡಿದೆ. ಅವರ ಸೇವೆ ಮಾಡಿದೆ. ಅದಕ್ಕೆ ಪ್ರತಿಯಾಗಿ ಅವರೀಗ ಕಡುಕನಿಗೆ ನನ್ನನ್ನೂ ಮಾರಲಿದ್ದಾರೆ. ಆದುದರಿಂದಲೇ ನಾನು ಊರು ಬಿಟ್ಟು ಕಾಡು ಸೇರಿದೆ.

**ಹುಲಿ :** ಕಪಿಲಮ್ಮಾ, ಮನುಷ್ಯರು ಎಷ್ಟು ಕೃತಘ್ನರು ಎಂಬುದನ್ನು ಚೆನ್ನಾಗಿ ಹೇಳಿದೆ. ಉಪಕಾರವಾಯಿತು. ನಾವಿನ್ನು ಬರುತ್ತೇವೆ.

**ಕಪಿಲೆ :** ಒಳ್ಳೆಯದು ಹೋಗಿ ಬನ್ನಿ.

**ಹುಲಿ :** ಮಾದಾ ಕಪಿಲಮ್ಮನ ಮಾತು ಕೇಳಿದೆಯಷ್ಟೆ?

**ಮಾದ :** ಹೌದು. ಆಕೆ ನಿನ್ನ ಪರವಾಗಿಯೇ ಸಾಕ್ಷಿ ಹೇಳಿದಳು. ಆಗಲಿ ಮುಂದೆ ಹೋಗೋಣ.

## ದೃಶ್ಯ – ೩

**ಮೇಳದವರು**

**ಅಕ್ಕ ಪಕ್ಕ ನೋಡಿಕೊಂಡು**
**ಫಕ್ಕ ಫಕ್ಕ ನಡೆಯುವಂದು**
**ಹಕ್ಕಿಯೊಂದು ಹಾದಿ ಬದಿಯೆ ಕಾಣಸಿಕ್ಕಿತು**
**ಸಿಕ್ಕಿದಲ್ಲಿ ನೆಲವನಡುವೆ ಕೆದುಕು ತಿದ್ದಿತು.**

**ಹುಲಿ :** ನೋಡು ಮಾದಾ ಅಲ್ಲೊಂದು ಹಕ್ಕಿ ಕಾಣಿಸುತ್ತಿದೆಯಲ್ಲ?

**ಮಾದ :** ಹೌದು ಹುಲಿಯಣ್ಣಾ, ಹಕ್ಕಿಯೊಂದು ನೆಲ ಕೆದಕುತ್ತಾ ಇದೆ.

**ಹುಲಿ :** ಅದು ನೆಲಕೆದಕುವ ರೀತಿ ನೋಡಿದರೆ ಕೋಳಿಯೇ ಇರಬಹುದು ಅನ್ನಿಸುತ್ತದೆ.

**ಮಾದ :** ಸರಿಯಾಗಿ ಹೇಳಿದೆ ಅದೊಂದು ಹೇಟೆ.

**ಹುಲಿ :** ಈ ಬಾರಿ ನಿನ್ನ ಸರದಿ ನೀನೇ ವಿಷಯ ತಿಳಿಸು.

**ಮಾದ :** ಹೇಟೇ ಹೇಟೇ, ಕ್ಷಣಕಾಲ ನಿಲ್ಲು. ನಾನೊಂದು ಪ್ರಶ್ನೆ ಕೇಳುವೆ. ದಯವಿಟ್ಟು ಉತ್ತರ ಹೇಳುವೆಯಾ?

**ಹುಲಿ :** ವಿಷಯ ಗೊತ್ತಿರುವುದಾದರೆ ಖಂಡತಿ ಉತ್ತರ ಹೇಳುವೆ.

**ಮಾದ :** ಈ ಹುಲಿಯಣ್ಣ ಬೋನಿನಲ್ಲಿ ಬಿದ್ದಿದ್ದ, ಅವನನ್ನು ನಾನು ಸೆರೆಯಿಂದ ಬಿಡಿಸಿದೆ. ಅವನೀಗ ನನ್ನನ್ನೆ ತಿನ್ನುತ್ತೇನೆ ಎನ್ನುತ್ತಿದ್ದಾನೆ. ಉಪಕಾರಕ್ಕೆ ಅಪಕಾರ ಬಗೆಯುತ್ತಿದ್ದಾನೆ. ಇದು ಸರಿಯೇ? ಅವನು ಹಾಗೆ ಮಾಡಬಹುದೆ? ನೀನು ಹೇಳು.

**ಹುಲಿ :** ಹೇಟೇ ಮನುಷ್ಯರು ಉಪಕಾರ ಸ್ಮರಣೆ ಉಳ್ಳವರಂತೆ. ಮಾದ ಹಾಗೆ ಹೇಳುತ್ತಾನೆ. ಈ ಬಗ್ಗೆ ನಿನ್ನ ಅನುಭವವೇನು? ಅದನ್ನು ಮಾತ್ರ ಹೇಳಿಬಿಡು ಅಷ್ಟೇ ಸಾಕು ನಮಗೆ.

**ಹುಲಿ :** ಏನು, ಮನುಷ್ಯರಲ್ಲಿ ಉಪಕಾರ ಸ್ಮರಣೆಯೆ? ಅವರು ಅಂಥವರೆಂದು ನನಗಂತೂ ಅನಿಸುವುದಿಲ್ಲ.

**ಮಾದ :** ಅದೇಕೆ ಆಗೆ ಹೇಳುತ್ತಿಯಾ? ನಿನಗೆ ಅವರೇನು ಮಾಡಿದ್ದಾರೆ?

**ಹುಲಿ :** ಅದನ್ನೇ ಹೇಳುತ್ತೇನೆ ಕೇಳಿ. ಕೆಲವು ಕಾಲದಿಂದ ನಾನು ರೈತನೊಬ್ಬನ ಆಶ್ರಮದಲ್ಲಿದ್ದೇನ. ಕಳೆದ ಐದಾರು ವರ್ಷಗಳಲ್ಲಿ ನೂರಾರು ಮೊಟ್ಟೆಗಳನ್ನು ನಾನವನಿಗೆ ಕೊಟ್ಟಿದ್ದೇನೆ. ಹಲವಾರು ಮರಿಗಳು ನನ್ನಿಂದ ಅವನಿಗೆ ದೊರೆತಿವೆ. ಹೆಣ್ಣುಗಳು ದೊಡ್ಡವಾಗಿ ಮೊಟ್ಟೆ ಇಡತೊಡಗಿವೆ. ಗಂಡುಗಳು ಕಾದಾಟದ ಹುಂಜಗಳಾಗಿ ಬೆಳೆದಿವೆ. ಕೆಲವನ್ನು ಆತ ಮಾರಾಟಮಾಡಿ ಹಣ ಸಂಪಾದನೆ ಮಾಡಿದ್ದಾನೆ. ಇನ್ನು ಕೆಲವನ್ನು ಕೊಂದು ಮಾಂಸ ತಿಂದಿದ್ದಾನೆ. ನನಗೀಗ ಪ್ರಾಯವಾಯಿತು. ಮೊಟ್ಟೆಯಿಡುವ ಶಕ್ತಿ ಕುಂದಿತು ಇಷ್ಟರಲ್ಲೆ ರೈತ ನಾನು ಮಾಡಿದ ಉಪಕಾರ ಮರೆತಿದ್ದಾನೆ. ನಾಳೆ ತನ್ನ ಮಗಳು ಅಳಿಯ ಮನೆಗೆ ಬಂದಾಗ ನನ್ನನ್ನೂ ಕೊಂದು ರೊಟ್ಟಿ ಮಾಡಿ ಬಡಿಸಲಿದ್ದಾನೆ. ಈ ವಿಚಾರ ಮುಂದಾಗಿ ನನಗೆ ತಿಳಿಯಿತು. ಜೀವ ಉಳಿಸಲಿಕ್ಕಾಗಿ ಕಾಡಿಗೆ ಓಡಿ ಬಂದೆ ಇದು ನೋಡಿ ಮನುಷ್ಯರ ಪ್ರತ್ಯುಪಕಾರ ಬುದ್ಧಿ!

**ಹುಲಿ :** ಸರಿಯಾಗಿ ಹೇಳಿದೆ. ನಿನ್ನ ಮಾತುಕೇಳಿ ಬಹಳ ಸಂತೋಷವಾಯಿತು. ನಾವಿನ್ನು ಬರುತ್ತೇವೆ.

**ಹೇ :** ಆಗಲಿ ನಾನು ನನ್ನ ದಾರಿ ಹಿಡಿಯುತ್ತೇನೆ.

**ಮಾದ :** ಹೌದು ಹುಲಿಯಣ್ಣಾ ಇಬ್ಬರ ಸಾಕ್ಷಿಯೂ ನಿನ್ನ ಪರವಾಯಿತು. ಆಗಲಿ ಇನ್ನೂ ಮೂವರು ಇದ್ದಾರಲ್ಲ? ಅವರೇನು ಹೇಳುತ್ತಾರೋ ಕೇಳೋಣ.

# ದೃಶ್ಯ – ೪

**ಮೇಳದವರು**

**ಯಾರನ್ನು ಕಾಣಲಿ ಯಾರನ್ನು ಕೇಳಲಿ**
**ಯಾರ ಸಾಕ್ಷಿಯ ನಿನ್ನು ಪಡೆಯಲಿ ಎನ್ನುತ**
**ಸಾರಿದರವರು ಮುಂದಕ್ಕೆ**

**ಹುಲಿ :** ಇದುವರೆಗೆ ನಾವು ಒಂದು ಪ್ರಾಣಿಯ ಸಾಕ್ಷಿ ಪಡೆದೆವು; ಒಂದು ಪಕ್ಷಿಯ ಸಾಕ್ಷಿ ಪಡೆದೆವು ಇನ್ನೊಂದು ಮರದ ಸಾಕ್ಷಿ ಪಡೆಯೋಣವೆ:

**ಮಾದ :** ಆಗಬಹುದು. ನನ್ನ ಒಪ್ಪಿಗೆ ಇದೆ.

**ಹುಲಿ :** ಮರವವಾದರೂ ನಿನ್ನ ಪರವಾಗಿ ಅಂದರೆ ಮನುಷ್ಯರ ಪರವಾಗಿ ಸಾಕ್ಷಿ ನುಡಿಯುವುದೋ ತಿಳಿಯೋಣ.

**ಮಾದ :** ನಮ್ಮ ಇದಿರೇ ನಿಂದಿದೆ ಮಾವಿನ ಮರ. ಇದನ್ನೇ ಕೇಳಿದರಾಯಿತು.

**ಹುಲಿ :** ಆಗಲಿ, ಈಗ ನನ್ನ ಸರದಿ, ನಾನೇ ಪ್ರಶ್ನೆ ಕೇಳುತ್ತೇನೆ.

**ಮಾದ :** ಸರಿ. ಕೇಳಿಬಿಡು.

**ಹುಲಿ :** ಮರವೇ, ಮರವೇ, ನಿನಗೆ ಮನುಷ್ಯರ ಪರಿಚಯವಿದೆಯೆ?

**ಮಾದ :** ಹಹಹ್ಹಹ್ಹ ಇದೇನು ಕೇಳುತ್ತಿ ಹುಲಿಯಣ್ಣಾ? ಮನುಷ್ಯರ ಪರಿಚಯ ಯಾರಿಗಿಲ್ಲ ಹೇಳು? ಅವರಂಥ ಬುದ್ಧಿವಂತರು ಜಗತ್ತಿನಲ್ಲೆ ಇಲ್ಲ.

**ಹುಲಿ :** ನಾನು ಅವರ ಬುದ್ಧಿವಂತಿಕೆಯ ಬಗ್ಗೆ ಕೇಳುತ್ತಿಲ್ಲ.

**ಮಾದ :** ಮತ್ತೆ?

**ಹುಲಿ :** ಅವರ ಉಪಕಾರ ಬುದ್ಧಿಯ ಬಗ್ಗೆ. ಪ್ರತ್ಯುಪಕಾರ ಬುದ್ಧಿಯ ಬಗ್ಗೆ ಕೇಳುತ್ತಿದ್ದೇನೆ.

**ಮಾದ :** ಪ್ರತ್ಯುಪಕಾರ ಬುದ್ದಿಯೆ? ಕೆಲವೇ ಮನುಷ್ಯರಲ್ಲಿ ಅದು ಇರಬಹುದೋ ಏನೋ. ಹೆಚ್ಚಿನವರಲ್ಲಿ ಅದು ಇಲ್ಲವೇ ಇಲ್ಲ.

**ಮಾದ :** ಅದೇಕೆ ಹಾಗೆ ಹೇಳುತ್ತಿಯಾ?

**ಮಾದ :** ನೀನು ಮನುಷ್ಯ. ನನ್ನ ಮಾತು ಕೇಳಿ ನನಗೆ ಬೇಸರವಾಗಿರಬೇಕು. ಅಲ್ಲವೆ?

**ಮಾದ :** ನೋಡು, ನಾನೊಂದು ಮರ. ಮಣ್ಣಿನಲ್ಲಿ ಹುಟ್ಟಿ ಬೆಳೆವವನು. ಇಲ್ಲಿನ ಗಾಳಿ ನೀರು ಸೇವಿಸಿ ಬದುಕುವವನು. ಜೀವಿಸಿರುವಷ್ಟು ಕಾಲ ನಾನು ಈ ಭೂಮಿಗೆ ಹಸಿರು ಹೊದೆಸುತ್ತೇನೆ; ತಂಪು ನೀಡುತ್ತೇನೆ. ಹಕ್ಕಿ ಪಕ್ಕಿಗಳಿಗೆ, ಕ್ರಿಮಿ ಕೀಟಗಳಿಗೆ ಆಸರೆ ಕೊಡುತ್ತೇನೆ. ಮನುಷ್ಯರಿಗೆ ತಿನ್ನಲು ಹಣ್ಣು. ಉರಿಸಲು ಕಟ್ಟಿಗೆ, ಮನೆಗಳಿಗೆ **ಮೋಪು-**ರೀಪುಗಳು ಎಲ್ಲ ಸಿಕ್ಕುವುದು ನನ್ನಿಂದ ಜನಕ್ಕೆ ಜಗಕ್ಕೆ ಉಪಕರಿ ನಾನು. ಅದರೇನು? ಅವರು ನನ್ನ ಉಪಕಾರವನ್ನು ಗಣಿಸುವುದಿಲ್ಲ.

**ಹುಲಿ :** ಹಾಗೇಕೆ ಹೇಳುತ್ತಿ? ನಿನಗೆ ಅವರನೇನು ಮಾಡುತ್ತಾರೆ?

**ಮಾದ :** ನನ್ನ ಕೈಕಾಲುಗಳಂತಿರುವ ಕೊಂಬೆರೆಂಬೆಗಳನ್ನೆಲ್ಲ ಕತ್ತರಿಸುತ್ತಾರೆ. ಹಣದಾಸೆಗಾಗಿ ನನ್ನನ್ನೆ ಕಡಿ ಕಡಿದು ಮಾರುತ್ತಾರೆ. ನನ್ನ ಸಂತಾನವನ್ನೆ ನಿರ್ಮೂಲ ಮಾಡುತ್ತಾರೆ. ಕಾಡಿನ ಹಸಿರು ಹೊದೆದ ಗುಡ್ಡ ಬೆಟ್ಟಗಳೆಲ್ಲ ಅಜ್ಜಯ್ಯನ ಬೋಳು ಮಂಡೆಯಂತೆ ಕಾಣಲು ಕಾರಣ ಯಾರು? ಮನುಷ್ಯರೇ ಅಲ್ಲವೆ? ಉಪಕಾರ ಬುದ್ಧಿ ಬಿಡಿ. ಒಂದಿಷ್ಟು ವಿವೇಕ ಅವರಿಗಿದ್ದರೆ ಅವರು ಹೀಗೆ ಮಾಡುತ್ತಿದ್ದರೆ?

**ಹುಲಿ :** ನಿನ್ನ ಮಾತು ಸಂಪೂರ್ಣ ಸತ್ಯ. ನಾನದನ್ನು ಒಪ್ಪಿಕೊಳ್ಳುತ್ತೇನೆ. ನಿನ್ನ ಅಭಿಪ್ರಾಯ ತಿಳಿಸಿ ಉಪಕಾರ ಮಾಡಿದೆ. ವಂದನೆಗಳು. ಮಾದಾ, ಮೂರು ಸಾಕ್ಷಿಗಳ ವಿಚಾರಣೆ ಮುಗಿದು ಹೋಯಿತು ನೋಡು.

**ಮಾದ :** ಹೌದು ಹುಲಿಯಣ್ಣಾ ಇನ್ನು ಎರಡು ಮಾತ್ರ ಉಳಿದಿದೆ. ಮುಂದೆ ಹೋಗೋಣ. ಸಿಕ್ಕಿದವರನ್ನು ವಿಚಾರಿಸೋಣ.

## ದೃಶ್ಯ – ೫

**ಮೇಳದವರು**

**ಸುತ್ತ ಮುತ್ತ ನೋಡಿಕೊಂಡು**
**ಅವರು ಮುಂದೆ ಬಂದರು**
**ಮತ್ತೆ ಅಲ್ಲೆ ಹರಿಯುತ್ತಿದ್ದ**
**ನದಿಯನೊಂದು ಲಕಂಡರ,**

**ಹುಲಿ :** ಮಾದ, ನೋಡಿಲ್ಲಿ ನದಿಯೊಂದು ಹರಿಯುತ್ತಾ ಇದೆ.

**ಮಾದ :** ನಿಜ ನಿಜ. ಹರಿವ ನದಿ ಎದುರಿಗಿದೆ. ಇದನ್ನೇ ವಿಚಾರಿಸೋಣವೇ?

**ಹುಲಿ :** ಆಗಲಿ, ಮಾತಾಡಿಸಿ ನೋಡು. ಉತ್ತರ ಸಿಕ್ಕಿದರೆ ಆಯಿತಲ್ಲ ಇಲ್ಲವಾದರೆ ಬೇರೊಬ್ಬರನ್ನು ಹುಡುಕೋಣ.

**ಮಾದ :** ಈಗಿನ ಸರದಿ ನಿನಗೇ ಇರಲಿ. ನದಿಯನ್ನು ನೀನೇ ಮಾತಾಡಿಸು.

**ಹುಲಿ :** ಆಯಿತು. ಒಪ್ಪಿಕೊಳ್ಳುತ್ತೇನೆ. ನದಿಯಮ್ಮಾ, ನದಿಯಮ್ಮಾ, ನಮ್ಮದೊಂದು ಪ್ರಶ್ನೆಯಿದೆ. ಉತ್ತರ ಹೇಳಬಲ್ಲೆಯಾ?

**ನದಿ :** ಪ್ರಶ್ನೆ ಇಂತಹದುದೆಂದು ಗೊತ್ತಾಗಲಿ. ಮತ್ತಲ್ಲವೆ ಉತ್ತರಿಸುವ ವಿಚಾರ? ಮನುಷ್ಯರಲ್ಲಿ ಉಪಕಾರ ಸ್ಮರಣೆ ಉಂಟೇ ಇಲ್ಲವೆ? ಅವರು ಪ್ರತ್ಯುಪಕಾರ ಬುದ್ಧಿಯವರು ಹೌದೇ ಅಲ್ಲವೆ? ಇದು ನಮ್ಮ ಪ್ರಶ್ನೆ? ಈ ಬಗ್ಗೆ ನಿನಗೇನು ಗೊತ್ತಿದ ಹೇಳು?

**ನದಿ :** ನಾನು ಯಾವುದೋ ಗಿರಿಯಲ್ಲಿ ಹುಟ್ಟುತ್ತೇನೆ. ಎಲ್ಲೆಲ್ಲೋ ಹರಿದು ಸಾಗರ ಸೇರುತ್ತೇನೆ. ಪಯಣದ ಹಾದಿಯಲ್ಲಿ ಸಾವಿರಾರು ಜನರ ಪರಿಚಯ ನನಗಾಗುತ್ತದೆ.

**ಮಾದ :** ಅಂದರೆ ನಮ್ಮ ಪ್ರಶ್ನೆಗೆ ಉತ್ತರ ನಿನ್ನಲ್ಲಿದೆ ಅಂದಂತಾಯಿತು.

**ನದಿ :** ಉತ್ತರವೇನೋ ಇದೆ. ಅದು ಸರಿಯೋ ತಪ್ಪೋ ನೀವೇ ನಿರ್ಧರಿಸಬೇಕು. ನನಗಾದ ಅನುಭವ ನಾನು ಹೇಳಬಲ್ಲೆ.

**ಹುಲಿ :** ಅನುಭವದ ಮಾತು ಅಂದಮೇಲೆ ಅದು ಸತ್ಯವಾಗಿಯೇ ಇರುತ್ತದೆ. ತಿಳಿದುದನ್ನು ಹೇಳಿಬಿಡು.

**ನದಿ :** ನಾನು ಬಹಳ ಜನರನ್ನು ಕಂಡಿದ್ದೇನೆ. ಅವರ ಸಹವಾಸದ ಅನುಭವ ಉಂಡಿದ್ದೇನೆ. ಆ ಅನುಭವ ಸವಿಯಾದುದಲ್ಲ. ಸಿಹಿಗಿಂತ ಕಹಿಯೇ ಹೆಚ್ಚು ಅದರಲ್ಲಿ.

**ಹುಲಿ :** ಉದ್ದುದ್ದ ಮಾತಾಡಬೇಡ. ಹೇಳುವುದನ್ನು ನೇರವಾಗಿ ಹೇಳಿಬಿಡು. ಮನುಷ್ಯರ ವರ್ತನೆಯ ಬಗ್ಗೆ ನನ್ನ ಅನುಭವವೇನು? ಅದನ್ನು ಹೇಳು, ಅಷ್ಟೇ ಸಾಕು ನಮಗೆ.

**ನದಿ :** ಲೋಕಕ್ಕೇ ಉಪಕಾರ ಮಾಡುವವಳು ನಾನು. ನನ್ನಿಂದ ಅತಿ ಹೆಚ್ಚು ಪ್ರಯೋಜನ ಪಡೆದವರು ಮನುಷ್ಯ ವರ್ಗದವರು ಆದರೆ ……….

**ಮಾದ :** ಆದರೇನು? ಹೇಳಲುವುದನ್ನೆಲ್ಲ ಹೇಳಿಬಿಡು.

**ನದಿ :** ಮನುಷ್ಯರು ಪ್ರತ್ಯುಪಕಾರ ಬುದ್ಧಿ ಇರುವವರಂತೆ ವರ್ತಿಸುವುದಿಲ್ಲ.

**ಹುಲಿ :** ಹಾಗೆ ಹೇಳಲು ಕಾರಣ ಇರಬೇಕಲ್ಲ?

**ನದಿ :** ಹೌದು. ನನ್ನ ಅನುಭವ ನನ್ನಿಂದ ಹಾಗೆ ಹೇಳಿಸುತ್ತದೆ.

**ಮಾದ :** ಏನದು ನಿನ್ನ ಅನುಭವ? ಸ್ವಲ್ಪ ವಿವರಿಸಬಾರದೆ?

**ನದಿ :** ನೀರಿನ ಮಹತ್ವ ನಿಮಗೆ ಗೊತ್ತೆದೆಯಷ್ಟೆ? ನೀರು ಇಲ್ಲದಿದ್ದರೆ ಜಗತ್ತಿನಲ್ಲಿ ಜೀವ ರಾಶಿಗಳೇ ಇರುತ್ತಿರಲಿಲ್ಲ. ಎಲ್ಲರ, ಎಲ್ಲವುಗಳ ಜೀವನಕ್ಕೆ ನೀರೇ ಆಧಾರ.

**ಹುಲಿ :** ಅದು ನಮಗೂ ಗೊತ್ತಿದೆ ಬಿಡು.

**ನದಿ :** ಜೀವನಾಧಾರವಾದ ನನ್ನ ನೀರನ್ನು ಅತಿಹೆಚ್ಚು ಬಳಸುವವರು, ವಿವಿಧ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳುವವರು ಮನುಷ್ಯರೇ. ಆದರೆ ಉಪಕಾರ ಸ್ಮರಣೆ ಮಾತ್ರ ಅವರಲ್ಲಿಲ್ಲ. ಉದಾಹರಣೆ ಸಹಿತ ಇದನ್ನು ಸ್ಪಷ್ಟಗೊಳಿಸಬಲ್ಲೆ.

**ಹುಲಿ :** ಅದೇ ನಮಗೆ ಬೇಕಾದ ಮುಖ್ಯ ಸಂಗತಿ. ಅದನ್ನೇ ನಾವೀಗ ಕೇಳುತ್ತಿರುವುದು.

**ನದಿ :** ಕುಡಿಯಲು, ಮೀಯಲು, ಪಾತ್ರೆ ಪದಾರ್ಥಗಳನ್ನು ತೊಳೆಯಲು ಜನರು ನನ್ನ ನೀರನ್ನು ಬಳಸುತ್ತಾರೆ. ಸ್ವಚ್ಛತೆಗೆ, ನೈರ್ಮಲ್ಯಕ್ಕೆ ನನ್ನ ನೀರು ಅನಿವಾರ್ಯ. ಕೃಷಿ-ಕೈಗಾರಿಕೆಗಳಿಗೂ ನನ್ನ ನೀರು ಬೇಕೇ ಬೇಕು. ವಿದ್ಯುತ್ ಉತ್ಪಾದನೆ, ಮೀನುಗಾರಿಕೆ, ಸಾರಿಗೆ, ಸೌಕರ್ಯ, ವಿನೋದ ವಿಹಾರಗಳಿಗೂ ಮಾನವರು ನನ್ನ ನೀರನ್ನು ಬಳಸುತ್ತಾರೆ. ಆದರೆ ನನ್ನ ಕಡೆಗೆ ಪ್ರತ್ಯುಪಕಾರ ಬುದ್ಧಿ ಮಾತ್ರ ಅವರಲ್ಲಿಲ್ಲ.

**ಮಾದ :** ನದಿಯಮ್ಮಾ, ನಿನ್ನ ಮಾತನ್ನು ಸ್ಪಷ್ಟಗೊಳಿಸಬೇಕು. ಉದಾಹರಣೆ ಸಹಿತ ಸ್ಪಷ್ಟಗೊಳಿಸಬೇಕು.

**ನದಿ :** ಅದನ್ನೇ ಹೇಳುತ್ತಿದ್ದೇನೆ. ಈಗ ಮನುಷ್ಯರೂ ಸೇರಿದಂತೆ ಸಾವಿರಾರು ಜೀವರಾಶಿಗಳು ಕುಡಿವ ನೀರು ನನ್ನದು. ಕೊಳೆಯನ್ನು ಮಲಿನತೆಯನ್ನು-ಹೋಗಲಾಡಿಸುವ ನೀರು ನನ್ನದು. ಆದರೆ ನನ್ನ ನೀರನ್ನು ಮಲಿನಗೊಳಿಸುವುದರಲ್ಲಿ ಮನುಷ್ಯರೇ ಮೊದಲಿಗರು; ಪ್ರಮುಖರು.

**ಮಾದ :** ಅದು ಹೇಗೆ? ನಿನ್ನ ನೀರಿಗೆ ಅವರೇನು ಮಾಡುತ್ತಾರೆ?

**ನದಿ :** ಅವರು ಎಲ್ಲೆಲ್ಲೋ ಹೋಗುತ್ತಾರೆ. ಏನೇನೋ ಮಾಡುತ್ತಾರೆ ಬಟ್ಟೆ ತುಂಬ ಮೈತುಂಬ ಕೊಳೆ ಹತ್ತಿಸಿಕೊಂಡು ಬರುತ್ತಾರೆ. ಮತ್ತೆ ಅದೆಲ್ಲವನ್ನೂ ತಂದು ನನ್ನ ನೀರಿನಲ್ಲಿ ಬಿಟ್ಟು ಬಿಡುತ್ತಾರೆ. ದಾರಿಹೋಕರ ದಣಿವಾರಿಸಿ ತಂಪು ನೀಡುವವಳು ನಾನು. ಆದರೆ ಅವರೇನು ಮಾಡುತ್ತಾರೆ ಗೊತ್ತೆ? ನನ್ನ ಎದೆಯ ಮೇಲೆಯೇ ನಿಂತು, ನನ್ನ ತಣ್ಣೀರಿನಲ್ಲೇ ಬಾಯಿ ಮುಕ್ಕಳಿಸುತ್ತಾರೆ ಮತ್ತು ಆ ಎಂಜಲು ನೀರನ್ನು ನನ್ನ ಮುಖಕ್ಕೇ ಉಗುಳಿ ಬಿಡುತ್ತಾರೆ. ಕಾರ್ಖಾನೆಗಳನ್ನೋ ಕರ್ಮಶಾಲೆಗಳನ್ನೋ ನಡೆಸುವವರು ಅವುಗಳ ಕೊಳಕು ನೀರನ್ನು, ವಿಷ ತುಂಬಿದ ರಾಸಾಯನಿಕ ವಸ್ತುಗಳನ್ನು ನನ್ನಲ್ಲಿಗೇ ಹರಿಸಿ ಬಿಡುತ್ತಾರೆ. ಆಗ ನನ್ನ ಹೊಟ್ಟೆಯ ಮಕ್ಕಳಂತಿರುವ ಮೀನು, ಕಪ್ಪೆ, ಏಡಿ, ಹಾವು ಇತ್ಯಾದಿಗಳೆಲ್ಲ ಸಾಯುತ್ತವೆ. ನನ್ನ ನೀರು ಕುಡಿವ ಪ್ರಾಣಿ-ಪಕ್ಷಿಗಳೂ ಸತ್ತು ಬೀಳುತ್ತವೆ.

**ಹುಲಿ :** ಮಾದಾ, ನಿನ್ನ ಸಂತಾನದವರು-ಮನುಷ್ಯರು-ಎಂಥ ಅನ್ಯಾಯಗಾರರು ಗೊತ್ತಾಯಿತೆ ನಿನಗೆ?

**ನದಿ :** ಅವರ ಅನ್ಯಾಯ ಇಷ್ಟಕ್ಕೇ ಮುಗಿಯುವುದಿಲ್ಲ. ಹೇಳಿ ಮುಗಿಸಬಹುದಾದ ಸಂಗತಿ ಅದಲ್ಲ. ಪೇಟೆ ಪಟ್ಟಣಗಳ ಜನರಂತೂ ಬಚ್ಚಲು ಮನೆ. ಪಾಯಿಖಾನೆ, ಚರಂಡಿಗಳ ಹೊಲಸು ನೀರನ್ನೆಲ್ಲ ನನ್ನೆಡೆಗೇ ಕಳಿಸಿ ಬಿಡುತ್ತಾರೆ. ಇನ್ನೂ ಹೇಳಬೇಕೆಂದರೆ ನನ್ನನ್ನೆ ಕಕ್ಕಸಿನಂತೆ ಬಳಸುವ ಅವಿವೇಕಿಗಳೂ ಮನುಷ್ಯರಲ್ಲಿದ್ದಾರೆ. ಅವರ ವರ್ತನೆಯಿಂದ ನಾನು ರೋಸಿ ಹೋಗಿದ್ದೇನೆ. ದೇವರು ಇನ್ನಾದರೂ ಅವರಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ, ನನ್ನ ವಿಚಾರವನ್ನೆಲ್ಲ ನಿಮ್ಮ ಮುಂದೆ ಇರಿಸಿದ್ದೇನೆ. ಮನುಷ್ಯರು ಕೃತಜ್ಞರೋ ಕೃತಘ್ನರೋ ನೀವೇ ತೀರ್ಮಾನಿಸಿಕೊಳ್ಳಿ.

**ಹುಲಿ :** ನದಿಯಮ್ಮಾ, ನಿನ್ನ ಮನದಲ್ಲಿದ್ದುದನ್ನು ಸ್ಪಷ್ಟವಾಗಿ ಹೇಳಿದ್ದೀಯಾ. ಮನುಷ್ಯರಲ್ಲಿ ಸ್ಮರಣೆ ಇಲ್ಲ ಎಂಬುದಕ್ಕೆ ಬಲವಾದ ಸಾಕ್ಷಿ ನಿನ್ನದು. ಧನ್ಯವಾದಗಳು, ನಾವಿನ್ನು ಬರುತ್ತೇವೆ. ನಮಸ್ಕಾರ!

**ನದಿ :** ನಮಸ್ಕಾರ.

**ಹುಲಿ :** ಮಾದಾ, ಐದರಲ್ಲಿ ನಾಲ್ಕು ಸಾಕ್ಷಿಗಳು ನನ್ನ ಪರವಾದವು ನೆನಪಿದೆಯಷ್ಟೆ?

**ಮಾದ :** ಹೌದು. ನೆನಪಿದೆ. ನಾನಿನ್ನು ನಿರಾಶನಾಗಿಲ್ಲ. ಇನ್ನೂ ಒಂದು ಸಾಕ್ಷಿ ಉಳಿದಿದೆಯಲ್ಲ?

**ಹುಲಿ :** ಅದರ ವಿಚಾರಣೆ ಮುಗಿದಾಗ ನಿನ್ನ ಆಸೆಯು ಕೊನೆಗೊಂಡೀತು.

## ದೃಶ್ಯ – ೬

**ಮೇಳದವರು**

**ಹೀಗೆ ಮಾತಾಡುತ್ತ ನಡೆದಿರೆ ಅವರಲ್ಲಿ**
**ಆಗ ಕಂಡರು ಮಂಗವೊಂದು**
**ಬೇಗ ಬೇಗನೆ ಮರಗಳಲಿ ಸಂತಸದಿಂದ**
**ಲಾಗ ಹೊಡೆಯುವುದನ್ನು ಅಂದು**

**ಮಾದ :** ಹುಲಿಯಣ್ಣಾ, ಅಗೋ ಅಲ್ಲಿ ನೋಡು.

**ಹುಲಿ :** ಮಂಗಣ್ಣ! ಭಾರೀ ಖುಷಿಯಲ್ಲಿದ್ದಾನೆ ಮರದಿಂದ ಮರಕ್ಕೆ, ಗೆಲ್ಲಿನಿಂದ ಗೆಲ್ಲಿಗೆ ಜಿಗಿಯುತ್ತ ಇದ್ದಾನೆ.

**ಮಾದ :** ಹೌದು. ಅವನನ್ನು ಒಂದು ಮಾತು ಕೇಳೋಣವೇ:

**ಹುಲಿ :** ಆಗಲಿ ಅದಕ್ಕೇನಂತೆ?

**ಮಾದ :** ಈಗಿನ ಸರದಿ ನನ್ನದು ತಾನೆ?

**ಹುಲಿ :** ಹೌದು ನೀನೇ ಮಾತಾಡಿಸು. ನಿನ್ನ ಅಜ್ಜನಂತೆಯೇ ಇದ್ದಾನೆ. ಅವನಾದರೂ ನಿನ್ನ ಪರವಾಗಿ ಸಾಕ್ಷಿ ನುಡಿಯುತ್ತಾನೋ ನೋಡೋಣ.

**ಮಾದ :** ಮಂಗಣ್ಣಾ ನಿನ್ನಿಂದ ನಮಗೊಂದು ಉಪಕಾರ ಆಗಬೇಕಲ್ಲ?

**ಮಂಗ :** ಏನು, ನನ್ನಿಂದ ಉಪಕಾರವೇ? ಏನಾಗಬೇಕು ಹೇಳು?

**ಮಾದ :** ಈ ಹುಲಿಯಣ್ಣ ಬೋನಿನಲ್ಲಿ ಬಿದ್ದಿದ್ದ. ನಾನು ಅವನನ್ನು ಬಿಡುಗಡೆಗೊಳಿಸಿದೆ. ಈಗ ಇವನು ನನ್ನನ್ನೇ ತಿನ್ನುವುದಾಗಿ ಬೆದರಿಸುತ್ತಿದ್ದಾನೆ. ಮನುಷ್ಯರು ಸಹ ಉಪಕಾರಕ್ಕೆ ಪ್ರತಿ ಉಪಕಾರ ಮಾಡುವುದಿಲ್ಲ. ತಾನು ಹೀಗೆ ಮಾಡುವುದು ತಪ್ಪಲ್ಲ ಎನ್ನುತ್ತಾನೆ ಈತ. ದಯಮಾಡಿ ನಿನ್ನ ಅಭಿಪ್ರಾಯ ತಿಳಿಸು. ಈ ಸಂಕಟದಿಂದ ನನ್ನನ್ನು ಉಳಿಸು.

**ಹುಲಿ :** ಏ ಮಾದಾ, ಮನುಷ್ಯರ ವರ್ತನೆಯ ಬಗ್ಗೆ ಮಾತ್ರ ಕೇಳು. ನಿನ್ನ ಗೋಳು ಹೇಳಿಕೊಳ್ಳಬೇಡ. ಅವನ ಮನಸ್ಸನ್ನು ತಿರುಗಿಸಬೇಡ.

**ಮಂಗ :** ಹುಲಿಯಣ್ಣಾ, ಮನುಷ್ಯರಲ್ಲಿ ಪ್ರತ್ಯುಪಕಾರ ಬುದ್ಧಿ ಇರಲೂಬಹುದು, ಇಲ್ಲದಿರಲೂಬಹುದು. ನಿನಗೆ ಅದೊಂದು ಸಮಸ್ಯೆಯಾಗಿ ಕಾಣಿಸುವುದೇ ಇಲ್ಲ.

**ಹುಲಿ :** ಹಾಗಾದರೆ ನಿನಗಿರುವ ಸಮಸ್ಯೆ ಯಾವುದು?

**ಮಂಗ :** ನನಗೆ ಸಮಸ್ಯೆ ಇಲ್ಲ. ಈ ಮನುಷ್ಯನ ಮಾತಿನಲ್ಲಿ ಸಂದೇಹ ಮಾತ್ರ ಇದೆ.

**ಹುಲಿ :** ಯಾವ ಮಾತಿನಲ್ಲಿ?

**ಮಂಗ :** ದೊಡ್ಡ ಹುಲಿರಾಯ ನೀನು ನಿನ್ನಂಥವರು ಬೋನಿನೊಳಗೆ ಬಿದ್ದಿರುವುದೆ? ಕಣ್ಣಾರೆ ಕಂಡ ಹೊರತು ನಾನಿದನ್ನು ನಂಬುವಂತಿಲ್ಲ.

**ಮಾದ :** ನಾನು ಸುಳ್ಳಾಡಿಲ್ಲ ಮಂಗಣ್ಣಾ. ಮತ್ತೆ ನಿನಗೇಕೆ ಸಂದೇಹ?

**ಮಂಗ :** ನಾನು ಹಲವು ಬೋನುಗಳನ್ನು ಕಂಡವನು. ಬೋನುಗಳೆಲ್ಲ ಚಿಕ್ಕವೇ ಇರುತ್ತವೆ. ನಿನ್ನಂಥ ದೊಡ್ಡ ಹುಲಿ ಯಾವ ಬೋನಿನಲ್ಲೂ ಹಿಡಿಸುವಂತಿಲ್ಲ.

**ಹುಲಿ :** ಏ ಮಂಗಾ ನಾನೇ ಹೇಳುತ್ತೇನೆ. ಕಿವಿಗೊಟ್ಟು ಕೇಳಿಬಿಡು. ಬೋನಿನಲ್ಲಿ ನಾನು ಬಿದ್ದುದೂ ಹೌದು. ಈತ ನನ್ನನ್ನು ಬಿಡಿಸಿದ್ದೂ ಹೌದು. ಈಗ ನಂಬಿಕೆ ಬಂತಷ್ಟೆ?

**ಮಂಗ :** ಹುಲಿಯಣ್ಣಾ, ದಯವಿಟ್ಟು ಕೋಪಿಸಿಕೊಳ್ಳಬೇಡ. ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕಂತೆ. ಹಾಗೆ ಹಿರಿಯರು ಹೇಳಿದ್ದಾರೆ. ಹೀಗಿರುವಾಗ ನೋಡದಿದ್ದುದನ್ನು ನಾನಂತೂ ನಂಬಲಾರೆ. ಸಂಗತಿ ಇದ್ದುದನ್ನು ಇದ್ದಂತೆ ಒಮ್ಮೆ ತೋರಿಸಿಬಿಡಿ ಮರುಕ್ಷಣದಲ್ಲೆ ನನ್ನ ತೀರ್ಮಾನ ಹೇಳುತ್ತೇನೆ.

**ಹುಲಿ :** ಈ ಮಂಗನಿಗೆ ಮಂಡೆ ಇದೆ. ಒಳಗಡೆ ಮಾತ್ರ ಏನೂ ಇಲ್ಲ. ಹಾಗಾಗಿ ಹೇಳಿದ ಮಾತಿನ ಅರ್ಥವೂ ಆಗುವುದಿಲ್ಲ; ಅದರಲ್ಲಿ ನಂಬಿಕೆಯೂ ಬರುವುದಿಲ್ಲ. ಬರೇ ಹುಚ್ಚಪ್ಪ ಇದು.

**ಮಾದ :** ಏನೇ ಆಗಲಿ ಹುಲಿಯಣ್ಣಾ. ನಾವೀಗ ಬೋನಿನ ಬಳಿಗೆ ಹೋಗೋಣ. ನಡೆದಿದನ್ನು ಪ್ರತ್ಯಕ್ಷ ತೋರಿಸಿ ಬಿಡೋಣ. ಅನಂತರವೇ ಮಂಗಣ್ಣ ತನ್ನ ಅಭಿಪ್ರಾಯ ತಿಳಿಸಲಿ.

**ಹುಲಿ :** ಈ ಮಂಗನನ್ನು ವಿಚಾರಿಸಿದ್ದೇ ತಪ್ಪಾಯಿತು. ಹೂಂ, ನಡೆಯಿರಿ, ಬೋನು ಇದ್ದಲ್ಲಿಗೆ ಹೋಗಿ ಬರೋಣ. ಈಗಲೇ ಬಹಳ ತಡವಾಯಿತು. ಇನ್ನು ಹಸಿವನ್ನು ತಡೆಯುವುದು ನನ್ನಿಂದ ಸಾಧ್ಯವಿಲ್ಲ.

## ದೃಶ್ಯ – ೭

**ಮೇಳದವರು**

**ಹುಲಿಯಣ್ಣ ಮಾದಣ್ಣ ಮಂಗಣ್ಣ ಜೊತೆಗೂಡಿ**
**ಕೆಲಬಲ ನೋಡದೆ ನಡೆದು ಬಂದರು ಬೇಗ**
**ನಿಲಿಸಿದ್ದ ಬೋನಿನ ಬಳಿಗೆ**

**ಮಾದ :** ಮಂಗಣ್ಣಾ, ಬೋನು ಇರುವ ಜಾಗ ಬಂದೇ ಬಿಟ್ಟಿತು ನೋಡು.

**ಮಂಗ :** ಈ ಹುಲಿಯಣ್ಣ ಇದ್ದ ಬೋನು ಇದೇ ಏನು?

**ಮಾದ :** ಹೌದು, ಈ ಬೋನಿನಲ್ಲೇ ಆತ ಸಿಕ್ಕಿ ಬಿದ್ದಿದ್ದ.

**ಮಂಗ :** ಹುಲಿಯಣ್ಣಾ, ಈ ಮನುಷ್ಯ ಇಲ್ಲಿ ಬಂದಾಗ ನೀನು ಇದರೊಳಗೆ ಹೇಗೆ ಇದ್ದೆ? ಏನು ಮಾಡುತ್ತಿದ್ದೆ? ಸರಿಯಾಗಿ ತೋರಿಸಿ ಬಿಡು.

**ಹುಲಿ :** (ಬೋನಿನೊಳಗೆ ಹೋಗುತ್ತ) ಏ ಮಂದಬುದ್ಧಿಯ ಮಂಗಾ, ಈ ಮನುಷ್ಯ ಇಲ್ಲಿ ಬಂದಾಗ ನಾನು ಈ ಬೋನಿನೊಳಗೆ ಹೀಗೆ ಇದ್ದೆ ನೋಡು.

**ಮಂಗ :** (ಮಾದನೆಡೆ ತಿರುಗಿ) ಏನಣ್ಣಾ, ಈ ಹುಲಿಯಣ್ಣ ಹೇಳುವುದು ನಿಜವೆ?

**ಮಾದ :** ಹೌದು. ಹೌದು. ಹುಲಿಯಣ್ಣ ಹೇಳುವುದು ನಿಜ ಬೋನಿನೊಳಗೆ ಅವನು ಇದ್ದ.

**ಮಂಗ :** ಬಾಗಿಲು ಹೇಗಿತ್ತು? ಈಗ ಇರುವ ಹಾಗೆ ತೆಗೆದುಕೊಂಡೇ ಇತ್ತೇ?

**ಮಾದ :** ಇಲ್ಲ. ಇಲ್ಲ. ಬಾಗಿಲು ಹೀಗೆ ಹಾಕಿಕೊಂಡಿತ್ತು. (ಬಾಗಿಲು ಹಾಕುವನು)

**ಮಂಗ :** ಸರಿ. ಸರಿ. ಈಗ ಎಲ್ಲ ಅರ್ಥವಾಯಿತು. ಹುಲಿಯಣ್ಣ ಹೀಗೆ ಬೋನಿನಲ್ಲಿದ್ದ. ಬಾಗಿಲು ಹೀಗೇ ಮುಚ್ಚಿಕೊಂಡಿತ್ತು. ಹೌದು ತಾನೇ?

**ಮಾದ :** ಹೌದು ಹೌದು. ಹೀಗೇ ಇತ್ತು.

**ಮಂಗ :** ಈ ಬಾಗಿಲು ಹೀಗೇ ಇರಲಿ. ಹುಲಿಯಣ್ಣಾ ನೀನಿಲ್ಲಿ ಹಾಯಾಗಿ ಮಲಗಿ ಬಿಡು. ನಾವಿನ್ನು ಬರುತ್ತೇವೆ.

**ಹುಲಿ :** ಏ ಮಂಗಾ, ಏನು ಬೊಗಳುತ್ತೀಯೇ ನೀನು?

**ಮಂಗ :** ನಾಯಿಗಳು ಮಾತ್ರ ಬೊಗಳುತ್ತವೆ ಮಂಗಣ್ಣಾ, ಅಷ್ಟೂ ಗೊತ್ತಿಲ್ಲವೆ ನಿನಗೆ? ಆಗ ನೀನೇ ಅಂದೆಯಲ್ಲ, ನನಗೆ ಮಂಡೆ ಇದೆ; ಒಳಗಡೆ ಏನೂ ಇಲ್ಲ ಎಂದು. ಈಗ ನಿನ್ನ ಮಂಡೆಯೊಳಗೆ ಏನಿದೆ ಹೇಳು?

**ಹುಲಿ :** ಏ ಹುಚ್ಚಪ್ಪಾ. ಮೊದಲು ಬೋನಿನ ಬಾಗಿಲು ತೆಗೆ, ಮತ್ತೆ ಮಾತಾಡು.

**ಮಂಗ :** ಹುಲಿಯಣ್ಣಾ, ನಾನು ಹುಚ್ಚಪ್ಪ ಹೌದಾದರೆ ಖಂಡಿತ ಬಾಗಿಲು ತೆಗೆಯುತಿದ್ದೆ. ನಾನು ಹುಚ್ಚನಲ್ಲ. ಹಾಗಾಗಿ ಬಾಗಿಲು ತೆಗೆಯುವುದಿಲ್ಲ. ಈ ಮನುಷ್ಯನೂ ಹುಚ್ಚಪ್ಪ; ಬೋನಿನಲ್ಲಿ ಸಿಕ್ಕಿಬಿದ್ದುದು ಮಾತ್ರವಲ್ಲದೆ ತನ್ನ ಜೀವ ಉಳಿಸಿದವನನ್ನೇ ಕೊಲ್ಲ ಬಯಸಿದ ನೀನೂ ಹುಚ್ಚಪ್ಪ.

**ಹುಲಿ :** ಏ ಮಂಗಣ್ಣಾ, ಬಾಗಿಲು ತೆಗೆ. ಏ ಮಾದಣ್ಣಾ, ಬಾಗಿಲು ತೆಗೆ ಇದು ಅನ್ಯಾಯ, ಶುದ್ಧ ಅನ್ಯಾಯ. ಶುದ್ಧ ಅನ್ಯಾಯ….

**ಮಂಗ ಮತ್ತು ಮಾದ :** (ನರ್ತಿಸುತ್ತ) ಶುದ್ಧ ಅನ್ಯಾಯ ಇದು-ಶುದ್ಧ ಅನ್ಯಾಯ/ ಹುಲಿಯೆ ನೀನು ಮಾಡಿದುದು/ ಶುದ್ಧ ಅನ್ಯಾಯ.

**ಮಾದ :** ಗೂಡಿನಿಂದ ಬಿಡಿಸು ಎಂದು ಬೇಡಿ ಕಾಡಿದೆ. ನಿನ್ನ ಪ್ರಾಣ ಉಳಿಸಿದವನ ಕೊಲ್ಲಲು ನೋಡಿದೆ.

**ಇಬ್ಬರೂ :** ಶುದ್ಧ ಅನ್ಯಾಯ ಇದು ಶುದ್ಧ ಅನ್ಯಾಯ….

**ಹುಲಿ :** ಮಂಗಣ್ಣಾ, ದಯವಿಟ್ಟು ಇಲ್ಲಿ ಕೇಳು. ಕ್ಷಣಕಾಲ ನಿನ್ನ ಹಾಡು ಕುಣಿತ ನಿಲ್ಲಿಸು. ನಾನೊಂದು ಕಾಡುಪ್ರಾಣಿ. ಹೆಚ್ಚು ತಿಳುವಳಿಕೆ ಇಲ್ಲದವನು. ಆದಾಗ್ಯೂ ಹಸಿವು ಹಿಂಗಿಸಲು ಮಾತ್ರ ನಾನು ಹಿಂಸೆ ಮಾಡುತ್ತೇನೆ; ಪ್ರಾಣಿಗಳನ್ನು ಕೊಲ್ಲುತ್ತೇನೆ. ಆದರೆ ಮನುಷ್ಯನ ಸಂಗತಿಯೇ ಬೇರೆ. ಆರೋಗ್ಯ ಜೀವನಕ್ಕೆ ಆಧಾರವಾದ ನೀರಿಗೂ ಆತ ವಿಷ ಬೆರಸುತ್ತಾನೆ. ಹಣದಾಸೆಗಾಗಿ ಜಗತ್ತಿನ ಉಳಿವಿಗೆ-ಚೆಲುವಿಗೆ ಅನಿವಾರ್ಯವಾದ ಕಾಡನ್ನೂ ನಾಶ ಮಾಡುತ್ತಾನೆ. ಕೇವಲ ನಾಲಿಗೆಯ ಚಪಲಕ್ಕಾಗಿ ಪ್ರೀತಿಯಿಂದ ಸಾಕಿದ ಪ್ರಾಣಿ ಪಕ್ಷಿಗಳನ್ನು ಸಹ ಕೈಯಾರೆ ಕೊಲ್ಲುತ್ತಾನೆ. ಹೀಗಿದ್ದರೂ ಈಗ ನೀನೇನು ಮಾಡಿದೆ ನೋಡು. ನನ್ನ ತುತ್ತನ್ನು ಕಸಿದುಕೊಂಡೆ. ನನ್ನನ್ನು ಬೋನಿನಲ್ಲಿ ಸಾಯಲು ಬಿಟ್ಟೆ. ನಿನ್ನ ಸಂತಾನದವನೇ ಆದ ಈ ಮನುಷ್ಯನ ಪ್ರಾಣವನ್ನು ಬದುಕಿಸಿಬಿಟ್ಟೆ. ಸ್ವಜನ ಪಕ್ಷಪಾತ ಮಾಡಿದೆ. ಇಲ್ಲೀಗ ಅನ್ಯಾಯ ಮಾಡಿದವರು ಯಾರು? ನೀನೇ? ನಾನೇ? ತಿಳಿದವರು ನಿರ್ಣಯಿಸಲಿ.

ನಾನಂತೂ ನಮ್ಮ ಬಡಜನರ ಹಾಗೆ ಈ ಕಷ್ಟದ ಕತ್ತಲು ಕಳೆದಾಗ ಸುಖದ ಹಗಲು ಬಂದೀತೆಂದು ಕಾಯುತ್ತಲೇ ಇರುತ್ತೇನೆ.

-ತೆರೆ-

# ಸೋದರರ ಸಾಹಸ

## ಲೇಖಕನ ಮಾತು

ಇದೊಂದು ಮಕ್ಕಳ ಕಥಾಸಂಗ್ರಹ. ಇಲ್ಲಿನ ಕತೆಗಳೆಲ್ಲ ಸರಳ ಭಾಷೆಯಲ್ಲಿವೆ. ಪರೋಕ್ಷವಾಗಿ ನೀತಿಬೋಧಕವೂ ಆಗಿವೆ. ನಾಡಿನ ಮಕ್ಕಳು ಇವುಗಳ ಸದುಪಯೋಗ ಮಾಡಿಕೊಂಡರೆ ನನ್ನ ಶ್ರಮ ಸಾರ್ಥಕ.

ಈ ಕಿರು ಹೊತ್ತಗೆಯು ಬೆಳಕು ಕಾಣಲು ಕಾರಣರಾದವರು ನನ್ನ ಬಂಧುಗಳೂ, ಪ್ರೋತ್ಸಾಹಕರೂ ಆದ ಶ್ರೀ ಕೊಡೆತ್ತೂರು ಭುವನಾಭಿರಾಮ ಉಡುಪ, ಒಡೆಯರು, ಯುಗಪುರುಷ ಪ್ರಕಟಣಾಲಯ ಕಿನ್ನಿಗೋಳಿ ಅವರು. ಶ್ರೀಯುತರಿಗೆ ನನ್ನ ಅನಂತ ವಂದನೆಗಳು.

ಈ ಪುಸ್ತಕಕ್ಕೆ ಅಂದವಾದ ಚಿತ್ರಗಳನ್ನು ರಚಿಸಿ ಕೊಟ್ಟವರು ನನ್ನ ಕಲಾವಿದ ಮಿತ್ರ ಶ್ರೀ ಬಾಲ ಮಧುರ ಕಾನನ, ಬೇಳ ಅವರು. ಇದನ್ನು ಅಂದವಾಗಿ ಮುದ್ರಿಸಿ ಕೊಟ್ಟವರು ಯುಗಪುರುಷ ಮುದ್ರಣಾಲಯದ ಸಿಬ್ಬಂದಿ ವರ್ಗದವರು. ಅವರೆಲ್ಲರಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.

ಕಳೆದ ಐದು ದಶಕಗಳ ನನ್ನ ಸಾಹಿತ್ಯ ಸೇವೆಯಲ್ಲಿ ನನಗೆ ಮಹದುಪಕಾರ ಮಾಡಿದವರು ದಿ| ಕೊ. ಅ. ಉಡುಪ, ಕಿನ್ನಿಗೋಳಿ ಮತ್ತು ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು. ಅವರಿಬ್ಬರೂ ನನಗೆ ಚಿರಸ್ಮರಣೀಯರು.

**ಪಳಕಳ ಸೀತಾರಾಮ ಭಟ್ಟ**
ಶಿಶು ಸಾಹಿತ್ಯ ಮಾಲೆ
ಮಿತ್ತ ಬೈಲು

# ಪ್ರಕಾಶಕರ ಮಾತು

*ಶ್ರೀಯುತ ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗಾಗಿ ಬರೆದಿರುವ ಕವನಗಳು, ಕಥನ ಕವನಗಳು, ರೂಪಕ, ಕತೆಗಳು, ಪ್ರಹಸನ, ನಾಟಕ, ಜೀವನ ಚರಿತ್ರೆ, ಪತ್ರಲೇಖನ, ಚುಟುಕುಗಳು ನೇರವಾಗಿ ಮಕ್ಕಳ ಮನ ಮುಟ್ಟುವಂತಿದೆ. ಶಿಶು ಸಾಹಿತ್ಯ ಮಾಲೆಯ ಮೂಲಕ ಮಕ್ಕಳಿಗಾಗಿ ಸಿಹಿ ತಿನಿಸನ್ನು ನೀಡುತ್ತಾ ಬಂದಿರುವ ಶ್ರೀ ಪಳಕಳರ ಬಹುತೇಕ ಸತ್ಕೃತಿಗಳು ನಮ್ಮ ಪ್ರಕಟಣಾಲಯದ ಮೂಲಕ ಪ್ರಕಟವಾಗಿವೆ.*

*ಶಿಶು ಸಾಹಿತ್ಯ ಮಾಲೆಯ ಮೂಲಕ ಹೊಸ ಆಯಾಮವನ್ನೇ ಪರಿಕಲ್ಪಿಸಿ ಸಾರಸ್ವತ ಲೋಕದಲ್ಲಿ ಸ್ವಂತ ನಡಿಗೆಯಲ್ಲಿ ಮುನ್ನಡೆಯುತ್ತಿರುವ ಶ್ರೀ ಪಳಕಳ ಸೀತಾರಾಮ ಭಟ್ಟರ "ಸೋದರರ ಸಾಹಸ' ಮಕ್ಕಳ ಕತೆಗಳನ್ನು ನಮ್ಮ ಪ್ರಕಟಣಾಲಯ ೩೮೯ ನೇ ಕೃತಿಯಾಗಿ ಓದುಗರ ಸಮ್ಮುಖದಲ್ಲಿರಿಸಲು ಸಂತೋಷ ಪಡುತ್ತೇವೆ. ಶ್ರೀ ಪಳಕಳರಿಗೆ ನಮ್ಮ ವಂದನೆಗಳು.*

*ಈ ಕೃತಿಯ ಅಚ್ಚುಕಟ್ಟಿನ ಅಚ್ಚಿನ ದಿಶೆಯಲ್ಲಿ ಸಹಕರಿಸಿದ ಯುಗಪುರುಷದ ಕಾರ್ಯಕರ್ತರೆಲ್ಲರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳು.*

**ಕೊಡೆತ್ತೂರು ಭುವನಾಭಿರಾಮ ಉಡುಪ**
ಪ್ರಕಾಶಕ, ಕಿನ್ನಿಗೋಳಿ

# ಸೋದರರ ಸಾಹಸ

ರವಿ ಮತ್ತು ಶಂಕರ ಒಂದೇ ಮನೆಯವರು. ಅಣ್ಣ ತಮ್ಮಂದಿರ ಮಕ್ಕಳು. ರವಿ, ಅಣ್ಣನ ಮಗ; ಹಳ್ಳಿಯ ಮನೆಯಲ್ಲಿ ಇರುತ್ತಿದ್ದ. ಶಂಕರ ತಮ್ಮನ ಮಗ. ಅವನು ಬೆಂಗಳೂರಿನಲ್ಲಿ ವಾಸಿಸುತ್ತಿದ್ದ. ಅವರಿಬ್ಬರೂ ಒಂದೇ ವಯಸ್ಸಿನವರು; ಹೈಸ್ಕೂಲ್ ವಿದ್ಯಾರ್ಥಿಗಳು. ಶಾಲೆಗೆ ರಜೆ ಸಿಕ್ಕಿದಾಗ ಶಂಕರ ಊರಿಗೆ ಬರುತ್ತಿದ್ದ. ಆಗ ಇಬ್ಬರಿಗೂ ಖುಶಿಯೋ ಖುಶಿ.

ಕೆಲವು ದಿನಗಳ ಹಿಂದೆ ಶಾಲೆಗಳಿಗೆ ಬೇಸಗೆ ರಜೆ ದೊರಕಿತ್ತು. ನಿನ್ನೆ ಶಂಕರ ಊರಿಗೆ ಬಂದಿದ್ದ. ರವಿಗೆ ಬಹಳ ಸಂತೋಷವಾಗಿತ್ತು. ಹಗಲಿಡೀ ಅವರು ಎಲ್ಲೆಲ್ಲೋ ಸುತ್ತಿದ್ದರು. ರಾತ್ರೆ ನಿದ್ರೆ ಬರುವ ತನಕವೂ ಅವರು ಮಾತುಕತೆ ನಡೆಸಿದ್ದರು. ಆಗಲೇ ಶಂಕರ ನೆನಪಿಸಿದ್ದ. "ನಾಳೆ ಮುಂಜಾನೆ ದೊಡ್ಡ ಬೆಟ್ಟಕ್ಕೆ ಹೋಗೋಣ. ಸೂರ್ಯೋದಯದ ನೋಟವನ್ನು ಕಣ್ತುಂಬ ನೋಡೋಣ"

"ಆಗಲಿ ಶಂಕರ್, ಅದಕ್ಕೇನಂತೆ" ರವಿ ಒಪ್ಪಿಗೆ ಸೂಚಿಸಿದ್ದ. ಆ ಬಳಿಕ ಅವರು ನಿದ್ದೆ ಹೋಗಿದ್ದರು.



ರವಿಯ ಮನೆ ಇದ್ದುದು ಗುಡ್ಡವೊಂದರ ತಪ್ಪಲಲ್ಲಿ. ಕಡಿದಾಗಿ, ಎತ್ತರವಾಗಿತ್ತು ಆ ಗುಡ್ಡ. ಅದನ್ನು ದೊಡ್ಡ ಬೆಟ್ಟ ಎನ್ನುತ್ತಿದ್ದರು. ಅದರ ಎದುರಿಗೆ ಇನ್ನೊಂದು ಗುಡ್ಡವಿತ್ತು. ಅದನ್ನು ಸಣ್ಣ ಬೆಟ್ಟ ಎಂದು ಕರೆಯುತ್ತಿದ್ದರು. ಅದರಲ್ಲಿ ಹಲವಾರು ಬಂಡೆಗಳಿದ್ದವು. ಕೆಲವು ಬಂಡೆಗಳ ಎಡೆಗಳಲ್ಲಿ ಗವಿಗಳಿದ್ದವು. ಎರಡು ಗುಡ್ಡಗಳಲ್ಲೂ ಮರಗಿಡ ಬಳ್ಳಿಗಳು ಬೆಳೆದಿದ್ದವು. ಆ ಗುಡ್ಡಗಳ ನಡುವಿನ ತಗ್ಗಿನಲ್ಲಿ ತೋಡೊಂದು ಹರಿಯುತ್ತಿತ್ತು. ರವಿ-ಶಂಕರರಿಗೆ ಆ ಗುಡ್ಡಗಳಲ್ಲಿ ತಿರುಗಾಡುವುದೆಂದರೆ ಬಹಳ ಇಷ್ಟ. ಹಾಗಾಗಿಯೇ ಶಂಕರ ಆ ಪ್ರಸ್ತಾವ ಎತ್ತಿದ್ದ. ರವಿ ಅದಕ್ಕೆ ಒಪ್ಪಿಗೆ ಸೂಚಿಸಿದ್ದ.

ಮರುದಿನ ಮುಂಜಾನೆ ರವಿಗೆ ಬೇಗನೆ ಎಚ್ಚರವಾಯಿತು. ಅವನು ಶಂಕರ್ ನನ್ನು ಎಬ್ಬಿಸಿದ್ದ. ಇಬ್ಬರೂ ಹಲ್ಲುಜ್ಜಿ, ಮುಖ ತೊಳದರು" ಅಮ್ಮಾ, ನಾವು ಸ್ವಲ್ಪ ತಿರುಗಾಡಿ ಬರುತ್ತೇವೆ" ರವಿ ಅಮ್ಮನಿಗೆ ಹೇಳಿದ.

"ಐದು ನಿಮಿಷ ತಡೆಯಿರಿ. ನಾನು ಹಾಲು ಬಿಸಿಮಾಡಿ ತರುತ್ತೇನೆ" ಅದನ್ನು ಕುಡಿದು, ಮತ್ತೆ ಹೋಗುವಿರಂತೆ" ಅವರು ಹೇಳಿದರು. ಮಕ್ಕಳಿಬ್ಬರೂ ಹಾಲು ಕುಡಿದರು. ಬಳಿಕ ಹರಟೆ ಹೊಡೆಯುತ್ತ, ಗುಡ್ಡದತ್ತ ಹೆಜ್ಜೆ ಹಾಕಿದರು.

ದೊಡ್ಡ ಬೆಟ್ಟದ ನೆತ್ತಿಯ ಮೇಲೆ ಒಂದು ಮರ ಇತ್ತು. ಹತ್ತಾರು ಕೊಂಬೆಗಳಿಂದ ಕೂಡಿದ ಮರ ಅದು. ವಿಶಾಲವಾಗಿ ಹರಡಿಕೊಂಡಿತ್ತು. ಮಕ್ಕಳೂ ಅದನ್ನು ಹತ್ತುತ್ತಿದ್ದರು. ಅದರಲ್ಲಿ ಆಟವಾಡುತ್ತಿದ್ದರು. ಆ ಮರವೇರಿ ಕೂತರೆ ಊರೆಲ್ಲ ಕಾಣಿಸುತ್ತಿತ್ತು. ರವಿ ಮತ್ತು ಶಂಕರ್ ಬೆಟ್ಟದ ನೆತ್ತಿಗೆ ಬಂದರು. ತಮ್ಮ ಅಚ್ಚು ಮೆಚ್ಚಿನ ಮರವನ್ನು ಏರಿ ಕುಳಿತರು. ಸುತ್ತ ಮುತ್ತಣ ನೋಟಗಳನ್ನು ನೋಡಿದರು; ಸೂರ್ಯೋದಯದ ಚೆಲುವನ್ನು ಸವಿದರು.

ಆಗಲೇ, "ರವೀ, ನೋಡೋ ಅಲ್ಲಿ ಬಂಡೆಯ ಮಗ್ಗುಲಲ್ಲಿ ಯಾರೋ ನಿಂತಿದ್ದಾರಲ್ಲಾ!" ಶಂಕರ್ ಬೊಟ್ಟು ಮಾಡಿ ತೋರಿಸಿದ. ರವಿ ಅತ್ತ ನೋಟ ಹರಿಸಿದ. ಹೌದು, ಎದುರುಗಡೆ ಸಣ್ಣ ಬೆಟ್ಟದ ಬಂಡೆಯೊಂದರ ಮೇಲೆ ಯಾರೋ ಒಬ್ಬ ನಿಂತಿದ್ದಾನೆ. ಅವನು ಕಂದು ಬಣ್ಣದ ಅಂಗಿ-ಲುಂಗಿ ಧರಿಸಿದ್ದಾನೆ; ಕಳ್ಳನಂತೆ ಸುತ್ತ ಮುತ್ತ ನೋಡುತ್ತಿದ್ದಾನೆ. ರವಿ ಕಣ್ಣರಳಿಸಿ ನೋಡಿದ. ಆ ಬಂಡೆ ಬಹಳ ದೂರದಲ್ಲೇನೂ ಇರಲಿಲ್ಲ. ಹಾಗಾಗಿ ಬಂಡೆಯ ಮೇಲೆ ನಿಂತವನ ಗುರುತು ಸಿಕ್ಕಿ ಬಿಟ್ಟಿತು ಅವನಿಗೆ. "ಹೋ, ಅದು ಸಂಕು." ಅವನು ಮೆಲ್ಲನೆ ಉದ್ಗರಿಸಿದ."ಸಂಕು? ಯಾರವನು? ಎಲ್ಲಿಯವನು?" ಶಂಕರ್ ಕುತೂಹಲ ತೋರಿದ. "ಶ್ss ಮೆಲ್ಲಗೆ ಮಾತಾಡು. 'ಸಂಕು' ಎಂದರೆ ಸಂಕಪ್ಪ. ಅದು ಅವನ ಪೂರ್ಣ ಹೆಸರು. ಕಳ್ಳತನವೇ ಅವನ ವೃತ್ತಿ. ಅವನೊಬ್ಬ ಗಂಧ ಕಳ್ಳ; ನಮ್ಮೂರ ವೀರಪ್ಪನ್. ಊರಲ್ಲಿದ್ದ ನೂರಾರು ಗಂಧದ ಮರಗಳನ್ನೆಲ್ಲ ಕಡಿದು ನಾಶ ಮಾಡಿದವ" ರವಿ ಪರಿಚಯ ನೀಡಿದ.

"ಇಷ್ಟು ಮುಂಜಾನೆ ಅವನಿಗೆ ಅಲ್ಲೇನು ಕೆಲಸ? ಅವನೇನು ಮಾಡುತ್ತಿದ್ದಾನೆ?" ಮಾಡುವುದೇನು? ರಾತ್ರೆ ಎಲ್ಲೋ ಗಂಧದ ಮರ ಕಡಿದಿದ್ದಾನೆ. ಹಗಲು ಅದನ್ನು ಸಾಗಿಸಲು ಆಗುವುದಿಲ್ಲವಲ್ಲ? ಮನೆಯಲ್ಲಿ ಇರಿಸಿಕೊಳ್ಳುವುದೂ ಅಪಾಯ ತಾನೆ? ಹಾಗಾಗಿ ಕದ್ದ ಮಾಲನ್ನು ಬಚ್ಚಿಡಲು ಬಂದಿರಬೇಕು. ಆ ಬಂಡೆಯ ಎಡೆಯಲ್ಲಿ ಗವಿ ಇದೆ. ಅದರಲ್ಲಿ ಗಂಧವನ್ನು ಬಚ್ಚಿಡುತ್ತಾನೆ. ರಾತ್ರೆ ಅದರ ಸಾಗಾಟ ನಡೆಸುತ್ತಾನೆ" ಅವನು ವಿವರಿಸಿದ. ಅಷ್ಟರಲ್ಲೇ ಬಂಢೆಯ ಮೇಲೆ ಕಾಣಿಸಿದವ ಕಣ್ಮರೆಯಾಗಿದ್ದ.

"ಬಾ ಶಂಕರ್. ಮೊದಲು ನಾವು ಮನೆಗೆ ಹೋಗೋಣ. ಮತ್ತೆ ನಾವು ಆ ಗವಿಯ ಶೋಧ ಮಾಡೋಣ. ಅಲ್ಲಿ ಗಂಧ ಇದೆ ಎಂದಾದರೆ, ಫೋನ್ ಮಾಡಿ ಪೋಲೀಸರಿಗೆ ವಾರ್ತೆ ಮುಟ್ಟಿಸೋಣ." ರವಿ ಅವಸರಿಸಿದ. ಇಬ್ಬರೂ ಮರದಿಂದ ಕೆಳಗಿಳಿದರು, ಮನೆಗೆ ಧಾವಿಸಿದರು. ಒಡನೆ ರವಿ ಟಾರ್ಚ್ ಒಂದನ್ನು ಕೈಗೆ ತೆಗೆದುಕೊಂಡ, ಒಂದು ಕೋಲನ್ನು ಹಿಡಿದುಕೊಂಡ, ಇನ್ನೊಂದನ್ನು ಶಂಕರ್ ನಿಗೂ ನೀಡಿದ.

"ಈಗ ಸಂಕು ಅಲ್ಲಿಂದ ಹೊರಟು ಹೋಗಿರಬಹುದು. ಬಾ, ನಮ್ಮ ಪಾಲಿನ ಶೋಧಕಾರ್ಯ ಮುಗಿಸಿ ಬಿಡೋಣ." ಎನ್ನುತ್ತ ಅವನು ಹೊರಟೇ ಬಿಟ್ಟ. ಶಂಕರ್ ಅವನನ್ನು ಹಿಂಬಾಲಿಸಿದ. ಸದ್ದಾಗದಂತೆ ಅವರು ಬಂಡೆಯತ್ತ ನಡೆದರು. ಅಲ್ಲಿಗೆ ಹೋಗಲು ಸರಿಯಾದ ದಾರಿ ಇರಲಿಲ್ಲ. ಪೊದೆಗಳನ್ನು ಬದಿಗೆ ಸರಿಸುತ್ತಾ, ಅವರು ಮುಂದೆ ಸಾಗಿದರು. ಅಲ್ಲಲ್ಲಿ ಹಾದಿ ಬದಿಯ ಗಿಡಗಳು ಆಕಡೆ ಈಕಡೆ ಮಾಲಿದ್ದವು.

ಕೆಲವೆಡೆ ಅಸ್ಪಷ್ಟ ಹೆಜ್ಜೆ ಗುರುತುಗಳೂ ಕಾಣಿಸುತ್ತಿದ್ದವು. ಹುಡುಗರ ಮೈ ರೋಮಗಳು ನಿಮಿರಿ ನಿಂತವು. ಕಳ್ಳ ಹೆಜ್ಜೆಯಿಡುತ್ತಾ ಅವರು ಮುನ್ನಡೆದರು.

ಮಕ್ಕಳು ಗವಿಯ ಬಾಗಿಲಿಗೆ ಬಂದರು. ಒಳಗಿನಿಂದ ಸದ್ದೇನೂ ಕೇಳಿಸಲಿಲ್ಲ. ಅವರು ಗವಿಯ ಒಳ ನಡೆದರು, ಮೊದಲು ಬಗ್ಗಿಕೊಂಡು ಮತ್ತೆ ಅಂಬೆಗಾಲಿಟ್ಟು ಮುಂದುವರಿದರು. ಒಳಗೆ ಕತ್ತಲಿತ್ತು. ರವಿ ಟಾರ್ಚಿನ ಬೆಳಕನ್ನು ಹಾಯಿಸಿ, ನೋಡಿದ. ಗವಿಯ ಮೂಲೆಯಲ್ಲಿ ಮೂರು ಗೋಣಿಗಳಿದ್ದವು. ಮರದ ತುಂಡುಗಳನ್ನು ತುಂಬಿದ ಸಿಮೆಂಟ್ ಗೋಣಿಗಳವು. ಅವರು ಅವುಗಳನ್ನು ಮುಟ್ಟಿ ನೋಡಿದರು, ಮೂಸಿ ನೋಡಿದರು. ಗಂಧದ ಪರಿಮಳ ಅವರ ಮೂಗಿಗೆ ಬಡಿಯಿತು. ಅವರ ಊಹೆ ನಿಜವಾಗಿತ್ತು.

"ಹೂ, ಮನೆಗೆ ಹೋಗೋಣ. ಮುಂದಿನ ಕೆಲಸದ ಬಗ್ಗೆ ಯೋಚಿಸೋಣ" ರವಿ ಹೇಳಿದ. ಇಬ್ಬರೂ ಮನೆಗೆ ಧಾವಿಸಿದರು. ರವಿ ತನ್ನ ಅಪ್ಪನಿಗೆ ವಿಷಯವನ್ನು ತಿಳಿಸಿದ. ಅವರಿಗೆ ಖುಶಿಯಾಯಿತು. "ಮುಂದೇನು ಮಾಡುತ್ತೀರಿ?" ಅವರು ಕೇಳಿದರು.

"ಫೋನ್ ಮಾಡಿ, ಪೋಲೀಸರಿಗೆ ವಿಷಯ ತಿಳಿಸುತ್ತೇವೆ." ಅವನು ಉತ್ತರ ಕೊಟ್ಟ.

"ಒಳ್ಳೆಯದು ಹಾಗೇ ಮಾಡಿರಿ" ಅವರು ಒಪ್ಪಿಗೆ ಸೂಚಿಸಿದರು.

ತಕ್ಷಣ ರವಿ ಫೋನ್ ಮಾಡಿ ಪೋಲೀಸರಿಗೆ ವಾತೆ ಮುಟ್ಟಿಸಿದ. ಸಬ್ ಇನ್ಸ್‌ಪೆಕ್ಟರರೇ ಫೋನ್ ಎತ್ತಿದರು. "ಒಳ್ಳೆಯ ಕೆಲಸ ಮಾಡಿದಿರಿ. ನಾವು ಈಗಲೇ ಬರುತ್ತೇವೆ" ಅವರು ಹೇಳಿದರು.

ಮುಂದೆ ಅರ್ಧ ತಾಸು ಕಳೆದಿತ್ತು ಅಷ್ಟೆ. ಆಗಲೇ ಪೋಲೀಸ್ ಜೀಪ್ ಅಲ್ಲಿ ಕಾಣಿಸಿಕೊಂಡಿತು. ಸಬ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಪೊಲೀಸರು ಅದರಿಂದ ಕೆಳಗಿಳಿದರು. ಮಕ್ಕಳೇ ಅವರನ್ನು ಗವಿಯ ಬಳಿಗೆ ಕರೆದೊಯ್ದರು. ರವಿಯ ಟಾರ್ಚ್ ಬೆಳಕು ಗವಿಯನ್ನು ಬೆಳಗಿತು. ಗಂಧದ ಕೊರಡುಗಳಿದ್ದ ಚೀಲಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಮತ್ತೆ ಅವರು ತಡಮಾಡಲಿಲ್ಲ. ತಕ್ಷಣ ಹೋಗಿ ಸಂಕುನ ಮನೆಗೆ ದಾಳಿಮಾಡಿದರು.

ಗಂಧಕಳ್ಳ ಸಂಕು ಹಾಯಾಗಿ ಮಲಗಿದ್ದ. ಪೊಲೀಸರು ಅವನನ್ನು ಎಬ್ಬಿಸಿ, ವಿಚಾರಣೆ ನಡೆಸಿದರು. ಅವನು ತನ್ನ ತಪ್ಪನ್ನು ಒಪ್ಪಿಕೊಂಡುದರಿಂದ ಅವರ ಕೆಲಸ ಸುಲಭವಾಯಿತು. ಅವರು ಅವನನ್ನು ಬಂಧಿಸಿದರು. ಕದ್ದ ಮಾಲು ಸಹಿತ ಅವರು ಅವನನ್ನು ಕರೆದೊಯ್ದರು. ಆ ಮೊದಲು ಮಕ್ಕಳ ಕೈ ಕುಲುಕಿ, ಅವರ ಸಾಹಸವನ್ನು ಕೊಂಡಾಡಲು ಅವರು ಮರೆಯಲಿಲ್ಲ.

ರವಿಶಂಕರರ ಸಾಹಸ ಕಾರ್ಯ ಊರವರ ಗಮನ ಸೆಳೆಯಿತು. ಅವರು ಪಂಚಾಯತು ಭವನದಲ್ಲಿ ಸಭೆ ಜರಗಿಸಿದರು. ಪಂಚಾಯತು ಪ್ರಮುಖರು ಅಧ್ಯಕ್ಷತೆ ವಹಿಸಿದ್ದರು. ಅವರು ಮಕ್ಕಳ ಸಾಹಸವನ್ನು ಕೊಂಡಾಡಿದರು. ಬಹುಮಾನ ನೀಡಿ, ಸನ್ಮಾನಿಸಿ, ಅವರಿಗೆ ಶುಭ ಕೋರಿದರು. ರವಿ-ಶಂಕರರ ಹೆಸರು ಆ ಊರಲ್ಲಿ ಮನೆ ಮಾತಾಯಿತು.

# ಇಬ್ಬರ ನ್ಯಾಯ

ಒಂದು ಕಡೆ ದೊಡ್ಡದೊಂದು ಬೆಟ್ಟವಿತ್ತು. ಅದರ ತಪ್ಪಲಲ್ಲಿ ಎರಡು ಮನೆಗಳಿದ್ದವು. ಒಂದು ಮನೆ ರಾಮನದು. ಇನ್ನೊಂದು ಮನೆ ದೂಮನದು.
ರಾಮ ಮತ್ತು ದೂಮ ಇಬ್ಬರೂ ಆತ್ಮೀಯ ಗೆಳೆಯರು. ಅವರಿಬ್ಬರೂ ಬೇಸಾಯ ವೃತ್ತಿಯವರು. ತಮ್ಮ ತಮ್ಮ ಹೆಂಡತಿ ಮಕ್ಕಳೊಡನೆ ಅವರು ಅಲ್ಲಿ ವಾಸಿಸುತ್ತಿದ್ದರು. ಕಷ್ಟದಲ್ಲಿ ಅವರು ಒಬ್ಬರಿಗೊಬ್ಬರು ನೆರವಾಗುತ್ತಿದ್ದರು. ನೆಮ್ಮದಿಯ ಜೀವನ ಅವರದಾಗಿತ್ತು.

ಒಂದು ಬಾರಿ ಏನೋ ಒಂದು ಅಚಾತುರ್ಯ ನಡೆದು ಹೋಯಿತು. ಅದರಿಂದಾಗಿ ರಾಮ ಮತ್ತು ದೂಮ ಅವರೊಳಗೆ ಮನಸ್ತಾಪ ಬೆಳೆಯಿತು. ಮಿತ್ರರಾಗಿದ್ದ ಅವರು ಶತ್ರುಗಳಾದರು. ಸಣ್ಣಪುಟ್ಟ ಸಂಗತಿಗಳಿಗೂ ಅವರು ಜಗಳಾಡತೊಡಗಿದರು. ಎರಡೂ ಮನೆಯ ಮಂದಿಗಳೊಳಗೆ ಮಾತುಕತೆ ನಿಂತುಹೋಯಿತು. ಕಿರಿಯರೂ ಹಿರಿಯರನ್ನು ಅನುಸರಿಸತೊಡಗಿದರು.

ಒಂದು ರಾತ್ರೆ ಮೂರು ನಾಲ್ಕು ಮಂದಿ ದರೋಡಕೋರರು ದೂಮನ ಮನೆಗೆ ನುಗ್ಗಿದರು. ಅವರೆಲ್ಲರೂ ಕಪ್ಪು ಮುಸುಕುಧಾರಿಗಳಾಗಿದ್ದರು. ಮನೆಗೆ ನುಗ್ಗಿದ ಅವರು ಮನೆಯವರನ್ನು ಥಳಿಸಿದರು. ಅವರ ಕೈಕಾಲುಗಳನ್ನು ಕಟ್ಟಿಹಾಕಿ, ಮನೆಯನ್ನು ತೋಚತೊಡಗಿದರು. ಆಗ ಮನೆಯವರೆಲ್ಲ ಬೊಬ್ಬೆ ಹೊಡೆದರು. “ದರೋಡೆಕೋರರು ಬಂದಿದ್ದಾರೆ ಹೊಡೆದು ಬಡಿದು ನಮ್ಮನ್ನು ಕಟ್ಟಿಹಾಕಿದ್ದಾರೆ. ಮನೆಯನ್ನು ದೋಚುತ್ತಿದ್ದಾರೆ. ಬೇಗ ಬನ್ನಿ, ನಮ್ಮನ್ನು ಕಾಪಾಡಿ” ಎಂದು ಅವರು ಮೊರೆಯಿಟ್ಟರು.

ರಾಮನ ಮನೆಯವರಿಗೆ ನೆರೆಮನೆಯವರ ಬೊಬ್ಬೆ ಕೇಳಿಸಿತು. ಆದರೆ ಅವರು ತಮ್ಮ ಮನೆಯಿಂದ ಹೊರಗೆ ಕಾಲಿಡಲಿಲ್ಲ. ನೆರೆಯವರ ಸಹಾಯಕ್ಕೆ ಧಾವಿಸಲಿಲ್ಲ “ಅವರು ನಮ್ಮ ಹಗೆಗಳು ಅವರಿಗೆ ನಾವೇ ಶಿಕ್ಷೆ ಕೊಡಬೇಕಿತ್ತು. ಆದರೆ ನಾವು ಅದನ್ನು ಮಾಡಲಿಲ್ಲ. ನಮ್ಮ ಬದಲು ಬೇರೆ ಯಾರೋ ಅವರನ್ನು ಶಿಕ್ಷಿಸುತ್ತಿದ್ದಾರೆ. ಅದನ್ನು ನಾವೇಕೆ ತಡೆಯಬೇಕು? ಬಂದುದನ್ನು ಅವರೇ ಅನುಭವಿಸಲಿ” ಎನ್ನುತ್ತ ಅವರು ತೆಪ್ಪಗೆ ಇದ್ದುಬಿಟ್ಟರು. ಬೇರೆ ಮನೆಗಳು ಅಲ್ಲಿರಲಿಲ್ಲ. ಬೇರೆ ಯಾರೂ ಸಹಾಯಕ್ಕೆ ಬರಲಿಲ್ಲ. ಡಕಾಯಿತರ ಕೆಲಸ ಸುಲಭವಾಯಿತು. ಧೂಮನ ಮನೆಯನ್ನೆಲ್ಲ ದೋಚಿದರು. ಬೆಲೆಬಾಳುವ ವಸ್ತುಗಳೊಡನೆ ಅವರು ಕತ್ತಲಲ್ಲಿ ಕಣ್ಮರೆಯಾದರು. ರಾಮನ ಮನೆಯವರಿಗೆ ತುಂಬ ಖುಷಿಯಾಯಿತು.

ದಿನಗಳು ಉರುಳಿದವು. ಎರಡೋ ಮೂರೋ ತಿಂಗಳುಗಳು ಕಳೆದುಹೋದವು. ಅದೊಂದು ರಾತ್ರೆ ದರೋಡೆಕೋರರು ಇನ್ನೊಮ್ಮೆ ಅಲ್ಲಿ ಕಾಣಿಸಿಕೊಂಡರು. ಈ ಬಾರಿ ಅವರು ರಾಮನ ಮನೆಯನ್ನು ಆರಿಸಿಕೊಂಡಿದ್ದರು. ಮನೆಯಲ್ಲಿದ್ದ ಎಲ್ಲರಿಗೂ ಅವರು ಹೊಡೆದರು. ಎಲ್ಲರನ್ನೂ ಅವರು ಕಟ್ಟಿಹಾಕಿದರು. ಅಲ್ಲಿ ಇದ್ದುದನ್ನೆಲ್ಲ ದೋಚತೊಡಗಿದರು. ಮನೆಯವರು ಸಹಾಯಕ್ಕಾಗಿ ಕೂಗಿಕೊಂಡರು. ಆದರೆ ನೆರೆಮನೆಯ ಮಂದಿ ಇವರ ಸಹಾಯಕ್ಕೆ ಬರಲಿಲ್ಲ.

“ನಮ್ಮ ಕಷ್ಟದಲ್ಲಿ ಅವರು ನೆರವಾಗಲಿಲ್ಲ. ಈಗ ಅವರ ಕಷ್ಟದಲ್ಲಿ ನಾವೇಕೆ ಸಹಾಯ ಮಾಡಬೇಕು? ಬಂದುದನ್ನು ಅವರೂ ಅನುಭವಿಸಲಿ. ಡಕಾಯಿತರು ಅವರಿಗೂ ಹೊಡೆಯಲಿ. ಅವರ ಎಲ್ಲ ವಸ್ತುಗಳನ್ನು ಕೊಂಡೊಯ್ಯಲಿ. ನಮಗಾದ ಗತಿ ಅವರಿಗೂ ಬರಲಿ” ಎಂದು ಅವರು ಅಂದುಕೊಂಡರು. ನಮ್ಮ ಮನೆಯಲ್ಲೇ ಅವರು ಉಳಿದುಬಿಟ್ಟರು.

ದರೋಡೆಕೋರರು ಸಲೀಸಾಗಿ ತಮ್ಮ ಕೆಲಸ ಪೂರೈಸಿಕೊಂಡರು. ಆ ಮನೆಯಲ್ಲಿ ಇದ್ದುದನ್ನೆಲ್ಲ ದೋಚಿ ಅವರು ಪರಾರಿಯಾದರು.

ಇಬ್ಬರ ನ್ಯಾಯದಿಂದ ಮೂರನೆಯವರಿಗೆ ಆಯವಾಗಿತ್ತು. ಹಗೆತನದಿಂದಾಗಿ ಎರಡು ಮನೆಗಳೂ ಹಾಳಾಗಿದ್ದವು. ಮನೆಮಂದಿಯೆಲ್ಲ ಕಷ್ಟನಷ್ಟ ಅನುಭವಿಸಬೇಕಾಯಿತು.
ಎರಡೂ ಮನೆಗಳವರು ಒಬ್ಬರಿಗೊಬ್ಬರು ನೆರವಾಗಿದ್ದರೆ?

# ಪುಟ್ಟನ ಕೋಪ

ಅಂದು ದೀಪಾವಳಿ, ಪಟಾಕಿಯ ಸದ್ದಿಗೆ ಪುಟ್ಟ ಎಚ್ಚರಗೊಂಡ. ಆಗಲೇ ಅವನ ಅಮ್ಮ ಕರೆಯುವುದು ಕೇಳಿಸಿತು.

"ಏಳು ಪುಟ್ಟಾ, ಬೇಗ ಏಳು, ಇನ್ನು ಎಣ್ಣೆ ಹಾಕಿ ಸ್ನಾನ ಮಾಡಬೇಕು. ಹೊಸತು ಅಂಗಿ-ಚಡ್ಡಿ ಹಾಕಿಕೊಳ್ಳಬೇಕು.. "ಅವರು ಹೇಳುತ್ತಿದ್ದರು.

ಪುಟ್ಟನ ನಿದ್ರೆ ಹಾರಿಹೋಯಿತು. ಅವನು ಸಟ್ಟನೇ ಎದ್ದು ಬಂದ. ಅವನ ಅಪ್ಪ ಆಗಲೇ ಎದ್ದಿದ್ದರು. ಅವರ ಸ್ನಾನವೂ ಆಗಿತ್ತು. ಅವರು ಪೂಜೆಗೆ ಕೂತಿದ್ದರು. ಮಿಂದು ಬಂದಿದ್ದ ಅಜ್ಜಿ ದೋಸೆ ಹೊಯ್ಯುತ್ತಿದ್ದರು. ಅಣ್ಣನೂ ಸ್ನಾನ ತೀರಿಸಿದ್ದ. ಅಕ್ಕ ಸ್ನಾನ ಮಾಡುತ್ತಿದ್ದಳು. ಮುಂದಿನದು ಪುಟ್ಟನ ಸರದಿ. ಅವನು ಇನ್ನೂ ಮುಖ ತೊಳೆದಿರಲಿಲ್ಲ.

"ಪುಟ್ಟಾ, ನಿನ್ನ ಬ್ರಶ್ಶಿಗೆ ಪೇಸ್ಟ್ ಹಾಕಿ ಇರಿಸಿದ್ದೇನೆ. ಮುಖ ತೊಳೆದುಕೊ" ಬಚ್ಚಲು ಮನೆಯಲ್ಲಿದ್ದ ಅಮ್ಮ ಇನ್ನೊಮ್ಮೆ ಕೂಗಿ ಹೇಳಿದರು. ಪುಟ್ಟ ಅತ್ತ ಹೆಜ್ಜೆ ಹಾಕಿದ. ಅವನು ಬಚ್ಚಲು ಮನೆಗೆ ಬರುವಷ್ಟರಲ್ಲಿ ಅಕ್ಕನ ಸ್ನಾನವೂ ಮುಗಿದಿತ್ತು. ಅವಳು ಹೊರಗೆ ಬರುತ್ತಿದ್ದಳು.

ಏನು ಪುಟ್ಟಾ, ನೀನಿನ್ನು ಕಕ್ಕಸಿಗೆ ಹೋಗಲುಂಟೆ? ಹಾಗಿದ್ದರೆ ಬೇಗೆ ಅಲ್ಲಿಗೆ ಹೋಗಿ ಬಾ. ಮತ್ತೆ ಮುಖ ತೊಳೆದುಕೊಂಡು ಬಿಡು. ತಡ ಮಾಡಬೇಡ. ಅಮ್ಮ ಅವಸರಪಡಿಸಿದಳು.

"ಈ ಅಮ್ಮನಿಗೆ ಎಲ್ಲದಕ್ಕೂ ಅವಸರ" ಪುಟ್ಟ ತನ್ನಲ್ಲೇ ಗೊಣಗಿಕೊಂಡ. ಮತ್ತೆ ಬೇಗ ಬೇಗ ಮುಖ ತೊಳೆದು, ಅವನು ಕಕ್ಕಸಿಗೆ ಹೋದ. ಎರಡು ಮೂರು ನಿಮಿಷ ಕಳೆದಿರಬಹುದು. ಆಗಲೇ ಅವನು ಅಮ್ಮನನ್ನು ಕರೆಯತೊಡಗಿದ. ಅವರು ಕಕ್ಕಸಿಗೆ ಹೋದರು. ಅವನಿಗೆ ನೀರು ಒದಗಿಸಿಕೊಟ್ಟರು. ಪುಟ್ಟ ಅಲ್ಲಿಂದ ಹೊರಗೆ ಬಂದ, ಮತ್ತೆ ಮನೆಯೊಳಗೆ ಹೋಗಿ, ದೇವರಿಗೆ ನಮಸ್ಕರಿಸಿದ. ಅಷ್ಟರಲ್ಲಿ ಎಣ್ಣೆಯ ಬಟ್ಟಲು ಎತ್ತಿಕೊಂಡು ಅಮ್ಮ ಅಲ್ಲಿ ಪ್ರತ್ಯಕ್ಷರಾದರು. ಪುಟ್ಟನಿಗೆ ಅವರು ಎಣ್ಣೆ ಹಚ್ಚಿದರು; ಸ್ನಾನ ಮಾಡಿಸಿದರು. ಅನಂತರ ಅವರೂ ಸ್ನಾನ ಮಾಡಿದರು, ಎಲ್ಲರೂ ಹೊಸಬಟ್ಟೆ ಧರಿಸಿಕೊಂಡರು, ದೋಸೆ ಕಜ್ಜಾಯಗಳು ಸಿದ್ಧವಾಗಿದ್ದವು. ದೇವರ ಪೂಜೆ ನಡೆಯಿತು: ಎಲ್ಲರೂ ದೇವರಿಗೆ ನಮಸ್ಕರಿಸಿದರು ಬಳಿಕ ಮನೆಯ ಕಿರಿಯರೆಲ್ಲ ಹಿರಿಯರಿಗೆ ನಮಸ್ಕರಿಸಬೇಕು ಅದು ಅವರ ಮನೆಯ ಪದ್ಧತಿ. ಅಪ್ಪ ಅಜ್ಜಿಗೆ ನಮಸ್ಕರಿಸಿದರು.

ಅಮ್ಮ ಅಪ್ಪನಿಗೂ ಅಜ್ಜಿಗೂ ನಮಸ್ಕರಿಸಿದರು. ಅಣ್ಣ ಮತ್ತು ಅಕ್ಕ ಆ ಮೂವರಿಗೂ ನಮಸ್ಕರಿಸಿದರು. "ಅಜ್ಜಿಗೆ ನಮಸ್ಕರಿಸು ಪುಟ್ಟ" ಅಪ್ಪ ಹೇಳಿದರು. ಪುಟ್ಟ ಅಜ್ಜಿಗೆ ನಮಸ್ಕರಿಸಿದ. ಅವರು ಅವನನ್ನು ಹರಸಿದರು. "ಅಪ್ಪನಿಗೆ ನಮಸ್ಕಾರ ಮಾಡು ಮಗೂ" ಅಜ್ಜಿ ಪುಟ್ಟನಿಗೆ ಹೇಳಿದರು. ಪುಟ್ಟ ಅಪ್ಪನಿಗೆ ನಮಸ್ಕಾರ ಮಾಡಿದ ಅವರೂ ಅವನನ್ನು ಹರಿಸಿದರು. "ಇನ್ನು ಅಮ್ಮನಿಗೆ ನಮಸ್ಕಾರ ಮಾಡು ಪುಟ್ಟಾ" ಅಣ್ಣ ಹೇಳಿದ. ಪುಟ್ಟ ಅಮ್ಮನಿಗೆ ನಮಸ್ಕರಿಸಿದ. ಅವರೂ ಅವನನ್ನು ಹರಿಸಿದರು. "ಇನ್ನು ಅಣ್ಣನಿಗೂ ಅಕ್ಕನಿಗೂ ನಮಸ್ಕರಿಸು ಮಗೂ" ಅಮ್ಮ ಹೇಳಿದರು. ಪುಟ್ಟ ಅವರಿಗೂ ನಮಸ್ಕರಿಸಿದ. ಅಣ್ಣ ಪುಟ್ಟನನ್ನು ಒಮ್ಮೆ ತಬ್ಬಿ ಹಿಡಿದ. ಅಕ್ಕ ಅವನ ಕೆನ್ನೆಗೊಂದು ಮುದ್ದು ಕೊಟ್ಟಳು. ದೇವರ ಕೋಣೆಯಿಂದ ಅವರೆಲ್ಲ ಹೊರಗೆಬಂದರು. ಅನಂತರ ಹಬ್ಬದೂಟದ ಸರದಿ. ಅದಕ್ಕಾಗಿ ಅವರು ಸಿದ್ಧತೆ ನಡೆಸತೊಡಗಿದರು.

ಎಲ್ಲರೂ ಉಲ್ಲಾಸದಲ್ಲಿದ್ದರು. ಆದರೆ ಪುಟ್ಟನ ಮುಖ ಮಾತ್ರ ಬಾಡಿ ಹೋಗಿತ್ತು. ಹೊಸ ಅಂಗಿ ಚಡ್ಡಿ ಹಾಕಿಕೊಂಡಿದ್ದರೂ ಅವನಲ್ಲಿ ಉತ್ಸಾಹ ಕಾಣಿಸಲಿಲ್ಲ. ಯಾವ ಚಟುವಟಿಕಲೆಯಲ್ಲೂ ಅವನು ತೊಡಗಿಕೊಳ್ಳಲಿಲ್ಲ. ತೆಪ್ಪಗೆ ಒಂದು ಮೂಲೆಯಲ್ಲಿ ಅವನು ಕೂತು ಬಿಟ್ಟಿದ್ದ. ಅವನಿಗೆ ಕೋಪ ಬಂದಿತ್ತು, ಬೇಸರ ಉಂಟಾಗಿತ್ತು ಕಾರಣ ಯಾರಿಗೂ ತಿಳಿಯಲಿಲ್ಲ. ಅವನೂ ಹೇಳಲಿಲ್ಲ.

ಎಲ್ಲರೂ ಊಟದ ಮನೆಗೆ ಬಂದರು ಅಲ್ಲಿ ದೋಸೆ-ಕಜ್ಜಾಯಗಳು ಅವರಿಗಾಗಿ ಕಾದಿದ್ದವು. ಎಲ್ಲರೂ ಬಟ್ಟಲುಗಳು ಮುಂದೆ ಕೂತರು ಆದರೆ ಪುಟ್ಟ ಮಾತ್ರ ಬರಲಿಲ್ಲ. ಅವನು ಕೂತಲ್ಲೇ ಕೂತಿದ್ದ.

“ಬಾ ಪುಟ್ಟಾ, ಊಟಮಾಡೋಣ. “ಅಪ್ಪ ಅವನನ್ನು ಕರೆದರು ಪುಟ್ಟ ಕೂತಲ್ಲಿಂದ ಮಿಸುಕಾಡಲಿಲ್ಲ.

ಅಮ್ಮ ಪುಟ್ಟನ ಬಳಿಗೆ ಬಂದರು.

“ಯಾಕೆ ಮರೀ ಊಟ ಮಾಡುವುದಿಲ್ಲವೇ? ಏನಾಯಿತು ನಿನಗೆ?” ಪ್ರೀತಿಯಿಂದ ಅವರು ಕೇಳಿದರು.

ಪುಟ್ಟ ಮೆಲ್ಲನೆ ಬಾಯಿ ಬಿಟ್ಟ “ಮತ್ತೆ…… ಮತ್ತೆ …… ನಾನು ಎಲ್ಲರಿಗೂ ನಮಸ್ಕಾರ ಮಾಡಿದೆ. ನನಗೆ ಮಾತ್ರ ಯಾರು ನಮಸ್ಕಾರ ಮಾಡಲಿಲ್ಲ ಯಾಕೆ?”

ಪುಟ್ಟನ ಬೇಸರದ ಕಾರಣ ಹೊರಬಿತ್ತು. ಅವನ ಮಾತುಕೇಳಿ ಎಲ್ಲರೂ ಬಿದ್ದು ಬಿದ್ದು ನಕ್ಕರು.

ಅಜ್ಜಿ ಗದರಿಸಿ ಎಲ್ಲರನ್ನೂ ಸುಮ್ಮನಿರಿಸಿದರು.. ಮತ್ತೆ ಅವರು ಪುಟ್ಟನ ಬಳಿ ಸಾಗಿದರು, ಪ್ರೀತಿಯಿಂದ ಅವನ ಬೆನ್ನ ಮೇಲೆ ಕೈಯಾಡಿಸಿದರು. “ದೊಡ್ಡವರಿಗೆ ಚಿಕ್ಕವರು ನಮಸ್ಕಾರ ಮಾಡಬೇಕು ಮಗೂ. ಅದು ಕ್ರಮ. ಮುಂದಿನ ಬಾರಿ ನಿನಗೊಬ್ಬಳು ತಂಗಿ ಬರಲಿ ಆಗ ಅವಳು ನಿನಗೂ ನಮಸ್ಕಾರ ಮಾಡುತ್ತಾಳೆ. ನಾನೇ ಅವಳಿಗೆ ಹೇಳುತ್ತೇನೆ, ನಿನಗೆ ನಮಸ್ಕಾರ ಮಾಡಿಸುತ್ತೇನೆ. ಇಂದು ದೀಪಾವಳಿ, ಹಬ್ಬದ ದಿನ ಈ ದಿನ ಯಾರೂ ಕೋಪಿಸಿ ಕೊಳ್ಳಬಾರದು ಬಾ ಮಗೂ ದೋಸೆ ತಿನ್ನೋಣ” ಅವರು ಅವನನ್ನು ಮಜಾಯಿಸಿದರು.

ಪುಟ್ಟನ ಬೇಸರ ದೂರಾಯಿತು. ಅಜ್ಜಿಯೊಡನೆ ಮೆಲ್ಲನೆ ಎದ್ದು ಬಂದ. ಹಬ್ಬದೂಟ ಸಾಂಗವಾಗಿ ನೆರವೇರಿತು.

## ಬಚ್ಚಿಟ್ಟದ್ದು ಪರರಿಗೆ

ತಮ್ಮಯ್ಯ ಒಬ್ಬ ಸಾಹುಕಾರ. ಅವನು ಭಾರೀ ಶ್ರೀಮಂತ, ಆದರೆ ಜಿಪುಣ. ಯಾರಿಗೂ ಅವನು ದಾನ, ಧರ್ಮ ಮಾಡಿದವನೂ ಅಲ್ಲ, ಸಾಲಗೀಲ ನೀಡಿದವನೂ ಅಲ್ಲ. ಸಹಾಯಕ್ಕಾಗಿ ಯಾರೂ ಅವನ ಬಳಿಗೆ ಹೋಗುತ್ತಿರಲಿಲ್ಲ. ಹೋದರೂ ಸಹಾಯ ಸಿಗುತ್ತಿರಲಿಲ್ಲ.

ಆ ಸಾಹುಕಾರನಿಗೆ ಯಾವ ಮನೋರಂಜನೆಯೂ ಬೇಕಾಗಿರಲಿಲ್ಲ. ಅವನಿಗಿದ್ದುದು ಒಂದೇ ಹುಚ್ಚು. ಬಂಗಾರದ ಬೆಳ್ಳಿಯ ನಾಣ್ಯಗಳನ್ನು ಕೂಡಿಡುವ ಹುಚ್ಚು. ಬಹಳಷ್ಟು ನಾಣ್ಯಗಳನ್ನು ಅವನು ಕೂಡು ಹಾಕಿದ್ದ. ಅವನ ಸಂಗ್ರಹ ಸಾಕಷ್ಟು ದೊಡ್ಡದಿತ್ತು. ಪೆಟ್ಟಿಗೆ ತುಂಬ ನಾಣ್ಯಗಳು ಅವನಲ್ಲಿದ್ದವು. ದಿನವೂ ಅವನು ಪೆಟ್ಟಿಗೆ ತೆರೆಯುತ್ತಿದ್ದ. ಅದರೊಳಗಿದ್ದ ನಾಣ್ಯಗಳನ್ನು ಕಣ್ಣು ತುಂಬ ನೋಡುತ್ತಿದ್ದ. ನೋಡಿ ಖುಶಿಪಡುತ್ತಿದ್ದ. ಇದು ಅವನ ನಿತ್ಯದ ಕಾರ್ಯಕ್ರಮವಾಗಿತ್ತು. ದಿನಗಳು ಉರುಳುತ್ತಿದ್ದವು.

ಒಂದು ಬಾರಿ ಸಾಹುಕಾರ ತನ್ನ ಮಾವನ ಮನೆಗೆ ಹೋಗಬೇಕಾಯಿತು. ಅಲ್ಲಿ ಅವನ ಭಾವನಿಗೆ ಮದುವೆ ಇತ್ತು. ಹಾಗಾಗಿ ಮನೆ ಮಂದಿಯನ್ನೆಲ್ಲ ಕೂಡಿಕೊಂಡು ಅವನು ಮದುವೆಗೆ ಹೋಗಿದ್ದ. ಕಾರ್ಯಕ್ರಮ ಮುಗಿದಾಗ ತುಂಬಾ ತಡವಾಗಿತ್ತು. ರಾತ್ರೆ ಊರಿಗೆ ಬರಲು ಸಾಧ್ಯವಾಗಲಿಲ್ಲ. ಮರುದಿನ ಅವರೆಲ್ಲ ಮನೆಗೆ ಹಿಂದಿರುಗಿದರು.

ಸಾಹುಕಾರ ಮನೆಯ ಮೆಟ್ಟಿಲು ಏರಿದ. ಬಾಗಿಲ ಕಡೆ ಅವನ ನೋಟ ಹರಿಯಿತು. ಆಗಲೇ ಅವನ ಎದೆ ಧಸಕ್ಕೆಂದಿತು. ಕಾರಣ ಗೊತ್ತೆ? ಮನೆಯ ಮುಂಬಾಗಿಲು ತೆರೆದುಕೊಂಡಿತ್ತು. ಗಾಬರಿಗೊಂಡ ಸಾಹುಕಾರ ಮನೆಯೊಳಗೆ ಓಡಿದ. ಅವನ ಕೋಣೆಯ ಬಾಗಿಲುಗಳೂ ತೆರೆದುಕೊಂಡಿದ್ದವು. ಕೋಣೆಯೊಳಗಿದ್ದ ಪೆಟ್ಟಿಗೆ ಕಾಣೆಯಾಗಿತ್ತು. ಸಾಹುಕಾರನ ತಲೆಗೆ ಸಿಡಿಲು ಬಡಿದಂತಾಯಿತು. “ಅಯ್ಯಯ್ಯಪ್ಪೋ ನನ್ನ ಪೆಟ್ಟಿಗೆ …….” ಎನ್ನುತ್ತ ಅವನು ಗೋಳಾಡತೊಡಗಿದ. ಮನೆಯವರೆಲ್ಲ ಅಲ್ಲಿ-ಇಲ್ಲಿ ಹುಡುಕಾಡತೊಡಗಿದರು. ಸುದ್ದಿ ಹರಡಿತು.

ನೆರೆಕರೆಯವರು ಓಡಿ ಬಂದರು. ಪೆಟ್ಟಿಗೆಗಾಗಿ ಹುಡುಕಾಟ ಮುಂದುವರೆಯಿತು. ಬಹಳ ಹೊತ್ತಿನ ಹುಡುಕಾಟದ ಬಳಿಕ ಪೆಟ್ಟಿಗೆ ಕಾಣಸಿಕ್ಕಿತು. ತೋಟದ ಮೂಲೆಯಲ್ಲಿ ಅದು ಬಿದ್ದುಕೊಂಡಿತ್ತು. ಅದರ ಬೀಗವನ್ನು ಒಡೆದಿದ್ದರು. ನಾಣ್ಯಗಳನ್ನೆಲ್ಲ ದೋಚಿದ್ದರು.

ಪೆಟ್ಟಿಗೆಯನ್ನು ಕಂಡವರು ಅದನ್ನು ಮನೆಗೆ ಹೊತ್ತು ತಂದರು. ಸಾಹುಕಾರ ಖಾಲಿಪೆಟ್ಟಿಗೆಯನ್ನು ನೋಡಿದ. ಅವನು ದುಃಖ ಉಲ್ಬಣಿಸಿತು. “ಅಯ್ಯಯ್ಯೋ.. ನನ್ನ ರಾಶಿ ಹಣ ಹೋಯಿತಲ್ಲಾ... ದಿನವೂ ಅದನ್ನು ನೋಡಿ ಖುಷಿಪಡುತ್ತಿದ್ದೆನಲ್ಲಾ.. ಇನ್ನೇನು ಮಾಡಲಿ.” ಎದೆ ಬಡಿದುಕೊಂಡು ಅವನು ಗೋಳಾಡತೊಡಗಿದ.

ಆಗ ಯುವಕನೊಬ್ಬ ಕಟಕಿಯಾಡಿದ. “ಸಾಹುಕಾರಾ, ಸಮಾಧಾನ ತಂದುಕೋ,.. ಪೆಟ್ಟಿಗೆ ತುಂಬ ನಾಣ್ಯಗಳು ನಿನ್ನಲ್ಲಿದ್ದವು. ಆದರೆ

ನೀನು ಅವುಗಳನ್ನು ಸ್ವಂತಕ್ಕೂ ಉಪಯೋಗಿಸಿಲಿಲ್ಲ. ಪರರ ಉಪಕಾರಕ್ಕೂ ಬಳಸಲಿಲ್ಲ. ಬದಲಾಗಿ ಕಣ್ಣು ತುಂಬ ನೋಡಿ ತೃಪ್ತಿಪಡುತ್ತಿದ್ದೆ ಅಷ್ಟೆ. ಈಗ ನಾಣ್ಯಗಳು ಪರರ ಪಾಲಾಗಿವೆ. ನಿಜ ಆದರೇನು? ನೋಡಲು ಪೆಟ್ಟಿಗೆಯಂತೂ ಉಳಿದಿದೆಯಲ್ಲ? ದಿನವೂ ನೀನು ಅದನ್ನೇ ನೋಡಿ ಬಿಡು. ನೋಡಿ, ಖುಶಿ ಪಡು”

ಸಾಹುಕಾರ ನಾಚಿ ತಲೆ ತಗ್ಗಿಸಿದ. “ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ” ಈ ಮಾತು ಎಷ್ಟು ಸತ್ಯ!.

## ನೀರಿನದು ನೀರಿಗೆ

ತಿಮ್ಮಪ್ಪ ಒಬ್ಬ ಬಡ ರೈತ. ತಿಮ್ಮಕ್ಕ ಅವನ ಹೆಂಡತಿ. ಅವರಿಗೆ ಮಕ್ಕಳು ಮರಿ ಇರಲಿಲ್ಲ. ಸಣ್ಣದೊಂದು ಗುಡಿಸಲಲ್ಲಿ ಅವರು ವಾಸಿಸುತ್ತಿದ್ದರು.

ತಿಮ್ಮಪ್ಪನಲ್ಲಿ ಎರಡು ಎತ್ತುಗಳಿದ್ದವು. ಒಂದು ದನ ಇತ್ತು. ದನ ಹೆಚ್ಚು ಹಾಲು ಕೊಡುತ್ತಿತ್ತು. ಅದರ ಹಾಲನ್ನು ಅವರು ಮಾರುತ್ತಿದ್ದರು. ತಿಮ್ಮಪ್ಪ ಹಾಲು ಕರೆಯುತ್ತಿದ್ದ. ತಿಮ್ಮಕ್ಕ ಅದನ್ನು ಮಾರಿ ಬರುತ್ತಿದ್ದಳು.

ತಿಮ್ಮಕ್ಕನಿಗೆ ಒಂದು ಆಸೆ ಇತ್ತು. ಮುತ್ತಿನ ಓಲೆಗಳನ್ನು ಕೊಳ್ಳಬೇಕು; ಅವುಗಳನ್ನು ಧರಿಸಿ, ಓಡಾಡಬೇಕು ಎನ್ನುವ ಬಯಕೆ ಅವಳದು. ಆದರೆ ಬಡವರಿಗೆ ಮುತ್ತಿನ ಓಲೆ ಎಲ್ಲಿಂದ ಬರಬೇಕಕು? ಗಂಡ ತೆಗೆಸಿಕೊಡಲಾರ. ತಾನೇ ಹಣ ಸಂಪಾದಿಸಬೇಕು. ಓಲೆಗಳನ್ನು ಕೊಳ್ಳಬೇಕು. ಅವಳಿಗೊಂದು ಉಪಾಯ ಹೊಳೆಯಿತು. ಅದನ್ನು ಅವಳು ಕಾರ್ಯರೂಪಕ್ಕೆ ಇಳಿಸಿದಳು. ಅಂದಿನಿಂದ ಅವಳ ಹಾಲು ಮಾರಾಟ ಪ್ರಮಾಣ ಹೆಚ್ಚಿತು. ದನ ಮಾತ್ರ ಮೊದಲಿನಷ್ಟೇ ಹಾಲು ಕೊಡುತ್ತಿತ್ತು.

ದಿನಗಳು ಉರುಳಿದವು. ಗಿರಾಕಿಗಲಿಂದ ದೂರುಗಳು ಬರತೊಡಗಿದವು. “ಹಾಳು ಮೊದಲಿನಂತಿಲ್ಲ. ಹೆಚ್ಚು ನೀರಾಗಿದೆ” ಎಂದು ಗೊಣಗುತ್ತಿದ್ದರು. “ಮಳೆಗಾಲ ನೋಡಿ, ದನ ಎಳೆಹುಲ್ಲು ಮೇಯುತ್ತಿದೆ. ಹಾಲು ನೀರಾಗಿರಬಹುದು. ತಿಮ್ಮಕ್ಕ ಸಮಾಧಾನ ಹೇಳುತ್ತಿದ್ದಳು. ವ್ಯಾಪಾರ ನಡೆದೇ ಇತ್ತು.

ಆರು ತಿಂಗಳು ಕಳೆದಿರಬಹುದು. ಒಂದು ದಿನ ತಿಮ್ಮಕ್ಕ ಪೇಟೆಗೆ ಹೋದಳು. ಹಿಂದಿರುಗಿ ಬಂದಾಗ ಅವಳ ಕಿವಿಗಳಲ್ಲಿ ಮುತ್ತಿನ ಓಲೆಗಳು ಮಿನುಗುತ್ತಿದ್ದವು. “ಈ ಬಾರಿ ಸ್ವಲ್ಪ ಹೆಚ್ಚು ಹಾಲು ಮಾರಾಟವಾಗಿತ್ತು. ಲಾಭದ ಹಣದಲ್ಲಿ ಓಲೆಗಳನ್ನು ಕೊಂಡು ಕೊಂಡೆ” ಗಂಡನಿಗೆ ಅವಳು ವಿವರಣೆ ನೀಡಿದಳು. ಅವಳು ಮಾರಿದ ಹೆಚ್ಚಿನ ಹಾಲು ಯಾವುದೆಂಬುದನ್ನು ತಿಮ್ಮಪ್ಪನಿಗೆ ಅರ್ಥವಾಯಿತು. ಆದರೆ ಅವನೇನೂ ಹೇಳಲಿಲ್ಲ.

ಸಮಯ ಸಂದಿತು. ಅದೊಂದು ದಿನ ತಿಮ್ಮಕ್ಕ ಹೊಳೆ ಬದಿಗೆ ಹೋಗಿದ್ದಳು. ಹೊಳೆ ತುಂಬಿಕೊಂಡಿತ್ತು. ನೀರು ರಭಸದಲ್ಲಿ ಹರಿಯುತ್ತಿತ್ತು. ತಿಮ್ಮಕ್ಕ ಅಲ್ಲಿ ಬಟ್ಟೆ ಒಗೆದಳು. ಸ್ನಾನ ಮಾಡಿದಳು. ಅವಳು ನೀರಲ್ಲಿ ಮುಳುಗಿ ಮೇಲೇಳುವಾಗ "ಟುಳುಂ" ಸದ್ದು ಕೇಳಿಸಿತು. ಹರಳು ಕಲ್ಲೊಂದು ನೀರಿಗೆ ಬಿದ್ದಂತಾಯಿತು. ಅದೇನೆಂದು ಅವಗಳಿಗೆ ಅರ್ಥವಾಗಲಿಲ್ಲ. ಅವಳು ಮೈ ಒರಸಿಕೊಂಡಳು. ಅವಳ ಕೈ ಕಿವಿಯ ಬಳಿ ಹೋದಾಗ ಅವಳಿಗೆ ಸಿಡಿಲು ಬಡಿದಂತಾಯಿತು. ಅವಳ ಒಂದು ಕಿವಿ ಬರಿದಾಗಿತ್ತು. ಅದರಲ್ಲಿದ್ದ ಓಲೆ ಬಿದ್ದುಹೋಗಿತ್ತು.

ಅವಳು ಅಲ್ಲೆಲ್ಲ ಹುಡುಕಾಡಿದಳು. ನೀರೊಳಗೆ ತಡಕಾಡಿ ನೋಡಿದಳು. ಹೊಯಿಗೆ, ಕಸಕಡ್ಡಿ, ಹರಳು, ಕಲ್ಲುಗಳ ಹೊರತು ಮತ್ತೇನೂ ಸಿಗಲಿಲ್ಲ. ಅವಳಿಗೆ ತುಂಬ ನಿರಾಸೆಯಾಯಿತು. ದುಃಖ ಉಕ್ಕಿ ಬಂತು. ಬಿಕ್ಕಿಬಿಕ್ಕಿ ಅಳುತ್ತಲೇ ಅವಳು ಮನೆಗೆ ಬಂದಳು. ನಡೆದುದನ್ನು ಗಂಡನಿಗೂ ತಿಳಿಸಿದಳು

ತಿಮ್ಮಪ್ಪ ಹೆಂಡತಿ ಹೇಳಿದುದನ್ನೆಲ್ಲ ಕೇಳಿಸಿಕೊಂಡ. ಆದರೆ ಅವನು ಕೋಪಿಸಿಕೊಳ್ಳಲಿಲ್ಲ. ದುಃಖಪಡಲೂ ಇಲ್ಲ. "ಲೇ, ಇವಳೇ, ನೀನು ಹಾಲಿಗೆ ನೀರು ಬೆರೆಸಿ, ಮಾರಾಟ ಮಾಡಿದೆ. ಬಂದ ಹಣದಿಂದ ಓಲೆಗಳನ್ನು ಖರೀದಿಸಿದೆ. ನೀರು ಮಾರಿ ಖರೀದಿಸಿದ ಓಲೆ ನೀರಿಗಾಯಿತು. ಹಾಲು ಮಾರಿ ಖರೀದಿಸಿದ್ದು, ನಿನ್ನಲ್ಲೇ ಇದೆಯಲ್ಲಾ? ಅದಕ್ಕೊಂದು ಜೊತೆ ತಂದರಾಯಿತು. ಚಿಂತಿಸಬೇಡ" ಅವನು ಹೆಂಡತಿಯನ್ನು ಸಮಜಾಯಿಸಿದ.

ಗಂಡನ ಮಾತು ಕೇಳಿ ತಿಮ್ಮಕ್ಕನ ಅಳು ನಿಂತಿತ್ತು. ಅನ್ಯಾಯದ ಗಳಿಕೆ ಹೆಚ್ಚು ಕಾಲ ಉಳಿಯದು ಎನ್ನುವ ಸತ್ಯ ಅವಳಿಗೆ ಹೊಳೆಯಿತು.

## ಹಂಚಿ ತಿಂದ ಗೆಳೆಯರು

ಢಣ್ ಢಣ್ ಢಣ್ …. ಶಾಲೆಯ ಘಂಟೆ ಬಾರಿಸಿತು. "ಹೋss" ಎಂದು ಕಿರಿಚಾಡುತ್ತಾ ಮಕ್ಕಳು ತರಗತಿಗಳಿಂದ ಹೊರಬಿದ್ದರು. ಹತ್ತಿರದ ಮನೆಯವರು ಊಟಕ್ಕೆ ಓಡಿದರು. ಬುತ್ತಿ ತಂದ ಮಕ್ಕಳು ಬಾವಿಕಟ್ಟೆಗೆ ನಡೆದರು. ಗೋಪಿ ತನ್ನ ಬುತ್ತಿ ಎತ್ತಿಕೊಂಡ, ಎಂದಿನಂತೆ, "ಬಾರೋ ಸುಬ್ಬು" ಎಂದು ಗೆಳೆಯನನ್ನು ಕೂಗಿದ.

"ನನಗೆ ಹಸಿವಿಲ್ಲ ಕಣೋ, ನಾನು ಬುತ್ತಿ ತಂದಿಲ್ಲ." ಸುಬ್ಬು ಉತ್ತರ ಕೊಟ್ಟ. ನಿನ್ನೆಯೂ "ಹಸಿವಿಲ್ಲ ಬುತ್ತಿ ತಂದಿಲ್ಲ" ಎಂದಿದ್ದೆ ನೀನು. ಇಂದೂ ಹಾಗೇ ಹೇಳುತ್ತೀಯಾ. ಯಾಕೋ, ಏನಾಯಿತೋ ನಿನಗೆ? ಬುತ್ತಿ ಯಾಕೆ ತಂದಿಲ್ಲ ಹೇಳು?" ಗೋಪಿ ಮತ್ತೆ ಕೇಳಿದ.

"ನನಗೆ ಹಸಿವಿಲ್ಲ ಎಂದೆನಲ್ಲ? ಅದಕ್ಕೇ ಬುತ್ತಿ ತಂದಿಲ್ಲ." ಸುಬ್ಬು ಹೇಳಿದ. ಅವನ ಮುಖ ಬಾಡಿತ್ತು. ದನಿ ನಡುಗುತ್ತಿತ್ತು. ಕಣ್ಣುಗಳಲ್ಲಿ ನೀರು ತುಂಬಿತ್ತು. ಅವನು ಎಂದಿನಂತಿಲ್ಲ ಎನ್ನುವುದು ಗೋಪಿಗೆ ಗೊತ್ತಾಯಿತು.

"ಸುಬ್ಬೂ, ನೀನು ನನ್ನ ದೋಸ್ತಿ ಅಲ್ವೇನೋ. ನನ್ನಲ್ಲೂ ನೀನು ಯಾಕೆ ಗುಟ್ಟು ಮಾಡ್ತೀ, ಹೇಳು?" ಗೋಪಿ ಒತ್ತಾಯಿಸಿದ.

ಸುಬ್ಬು ಮೆಲ್ಲನೆ ಬಾಯಿ ಬಿಟ್ಟ. "ಎರಡು ದಿನಗಳಿಂದ ಅಪ್ಪನಿಗೆ ಕೆಲಸ ಇಲ್ಲ. ಮನೆಯಲ್ಲಿ ಅಕ್ಕಿ ಮುಗಿದಿದೆ. ಗಂಜಿ ಮಾಡಿಲ್ಲ. ಮತ್ತೆ ಬುತ್ತಿ ಹೇಗೆ ತರಲಿ? ಏನನ್ನು ತರಲಿ?" ಅವನು ನಿಜ ನುಡಿದಿದ್ದ.



“ಹಾಗಾದರೆ ಬೆಳಿಗ್ಗೆ ಏನೂ ತಿಂದಿಲ್ಲವೇ?” ಗೋಪಿ ಕೇಳಿದ.

“ತಿಂದಿಲ್ಲ, ಆದರೆ ಕುಡಿದಿದ್ದೇನೆ.” ಸುಬ್ಬು ಉತ್ತರ ಕೊಟ್ಟ.

“ಏನನ್ನು ಕುಡಿದಿದ್ದೆ?” ಗೋಪಿಯ ಪ್ರಶ್ನೆ.

“ಹಾಲು ಹಾಕದ ಕಾಫಿಯನ್ನು. ಹಾಲು ನಮ್ಮಲ್ಲಿಲ್ಲ. ಅದನ್ನು ತರಲು ಹಣ ಕೊಡಬೇಕಲ್ಲ? ಹಾಗಾಗಿ ಬರಿ ಕಾಫಿಯನ್ನೇ ನಾವು ಕುಡಿಯುವುದು.” ಸುಬ್ಬು ವಿವರಣೆ ನೀಡಿದ.

ಗೋಪಿಗೆ ಬಹಳ ಕೆಡುಕೆನಿಸಿತು. “ನೀನು ಬುತ್ತಿ ತರದಿದ್ದರೇನು? ನಾನು ತಂದಿದ್ದೇನಲ್ಲ? ಸದ್ಯ ಇರುವುದನ್ನು ಹಂಚಿ ತಿನ್ನೋಣ” ಅವನು ಸುಬ್ಬುವನ್ನು ಕರೆದ.” ಬೇಡ, ನಾನು ಬರುವುದಿಲ್ಲ.” ಎಂದ ಸುಬ್ಬು.

ಗೋಪಿ ಬಿಡಲಿಲ್ಲ. “ನೀನು ಬರದಿದ್ದರೆ ಚಿಂತಿಲ್ಲ. ನಾನೂ ಬುತ್ತಿ ಉಣ್ಣುವುದಿಲ್ಲ.” ಅವನೂ ಗಟ್ಟಿಯಾಗಿ ಕೂತು ಬಿಟ್ಟ. ಹತ್ತು ನಿಮಿಷ ಕಳೆದು ಹೋಯಿತು.

“ಸುಮ್ಮನೆ ಹಠ ಹಿಡಿಯ ಬೇಡ ಗೋಪಿ. ನೀನಂತೂ ಬುತ್ತಿ ತಂದಿದ್ದೀಯಾ ಮತ್ತೆ ನೀನೇಕೆ ಉಪವಾಸ ಮಾಡಬೇಕು?” ಸುಬ್ಬು ಪ್ರಶ್ನೆ ಹಾಕಿದ.

ನಾವಿಬ್ಬರೂ ದೋಸ್ತಿಗಳು, ಒಟ್ಟಿಗೇ ಶಾಲೆಗೆ ಬರುವವರು, ಒಂದೇ ತರಗತಿಯಲ್ಲಿ ಕಲಿವವರು. ನಾನು ಬುತ್ತಿ ತಂದಿದ್ದೇನೆ. ಇದ್ದುದನ್ನು ಹಂಚಿ ತಿನ್ನೋಣ ಎಂದರೆ ನೀನೇಕೆ ಬೇಡ ಎನ್ನುತ್ತೀ? ನಿನಗೆ ನನ್ನ ಮೇಲೆ ಪ್ರೀತಿ ಇಲ್ಲವೇ? ನೀನು ನನ್ನ ದೋಸ್ತಿ ಅಲ್ಲವೇ? ಗೋಪಿ ವಾದ ಮಾಡಿದ.

ಕೊನೆಗೆ ಸುಬ್ಬು ತಾನೇ ಸೋಲಬೇಕಾಯಿತು.” ಆಗಲಿ ಗೋಪಿ, ನೀನು ಹೇಳಿದಂತೇ ಆಗಲಿ. ನಾನೂ ನಿನ್ನ ಜೊತೆ ಬರುತ್ತೇನೆ, ಬುತ್ತಿ ಉಣ್ಣುತ್ತೇನೆ.” ಎನ್ನುತ್ತಾ ಅವನು ಎದ್ದು ಬಂದ.

ಗೆಳೆಯರಿಬ್ಬರೂ ಬಾವಿಕಟ್ಟೆಗೆ ಬಂದರು, ಕೈಕಾಲು ತೊಳೆದುಕೊಂಡರು.

ಗೋಪಿ ಬುತ್ತಿಯ ಮುಚ್ಚಳ ತೆಗೆದ, ಬುತ್ತಿಯಲ್ಲಿದ್ದ ಎರಡು ಇಡ್ಲಿಗಳಲ್ಲಿ ಒಂದನ್ನು ಅದರಲ್ಲಿಟ್ಟ, ಸ್ವಲ್ಪ ಚಟ್ನಿಯನ್ನೂ ಹಾಕಿದ, ಅದನ್ನು ಸುಬ್ಬುಗೆ ನೀಡಿದ. ಇಬ್ಬರೂ ಒಂದೊಂದು ಇಡ್ಲಿ ತಿಂದರು. ಕೈ ಬಾಯಿ ತೊಳೆದು ಕೊಂಡರು.

"ನನ್ನಿಂದಾಗಿ ನಿನಗೆ ಅರೆಹೊಟ್ಟೆಯಾಯಿತು." ಸುಬ್ಬು ಪೇಚಾಡಿಕೊಂಡ.

"ಹಂಚಿ ಉಂಡರೆ ರುಚಿ ಹೆಚ್ಚಂತೆ. ನಮ್ಮಮ್ಮ ಹೇಳುತ್ತಾರೆ. ನನಗೆ ನಿಜಕ್ಕೂ ಸಂತೋಷವಾಗಿದೆ, ಹೊಟ್ಟೆ ತುಂಬಿದೆ. ನೀನೇನೂ ಯೋಚಿಸಬೇಡ." ಗೋಪಿ ಹೇಳಿದ.

"ಏನೇ ಆಗಲಿ. ನೀನು ಶಾಲೆಗೆ ಬರದಿರಬೇಡ ಸುಬ್ಬು. ನಾನಂತೂ ಬುತ್ತಿ ತರುತ್ತೇನೆ. ಇರುವುದನ್ನು ಹಂಚಿ ತಿನ್ನೋಣ. ನೀನು ನನ್ನ ದೋಸ್ತಿ ಹೌದಾದರೆ ಇದನ್ನು ಒಪ್ಪಿಕೊಳ್ಳಬೇಕು." ಅವನು ಮಾತು ಸೇರಿಸಿದ.

"ಉಪಕಾರ ಮಾಡಿದೆ ಗೋಪೀ.ನನಗೆ ನಿನ್ನಂಥ ದೋಸ್ತಿ ಬೇರೆ ಯಾರಿದ್ದಾರೆ ಹೇಳು?" ಸುಬ್ಬು ಕೇಳಿದ. ಅವನ ಕಣ್ಣುಗಳು ತುಂಬಿ ಬಂದಿದ್ದವು. ಮಾತು ಮೌನವಾಯಿತು. ಇಬ್ಬರು ತರಗತಿಗೆ ಹಿಂದಿರುಗಿದರು. ಗೋಪಿ ತುಂಬ ಖುಶಿಯಲ್ಲಿದ್ದ.

ಸಂಜೆ ಶಾಲೆ ಬಿಟ್ಟು ಮನೆ ಬರುವಾಗಲೂ ಗೋಪಿ ಸುಬ್ಬನ ಬಗ್ಗೆ ಯೋಚಿಸುತ್ತಿದ್ದ. ಅವನಿಗಾಗಿ ತಾನು ಏನಾದರೂ ಮಾಡಬೇಕಲು. ಎನ್ನುವುದು ಅವನ ಬಯಕೆಯಾಗಿತ್ತು. ಅಂತೂ ಆ ದಿನ ಹಾಗೆ ಕಳೆಹೋಯಿತು.

ಮರುದಿನ ಗೋಪಿ ಶಾಲೆಗೆ ಹೊರಡುವ ಸಮಯ. ಅವನ ಊಟ ಆಗಲೇ ಮುಗಿದಿತ್ತು. ಅವನು ಅಂಗಿ ಚಡ್ಡಿ ಧರಿಸಿದ್ದ ಪುಸ್ತಕಗಳನ್ನು ಚೀಲದಲ್ಲಿ ತುಂಬಿದ್ದ. ಇನ್ನು ಬುತ್ತಿ ಸಿದ್ಧವಾಗಬೇಕಲ್ಲ?" ಅಮ್ಮಾ, ಬುತ್ತಿ ಹಾಕಿದೆಯಾ?" ಅವನು ವಿಚಾರಿಸಿದ.

"ಹೂಂ, ಹಾಕುತ್ತಿದ್ದೇನೆ" ಅಮ್ಮ ಉತ್ತರ ಕೊಟ್ಟರು. ಗೋಪಿ ಅಡುಗೆ ಮನೆಗೆ ನಡೆದ. "ಅಮ್ಮ, ನನ್ನ ಬುತ್ತಿಗೆ ಒಂದು ಇಡ್ಲಿ ಜಾಸ್ತಿ ಹಾಕುತ್ತೀಯಾ" ಅವನು ಅಮ್ಮನನ್ನು ಕೇಳಿದ.

ಅಮ್ಮನಿಗೆ ಆಶ್ಚರ್ಯವಾಯಿತು. ಮಗನ ಬುತ್ತಿಯಲ್ಲಿ ಅವರು ಎರಡು ಇಡ್ಲಿ ಇಡುತ್ತಿದ್ದರು. "ಅದು ಹೆಚ್ಚಾಯಿತು, ಒಂದೇ ಇಡ್ಲಿ ಸಾಕು ನನಗೆ"? ಎನ್ನುತ್ತಿದ್ದ ಗೋಪಿ. ಆದರೂ ಅಮ್ಮ ಎರಡು ಇಡ್ಲಿ ಹಾಕಿಯೇ ಹಾಕುತ್ತಿದ್ದರು. ಒಂದೊಂದು ಬಾರಿ ಅದರಲ್ಲಿ ಅರ್ಧ ಇಡ್ಲಿ ಹಿಂದೆ ಬರುವುದು ಇತ್ತು. ಹಾಗಿರುವಾಗ "ಇಂದು ಒಂದು ಇಡ್ಲಿ ಹೆಚ್ಚು ಹಾಕುತ್ತಿಯಾ?" ಎಂದು ಮಗ ಕೇಳುತ್ತಿದ್ದಾನೆ. ಅಮ್ಮನಿಗೆ ಬಹಳ ಸಂತೋಷವಾಯಿತು. "ಏನು, ಪುಟ್ಟಾ ನಿನಗೀಗ ಹಸಿವು ಹೆಚ್ಚಾಗಿದೆಯಾ? ಖುಶಿಯಾಯಿತು ಬಿಡು, ನೀನು ತಿನ್ನುವೆಯಾದರೆ ಒಂದಲ್ಲ ಎರಡು ಇಡ್ಲಿ ಹೆಚ್ಚು ಹಾಕುತ್ತೇನೆ." ಅವರು ಹೇಳಿದರು.

"ಎರಡು ಬೇಡಮ್ಮಾ, ಒಂದು ಇಡ್ಲಿ ಹೆಚ್ಚು ಇರಲಿ. ಅಷ್ಟು ಸಾಕು ನನಗೆ" ಎಂದ ಗೋಪಿ.

"ಅಂದರೆ ಒಟ್ಟು ಮೂರು ಇಡ್ಲಿ ತಾನೇ? ಖಂಡಿತ ಹಾಕುತ್ತೇನೆ.

ಆದರೆ ಒಂದು, ಅದನ್ನೆಲ್ಲ ನೀನು ತಿನ್ನಬೇಕು. ಅರ್ಧಕ್ಕರ್ಧ ಹಿಂದೆ ತರಬಾರದು ಮತ್ತೆ." ಅಮ್ಮ ಷರತ್ತು ಹಾಕಿದರು.

ಈಗ ಗೋಪಿಗೆ ಒಂದು ಸಮಸ್ಯೆ ಎದುರಾಯಿತು, ಅದೇನು ಗೊತ್ತೆ? ಶಾಲೆ ದೂರವಿದ್ದುದರಿಂದ ಅವನು ಬುತ್ತಿ ಒಯ್ಯುತ್ತಿದ್ದ. ಆದರೆ ಎರಡು ಇಡ್ಲಿಗಿಂತ ಹೆಚ್ಚು ಅವನು ತಿನ್ನುತ್ತಿರಲಿಲ್ಲ. ಆದರೆ ಇಂದು ಮೂರು ಇಡ್ಲಿ ಬೇಕೆಂದು ಅವನೇ ಹೇಳಿದ್ದಾನೆ.

ಎಲ್ಲವನ್ನೂ ತಿನ್ನಬೇಕು. ಹಿಂದೆ ತರಬಾರದು ಎನ್ನುವುದು ಅಮ್ಮನ ಷರತ್ತು. ಆಗಲಿ ಎಲ್ಲವನ್ನೂ ತಿನ್ನುತ್ತೇನೆ" ಎಂದು ಅಮ್ಮನಲ್ಲಿ ಸುಳ್ಳು ಹೇಳಬೇಕೆ? ಹಾಗೆ ಹೇಳಬಹುದೇ? ಅದು ತಪ್ಪಲ್ಲವೇ? ಅವನು ಯೋಚನೆಗೆ ಒಳಗಾದ.

"ಏನೋ ಗೋಪೀ, ಯಾಕೆ ಸುಮ್ಮನಿದ್ದೀಯಾ? ಬುತ್ತಿಗೆ ಹಾಕಿ ಕೊಟ್ಟದನ್ನೆಲ್ಲ ತಿನ್ನುತ್ತೀಯಷ್ಟೇ:" ಅವರು ಇನ್ನೊಮ್ಮೆ ಕೇಳಿದರು. "ಅಮ್ಮಾ, ನಾನು ತಿನ್ನುವುದು ಎರಡೇ ಇಡ್ಲಿ ...."ಗೋಪಿ ರಾಗ ಎಳೆದ"ಮತ್ತೆ 'ಮೂರು ಬೇಕಲು' ಎಂದೆಯಲ್ಲ?

ಯಾಕೆ? ಯಾರಿಗದು? ಅವರು ಕುತೂಹಲ ತೋರಿದರು.

"ಅದೂ.....ಅದೂ ......" ಗೋಪಿ ತಡವರಿಸಿದ, "ಏನೋ ಅದು? ಯಾಕೆ ತಡವರಿಸುತ್ತೀ? ನೀನು ತಿನ್ನುವುದು ಎರಡೇ ಇಡ್ಲಿ ಎನ್ನುತ್ತೀ. ಬುತ್ತಿಗೆ ಮಾತ್ರ ಮೂರು ಹಾಕಿಬಿಡಿ ಎನ್ನುತ್ತೀ. ಏನಿದು ವಿಚಿತ್ರ? ನಿಜಸಂಗತಿ ಹೇಳ ಬಾರದೇ?" ಅಮ್ಮಾ ಒತ್ತಾಯಿಸಿದರು. ಗೋಪಿ ಬಾಯಿಬಿಡಲೇ ಬೇಕಾಯಿತು.


"ಅಮ್ಮಾ, ನಮ್ಮ ಸುಬ್ಬು ಇದ್ದಾನಲ್ಲ? ಕೆಲವು ದಿನ ಅವನ ಅಪ್ಪನಿಗೆ ಕೆಲಸ ಇರುವುದಿಲ್ಲ. ಆಗ ಉಣ್ಣಲಿಕ್ಕೂ ಕಷ್ಟ ಅವರಿಗೆ. ಎಷ್ಟೋ ಬಾರಿ ಗಂಜಿ ಸಹ ಉಣ್ಣದೆ ಶಾಲೆಗೆ ಬರುತ್ತಾನೆ. ಮತ್ತೆ ಬುತ್ತಿ ಹೇಗೆ ತಂದಾನು? ಅವನು ಬುತ್ತಿ ತರದ ದಿನ, ಒತ್ತಾಯಮಾಡಿ ಅವನನ್ನು ನಾನು ಎಬ್ಬಿಸುತ್ತೇನೆ. ನನ್ನ ಬುತ್ತಿಯಲ್ಲಿ ಇರುವುದನ್ನು ಅವನ ಜೊತೆ ಹಂಚಿ ತಿನ್ನುತ್ತೇನೆ. ದಿನವೂ ಬುತ್ತಿಯಲ್ಲಿ ನೀನು ಎರಡು ಇಡ್ಲಿ ಅಥವಾ ದೋಸೆ ಇರಿಸುತ್ತಿಯಲ್ಲ? ಎರಡರ ಬದಲು, ಮೂರು ಇರಸಿದರೆ ನಾವಿಬ್ಬರು ಹಂಚಿ ತಿನ್ನುತ್ತೇವೆ. ಅದಕ್ಕಾಗಿ ಹಾಗೆ ಹೇಳಿದೆ, ಅಮ್ಮಾ ...."ಗೋಪಿ ಮಾತು ನಿಲ್ಲಿಸಿದ. ಅಮ್ಮಾ ಏನು ಹೇಳುತ್ತಾಳೋ ಎಂಬ ಹೆದರಿಕೆ ಅವನಿಗೆ. ಕಾತರದಿಂದ ಅವನು ಅಮ್ಮನ ಮುಖವನ್ನೆ ದಿಟ್ಟಿಸುತ್ತಿದ್ದ.

ಮಗನ ಮಾತನ್ನು ಅಮ್ಮ ಕಿವಿಗೊಟ್ಟು ಕೇಳಿದರು. ಅವನ ಒಳ್ಳೆಯ ಬುದ್ಧಿಗಾಗಿ ಅವರು ಹೆಮ್ಮೆಪಟ್ಟರು. ಮಗೂ, ನೀನು ಸತ್ಯವನ್ನೇ ಆಡಿದ್ದೀಯಾ ಕಷ್ಟದಲ್ಲಿರುವ ಗೆಳೆಯನಿಗೆ ಸಹಾಯವನ್ನೂ ಮಾಡಿದ್ದೀಯಾ ನಿಜಕ್ಕೂ ನನಗೆ ಸಂತೋಷವಾಗಿದೆ. ನಮಗೆ ಶಕ್ತಿ ಇರುವಷ್ಟು ಕಾಲ ಇಂಥ ಕೆಲಸ ನಡೆಯುತ್ತಿರಲಿ" ಅವರು ಹೇಳಿದರು. ಮತ್ತೆ ಬುತ್ತಿಗೆ ಇಡ್ಲಿಗಳನ್ನು ತುಂಬಿ, ಮಗನ ಕೈಗಿತ್ತರು." ಇದರಲ್ಲಿ ನಾಲ್ಕು' ಇಡ್ಲಿಗಳಿವೆ. ನಿನಗೆರಡು ನಿನ್ನ ಗೆಳೆಯನಿಗೆರಡು." ಅವರೆಂದರು."ಹಾಗಾದರೆ ಇನ್ನು ಇಬ್ಬರಿಗೂ ಬುತ್ತಿ ನಾನೇ ತರುತ್ತೇನೆ ಎಂದು ಸುಬ್ಬುಗೆ ಹೇಳಿಬಿಡಲೇ?" ಉತ್ಸಾಹದಿಂದ ಗೋಪಿ ಕೇಳಿದ. ಅಮ್ಮ ಕೊಡುವುದನ್ನು ಖಾತರಿಪಡಿಸಿಕೊಳ್ಳುವ ಉದ್ದೇಶ ಅವನದು.

"ಆಗಲಿ ಮಗೂ. ಸುಬ್ಬು ಚೆನ್ನಾಗಿ ಕಲಿಯಲಿ-ಅವನ ಕಷ್ಟದ ದಿನಗಳು ಮುಗಿಯುವವರೆಗೂ ನಮ್ಮಿಂದಾಗುವ ಸಹಾಯ ಮಾಡೋಣ ಅಮ್ಮ ಭರವಸೆ ನೀಡಿದರು. "ನನಗೀಗ ತುಂಬ ಖುಶಿಯಾಯಿತಮ್ಮಾ" ಹಿಗ್ಗಿ ಕುಣಿದಾಡುತ್ತ, ಗೋಪಿ ಅಮ್ಮನ ಕೈಗೊಂದು ಮುದ್ದಿನ ಮುದ್ರೆ ಒತ್ತಿದ.

# ತಿದ್ದಿಕೊಂಡ ತಪ್ಪು

ಬೆಳಗಿನ ಸಮಯವದು. ಬಹಳ ಹೊತ್ತಿನಿಂದ ಮಳೆಸುರಿಯುತ್ತಿತ್ತು. ಥಂಡಿ ಗಾಳಿ ಬೀಸುತ್ತಿತ್ತು. ಆಗೊಮ್ಮೆ ಕೇಳಿಸಿತು ಭಯಂಕರವಾದ ಗುಡುಗಿನ ಸದ್ದು. ಆ ಸದ್ದಿಗೆ ನಾಣಿಯ ನಿದ್ರೆ ಹಾರಿಯೋಯಿತು. ಅವನು ತನ್ನ ಹೊದಿಕೆ ಸರಿಸಿದ; ಕಣ್ಣು ಬಿಟ್ಟು ಅತ್ತಿತ್ತ ನೋಡಿದ. ಅವನ ಅಪ್ಪ-ಅಮ್ಮ ಆಗಲೇ ಎದ್ದಿದ್ದರು. ಹೊತ್ತು ಮೂಡಿದ್ದರೂ ಸೂರ್ಯ ಮಾತ್ರ ಕಾಣಿಸುತ್ತಿರಲಿಲ್ಲ.



ವಾಣಿ ಎದ್ದು ಕೂತ. ಚಾಪೆ ಮಡಚಿಟ್ಟು, ಪಡಸಾಲೆಗೆಬಂದ. ಅವನ ಅಮ್ಮ ಅಡುಗೆ ಮನೆಯಲ್ಲಿದ್ದಳು. ಅಪ್ಪ ಚಾವಡಿಯಲ್ಲಿದ್ದ ಬೆಂಚಿನ ಮೇಲೆ ಕೂತು, ಬೀಡಿ ಸೇದುತ್ತಿದ್ದ, ಉಂಡೆ ಉಂಡೆ ಹೊಗೆ ಬಿಡುತ್ತಿದ್ದ. ಏನನ್ನೋ ಯೋಚಿಸುತ್ತಿರುವಂತೆ ಅವನು ಅಲ್ಲಿ ಕೂತೇ ಇದ್ದ.

ನಾಣಿ ಇನ್ನೂ ಪಡಸಾಲೆಯಲ್ಲೇ ನಿಂತಿದ್ದ. ಕಿಟಕಿಯ ಮೂಲಕ ಅವನು ಬೀಡಿ ಸೇದುವ ಅಪ್ಪನನ್ನೆ ನೋಡುತ್ತಿದ್ದ. ಅಂಥ ನೋಟವನ್ನು ಅವನು ಹಲವು ಬಾರಿ ಕಂಡಿದ್ದ. ಅದರ ಬಗ್ಗೆ ಅವನೆಂದೂ ಯೋಚಿಸಿರಲಿಲ್ಲ. ಆದರೆ ಇಂದು ಹಾಗಾಗಲಿಲ್ಲ ಏನೇನೋ ಯೋಚನೆಗಳು ಅವನನ್ನು ಕಾಡತೊಡಗಿದವು.

"ಈ ಅಪ್ಪ ಯಾಕೆ ಬೀಡಿ ಸೇದುತ್ತಾನೆ?" ಅವನು ತನಗೆ ತಾನೆ ಕೇಳಿಕೊಂಡ. ಅದರಲ್ಲಿ ಏನೋ ಮಜ ಇರಬೇಕು. ಅಥವಾ ರುಚಿ ಇರಬೇಕು. ಏನಿದೆಯೋ ಯಾರಿಗೆ ಗೊತ್ತು? ಒಮ್ಮೆ ಅದನ್ನು ಪರೀಕ್ಷಿಸಿ ನೋಡಬೇಕು. ಆದರೆ ಹೇಗೆ? ಅಪ್ಪ ಅದನ್ನು ಕೊಡುವಂತಿಲ್ಲ. ನಾನಾಗಿ ಕೇಳಿದರೂ ಕಣ್ಣು ಕೆಂಪಗೆ ಮಾಡಿ, ಗದರಿಸಿಬಿಟ್ಟಾನು. ಏನು ಮಾಡಲಿ?" ಅವನು ಯೋಚಿಸಿದ. ಥಟ್ಟನೆ ಅವನಿಗೊಂದು ಯೋಚನೆ ಹೊಳೆಯಿತು.

ನಾಣಿ ಹಲ್ಲುಜ್ಜಲು ಹೊರಟು ಹೋದ. ಬೇಗ ಬೇಗನೆ ಅವನು ಹಲ್ಲುಜ್ಜಿ, ಮುಖತೊಳೆದ, ಅಷ್ಟರಲ್ಲಿ ಮಳೆ ಕಡಿಮೆಯಾಗಿತ್ತು. ಅಪ್ಪ ಹಟ್ಟಿಗೆ ಹೋಗಿದ್ದ. ನಾಣಿ ಚಾವಡಿಗೆ ಬಂದ, ಒಂದು ಬಾರಿ ಬೀಡಿ ಸೇದಬೇಕು ಎನಿಸಿತು ಅವನಿಗೆ. ಬೀಡಿಗಾಗಿ ಅವನು ಅತ್ತಿತ್ತ ಕಣ್ಣಾಡಿಸಿದ. ಅಲ್ಲೇನೂ ಇರಲಿಲ್ಲ. ಅವನು ಜಗಲಿಗೆ ಬಂದ. ಕೆಳಗಡೆ ಬಗ್ಗಿ ನೋಡಿದ. ಅಪ್ಪ ಎಸೆದ ಬೀಡಿಯ ಕುತ್ತಿ ಅಲ್ಲಿತ್ತು. ಸಾಕಷ್ಟು ದೊಡ್ಡದಾಗಿಯೂ ಇತ್ತು ಅದು. ಅದರ ಬೆಂಕಿ ಆರಿರಲಿಲ್ಲ.

ನಾಣಿ ಜಗಲಿಯಿಂದ ಕೆಳಗಿಳಿದ. ಬೀಡಿ ಕುತ್ತಿಯನ್ನು ಎತ್ತಿಕೊಂಡು ಪಕ್ಕದ ಕೋಣೆಗೆ ಓಡಿದ. ಕಿಟಕಿಯ ಬಳಿ ನಿಂತು, ದಮ್ಮಲು ಎಳೆಯುತೊಡಗಿದ. ಮೊದಲ ಬಾರಿಗೆ ಅವನು ಬೀಡಿ ಸೇದುತ್ತಿದ್ದ ಹಾಗೆ ದಮ್ಮು ಎಳೆದಾಗ ಅವನ ಗಂಟಲಲ್ಲಿ ಹೊಗೆ ಸಿಕ್ಕಿಕೊಂಡಿತು.

ಉಸಿರು ಕಟ್ಟಿದಂತಾಗಿ ಕೆಮ್ಮು ಬಂದಿತು. ಕಣ್ಣುಗಳಲ್ಲಿ ನೀರು ತುಂಬಿತು. ಆದರೂ ಅವನು ಸಾವರಿಸಿಕೊಂಡ. ಮತ್ತೆ ದಮ್ ಎಳೆದ. ಅಪ್ಪನ ಹಾಗೆ 'ಥೂ' ಎಂಧು ಹೊಗೆ ಉಗುಳಿದ. ಅದು ಮೇಲೇರುವುದನ್ನು ನೋಡಿ ಖುಶಿ ಪಟ್ಟ.

ಅಷ್ಟರಲ್ಲಿ ಏನಾಯಿತು ಗೊತ್ತೇ? ಹಟ್ಟಿಗೆ ಹೋಗಿದ್ದ ಅಪ್ಪ ಮನೆಗೆ ಹಿಂದಿರುಗಿದ. ಹಾಗೆ ಬರುವಾಗ ಕೋಣೆಯ ಕಿಟಕಿಯಿಂದ ಹೊರಹೊಮ್ಮಿದ ಹೊಗೆ ಅವನ ಗಮನ ಸೆಳೆಯಿತು. ಅವನು ಸರಸರನೆ ಒಳಗೆ ಬಂದ. ನಾಣಿ ಬೀಡಿ ಸೇದುವುದನ್ನು ಅವನು ನೋಡಿದ. ಅವನ ಸಿಟ್ಟು ನೆತ್ತಿಗೇರಿತು. "ಏ ಘಟಿಂಗ, ಇದೇನು ಮಾಡುತ್ತೀಯಾ?" ಎನ್ನುತ್ತಾ ಮಗನಿಗೆ ಅವನು ಹೊಡೆಯತೊಡಗಿತು. ನಾಣಿಯ ಕೈಯಲ್ಲಿದ್ದ ಬೀಡಿ ಕುತ್ತಿ ಕೆಳಗೆ ಬಿತ್ತು. "ಅಪ್ಪಾ, ಹೊಡೆಯಬೇಡಪ್ಪಾ. ಇನ್ನು ಹೀಗೆ ಮಾಡುವುದಿಲ್ಲಪ್ಪಾ" ಅವನು ಬೊಬ್ಬಿಟ್ಟ.

"ಚೋಟುದ್ದದ ಹುಡುಗ. ಈಗಲೇ ಬೀಡಿ ಸೇದುತ್ತಿಯೇನೋ" ಎಂದು ಅಬ್ಬರಿಸುತ್ತ, ಅಪ್ಪ ಹೊಡೆಯುತ್ತಲೇ ಇದ್ದ.

"ಎಷ್ಟು ಹೊಡೆಯುತ್ತೀರಾ? ಸ್ವಲ್ಪ ನಿಲ್ಲಿಸಬಾರದೇ?" ಅಮ್ಮ ಅಂಗಲಾಚಿದಳು. ಆದರೂ ಅಪ್ಪನ ಕೋಪ ತಣಿಯಲಿಲ್ಲ. ಅವನು ಒಂದು ಕೈಯಲ್ಲಿ ಮಗನನ್ನು ಹಿಡಿದುಕೊಂಡಿದ್ದ, ಇನ್ನೊಂದು ಕೈಯಲ್ಲಿ ಅವನ ಬೆನ್ನಿಗೆ ರಪರಪನೆ ಬಾರಿಸುತ್ತಿದ್ದ. ನಾಣಿ, ಹೊಡೆತಗಳನ್ನು ತಪ್ಪಿಸಿಕೊಳ್ಳಲು ಹೆಣಗುತ್ತ, ಬೊಬ್ಬಿಡುತ್ತಿದ್ದ. ನೆರೆಯ ಮನೆಗಳಿಗೂ ಕೇಳಿಸುವಷ್ಟು, ಗಟ್ಟಿಯಾಗಿತ್ತು ಅವನ ಬೊಬ್ಬೆ. ಅದನ್ನು ಕೇಳಿದ ಬಾಬು ಮಾಸ್ತರರಿಗೆ ತಡೆಯಲಾಗಲಿಲ್ಲ. ಅವರು ಅಲ್ಲಿಗೆ ಓಡಿ ಬಂದರು.

"ಏ ತಿಮ್ಮಾ, ಏನಾಯಿತು, ಹೇಳು? ಮಗುವನ್ನು ಯಾಕೆ ಹೀಗೆ ಹೊಡೆಯುತ್ತೀಯಾ? ಸಾಕು ಇನ್ನಾದರೂ ನಿಲ್ಲಿಸು" ಎನ್ನುತ್ತ ಅವರು ಅಡ್ಡ ಬಂದರು. ತಿಮ್ಮನ ಕೈಯಿಂದ ನಾಣಿಯನ್ನು ಬಿಡಿಸಿದರು.

"ನಾನು ಸುಮ್ಮಸುಮ್ಮನೆ ಹೊಡೆಯುತ್ತಿಲ್ಲ, ಮಾಸ್ತರರೇ, ಚೋಟುದ್ದ ಇದ್ದಾನೆ ನೋಡಿ, ಈಗಲೇ ಇವನು ಬೀಡಿ ಸೇದತೊಡಗಿದ್ದಾನೆ!" ತಿಮ್ಮ ವಿವರಣೆ ನೀಡಿದ.

"ಏನು, ಇವನು ಬೀಡಿ ಸೇದುತ್ತಾನೆಯೇ? ಹಾಗಿದ್ದರೆ ಅದಕ್ಕೆ ಕಾರಣ ಯಾರು ಗೊತ್ತೆ? ನೀನು, ನೀನೇ ಕಾರಣ ಇದು ನಿನಗೆ ತಿಳಿದಿರಬೇಕು" ಮಾಸ್ತರರು ಒತ್ತಿ ಹೇಳಿದರು.

"ನೀವೇನು ಹೇಳುತ್ತಿದ್ದೀರಿ ಮಾಸ್ತರರೇ? ಇವನಿಗೆ ನಾನು" "ಬೀಡಿ ಸೇದು" ಎಂದಿದ್ದೇನೆಯೇ?" ಆಶ್ಚರ್ಯದಿಂದ ಪ್ರಶ್ನಿಸಿದ ತಿಮ್ಮ.

"ಇಲ್ಲ, ನೀನು ಇವನಿಗೆ "ಬೀಡಿ ಸೇದು" ಎನ್ನಲಿಲ್ಲ ಸೇದಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದೆ ಅಷ್ಟೆ" ಸಮಾಧಾನದಿಂದಲೇ ಹೇಳಿದರು ಮಾಸ್ತರರು.

ತಿಮ್ಮನಿಗೆ ಅವರ ಮಾತು ಅರ್ಥವಾಗಲಿಲ್ಲ. ಅವನು ಅವರ ಮುಖವನ್ನೇ ಮಿಕಿಮಿಕಿ ನೋಡತೊಡಗಿದ.

"ತಿಮ್ಮಾ, ಇಲ್ಲಿ ಕೇಳು, ಅನುಕರಣೆ ಮಕ್ಕಳ ಸಹಜ ಗುಣ. ಹಿರಿಯರನ್ನು ನೋಡಿ ಅವರು ಮಾತು ಕಲಿಯುತ್ತಾರೆ. ಹಿರಿಯರನ್ನು ನೋಡಿಯೇ ರೀತಿ ನೀತಿಗಳನ್ನು ತಿಳಿಯುತ್ತಾರೆ. ಆದ ಕಾರಣ, ಮಕ್ಕಳು ಆಡಬಾರದ ಮಾತು ನಮ್ಮ ಬಾಯಿಯಿಂದ ಬರಬಾರದು; ಅವರು ಮಾಡಬಾರದ ಕೆಲಸವನ್ನು ನಾವೆಂದೂ ಮಾಡಬಾರದು. ಮಕ್ಕಳ ಮೇಲೆ ಹೆತ್ತವರ ಮತ್ತು ಗುರುಗಳ ಪ್ರಭಾವ ಬಹಳ ಹೆಚ್ಚು. ಅವರ ಅನುಕರಣೆಯಿಂದಲೇ ಮಕ್ಕಳು ಹೆಚ್ಚಿನದನ್ನು ಕಲಿಯುವುದಾಗಿದೆ. ನೀನು ಬೀಡಿ ಸೇದಿದೆ. ನಿನ್ನ ಮಗ ಅದನ್ನು ನೋಡಿದ. ಅದರಲ್ಲೇನೋ ಮಜ ಇದೆ. ಹಾಗಾಗಿಯೆ ಅಪ್ಪ ಬೀಡಿ ಸೇದುತ್ತಾನೆ ಎಂದು ಅವನು ನಂಬಿದ. ಅಂತ ಕುತೂಹಲದಿಂದಲೇ ಅವನು ಬೀಡಿ ಸೇದತೊಡಗಿದ. ಇದರಲ್ಲಿ ಅವನ ತಪ್ಪಿಗಿಂತ ನಿನ್ನ ತಪ್ಪೇ ಹೆಚ್ಚಿನದು. ಇದನ್ನು ಅರ್ಥಮಾಡಿಕೋ. ಮಕ್ಕಳು ತಪ್ಪು ಕೆಲಸ ಮಾಡಿದಾಗ,

ಅದು ತಪ್ಪು ಏಕೆ? ಹೇಗೆ? ಇದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಆಗ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ" ಮಾಸ್ತರರು ಬುದ್ದಿ ಹೇಳಿದರು.

ಕ್ಷಣಕಾಲ ತಿಮ್ಮ ಯೋಚಿಸುತ್ತಲೇ ಇದ್ದ. ಅವನಿಗೆ ಮಾಸ್ತರರ ಮಾತು ನಿಜ ಎನಿಸಿರಬೇಕು. "ನನ್ನಿಂದ ತಪ್ಪಾಯಿತು ಮಾಸ್ತರರೇ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ತಪ್ಪನ್ನು ತಿದ್ದಿಕೊಳ್ಳಲು ಯತ್ನಿಸುತ್ತೇನೆ. ಅವನು ಭರವಸೆ ನೀಡಿದ. ಮಾಸ್ತರರಿಗೆ ಸಮಾಧಾನವಾಯಿತು.

ಹೊಗೆ ಬತ್ತಿ ಸೇವನೆಯಿಂದ ತಮ್ಮ ಆರೋಗ್ಯ ಕೆಡುತ್ತದೆ. ಮಗೂ. ಬಹಳ ಕೆಟ್ಟ ಚಟ ಅದು. ಅದರಿಂದ ನಾವು ದೂರವಿರಬೇಕು." ನಾಣಿಯ ಕಡೆಗೆ ತಿರುಗಿ ಹೇಳಿದರು ಮಾಸ್ತರರು.

"ಆಗಲಿ ಸಾರ್. ಇನ್ನು ಹೀಗೆ ಮಾಡುವುದಿಲ್ಲ" ಆವನೂ ಮಾತು ಕೊಟ್ಟ.

ಮಾಸ್ತರರಿಗೆ ಖುಷಿಯಾಯಿತು "ಸರಿಯಪ್ಪ ನಾನಿನ್ನು ಬರುತ್ತೇನೆ" ಎನ್ನುತ್ತ ಅವರು ಅಲ್ಲಿಂದ ಹೊರಟುಹೋದರು.

"ಬಾ ಮಗೂ, ನಿನ್ನ ಬೆನ್ನಿಗೆ ಸ್ವಲ್ಪ ಎಣ್ಣೆ ತಿಕ್ಕುತ್ತೇನೆ." ಅಮ್ಮ ನಾಣಿಯನ್ನು ಕರೆದಳು. ಅವಳೊಂದಿಗೆ, ಅವನು ಅಡುಗೆ ಮನೆ ಕಡೆಗೆ ಹೆಜ್ಜೆ ಹಾಕಿದ.

"ಅಪ್ಪ ಬೀಡಿ ಸೇದದೆ ಇರುತ್ತಿದ್ದರೆ ನನಗೆ ಇಂಥ ಯೋಚನೆಯೇ ಬರುತ್ತಿರಲಿಲ್ಲ" ಅವನು ತನಗೆ ತಾನೇ ಹೇಳಿಕೊಳ್ಳುತ್ತಿದ್ದ; ಬಾಬು ಮಾಸ್ತರರಿಗೆ ಮನದಲ್ಲೇ ವಂದಿಸುತ್ತಿದ್ದ.

## ಸಕಾಲಿಕ ಸಹಾಯ

ಕಮಲಿ ಮತ್ತು ವಿಮಲಿ ಆತ್ಮೀಯ ಗೆಳತಿಯರು. ಊರ ಪ್ರೌಢ ಶಾಲೆಯಲ್ಲಿ ಅವರು ಕಲಿಯುತ್ತಿದ್ದರು. ಇಬ್ಬರೂ ಎಂಟನೆಯ ತರಗತಿ ವಿದ್ಯಾರ್ಥಿನಿಯರು. ಜೊತೆಯಾಗಿ ಅವರು ಶಾಲೆಗೆ ಹೋಗುತ್ತಿದ್ದರು, ಜೊತೆಯಾಗಿಯೇ ಮನೆಗೆ ಬರುತ್ತಿದ್ದರು. ಎಂದೂ ಅವರು ಒಬ್ಬರನ್ನೊಬ್ಬರು ಆಗಲಿ ಇರುತ್ತಿರಲಿಲ್ಲ.



ಅಂದು ಆದಿತ್ಯ ವಾರವಾಗಿತ್ತು. ಶಾಲೆಗೆ ರಜೆ ಇತ್ತು. ಹುಡುಗಿಯರಿಬ್ಬರೂ ಬೆಳಗ್ಗಿನ ಉಪಾಹಾರ ತೀರಿಸಿದರು, ಕೊಳೆಯಾದ ತಮ್ಮ ಬಟ್ಟೆಬರೆಗಳನ್ನು ತೆಗೆದುಕೊಂಡರು, ಅವುಗಳನ್ನು ಬಕೆಟಿನೊಳಗೆ ತುಂಬಿ, ತುಂಡು ಸಾಬೂನನ್ನು ಕೈಗೆತ್ತಿಕೊಂಡು ಅವರು ಬಾವಿಕಟ್ಟೆ ಕಡೆಗೆ ಹೆಜ್ಜೆ ಹಾಕಿದರು. ಆಗಲೇ ಕಮಲಿಯ ಅಮ್ಮ ಅವಳನ್ನು ಕರೆದರು "ಕಮಲೀ, ನನಗೆ ತುಂಬ ಕೆಲಸವಿದೆ ಮಗೂ ನನ್ನದೊಂದು ಸೀರೆಯನ್ನು ಸಹ ಒಗೆದು ತರುತ್ತೀಯಾ? ಅವರು ಕೇಳಿದರು.

"ಆಗಲಮ್ಮಾ, ನನಗೆ ತಿಳಿದಂತೆ ಒಗೆದು ತರುತ್ತೇನೆ" ಕಮಲಿ ಹೇಳಿದಳು. ತನ್ನ ಲಂಗ, ರವಕೆಗಳೊಡನೆ ಅವಳಮ್ಮನ ಸೀರೆಯನ್ನೂ ಇರಿಸಿದಳು. ಗೆಳತಿಯರಿಬ್ಬರೂ ಬಾವಿಕಟ್ಟೆಯ ಬಳಿಗೆ ಬಂದರು.

ಹಳೆಯ ಕಾಲದ ಬಾವಿ ಅದು. ಸುಮಾರು ಹದಿನೈದು ಅಡಿ ಆಳವಿತ್ತು. ಅದರಲ್ಲಿ ಏಳೆಂಟು ಅಡಿಗಳ ತನಕ ನೀರು ತುಂಬಿತ್ತು. ಬಾವಿಯ ಸುತ್ತ ಗೋಡೆ ಇರಲಿಲ್ಲ. ಅದರ ಬದಲು ಕಂಗಿನ ಸಲಿಕೆಗಳನ್ನು ಅಡ್ಡ ಕಟ್ಟಿದ್ದರು. ನೀರೆತ್ತಲು ರಾಟೆಯೂ ಇರಲಿಲ್ಲ. ಅಡಿಮರದ ಮೇಲೆ ಕಾಲಿಟ್ಟು ನೀರು ಸೇದಬೇಕಿತ್ತು. ಹಳೆಯದೊಂದು ಎಲ್ಯುಮಿನಿಯಂ ಕೊಡಪಾನ ಮತ್ತು ಹಗ್ಗ ಬಾವಿಯ ಬಳಿ ಬಿದ್ದುಕೊಂಡಿದ್ದವು.

ವಿಮಲಿ ಮೊದಲು ತನ್ನ ಬಕೆಟನ್ನು ಖಾಲಿ ಮಾಡಿದಳು. "ನಾನು ಬೇಗ ನೀರು ತಂದು ಬಿಡುತ್ತೇನೆ. ಮತ್ತೆ ನೀನು ತಾ" ಎನ್ನುತ್ತ ಅವಳು ಬಾವಿಯನ್ನು ಸಮೀಪಿಸಿದಳು. ಕೊಡವನ್ನು ನೀರಿಗೆ ಇಳಿಸಿದಳು. ಕಮಲಿ ನಿಧಾನವಾಗಿ ತನ್ನ ಬಕೆಟಿನ ಬಟ್ಟೆಗಳನ್ನು ಖಾಲಿಮಾಡತೊಡಗಿದಳು.

ಆಗಲೇ 'ಲಟಕ್' ಎಂಬ ಸದ್ದಿನೊಡನೆ ಬಾವಿಯ ಅಡ್ಡಮರ ತುಂಡಾಯಿತು. ವಿಮಲಿ ಹಿಡಿದಿದ್ದ ಹಗ್ಗ ಕೈಯಿಂದ ಜಾರಿ ಹೋಯಿತು. ನೀರಿನ ಕೊಡದ ಜೊತೆ ಅವಳು ಸಹ ದುಡುಮ್ಮನೆ ಬಾವಿಗೆ ಬಿದ್ದುಬಿಟ್ಟಳು.

ಸದ್ದು ಕೇಳಿ ಬೆಚ್ಚಿ ಬಿದ್ದ ಕಮಲಿ ಬಾವಿಯತ್ತ ನೋಡಿದಳು. ವಿಮಲಿ ಕಾಣಿಸಲಿಲ್ಲ. ಅಲ್ಲೇನು ನಡೆಯಿತೆಂಬುದನ್ನು ಅವಳಿಗೆ ಅರ್ಥವಾಯಿತು. ತತ್‌ಕ್ಷಣ ಅವಳು "ಅಮ್ಮಾ, ಅಪ್ಪಾ, ವಿಮಲಿ ಬಾವಿಗೆ ಬಿದ್ದದ್ದಾಳೆ. ಬೇಗ ಬನ್ನಿ..." ಎಂದು ಬೊಬ್ಬಿಟ್ಟಳು. ಹಾಗೆಯೇ ಬಾವಿ ಬದಿಗೆ ಧಾವಿಸಿ, ಕೆಳಗೆ ಬಗ್ಗಿ ನೋಡಿದಳು. ವಿಮಲಿ ಅಷ್ಟರಲ್ಲೇ ಒಂದು ಬಾರಿ ಮುಳುಗಿ, ಮೇಲೆ ಎದ್ದಿದ್ದಳು. ಗಾಬರಿಗೊಂಡ ಅವಳು ಆಸರೆಗಾಗಿ ಅಲ್ಲಿ ತಡಕಾಡುತ್ತಿದ್ದಳು. ಕಮಲಿ ಅತ್ತಿತ್ತ ಕಣ್ಣಾಡಿಸಿದಳು. ಬಾವಿಯ ಹಗ್ಗ ಕಾಣಿಸಲಿಲ್ಲ. ಫಕ್ಕನೆ ಅವಳಿಗೆ ತಾನು ತಂದಿದ್ದ ಸೀರೆಯ ನೆನಪಾಯಿತು. ಕ್ಷಣದೊಳಗೆ ಅವಳು ಸೀರೆಯನ್ನು ಎತ್ತಿಕೊಂಡಳು.

ಅದರ ಒಂದು ತುದಿಯನ್ನು ಅವಳು ತನ್ನ ಕೈಗೆ ಸುತ್ತಿಕೊಂಡಳು. ಇನ್ನೊಂದು ತುದಿಯನ್ನು ಬಾವಿಗೆ ಇಳಿಬಿಟ್ಟಳು. ಅಲ್ಲಿ ವಿಮಲಿ ಬಾವಿ ಬದಿಯ ಬಿರುಕಿನೊಳಗೆ ತನ್ನ ಬೆರಳುಗಳನ್ನು ತೂರಿಸಿದ್ದಳು. ಕೈಕಾಲು ಬಡಿಯುತ್ತ, ನೀರಲ್ಲಿ ಮುಳುಗಿ ಹೋಗದಿರಲು ಒದ್ದಾಡುತ್ತಿದ್ದಳು.

"ವಿಮಲೀ, ಈ ಸೀರೆಯ ತುದಿಯನ್ನು ಗಟ್ಟಿಯಾಗಿ ಹಿಡಿದುಕೋ. ಸ್ವಲ್ಪ ಹೊತ್ತು ಹಾಗೇ ಇರು. ಹೆದರಬೇಡ" ಕಮಲಿ ಧೈರ್ಯ ಹೇಳಿದಳು. ಮತ್ತೆ, "ವಿಮಲಿ, ಬಾವಿಗೆ ಬಿದ್ದಿದ್ದಾಳೆ. ವಿಮಲಿ ಬಾವಿಗೆ ಬಿದ್ದದ್ದಾಳೆ. ಬೇಗ ಬನ್ನಿ, ರಕ್ಷಿಸಿ..." ಎಂದು ಬೊಬ್ಬಿಟ್ಟಳು.

ಕೆಲವೇ ನಿಮಿಷಗಳಲ್ಲಿ ಜನ ಸೇರಿದರು. ಒಬ್ಬರು ಓಡಿ ಹೋಗಿ ಉದ್ದದ ಹಗ್ಗ ತಂದರು. ಇನ್ನೊಬ್ಬರು ಓಡಿ ಹೋಗಿ, ಕಂಗಿನ ತುಂಡೊಂದನ್ನು ತಂದು, ಅಡ್ಡ ಮರ ಹಾಕಿದರು. ಮತ್ತೊಬ್ಬರು ಒಂದು ಹೆಡಿಗೆ ತಂದು, ಹಗ್ಗದ ತುದಿಗೆ ಅದನ್ನು ಕಟ್ಟಿ ಬಾವಿಗೆ ಇಳಿಸಿದರು. "ವಿಮಲೀ, ಕಾಲು ಹೊರಗೆ ಹಾಕಿ, ಈ ಹೆಡಿಗೆಯಲ್ಲಿ ಕೂತು ಬಿಡು. ಹಗ್ಗವನ್ನು ಬಿಗಿಯಾಗಿ ಹಿಡಿದುಕೋ. ಹೆದರಬೇಡ. ನಾವು ಹೆಡಿಗೆಯನ್ನು ಮೇಲಕ್ಕೆ ಎಳೆಯುತ್ತೇವೆ. "ಅವರು ಕೂಗಿ ಹೇಳಿದರು.

ವಿಮಲಿಯ ಕೈಕಾಲುಗಳು ನಡುಗುತ್ತಿದ್ದವು. ಆದರೂ ಅವಳು ಬಹು ಪ್ರಯಾಸದಿಂದ ಹಗ್ಗವನ್ನು ಆಧರಿಸಿ, ಹೆಡಿಗೆಯಲ್ಲಿ ಕೂತುಕೊಂಡಳು. ನೆರೆದವರೆಲ್ಲ ಸೇರಿ ಹೆಡಿಗೆಯನ್ನು ಮೇಲಕ್ಕೆ ಎಳೆದರು. ಹೆಡಿಗೆ ಅಡ್ಡ ಮರದ ಬಳಿಗೆ ಬಂದಿತು. ಆಗ ಹಿರಿಯರೊಬ್ಬರು ಕೈ ನೀಡಿ, ವಿಮಲೆಯನ್ನು ಮೇಲಕ್ಕೆ ಎಳೆದು ಕೊಂಡರು.

ನೀರಿಗೆ ಬಿದ್ದಿದ್ದ ವಿಮಲಿ ಈಗ ಬಾವಿ ಕಟ್ಟೆಯಲ್ಲಿ ನಿಂತಿದ್ದಳು. ಒದ್ದೆಮುದ್ದೆಯಾಗಿದ್ದ ಅವಳ ದೇಹ, ಥರ ಥರ ನಡುಗುತ್ತಲೇ ಇದ್ದಿತು. ಕಮಲಿ ಕಣ್ಣಿಗೆ ಬಿದ್ದುದೇ ತಡ "ಕಮಲೀsss" ಎನ್ನುತ್ತ ವಿಮಲಿ ಗೆಳತಿಯನ್ನು ಬರಸೆಳೆದು ತಬ್ಬಿಕೊಂಡಳು. ತೊಟ್ಟಿಕ್ಕುತ್ತಿದ್ದ ಅವಳ ಕಣ್ಣೀರು ಜೀವ ಉಳಿಸಿದ ಗೆಳತಿಗೆ ಕೃತಜ್ಞತೆ ಸಲ್ಲಿಸುತ್ತಿತ್ತು. ಕಮಲಿಯ ಸಕಾಲಿಕ ಸಹಾಯ ಎಲ್ಲರ ಮೆಚ್ಚಿಕೆ ಗಳಿಸಿತ್ತು.

## ಜಾಣ ಕಿಟ್ಟ

ಅಂದು ಸಹ ನಿಶ್ಚಿತ ಸಮಯದಲ್ಲೇ ಶಾಲೆ ಆರಂಭವಾಗಿತ್ತು. ಆದರೆ ಕಿಟ್ಟನ ಅಧ್ಯಾಪಕರು ತರಗತಿಗೆ ಬಂದಿರಲಿಲ್ಲ. ಕೆಲಸದ ಮೇಲೆ ಅವರು ವಿದ್ಯಾಧಿಕಾರಿಗಳ ಕಚೇರಿಗೆ ಹೋಗಿದ್ದರು. ಹಾಗಾಗಿ ಬಾಬು ಮಾಸ್ತರರು ತರಗತಿಗೆ ಬಂದರು. ಹಾಜರಿ ಪುಸ್ತಕ ಅವರ ಕೈಯಲ್ಲಿತ್ತು. ಮಕ್ಕಳ ಹಾಜರಿ ಕರೆಯಲೆಂದೇ ಅವರು ಬಂದಿದ್ದರು. ಗುರುಗಳನ್ನು ಕಂಡ ಮಕ್ಕಳೆಲ್ಲ ಎದ್ದು ನಿಂತರು.

'ನಮಸ್ಕಾರ ಸಾರ್' ಎಂದು ಅವರಿಗೆ ವಂದಿಸಿದರು.

ಮಾಸ್ತರರು ಪ್ರತಿವಂದನೆ ಮಾಡಿದರು. ಎಲ್ಲರೂ ಕೂತ ಬಳಿಕ ಅವರು ಮಕ್ಕಳ ಹಾಜರಿ ಕರೆದರು. ಅದು ಮುಗಿದೊಡನೆ ಒಬ್ಬ ಹುಡುಗ ಎದ್ದು ನಿಂತ, "ಸಾರ್, ಒಂದು ಕತೆ ಹೇಳಿ ಸಾರ್" ಎಂದು ಮಾಸ್ತರರನ್ನು ಕೇಳಿಕೊಂಡ. ತತ್‌ಕ್ಷಣ ಹತ್ತಾರು ಮಕ್ಕಳು ಅದಕ್ಕೆ ದನಿಗೂಡಿಸಿದರು. "ಕತೆ ಹೇಳಿ, ಸಾರ್, ಕತೆ ಹೇಳಿ, ಸಾರ್" ಎಂದು ಅವರು ಒತ್ತಾಯಿಸಿದರು.



ನಿಮ್ಮ ಅಧ್ಯಾಪಕರು ಈಗ ಬರುತ್ತಾರೆ, ಮಕ್ಕಳೇ. ತುಸು ಹೊತ್ತು ಕಾಯೋಣ. ನಾನೀಗ ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಬಹಳ ಸುಲಭದ ಪ್ರಶ್ನೆ ಅದು. ನೀವು ಕೂಡಲೇ ಉತ್ತರಿಸಬೇಕು. ಎಷ್ಟು ಮಂದಿ ಸರಿಯಾದ ಉತ್ತರ ಕೊಡುತ್ತಿರೋ ನೋಡೋಣ. ಆ ಬಳಿಕ ನಿಮಗೆ ಕತೆ ಹೇಳುವ ಬಗ್ಗೆ ಯೋಚಿಸೋಣ. ಆಗಬಹುದಷ್ಟೇ"?

ಮಾಸ್ತರರು ಮಕ್ಕಳನ್ನು ಕೇಳಿದರು.

"ಆಗಲಿ ಸಾರ್, ಪ್ರಶ್ನೆ ಕೇಳಿ ಬಿಡಿ" ಮಕ್ಕಳು ಉತ್ಸಾಹ ತೋರಿದರು.

ಮಾಸ್ತರರು ಹೇಳತೊಡಗಿದರು. 'ರಜಾ ದಿನದಂದು ನೀವು ಆಟದ ಬಯಲಲ್ಲಿ ಆಡುತ್ತೀದ್ದೀರಿ ಎಂದು ಊಹಿಸಿಕೊಳ್ಳಿ. ಭರದಲ್ಲಿ ಆಟ ಸಾಗುತ್ತಾ ಇದೆ. ಆಗ ನಿಮ್ಮ ಅಮ್ಮ ಕರೆಯುತ್ತಾರೆ.- 'ಊಟದ ಹೊತ್ತಾಯಿತು. ತಟ್ಟೆಯಲ್ಲಿ ಅನ್ನ ಹಾಕಿದ್ದೇನೆ ಬೇಗ ಬಾ' ಎನ್ನುತ್ತಾರೆ. ತತ್‌ಕ್ಷಣ ನೀವು ಏನು ಮಾಡುತ್ತೀರಿ.?"

"ಆಟ ಬಿಟ್ಟು ನಾನು ಮನೆಗೆ ಓಡುತ್ತೇನೆ. ಊಟ ಮಾಡುತ್ತೇನೆ" ಒಬ್ಬ ಹೇಳಿದ.

"ನಮ್ಮಲ್ಲಿ ಪ್ರತ್ಯೇಕ ಊಟದ ಮನೆ ಇಲ್ಲ ಅಡುಗೆ ಮನೆಯಲ್ಲೇ ನಾವು ಊಟ ಮಾಡುತ್ತೇವೆ. ನಾನು ಅಲ್ಲಿಗೆ ಓಡುತ್ತೇನೆ; ಊಟಕ್ಕೆ ಕೂಡುತ್ತೇನೆ" ಇನ್ನೊಬ್ಬ ಹೇಳಿದ.

ಆಗ ಮಾಸ್ತರರು ಮಧ್ಯೆ ಪ್ರವೇಶಿಸಿದರು. "ಆಟದ ಬಯಲಿನಿಂದ ನೇರವಾಗಿ ನೀವು ಎಲ್ಲಿಗೆ ಹೋಗುತ್ತೀರಿ? ಏನು ಮಾಡುತ್ತೀರಿ? ಅದನ್ನು ಹೇಳಿ" ಅವರು ಮತ್ತೆ ನೆನಪಿಸಿದರು.

"ನಾನಂತೂ ಆಟವನ್ನು ಅರ್ಧದಲ್ಲಿ ಬಿಟ್ಟು ಹೋಗುವುದಿಲ್ಲ. ಅದು ಮುಗಿದೊಡನೆ ಅಲ್ಲಿಂದ ನೆಟ್ಟಗೆ ಊಟದ ಮನೆಗೆ ಓಡಿ, ಊಟ ಮುಗಿಸುತ್ತೇನೆ" ಮತ್ತೊಬ್ಬ ಅಭಿಪ್ರಾಯ ಸೂಚಿಸಿದ.

"ಅಮ್ಮ ಊಟಕ್ಕೆ ಕರೆದ ತತ್‌ಕ್ಷಣ ನಾನು ಬಚ್ಚಲು ಮನೆಗೆ ಓಡುತ್ತೇನೆ" ಕಿಟ್ಟ ಹೇಳಿದ. ಅವನ ಮಾತು ಕೇಳಿ ಉಳಿದವರೆಲ್ಲ ಗೊಳ್ಳನೆ ನಕ್ಕುಬಿಟ್ಟರು. "ಕಿಟ್ಟ, ಬಚ್ಚಲು ಮನೆಯಲ್ಲಿ ಊಟ ಮಾಡುತ್ತಾನೆ" ಪುಟ್ಟ ಬೊಬ್ಬಿಟ್ಟ. ತರಗತಿ ಮತ್ತೊಮ್ಮೆ ನಗುವಿನಲ್ಲಿ ಮುಳುಗಿತು.

ಕ್ಷಣಕಾಲ ಬಿಟ್ಟು ಮಾಸ್ತರರು ಮತ್ತೆ ಪ್ರಶ್ನಿಸಿದರು. "ಮಕ್ಕಳೇ ನೀವೀಗ ನಕ್ಕುಬಿಟ್ಟಿರಲ್ಲ. ಯಾಕೆ ಹೇಳಿ?" ಕಿಟ್ಟ ಬಚ್ಚಲು ಮನೆಗೆ ಓಡುತ್ತೇನೆ ಎಂದುದಕ್ಕೆ ಒಬ್ಬ ನಗುತ್ತಲೇ ಉತ್ತರ ಕೊಟ್ಟ "ಹಾಗಾದರೆ ಅವನು ಹೇಳಿದ್ದು ತಪ್ಪು ಎನ್ನುತ್ತಿರಾ?" ಮಾಸ್ತರರು ಕೆದಕಿ ಕೇಳಿದರು.

"ಅಲ್ಲವೇ ಮತ್ತೆ? ಬಚ್ಚಲು ಮನೆಯಲ್ಲಿ ಯಾರಾದರೂ ಊಟ ಮಾಡುತ್ತಾರೆಯೇ?" ಗೋಪು ಮರುಪ್ರಶ್ನೆ ಹಾಕಿದ.

"ಹಾಗಾದರೆ ನೀವೆಲ್ಲ ಆಟದ ಬಯಲಿನಿಂದ ಊಟದ ಮನೆಗೆ ನುಗ್ಗುವವರು. ಇರಲಿ, ಈಗ ಕಿಟ್ಟನನ್ನೇ ವಿಚಾರಿಸೋಣ, ಏನು ಕಿಟ್ಟ ನೀನು ಬಚ್ಚಲು ಮನೆಗೆ ಓಡುತ್ತೇನೆ ಎಂದಿಯಲ್ಲ? ಏಕೆ ಹೇಳು? ಅವರು ವಿಚಾರಿಸಿದರು.

"ಉಣ್ಣುವ ಮೊದಲು, ತಿನ್ನುವ ಮೊದಲು ಕೈಕಾಲು ಮುಖಗಳನ್ನು ತೊಳೆಯಬೇಕಷ್ಟೇ? ಅದಕ್ಕಾಗಿ ಬಚ್ಚಲು ಮನೆಗೆ ಹೋಗುತ್ತೇನೆ. ಎಂದಿದ್ದೆ ನಾನು "ಕಿಟ್ಟ ಕಾರಣ ನೀಡಿದ".

"ಭೇಷ್, ಕಿಟ್ಟ ಸರಿಯಾದ ಉತ್ತರ ನೀಡಿದ್ದಾನೆ. ನಾವು ಆಡುವಾಗ ಇಲ್ಲವೇ ಕೆಲಸ ಮಾಡುವಾಗ ನಮ್ಮ ದೇಹವೆಲ್ಲಾ ಬೆವರಿರುತ್ತದೆ. ಕೈಕಾಲುಗಳಿಗೆ ಧೂಳು, ಕೊಳೆ ಮೆತ್ತಿಕೊಂಡಿರುತ್ತದೆ. ಜತೆಯಲ್ಲೆ ರೋಗಾಣುಗಳು ಇರಬಹುದು. ಆದುದರಿಂದ ಉಣ್ಣುವ-ತಿನ್ನುವ ಮೊದಲು ನಾವು ಕೈಕಾಳು, ಮುಖಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು. ಆರೋಗ್ಯ ಕಾಪಾಡಿಕೊಳ್ಳಲು ಶುಚಿಯಾಗಿರುವುದು ಅತೀ ಅಗತ್ಯ, ಇದನ್ನು ಗುರುಗಳಿಂದ, ಹಿರಿಯರಿಂದ ಕೇಳಿ ತಿಳಿದಿದ್ದೀರಿ ನೀವು. ಆದರೆ ನಿಮಗದು ಮರೆತುಹೋಗಿದೆ. ಸರಿ ತಾನೇ?" ಎನ್ನುತ್ತ ಮಾಸ್ತರರು ಮಕ್ಕಳ ಮುಖ ನೋಡಿದರು.

"ಹೌದು ಸಾರ್" ಮಕ್ಕಳು ಮೆಲು ದನಿಯಲ್ಲಿ ಹೇಳಿ ಮುಖ ಕೆಳಗೆ ಹಾಕಿದರು, ಅವರಿಗೆ ನಾಚಿಕೆ ಆಗಿತ್ತು. ಮಾಸ್ತರರು ಮಾತು ಮುಂದುವರಿಸಿದರು" ಕಿಟ್ಟನ ಹಾಗೆ ನಾವೆಲ್ಲರೂ ಕಲಿತುದನ್ನು ನೆನಪಿನಲ್ಲಿಡಬೇಕು; ಅದನ್ನು ನಮ್ಮ ನಡತೆಯಲ್ಲಿ ತೋರಿಸಿ ಕೊಡಬೇಕು. ಆಗ ಮಾತ್ರ ಕಲಿತದ್ದು, ಸಾರ್ಥಕವಾಗುತ್ತದೆ; ನಾವು ಜಾಣರು ಎನಿಸುತ್ತೇವೆ."

ಅಷ್ಟರಲ್ಲೆ ಆ ತರಗತಿಯ ಅಧ್ಯಾಪಕರು ಬರುವುದು ಕಾಣಿಸಿತು. ಒಡನೆ" ನಿಮ್ಮ ಅಧ್ಯಾಪಕರು ಬಂದು ಬಿಟ್ಟರು ನೋಡಿ ಇನ್ನು ಅವರು ಪಾಠ ಮಾಡುತ್ತಾರೆ" ಎನ್ನುತ್ತಾ ಬಾಬು ಮಾಸ್ತರರು ತರಗತಿಯಿಂದ ಹೊರನಡೆದರು. ಮಕ್ಕಳು ಗಡಬಡಿಸಿ ಎದ್ದು ನಿಂತರು ತಮ್ಮ ಗುರುಗಳನ್ನು ಬರಮಾಡಿಕೊಂಡು ಮುಂದಿನ ಪಾಠಕ್ಕೆ ಸಿದ್ಧರಾದರು.

# ಮಹಾ ಸಾಹಸಿ [ಬಾಲೋಪಯೋಗೀನೀತಿ ಕಥೆಗಳು]

## ಲೇಖಕನ ಮಾತು

ಕೆಲವು ಸಮಯದ ಹಿಂದೆ ಮದರಾಸಿನ ಲಿಟಲ್ ಫ್ಲವರ್ ಕಂಪೆನಿ (Little Flower Co.,) ಅವರ `Ancient Famous Fables' ಎಂಬ ಇಂಗ್ಲೀಷ್ ಪುಸ್ತಕ ಮಾಲೆಯನ್ನು ಓದುವ ಅವಕಾಶ ದೊರೆಯಿತು. ಅಲ್ಲಿನ ಕೆಲವು ನೀತಿಕತೆಗಳು ಮಕ್ಕಳಲ್ಲಿ ಧೈರ್ಯ, ಶೌರ್ಯ, ಸಾಹಸ, ಕಾರುಣ್ಯ, ಕರ್ತವ್ಯಪ್ರಜ್ಞೆ, ಪರೋಪಕಾರಗಳಂತಹ ಸದ್ಗುಣಗಳನ್ನು ಬೆಳೆಸುವಲ್ಲಿ ಅತ್ಯಂತ ಉಪಯುಕ್ತವಾದಾವು ಎನಿಸಿತು; ಜೊತೆಯಲ್ಲೆ ಅವುಗಳನ್ನು ಕನ್ನಡದ ಮಕ್ಕಳಿಗೂ ಪರಿಚಯಿಸುವ ಆಸೆಯೊಂದು ಮನದಲ್ಲಿ ಮೂಡಿತು. ಅವುಗಳ ಪ್ರಕಾಶಕರಲ್ಲಿ ನನ್ನಾಸೆಯನ್ನು ತೋಡಿಕೊಂಡು, ಅನುಮತಿಗಾಗಿ ಪತ್ರ ಬರೆದಾಗ ಅವರು ಅನುಮತಿ ನೀಡುವ ಸೌಜನ್ಯ ತೋರಿ ಪ್ರೋತ್ಸಾಹಿಸಿದರು ಪರಿಣಾಮವಾಗಿ ಈ ಪುಟ್ಟ ಕಥಾ ಸಂಗ್ರಹ ಕನ್ನಡದ ಮಕ್ಕಳಿಗೆ ದೊರೆಯುವಂತಾಯಿತು. ಅದಕ್ಕಾಗಿ ಮದರಾಸಿನ ಸುಪ್ರಸಿದ್ಧ ಪ್ರಕಾಶನ ಸಂಸ್ಥೆ Little Flower Co. ಇದರ ಸರ್ವ ಸದಸ್ಯರಿಗೆ ನಾನು ಚಿರಋಣ.

ಈ ಪುಸ್ತಕವು ಕನ್ನಡದಲ್ಲಿ ಸರ್ವಾಂಗ ಸುಂದರವಾಗಿ ಪ್ರಕಟಗೊಳ್ಳಲು ಕಾರಣರಾದವರು ನಮ್ಮ ಬಂಧುಗಳೂ ಹಿತಚಿಂತಕರೂ ನಿರಂತರ ಪ್ರೋತ್ಸಾಹಕರೂ ಆದ "ಯುಗಪುರುಷ" ಪ್ರಕಾಶನದ ಒಡೆಯ ಶ್ರೀ ಕೊ ಅ. ಉಡುಪ ಅವರು ಶ್ರೀಯುತರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು. ಈ ಸಂಗ್ರಹದ ಕೆಲವು ಕತೆಗಳು ಈ ಮೊದಲೇ ಪ್ರಕಟಿಸಿ ಉಪಕರಿಸಿದ "ತರಂಗ' ಮತ್ತು "ಉದಯವಾಣಿ" ಪತ್ರಿಕೆಗಳ ಸಂಪಾದಕರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಈ ಹೊತ್ತಗೆಯನ್ನು ಅಂದವಾಗಿ ಮುದ್ರಿಸಿ ಕೊಟ್ಟವರು 'ಯುಗಪುರುಷ' ಮುದ್ರಣಾಲಯದ ಕೆಲಸಗಾರ ಬಂಧುಗಳು ಅವರಿಗೆ ನನ್ನ ನಮನಗಳು.

**ಪಳಕಳ ಸೀತಾರಾಮಭಟ್ಟ**
ಶಿಶುಸಾಹಿತ್ಯ ಮಾಲೆ.
ಮಿತ್ತಬೈಲು.
೧೪-೧೧-೧೯೮೮

## ಕುರಿತು

ಕಳೆದ ಅಕ್ಟೋಬರ್ ತಿಂಗಳೊಂದರಲ್ಲೇ ಶ್ರೀ ಪಳಕಳದಿಂದ ರಚಿತ ಮಕ್ಕಳ ೨ ಕಿರು ಹೊತ್ತಗೆಗಳನ್ನು ಒಲವಿನ ಓದುಗರಿಗೆ ಒಪ್ಪಿಸಿರುವ ಯುಗ ಪುರುಷ ಪ್ರಕಟಣಾಲಯದ ಮೂಲಕ ಇದೀಗ ಮತ್ತೊಂದು ನೂತನ ಕೃತಿ 'ಮಹಾ ಸಾಹಸಿ'ಯನ್ನೂ ಪ್ರಕಟಿಸಲು ಬಲು ಹೆಮ್ಮೆಯೆನಿಸಿದೆ.

ಬಾಲೋಪಯೋಗಿಯಾದ ಈ ನೀತಿ ಕಥೆಗಳು ಒಂದಕ್ಕಿಂತ ಮತ್ತೊಂದು ಮುದ್ದು ಕಿರುಕಂದರ ಮನೋಮಂದಾರವನ್ನು ಅರಳಿಸುವಲ್ಲಿ ಬಹಳಷ್ಟು ಪರಿಣಾಮಕಾರಿಯೆಂದು ಹೆಚ್ಚು ಹೇಳಬೇಕಾಗಿಲ್ಲ. ಏನಿದ್ದರೂ ಇಂತಹ ಸಂಗ್ರಾಹ್ಯ ಸತ್ಕೃತಿಯನ್ನು ಸಾಕಷ್ಟು ಸಂಖ್ಯೆಯಲ್ಲಿ ಮುಂದಿನ ಜನಾಂಗದ ಇಂದಿನ ಬಾಲಕರು ಓದಿ ಆ ತಿರುಳನ್ನು ಮೈ ಗೂಡಿಸಿಕೊಂಡಾಗ ಕೃತಿ ರಚಯಿತರ ಹಾಗೂ ಪ್ರಕಾಶಕರ ಶ್ರಮ

ಸಾರ್ಥಕ. ಅಂತಾಗಲೆಂದು ಹಾರೈಸುವುದರೊಂದಿಗೆ ಸನ್ಮಿತ್ರ ಸಹೃದಯ ಶ್ರೀ ಪಳಕಳ ಸೀತಾರಾಮ ಭಟ್ಟರನ್ನು, ಕೃತಿ ಮುದ್ರಣಗೈದ ಯುಗಪುರುಷ ಮುದ್ರಣಾಲಯದವರನ್ನೂ ಆವರಣ ಪುಟ ಹಾಗೂ ಒಳಪುಟಗಳಲ್ಲಿರುವ ಕಲಾಕೃತಿಗಳನ್ನು ವಿನಿರ್ಮಿಸುವಲ್ಲಿ ಸಹಕರಿಸಿದ ಕಲಾವಿದ ಶ್ರೀ ಕೆ. ದೇವಡಿಗಾರರನ್ನು ಅಭಿನಂದಿಸುವುದು ನಮ್ಮ ಕರ್ತವ್ಯ.

**ಕೊಡೆತ್ತೂರು ಅನಂತಪದ್ಮನಾಭ ಉಡುಪ**

ಪ್ರಕಾಶಕ/ಸಂಪಾದಕ

೧೯-೧೧-೧೯೮೮

# ದಕ್ಷ ನ್ಯಾಯಾಧೀಶ

ನಾಲ್ಕನೆಯ ಹೆನ್ರಿ ಇಂಗ್ಲೆಂಡಿನ ರಾಜ. ವೇಲ್ಸಿನ ರಾಜಕುಮಾರನು ಅವನ ಮಗ. ಅವನು ಒಳ್ಳೆಯವನೇ. ಯಾವುದು ಸರಿ ಯಾವುದು ತಪ್ಪು ಎಂದು ತಿಳಿವ ವಿವೇಕ ಆವನಿಗಿತ್ತು. ಆದರೆ ಅವನಿಗೆ ತಾಳ್ಮೆ ಕಡಿಮೆ. ಬಲು ಬೇಗ ಅವನು ಸಿಟ್ಟುಗೊಳ್ಳುತ್ತಿದ್ದ. ಕೆಲವು ಪೋಲಿಗಳ ಸಹವಾಸವೂ ಆತನಿಗಿತ್ತು.

ಒಮ್ಮೆ ರಾಜಕುಮಾರನ ಮಿತ್ರನೊಬ್ಬ ಏನೋ ಅಪರಾಧ ಮಾಡಿದ. ಅವನು ವಿಚಾರಣೆ ಎದುರಿಸಬೇಕಾಯಿತು. ಅವನ ವಿಚಾರಣೆ ನಡೆಸಿದವನು ಸರ್ ವಿಲಿಯಮ್ ಗಾಸ್ಕೊಗ್ನೆ. ಆತ ಬಹಳ ದಕ್ಷ ಮತ್ತು ಪ್ರಾಮಾಣಿಕ. ಆದರೆ ನ್ಯಾಯಾಧೀಶನು ತನ್ನ ಮಿತ್ರನಿಗೆ ರಿಯಾಯಿತಿ ತೋರಬೇಕೆಂಬುದು ರಾಜಕುಮಾರನ ಬಯಕೆಯಾಗಿತ್ತು. ನ್ಯಾಯಾಧೀಶನು ಅದಕ್ಕೆ ಸಿದ್ಧನಿರಲಿಲ್ಲ. ಅಪರಾಧಿಗೆ ತಕ್ಕ ಶಿಕ್ಷೆ ದೊರೆಯಿತು. ರಾಜಕುಮಾರ ಅಸಮಾಧಾನಗೊಂಡ. ಅವನ ತಾಳ್ಮೆ ತಪ್ಪಿತು. ಸಿಟ್ಟು ನೆತ್ತಿಗೇರಿತು ತಾನೇನು ಮಾಡುತ್ತಿದ್ದೇನೆ ಎನ್ನುವುದು ಅವನಿಗೆ ಮರೆತು ಹೋಯಿತು. ಮರುಕ್ಷಣದಲ್ಲೆ ಆತ ನ್ಯಾಯಾಧೀಶನ ಮೇಲೆ ಏರಿ ಹೋಗಿದ್ದ. ನ್ಯಾಯಾಲಯದಲ್ಲೆ ನ್ಯಾಯಾಧೀಶನಿಗೆ ಏಟು ಬಿಗಿದಿದ್ದ.

ಬಹಳ ಜನ ಅಲ್ಲಿ ನೆರೆದಿದ್ದರು. ಅವರೆಲ್ಲ ಉಸಿರು ಬಿಗಿ ಹಿಡಿದು ನೋಡುತ್ತಿದ್ದರು. ನ್ಯಾಯ ಸ್ಥಾನದಲ್ಲೆ ಅನ್ಯಾಯ ನಡೆದಿತ್ತು. ರಾಜಕುಮಾರನೆ ಅಪರಾಧ ಮಾಡಿದ್ದ. ಅವನಿಗೆ ಅಥವಾ ಅವನ ತಂದೆಗೆ ಹೆದರಿ ಉಳಿದ ಯಾರೇ ಆದರು ಸುಮ್ಮನೆ ಇದ್ದುಬಿಡುತ್ತಿದ್ದರು. ಆದರೆ ನ್ಯಾಯಾಧೀಶ ವಿಲಿಯಮ್ ಹಾಗೆ ಮಾಡಲಿಲ್ಲ. ರಾಜಕುಮಾರನ ಮೇಲೆ ತಕ್ಷಣ ಕಾನೂನು ಕ್ರಮ ಕೈಗೊಂಡ. ಅವನಿಗೆ ಜೈಲು ಶಿಕ್ಷೆ ವಿಧಿಸಿಯೇ ಬಿಟ್ಟ.

ರಾಜಕುಮಾರನ ಸಿಟ್ಟು ಹೆಚ್ಚು ಹೊತ್ತು ಉಳಿಯಲಿಲ್ಲ. ಸಿಟ್ಟು ಇಳಲಿದುದೇ ತಡ ಅವನಿಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಮನದಲ್ಲಿ ಪಶ್ಚಾತ್ತಾಪ ಮೂಡಿತು. ಅವನು ಚಕಾರವೆತ್ತದೆ ನ್ಯಾಯಾಧೀಶನ ಅಪ್ಪಣೆಯನ್ನು ಪಾಲಿಸಿದ. ತಾನೇ ಸೆರೆಮನೆಯತ್ತ ನಡೆದು ಜೈಲು ಶಿಕ್ಷೆಗೆ ಒಳಗಾದ.

ಮಿಂಚಿನ ವೇಗದಲ್ಲಿ ವಾರ್ತೆ ಹರಡಿತು. ರಾಜನಿಗೂ ವಿಷಯ ತಿಳಿಯಿತು. “ನಿರ್ಭೀತನಾಗಿ, ನಿಷ್ಪಕ್ಷಪಾತವಾಗಿ ಕರ್ತವ್ಯ ನೆರವೇರಿಸುವ ಧೀರನೂ, ನ್ಯಾಯ ನಿಷ್ಠುರಿಯೂ ಆದ ನ್ಯಾಯಾಧೀಶನೊಬ್ಬ ನಮ್ಮಲ್ಲಿ ಇದ್ದಾನೆ ಎಂಬುದಕ್ಕಾಗಿ ಹೆಮ್ಮೆಪಡುತ್ತೇನೆ. ಹಾಗೆಯೇ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವ ಮತ್ತು ಅದಕ್ಕಾಗಿ ಶಿಕ್ಷೆ ಅನುಭವಿಸಲು ಸಿದ್ಧನಾದ ಮಗನಿರುವುದಕ್ಕಾಗಿ ಇನ್ನಷ್ಟು ಸಂತೋಷ ಪಡುತ್ತೇನೆ” ಎಂದು ಉದ್ಗಾರ ಅವನಿಂದ ಹೊರಹೊಮ್ಮಿತು.

* * *

# ಶ್ರಮದ ಫಲ

ಒಂದು ಊರು ಇತ್ತು. ಅಲ್ಲೊಬ್ಬ ಜಮೀನುದಾರನಿದ್ದ. ವಾರ್ಷಿಕ ೧೦೦ ಪೌಂಡು ಉತ್ಪತ್ತಿ ಬರುವ ಭೂಮಿ ಅವನಿಗಿತ್ತು. ಬೇಸಾಯದ ಕೆಲಸಗಳನ್ನೆಲ್ಲ ಆಳುಗಳೇ ಮಾಡುತ್ತಿದ್ದರು. ಸ್ವತಃ ದುಡಿವ ಅಭ್ಯಾಸ ಅವನಿಗಿರಲಿಲ್ಲ.

'ಆಳು ಮಾಡಿದ್ದು ಹಾಳು' ಅನ್ನುತ್ತಾರಲ್ಲ? ಹಾಗೇ ಆಯಿತು. ಜಮೀನುದಾರನ ಬೇಸಾಯ ಸರಿಯಾಗಿ ನಡೆಯಲಿಲ್ಲ. ಒಳ್ಳೆಯ ಫಸಲು ಅವನಿಗೆ ಬರಲಿಲ್ಲ. ವೆಚ್ಚ ಹೆಚ್ಚುತ್ತ ಹೋಯಿತು. ಆದಾಯ ಕಡಿಮೆಯಾಯಿತು. ಜಮೀನುದಾರ ಸಾಲದಲ್ಲಿ ಬಿದ್ದ. ಕೊನೆಗೆ ಜಮೀನಿನ ಅರ್ಧಭಾಗವನ್ನು ಮಾರಿ, ಸಾಲ ಸಂದಾಯ ಮಾಡಿದ.

ಇನ್ನೂ ಅರ್ಧಭಾಗ ಉಳಿದಿದೆಯಲ್ಲ? ಅದರ ಬೇಸಾಯ ನಡೆಯಬೇಕಷ್ಟೆ? ಜಮೀನುದಾರ ಅದರ ಬಗೆಗೆ ಯೋಚಿಸಿದ. ಕಟ್ಟ ಕಡೆಗೆ ಅದನ್ನು ೧೦ ವರುಷಗಳ ಅವಧಿಗೆಂದು ಗೇಣಿಗೆ ಕೊಟ್ಟ.

ಕೆಲವು ಕಾಲ ಕಳೆಯಿತು. ಒಂದು ದಿನ ಗೇಣಿದಾರ ಭೂಮಾಲಿಕನ ಮನೆಗೆ ಬಂದ. ಆವರೆಗಿನ ಗೇಣಿಯನ್ನೆಲ್ಲ ಸಂದಾಯ ಮಾಡಿದ ಮಾತುಕತೆಯ ಮಧ್ಯೆ ಧನಿಯು ಆ ಹೊಲಗಳನ್ನು ಮಾರಲಿರುವನೇ ಎಂದು ವಿಚಾರಿಸಿದ. ಭೂಮಾಲಿಕನಿಗೆ ಆಶ್ಚರ್ಯವಾಯಿತು. ಆ ಬಡರೈತನಲ್ಲಿ ಅಷ್ಟು ಹಣ ಹೇಗೆ ಬಂತು ಎಂದು ತಿಳಿಯದಾಯಿತು. "ನನ್ನ ಎಲ್ಲ ಹೊಲಗಳ ಸಾಗುವಳಿ ನಡೆಸಿದರೂ ನನಗೆ ಲಾಭ ಸಿಗಲಿಲ್ಲ ನನ್ನಲ್ಲಿ ಚಿಕ್ಕಾಸೂ ಉಳಿಯಲಿಲ್ಲ. ನಿನಗಿದ್ದ ಭೂಮಿಯ ಅರ್ಧಭಾಗದಷ್ಟು ಹೊಲಗಳಲ್ಲಿ ಮಾತ್ರ ನೀನು ಬೇಸಾಯ ಮಾಡಿದೆ. ಆದರೂ ನೀನಿಂದು ಗೇಣಿ ಸಂದಾಯ ಮಾಡಿದ್ದೀಯಾ. ಈಗ ಹೊಲಗಳನ್ನು ಕೊಳ್ಳಲಿಕ್ಕೂ ಸಿದ್ಧನಿದ್ದಿಯಾ. ನಿನ್ನಲ್ಲಿ ಅಷ್ಟು ಹಣ ಹೇಗೆ ಬಂತು ಹೇಳು?" ಎಂದು ಅವನು ರೈತನನ್ನು ಪ್ರಶ್ನಿಸಿದ.

ಜಮೀನುದಾರನ ಮಾತು ಕೇಳಿ ರೈತನಿಗೆ ನಗು ಬಂತು. ನಗುತ್ತಲೇ ಅವನು ಉತ್ತರ ಕೊಟ್ಟ, "ನೀವು ಸ್ವತಃ ಶ್ರಮಪಟ್ಟು ದುಡಿಯಲಿಲ್ಲ. ಕೆಲಸದಲ್ಲಿ ಸೋಮಾರಿ ತನ ತೋರಿಸಿದರಿ. 'ಹೋಗಿ ಕೆಲಸ ಮಾಡಿ' ಎಂದು ಆಳುಗಳನ್ನು ಅಟ್ಟದಿರಿ. ನೀವು ಮಾಡಬೇಕಾದ ಕೆಲಸಕ್ಕೆ ಬೇರೆಯವರನ್ನೆ ಕಳಿಸಿದರಿ. ಆದಕಾರಣ ನಿಮ್ಮ ಬಳಿಗೆ ಬರಬೇಕಾಗಿದ್ದ ಸಂಪತ್ತು ನಿಮ್ಮಿಂದ ದೂರ ಹೋಯಿತು. ನಾನು ನಿಮ್ಮ ಹಾಗೆ ಮಾಡಲಿಲ್ಲ. ಕೆಲಸಕ್ಕೆ ನಾನೇ ಬಂದೆ. ಬೆವರು ಸುರಿಸಿ ನಾನೇ ದುಡಿದೆ. ಅದರಿಂದಾಗಿ ಒಳ್ಳೆಯ ಫಸಲು ನನಗೆ ಬಂದಿತು ಸಂಪತ್ತು ಕೈ ಸೇರಿತು. ನಿಮ್ಮ ಕೆಲಸ ಮಾಡಲು ಆಳನ್ನೆ 'ಹೋಗು' ಅಂದಾಗ ಸಂಪತ್ತನ್ನೆ 'ಹೋಗು' ಅಂದಂತಾಯಿತು. ಕೆಲಸಕ್ಕೆ ನಾನೇ ಬಂದು ಶ್ರಮಪಟ್ಟಾಗ ಸಂಪತ್ತನ್ನೆ 'ಬಾ' ಎಂದು ಕರೆದಂತಾಯಿತು."

ರೈತನ ಮಾತುಕೇಳಿದ ಜಮೀನುದಾರನಿಗೆ ತನ್ನ ತಪ್ಪಿನ ಅರಿವಾಯಿತು. ಇನ್ನೆಂದಿಗೂ ಅಂಥ ತಪ್ಪು ಮಾಡಬಾರದೆಂಬ ನಿರ್ಧಾರ ಮನದಲ್ಲಿ ಮೂಡಿತು.

* * *

# ಸ್ವಾಭಿಮಾನಿ ಸರದಾರ

ಓರ್ಟನ್ ಉತ್ತರ ಸ್ಕಾಟ್‌ಲ್ಯಾಂಡಿನ ಒಂದು ಪ್ರದೇಶ. ಸರ್ ರಾಬರ್ಟ್ ಇನ್ಸ್ ಅಲ್ಲಿನ ಸರದಾರ. ಅವನು ತನ್ನ ಹತ್ತೊಂಭತ್ತನೆಯ ವಯಸ್ಸಿನಲ್ಲೆ ತಂದೆ ತಾಯಿಗಳನ್ನು ಕಳೆದುಕೊಂಡಿದ್ದ. ಹಾಗೆಯೇ ತನ್ನ ಸಂಪತ್ತನ್ನೂ ಕಳೆದುಕೊಂಡು ಬಡವನಾಗಿದ್ದ. ಆದರೆ 'ಸರದಾರ' ಬಿರುದು ಮಾತು ಇನ್ನೂ ಉಳಿದುಕೊಂಡಿತ್ತು. ಈ ಸ್ಥಿತಿ ಬೇರೆಯವರಿಗೆ ಬಂದಿದ್ದರೆ ಅವರು ಪರರ ಸಹಾಯ ಬಯಸುತ್ತಿದ್ದರು. ಆದರೆ ಆತ ಬಹಳ ಸ್ವಾಭಿಮಾನಿ. ಯಾರ ಮುಂದೂ ಕೈಯೊಡ್ಡಿ ಬೇಡುವುದು ಅವನಿಗೆ ಸರಿಬರಲಿಲ್ಲ. ತಾನು ಶ್ರಮಪಟ್ಟು ದುಡಿಯಬೇಕು. ತನ್ನ ಅನ್ನ ತಾನು ಗಳಿಸಬೇಕು. ಇದು ಅವನ ನಿರ್ಧಾರ. ಹಾಗೆಂದು ಅವನಿಗೆ ಯಾವ ಕೆಲಸವೂ ಬಾರದು. ಆದಕಾರಣ ಆತ ಸೈನ್ಯಕ್ಕೆ ಸೇರಿದ. ಸಾಮಾನ್ಯ ಸೈನಿಕನಾಗಿ ದುಡಿಯತೊಡಗಿದ.

ಒಂದು ದಿನ ಸೇನಾಕಚೇರಿ ಎದುರುಗಡೆ ಆತ ಕಾವಲು ನಿಂತಿದ್ದ. ಅಷ್ಟರಲ್ಲಿ ಒಬ್ಬ ಗೃಹಸ್ಥ ಅಲ್ಲಿಗೆ ಬಂದ. ಸರ್ ರಾಬರ್ಟ್ ಇನ್ಸ್‌ನನ್ನು ಆತ ಈ ಮೊದಲೊಮ್ಮೆ ಕಂಡಿದ್ದ. ಆದರೆ ಅವನು ಸೈನ್ಯಕ್ಕೆ ಸೇರಿದ ಸಂಗತಿ ಅವನಿಗೆ ತಿಳಿದಿರಲಿಲ್ಲ. ಮಾತುಕತೆ ನಡೆಸಿದಾಗ ತನ್ನ ಇದಿರು ಸಾಮಾನ್ಯ ಸೈನಿಕನಾಗಿ ನಿಂತವನು ಸರ್ ರಾಬರ್ಟ್ ಇನ್ಸ್ ಎನ್ನುವುದು ಆತನಿಗೆ ಖಚಿತವಾಯಿತು. ಜೊತೆಯಲ್ಲಿ ಆಶ್ಚರ್ಯವೂ ಆಯಿತು ಆದರೆ ಅವನು ಅದನ್ನು ತೋರಗೊಡಲಿಲ್ಲ. ನೇರಾಗಿ ಸೇನಾಪತಿಯ ಕೊಠಡಿಯನ್ನು ಪ್ರವೇಶಿಸಿದ. ಅಲ್ಲಿ ಮಾತಾಡುತ್ತಿದ್ದಾಗ ಸರ್ ರಾಬರ್ಟ್ ಇನ್ಸ್ ಅವರಂತಹ ಸರದಾರರನ್ನು ಕಾವಲುಗಾರನಾಗಿ ಪಡೆದ ಸೇನಾಧಿಪತಿ ಬಲುದೊಡ್ಡ ಭಾಗ್ಯಶಾಲಿಯೆಂದು ಸೇನಾ ಮುಖ್ಯಸ್ಥನನ್ನು ಅವನು ಕೊಂಡಾಡಿದ ತನ್ನ ಕಚೇರಿಯ ಕಾವಲುಗಾರನಾಗಿ ಇರುವಾತ ಸರ್ ರಾಬರ್ಟ್ ಇನ್ಸ್ ಎಂಬುದನ್ನು ಕೇಳಿ ಸೇನಾಪತಿಗೆ ಆಶ್ಚರ್ಯವಾಯಿತು ಒಡನೆ ಆತ ಇನ್ನೊಬ್ಬ ಸೈನಿಕನನ್ನು ಕರೆದು ಕಚೇರಿಯ ಮುಂದುಗಡೆ ಕಾವಲು ನಿಂತವನನ್ನು ಒಳಗೆ ಕಳಿಸಿಕೊಡುವಂತೆ ಆಜ್ಞಾಪಿಸಿದ.

ಕಾವಲುಗಾರ ಸೇನಾಪತಿಯ ಇದಿರು ಪ್ರತ್ಯಕ್ಷನಾದ. ಅವನನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿ ನೋಡಿದ ಸೇನಾಪತಿ ಅವನು ಸರ್ ರಾಬರ್ಟ್ ಇನಸ್ ನಿಜವೇ ಎಂದು ಪ್ರಶ್ನಿಸಿದ. “ಹೌದು” ಎಂಬ ಉತ್ತರ ದೊರೆಯಿತು ಆಗ ಸೇನಾಪತಿಯು, “ನೀನು ಸಾಮಾನ್ಯ ಸೈನಿಕನಾಗಿ ಏಕೆ ಸೇರಿಕೊಂಡೆ? ಎಂದು ಮತ್ತೆ ವಿಚಾರಿಸಿದ “ನಾನು ಪ್ರಾಯಕ್ಕೆ ಬರುವಾಗಲೇ ಸಂಪತ್ತೆಲ್ಲ ಕೈಬಿಟ್ಟು ಹೋಗಿತ್ತು ಬಿರುದು ಮಾತ್ರ ನನ್ನಲ್ಲಿ ಉಳಿದಿತ್ತು. ಯಾರಿಂದಲೇ ಆಗಲಿ ಸಹಾಯ ಪಡೆಯಲು ಮನ ಒಪ್ಪಲಿಲ್ಲ. ಹಾಗಾಗಿ ಶ್ರಮಪಟ್ಟು ದುಡಿಯಬೇಕು; ನನ್ನ ಅನ್ನ ನಾನೇ ಗಳಿಸಬೇಕು ಎಂಬ ತೀರ್ಮಾನಕ್ಕೆ ಬಂದೆ. ಉದ್ಯೋಗ ಯಾವುದೂ ನನಗೆ ತಿಳಿದಿರಲಿಲ್ಲ. ಆದುದರಿಂದ ಸೈನ್ಯಕ್ಕೆ ಸೇರಿ ದುಡಿಯತೊಡಗಿದೆ” ಎಂದು ಯುವಕ ಉತ್ತರ ಕೊಟ್ಟ.

ಸೇನಾಪತಿಗೆ ಬಹಳ ಸಂತೋಷವಾಯಿತು ಯುವಕನ ಸ್ವಾಭಿಮಾನವನ್ನು ಅವನು ತುಂಬ ಮೆಚ್ಚಿಕೊಂಡ. ಒಡನೆ ಆ ದಿನವೆ ತನ್ನ ಮನೆಗೆ ಊಟಕ್ಕೆ ಬರುವಂತೆ ಅವನನ್ನು ಕೇಳಿಕೊಂಡ. ಯುವಕ ಮನೆಗೆ ಬಂದಾಗ ತನ್ನ ಉಡುಗೆ ತೋಡುಗೆಗಳ ರಾಶಿ ತೋರಿಸಿ, ಅದರಿಂದ ಬೇಕಾದುದನ್ನು ಆರಿಸಿ ತೆಗೆಯುವಂತೆ ಅವನನ್ನು ಒತ್ತಾಯಿಸಿದ. ಆದರೆ ಯುವಕ ಮಾತ್ರ ಏನನ್ನೂ ತೆಗೆದುಕೊಳ್ಳಲಿಲ್ಲ. ತನ್ನಲ್ಲಿ ಸಾಕಷ್ಟು ಉಡಿಗೆ ತೊಡಿಗೆಗಳಿವೆ. ಹೆಚ್ಚಿನದೇನೂ ತನಗೆ ಅಗತ್ಯವಿಲ್ಲ ಎಂದು ವಿನಯದಿಂದ ವಿಜ್ಞಾಪಿಸಿಕೊಂಡ.

ಯುವಕನ ಒಳ್ಳೆಯತನ ಸೇನಾದಿಪತಿಯ ಮನವನ್ನು ಗೆದ್ದಿತು. ಪರಿಣಾಮವಾಗಿ ಯುವಕನಿಗೆ ಬಲುಬೇಗನೇ ಭಡ್ತಿ ದೊರೆಯಿತು. ಸೈನ್ಯದಲ್ಲಿ ದೊಡ್ಡ ಅಧಿಕಾರಿಯಾಗಿ ಆತ ನೇಮಿಸಲ್ಪಟ್ಟ. ಸ್ವಂತ ಪರಿಶ್ರಮದಿಂದ ತನ್ನ ಬಿರುದಿಗೆ ತಕ್ಕ ಸ್ಥಾನಮಾನಗಳನ್ನು ಗಳಿಸಿ ಪ್ರಸಿದ್ಧಿಗೊಂಡ.

* * *

## ಧೀರ ಸೇವಕಿ

ಒಬ್ಬ ಇಂಗ್ಲಿಷ್ ಮಹನೀಯನಿದ್ದ. ಇಂಗ್ಲೆಂಡಿನ ಬೆಟ್ಟ ಪ್ರದೇಶದಲ್ಲಿ ಅವನ ಮನೆಯಿತ್ತು. ಅವನಿಗಿನ್ನೂ ಮದುವೆ ಆಗಿರಲಿಲ್ಲ. ಮನೆಯಲ್ಲಿ ಅವನ ಹೊರತು ಒಬ್ಬ ಸೇವಕ. ಒಬ್ಬಳು ಅಡುಗೆಯಾಳು, ಇನ್ನೊಬ್ಬಳು ಕೆಲಸದ ಹುಡುಗಿ ಇಷ್ಟು ಮಂದಿ ಇರುತ್ತಿದ್ದರು.

ಒಂದು ಬಾರಿ ಯಜಮಾನ ಕೆಲಸದ ಮೇಲೆ ಮನೆ ಬಿಟ್ಟು ಹೋಗಬೇಕಾಯಿತು. ಮನೆ ಬಿಡುವ ಮೊದಲು ಆತ ಕೆಲಸದವನನ್ನು ಬಳಿಗೆ ಕರೆದ. ಕೆಲವು ದಿನ ತಾನು ಮನೆಯಲ್ಲಿ ಇರುವುದಿಲ್ಲ. ಹಿಂದಿರುಗಿ ಬರುವ ತನಕ ಸೇವಕನು ರಜೆ ತೆಗೆಯಬಾರದು. ಮನೆ ಬಿಟ್ಟು ಹೋಗಬಾರದು. ಇಲ್ಲೇ ಇದ್ದು, ಮನೆಗೆಲಸ ನೋಡಿಕೊಳ್ಳಬೇಕು ಎಂದು ತಾಕೀತು ಮಾಡಿದ. ಸೇವಕ ಅದಕ್ಕೆ ಒಪ್ಪಿಗೆ ನೀಡಿದ. ಯಜಮಾನ ಹೊರಟು ಹೋದ.

ಯಜಮಾನ ಮನೆ ಬಿಟ್ಟುದೇ ತಡ, ಸೇವಕ ತನ್ನ ಮಾತನ್ನು ಮರೆತ. ಅಂದೇ ತಾನು ಸಹ ಮನೆ ಬಿಟ್ಟು ಹೊರಟು ಹೋದ. ರಾತ್ರೆಯಾದರೂ ಹಿಂದಿರುಗಿ ಬರಲಿಲ್ಲ. ಅಡುಗೆಯವಳು ಮತ್ತು ಕೆಲಸದ ಹುಡುಗಿ ಇಬ್ಬರೇ ಮನೆಯಲ್ಲಿ ಉಳಿದರು.

ಕತ್ತಲಾಯಿತು. ಕೆಲಸದವರಿಬ್ಬರೂ ಬೇಗನೆ ಉಂಡರು. ಮತ್ತೆ ಮಲಗಿ ನಿದ್ರೆಹೋದರು. ತುಸು ಹೊತ್ತು ಕಳೆಯಿತು. ಯಾರೋ ಬಂದು ಬಾಗಿಲು ಬಡಿದಂತಾಯಿತು. ಅಡುಗೆಯಾಳು ಫಕ್ಕನೆ ಎಚ್ಚರಗೊಂಡಳು. ಬಾಗಿಲ ಬಳಿ ನಡೆದು, "ಯಾರದು? ಏನು ಬೇಕು" ಎಂದು ಕೇಳಿದಳು. ಮತ್ತೆ ಕಿಟಕಿಯ ಮೂಲಕ ಹೊರಕ್ಕೆ ನೋಡಿದಳು.

ಅಪರಿಚಿತ ವ್ಯಕ್ತಿಯೊಬ್ಬ ಹೊರಗಡೆ ನಿಂತಿದ್ದ. ತಾನು ಮನೆಯೊಡೆಯನ ಮಿತ್ರನೆಂದೂ ಕತ್ತಲಲ್ಲಿ ದಾರಿ ತಪ್ಪಿದ ಕಾರಣ ಅಲ್ಲಿಗೆ ಬಂದೆನೆಂದೂ ಆತ ಹೇಳಿದ. ರಾತ್ರಿಯ ಮಟ್ಟಿಗೆ ಅಲ್ಲಿ ಉಳಿಯಲು ತನಗೆ ಅವಕಾಶ ಕೊಡಬೇಕೆಂದು ಬೇಡಿಕೊಂಡ. ಅಡುಗೆಯಾಳು ಅವನ ಮಾತನ್ನು ನಂಬಿದಳು. ಗಾಳಿ ಮಳೆಯ ಆ ರಾತ್ರೆ ದಾರಿ ತಪ್ಪುವುದು ಸಹಜ ಎಂದುಕೊಂಡಳು. ಮತ್ತೆ ದೀಪ ಹಚ್ಚಿದಳು. ಬಾಗಿಲು ತೆರೆದು ಹೊರಗೆ ನಿಂತವನನ್ನು ಒಳಗೆ ಬರಮಾಡಿಕೊಂಡಳು ಆಗಿಷ್ಟಿಕೆಯ ಬೆಂಕಿಯನ್ನು ದೊಡ್ಡದು ಮಾಡಿದಳು. ಅತಿಥಿಯನ್ನು ಅಲ್ಲಿಗೆ ಕರೆದೊಯ್ದು, ಮೈ ಬೆಚ್ಚಗೆ ಮಾಡಿಕೊಳ್ಳುವಂತೆ ಕೇಳಿಕೊಂಡಳು. ಬಳಿಕ ಅವನ ಊಟಕ್ಕೆ ಸಿದ್ಧತೆ ಮಾಡಿದಳು.

ಅತಿಥಿಯು ಉದ್ದವಾದ ತನ್ನ ಕೋಟನ್ನು ಕಳಚಿದ. ಗೋಡೆಯ ಗೂಟಕ್ಕೆ ಅದನ್ನು ತೂಗಹಾಕಿದ. ಊಟದ ಸಿದ್ಧತೆ ಆಗುವ ತನಕ ಆಗಿಷ್ಟಿಕೆಯ ಬಳಿ ಚಳಿ ಕಾಯಿಸಿದ ಕೆಲವೇ ನಿಮಿಷಗಳಲ್ಲಿ ಅಡುಗೆ ಸಿದ್ಧವಾಯಿತು. ಅಡುಗೆಯವಳು ಅತಿಥಿಯನ್ನು ಊಟಕ್ಕೆ ಕರೆದಳು ಗಡದ್ದಾಗಿಯೇ ಆತ ಊಟ ಮಾಡಿದ. ಅನಂತರ ಅಡುಗೆಯವಳು ತೋರಿದ ಪಕ್ಕದ ಕೋಣೆಗೆ ಹೊರಟು ಹೋದ ಕೂಡಲೇ ಅದರ ಬಾಗಿಲು ಹಾಕಿ, ಮಂಚದಲ್ಲಿ ಮಲಗಿಕೊಂಡ.

ಅಡುಗೆಯವಳು ಅತಿಥಿ ಉಂಡ ಮೇಜನ್ನು ಶುಚಿಗೊಳಿಸಿದಳು. ತಟ್ಟೆ ಬಟ್ಟಲುಗಳನ್ನು ಇಡಬೇಕಾದ ಸ್ಥಳದಲ್ಲಿ ಇರಿಸಿದಳು. ಅಷ್ಟರಲ್ಲಿ ಅತಿಥಿಯ ಒದ್ದೆಕೋಟು ಅವಳ ಗಮನ ಸೆಳೆಯಿತು. ಅಗಿಷ್ಟಿಕೆಯ ಬಳಿ ನೇತು ಹಾಕಿದರೆ ಅದು ಬೇಗನೆ ಒಣಗೀತು ಎಂದುಕೊಂಡಳು ಆಕೆ. ಹಾಗಾಗಿ ಮೆಲ್ಲ ಬಂದು ಗೂಟದಿಂದ ಕೋಟನ್ನು ತೆಗೆದಳು. ಏನಾಶ್ಚರ್ಯ! ಕೋಟು ಬಹಳ ಭಾರವಾಗಿತ್ತು. ಅಡುಗೆಯವಳ ಕುತೂಹಲ ಕೆರಳಿತು. ಏನಿದೆ ಅದರಲ್ಲಿ ಎಂದು ನೋಡುವ ಆಸೆಯಾಯಿತು. ಒಡನೆ ಅವಳು ಕೋಟಿನ ಎಲ್ಲ ಭಾಗಗಳನ್ನು ತಡಕಾಡಿ ನೋಡಿದಳು. ಅದರ ದೊಡ್ಡ ದೊಡ್ಡ ಕಿಸೆಗಳೊಳಗೆ ಕೈ ತೂರಿ ತಪಾಸಣೆ ನಡೆಸಿದಳು. ಅವಳ ಎದೆ ದಸಕ್ಕೆಂದಿತು. ಗುಂಡು ತುಂಬಿದ ಎರಡು ಪಿಸ್ತೂಲುಗಳೂ ಒಂದು ಹರಿತವಾದ ಚೂರಿಯೂ ಅಲ್ಲಿದ್ದವು. ಮರುಕ್ಷಣದಲ್ಲೆ ಅವಳಿಗೆಲ್ಲ ಅರ್ಥವಾಗಿತ್ತು. ಮನೆಯೊಳಗಿನ 'ಅತಿಥಿ' ಎಂಥವನು? ಏಕೆ ಬಂದವನು? ಎಂಬುದು ತಿಳಿದು ಹೋಗಿತ್ತು. ಆದರೆ ಆಕೆ ಧೈರ್ಯಗೆಡಲಿಲ್ಲ. ನಿಮಿಷದೊಳಗೆ ತಾನೇನು ಮಾಡಬೇಕೆಂದು ನಿರ್ಧರಿಸಿಬಿಟ್ಟಳು; ಅಂತೆ ಕೆಲಸಕ್ಕೂ ತೊಡಗಿದಳು.

ಮೊತ್ತಮೊದಲು ಆಕೆ ಸದ್ದಾಗದಂತೆ "ಅತಿಥಿ" ಮಲಗಿದ್ದ ಕೋಣೆಯತ್ತ ನಡೆದಳು. ಹೊರಗಡೆಯಿಂದ ಮೆಲ್ಲನೆ ಬಾಗಿಲ ಸರಪಳಿ ಸಿಕ್ಕಿಸಿದಳು. ಅದು ಫಕ್ಕನೆ ಬಿಟ್ಟು ಹೋಗದಂತೆ ಅದರ ಮೇಲೆ ಹಗ್ಗದ ಕಟ್ಟನ್ನೂ ಹಾಕಿದಳು. ಮತ್ತೆ ಹಾಗೆಯೇ ಹಿಂದೆ ಬಂದು ತನ್ನ ಕೋಣೆಯಲ್ಲಿ ಕುಳಿತುಕೊಂಡಳು. ನಿದ್ರೆ ಅವಳ ಬಳಿ ಸುಳಿಯಲಿಲ್ಲ. ಎಚ್ಚರಾಗಿಯೇ ಇದ್ದ ಅವಳಿಗೆ ಹೊರಗಡೆಯಿಂದ ಹೆಜ್ಜೆಯ ಸಪ್ಪಳ ಕೇಳಿದಂತಾಯಿತು. ಮತ್ತೊಂದು ಗಳಿಗೆಯಲ್ಲಿ "ಎಲ್ಲ ಸಿದ್ಧವಾಯಿತೆ?" ಎಂಬ ಮಾತು ಸ್ಪಷ್ಟವಾಗಿ ಕೇಳಿಸಿತು. ಮನೆಯೊಳಗಿನವನ ಸಹಾಯಕ್ಕಾಗಿ ಅವನ ಸಂಗಾತಿ ಬಂದಿದ್ದಾನೆ ಎಂಬುದು ಆಕೆಗೆ ಖಚಿತವಾಯಿತು ಒಡನೆ ಆಕೆ ಸದ್ದಾಗದಂತೆ ಎದ್ದು ನಿಂತಳು. ಮತ್ತೆ ಕತ್ತಲಲ್ಲೆ ತಡಕಾಡಿ ಪಿಸ್ತೂಲನ್ನು ಎತ್ತಿಕೊಂಡಳು. ಮೆಲ್ಲನೆ ಕಿಟಕಿ ತೆರೆದು ಹೊರಗೆ ನಿಂದವನೆಡೆ ಗುಂಡು ಹಾರಿಸಿದಳು. ಕಿಟಾರನೆ ಕಿರಿಚಿಕೊಂಡು ಆತ ಕೆಳಗುರುಳಿದ.

ಗುಂಡಿನ ಸಪ್ಪಳ ಕೇಳಿ ಮಲಗಿದ್ದ ಕೆಲಸದ ಹುಡುಗಿ ಫಕ್ಕನೆ ಎದ್ದು ಕೂತಳು. ಬೆಚ್ಚಿಬಿದ್ದ 'ಅತಿಥಿ' ಸಟ್ಟನೆದ್ದು ಬಾಗಿಲ ಬಳಿ ಓಡಿ ಬಂದ. ಮರುಘಳಿಗೆಯಲ್ಲಿ ಗಡಬಡ ಸದ್ದು ಮಾಡುತ್ತ ಆತ ಬಾಗಿಲನ್ನು ಎಳೆಯತೊಡಗಿದ. ತಕ್ಷಣ ಆ ಕೆಚ್ಚಿನ ಹೆಣ್ಣು ಕೋಣೆಯ ಬಾಗಿಲ ಬಳಿ ಹಾಜರಾದಳು. ಮತ್ತೆ ಗಟ್ಟಿಯಾಗಿ, "ಏ ದುಷ್ಟಾ, ನಿನ್ನ ಪಿಸ್ತೂಲು ನನ್ನ ಕೈಯಲ್ಲಿದೆ. ನೀನೀಗ ಬಾಗಿಲು ತೆರೆದರೆ ಕೋಣೆಯ ಹೊರಗೆ ಹೆಜ್ಜೆ ಇರಿಸುವ ಮೊದಲು ಸತ್ತು ಹೆಣವಾಗದೆ ಇರುವುದಿಲ್ಲ. ಎಚ್ಚರಿಕೆ" ಎಂದು ಅಬ್ಬರಿಸಿದಳು. ಗುಂಡಿನ ಸಪ್ಪಳ ಕೇಳಿ ತಬ್ಬಿಬ್ಬಾಗಿ ಕೂತಿದ್ದ ಕೆಲಸದ ಹುಡುಗಿಯನ್ನು ಕೂಗಿ ಕರೆದಳು. ಬೇಗನೆ ಓಡಿ ನೆರೆಕರೆಯ ಜನರನ್ನು ಕರೆತರುವಂತೆ ಆಕೆಯನ್ನು ಅಟ್ಟಿದಳು. ಜನರು ಬರುವ ತನಕ ಪಿಸ್ತೂಲು ಹಿಡಿದುಕೊಂಡು ಕೋಣೆಯ ಬಾಗಿಲಲ್ಲೆ ಕಾವಲು ನಿಂತಳು.

ತುಸು ಹೊತ್ತಿನಲ್ಲೆ ಊರವರೆಲ್ಲ ಅಲ್ಲಿ ಒಟ್ಟು ಸೇರಿದರು. ಕೋಣೆಯ ಬಾಗಿಲು ತೆರೆದು, ಕಳ್ಳ ಅತಿಥಿಯನ್ನು ಸೆರೆಹಿಡಿದರು. ಮನೆಯ ಪಕ್ಕದಲ್ಲೆ ಸತ್ತುಬಿದ್ದ ದಕಾಯಿತನ ಹೆಣವನ್ನೂ ಅವರು ಕಂಡರು. ಮನೆಯವರನ್ನು ಕೊಂದು, ಮನೆಯನ್ನು ದೋಚಲು ಬಂದಿದ್ದವರಿಗೆ ತಕ್ಕ ಶಿಕ್ಷೆ ದೊರೆತಿತ್ತು. ನೆರೆದವರೆಲ್ಲ ಮನೆಯ ಸೇವಕಿಯ ಧೈರ್ಯ ಶೌರ್ಯಗಳನ್ನು ಮೆಚ್ಚಿ ಕೊಂಡಾಡಿದರು. ಮತ್ತೆ ಕಳ್ಳನನ್ನು ಪೋಲೀಸರಿಗೆ ಒಪ್ಪಿಸಿದರು.

ಕೆಲವು ದಿನಗಳು ಕಳೆದವು. ಪರವೂರಿಗೆ ಹೋಗಿದ್ದ ಯಜಮಾನ ಮನೆಗೆ ಹಿಂದಿರುಗಿದ. ತಾನು ಇಲ್ಲದಾಗ ಮನೆಯಲ್ಲಿ ನಡೆದ ಸಂಗತಿ ಎಲ್ಲ ಅವನಿಗೆ ತಿಳಿಯಿತು. ಸೇವಕಿಯ ಸಾಹಸದಿಂದಾಗಿ ತನ್ನ ಮನೆ ಉಳಿಯಿತೆಂದು ಅವನಿಗೆ ಬಹಳ ಸಂತೋಷವಾಯಿತು. ಅವನು ಅವಳನ್ನು ಬಾಯಿತುಂಬ ಹೊಗಳಿದ. ಮತ್ತೆ ಬಡವೆಯಾದರೂ ಗುಣಸುಂದರಿಯಾಗಿದ್ದ ಆಕೆಯನ್ನು ಮೆಚ್ಚಿ ಮದುವೆಯಾದ. ಮನೆಯ ಸೇವಕಿಯಾಗಿದ್ದವಳು ಮನೆಯೊಡೆಯನ ಪ್ರೀತಿಯ ಮಡದಿಯಾದಳು; ಮನೆಯ ಒಡತಿಯಾದಳು.

ತನ್ನ ಅದ್ಭುತ ಸಾಹಸಕ್ಕೆ ತಕ್ಕ ಪ್ರತಿಫಲ ಆಕೆಗೆ ದೊರೆಯಿತು.

* * *

## ಕೊಂದವನಿಗು ಕರುಣೆ ತೋರಿದವ

ನೂರಾರು ವರುಷಗಳ ಹಿಂದಿನ ಮಾತು. ಆಗ ಸ್ಪೇನ್ ದೇಶದ ಸ್ವಲ್ಪ ಭಾಗವನ್ನು ಮೂರ್ ಜನರು (ಮೊರೊಕ್ಕೊ ದೇಶದ ನಿವಾಸಿಗಳು) ಆಕ್ರಮಿಸಿದ್ದರು. ಅದೊಂದು ದಿನ ಒಬ್ಬ ಸ್ಪೆನಿಯಾರ್ಡನು ಎಳೆಯ ಮೂರ್ ಒಬ್ಬನನ್ನು ಕೊಂದುಬಿಟ್ಟ. ಮೂರರು ಅವನನ್ನು ಅಟ್ಟಿಸಿಕೊಂಡು ಬಂದರು. ಪ್ರಾಣಭಯದಿಂದ ಅವನು ಓಡತೊಡಗಿದ. ಎದುರುಗಡೆ ಒಂದು ತೋಟವಿತ್ತು. ಅವನು ಅದರ ದರೆ ಏರಿ, ಒಳಕ್ಕೆ ಜಿಗಿದ. ಅದು ಒಬ್ಬ ಮೂರನಿಗೆ ಸೇರಿದ ತೋಟವಾಗಿತ್ತು. ತೋಟದ ಯಜಮಾನ ಅಲ್ಲಿ ನಿಂತಿದ್ದ. ಓಡಿ ಬಂದವನು ಯಜಮಾನನ ಕಾಲಿಗೆ ಅಡ್ಡ ಬಿದ್ದ. ವೈರಿಗಳು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದಾರೆ. ತನಗೆ ಅಡಗಿಕೊಳ್ಳಲು ಅಲ್ಲಿ ಅವಕಾಶ ಕೊಡಬೇಕು. ತನ್ನನ್ನು ಕಾಪಾಡಬೇಕು ಎಂದು ಅಂಗಲಾಚಿ ಬೇಡಿಕೊಂಡ.

ತೋಟದ ಮಾಲಿಕನು ತುಂಬ ಕರುಣಾಳು ತನ್ನೆಡೆಗೆ ಬಂದು ರಕ್ಷಣೆ ಬೇಡುತ್ತಿರುವ ಅಪರಿಚಿತನನ್ನು ಆತ ಕಣ್ಣರಳಿ ನೋಡಿದ. ಅವನಿಗೆ ಧೈರ್ಯ ಹೇಳಿದ ಅವನ ಜೀವ ಕಾಯುವುದಾಗಿ ಭರವಸೆ ನೀಡಿದ ತನ್ನ ಮಾತಿನಲ್ಲಿ ಭರವಸೆ ಹುಟ್ಟುವಂತೆ ಮಾಡಲು ಅವನಿಗೊಂದು ಹಣ್ಣನ್ನಿತ್ತ; ಅವನ ಜೊತೆ ಕೂತು ತಾನೂ ಹಣ್ಣು ತಿಂದ. (ಜೊತೆಯಾಗಿ ಕೂತು ಉಂಡವರನ್ನು ಅಥವಾ ತಿಂದವರನ್ನು ರಕ್ಷಿಸಬೇಕೆಂಬುದು ಮೂರ್ ಜನರ ಒಂದು ವಿಶಿಷ್ಟ ಪದ್ಧತಿ) ಅನಂತರ ತನ್ನ ಮರೆಹೊಕ್ಕುವನನ್ನು ತೋಟದ ಮನೆಯ ಪುಟ್ಟ ಕೋಣೆಯೊಳಗೆ ಕೂಡಿಸಿ, ಬೀಗ ಹಾಕಿದ. ಕತ್ತಲಾದೊಡನೆ ಸುರಕ್ಷಿತ ಸ್ಥಳ ಸೇರಲು ಆತನಿಗೆ ಸಹಾಯ ಮಾಡುವುದಾಗಿ ಮಾತು ಕೊಟ್ಟು, ತನ್ನ ವಾಸದ ಮನೆಗೆ ಬಂದುಬಿಟ್ಟ.

ಆ ಸಮಯಕ್ಕೆ ಸರಿಯಾಗಿ ಜನರ ದೊಡ್ಡ ಗುಂಪೊಂದು ಅವನ ಮನೆಯತ್ತ ಬರತೊಡಗಿತು. ಬಹಳ ಜನ ಅದರಲ್ಲಿದ್ದರು. ಎಲ್ಲರೂ ತುಂಬ ದುಃಖಿತರಾದಂತೆ ಕಾಣುತ್ತಿದ್ದರು. ಕೆಲವರು ಕಣ್ಣೀರು ಸುರಿಸುತ್ತಿದ್ದರೆ ಇನ್ನು ಕೆಲವರು ಅಳುತ್ತಿದ್ದರು. ಯುವಕರು ಕೆಲವರು ಸಿಟ್ಟಿನಿಂದ ಹಲ್ಲು ಕಡಿಯುತ್ತ ಪ್ರತೀಕಾರದ ಮಾತಾಡುತ್ತಿದ್ದರು. ಗುಂಪಿನ ಮಧ್ಯದಲ್ಲಿದ್ದ ಕೆಲವರು ಬಿಳಿ ಬಟ್ಟೆಯಲ್ಲಿ ಸುತ್ತಿದ ಏನನ್ನೊ ಹೊತ್ತು ತರುತ್ತಿದ್ದರು.

ಗುಂಪು ಹತ್ತಿರ ಬಂತು. ತೋಟದ ಯಜಮಾನನ ಮನೆಯಂಗಳವನ್ನು ಪ್ರವೇಶಿಸಿತು. ಗುಂಪಿನ ಮಧ್ಯದಲ್ಲಿದ್ದ ಮಂದಿಗಳು ಮುಂದೆ ಬಂದರು. ತಾವು ಹೊತ್ತು ತಂದಿದ್ದ ಹೊರೆಯನ್ನು ಮೆಲ್ಲನೆ ಇಳಸಿದರು. ಬಿಳಿ ಬಟ್ಟೆಯ ಮುಸುಕಿನೊಳಗೆ ಬಾಲಕನೊಬ್ಬನ ಹಣವಿತ್ತು. ಕ್ಷಣದಲ್ಲೆ ಮನೆಯಾತನಿಗೆ ವಿಷಯ ತಿಳಿಯಿತು. ಅವನ ಪ್ರೀತಿಯ ಮಗನ ಕೊಲೆಯಾಗಿತ್ತು. ತನ್ನ ಆಸರೆ ಪಡೆದ ಪರಕೀಯನು ಬೇರಾರೂ ಅಲ್ಲ ತನ್ನ ಮಗನನ್ನೆ ಕೊಂದವನ್ನು ಎಂಬುದು ಅವನಿಗೆ ತಿಳಿದುಹೋಗಿತ್ತು. ಆದರೆ?

ಆತನು ತನ್ನಲ್ಲಿ ದಯಾಭಿಕ್ಷೆ ಬೇಡಿದ್ದಾನೆ. ಆತನನ್ನು ರಕ್ಷಿಸುವುದಾಗಿ ತಾನು ಭಾಷೆ ನೀಡಿದ್ದೇನೆ. ಮಗನ ಸಾವಿನ ಸೇಡು ತೀರಿಸಲು ಕೊಲೆಗಾರನನ್ನು ತಾನು ಕೊಂದು ಬಿಡಬಹುದು. ಅದರಿಂಸ ಸತ್ತ ಮಗ ಮತ್ತೆ ಬದುಕಿ ಬರಲುಂಟೆ? ಹಾಗಾದರೆ ತಾನೇನು ಸಾಧಿಸಿದಂತಾಯಿತು? ಛೆ, ಇಂಥ ವಿಚಾರ ಸಲ್ಲದು. ತಾನು ಕೊಟ್ಟ ಮಾತಿಗೆ ತಪ್ಪಬಾರದು; ಕೆಟ್ಟ ಯೋಚನೆ ಮಾಡಬಾರದು ಎಂದು ಆತ ಮನಸ್ಸಿನಲ್ಲೆ ನಿರ್ಧರಿಸಿದ. ತನ್ನ ಆಸರೆಯಲ್ಲಿರುವವನ ಸುಳಿವು ಯಾರಿಗೂ ಸಿಗದಂತೆ ಎಚ್ಚರ ವಹಿಸಿದ. ಮಗನ ಸಾವಿನ ದುಃಖ ನುಂಗಿಕೊಂಡು, ಶವ ಸಂಸ್ಕಾರದ ಕೆಲಸಗಳನ್ನು ನೆರವೇರಿದ. ಅವನ ದುಃಖದಲ್ಲಿ, ಕೆಲಸಗಳಲ್ಲಿ ಸಹಭಾಗಿಗಳಾದ ಜನಗಳೆಲ್ಲ ಒಬ್ಬೊಬ್ಬರಾಗಿ ಹೊರಟು ಹೋದರು.

ಸೂರ್ಯಾಸ್ತವಾಯಿತು. ಕತ್ತಲು ಕವಿಯಿತು ಅದನ್ನೆ ಕಾಯುತ್ತಿದ್ದ ಯಜಮಾನ ದಿಗ್ಗನೆ ಎದ್ದ. ತನ್ನ ಕುದುರೆಗಳಲ್ಲಿ ಅತ್ಯುತ್ತಮವಾದುದನ್ನು ಆರಿಸಿ ಹಿಡಿದುಕೊಂಡ. ಅದರೊಡನೆ ತನ್ನ ತೋಟದ ಮನೆಗೆ ನಡೆದ.

ಕೋಣೆಯಲ್ಲಿ ಸ್ಪೇನಿಯಾರ್ಡನು ಉಸಿರು ಬಿಗಿ ಹಿಡಿದು ಕುಳಿತುಕೊಂಡಿದ್ದ. ಯಜಮಾನ ಅವನನ್ನು ಹೊರಗೆ ಕರೆ ತಂದ ಅವನಿಗೆ ಕುದುರೆಯನ್ನು ಒಪ್ಪಿಸುತ್ತ ಹೀಗೆ ಹೇಳಿದ –

“ನನ್ನ ಪ್ರೀತಿಯ ಮಗನನ್ನು ಕೊಂದವನು ನೀನು. ನಿನ್ನ ತಪ್ಪಿಗೆ ತಕ್ಕ ಶಿಕ್ಷೆ ನಿನಗೆ ಸಿಗಬೇಕಿತ್ತು. ಆದರೆ ನೀನು ನನ್ನಿಂದ ಅಭಯದಾನ ಪಡೆದಿದ್ದಿಯಾ. ನನ್ನ ‘ಜೊತೆ ಕೂತು’ ಹಣ್ಣು ತಿಂದಿದ್ದಿಯಾ. ಕೊಟ್ಟ ಮಾತನ್ನು ನಾನು ಉಳಿಸಿಕೊಳ್ಳಬೇಕು. ಆದ ಕಾರಣ ನಿನ್ನನ್ನು ಕ್ಷಮಿಸಿದ್ದೇನೆ. ನಿನಗೆ ಅತ್ಯುತ್ತಮವಾದ ಈ ನನ್ನ ಕುದುರೆಯನ್ನು ಕೊಡುತ್ತಿದ್ದೇನೆ. ತಕ್ಷಣ ಇದನ್ನೇರಿ ಕತ್ತಲೆಯಲ್ಲಿ ಕಣ್ಮರೆಯಾಗಿ ಬಿಡು. ಗಾಳಿಯ ವೇಗದಲ್ಲಿ ಓಡಬಲ್ಲ ಕುದುರೆಯಿದು. ಇದರ ಸಹಾಯದಿಂದ ಬೆಳಗಾಗುವ ಮೊದಲು ನೀನು ಸುರಕ್ಷಿತ ಸ್ಥಳ ಸೇರಬಲ್ಲೆ. ನನ್ನ ಮಗನ ಜೀವ ನೀನು ತೆಗೆದ. ಆದರೆ ನಾನು ನಿನ್ನ ಜೀವ ತೆಗೆಯುವುದಿಲ್ಲ; ನಿನಗೆ ಕೊಟ್ಟ ಮಾತನ್ನು ಮುರಿಯುವುದಿಲ್ಲ. ಯಾರಿಗೂ ಕೇಡು ಬಗೆಯಲಾರೆ ಎಂಬುದು ನನ್ನ ಪ್ರತಿಜ್ಞೆಯಾಗಿತ್ತು. ಆ ಪ್ರತಿಜ್ಞೆಗೆ ಭಂಗಬಾರದಂತೆ ದೇವರು ನೋಡಿಕೊಂಡಿದ್ದಾನೆ. ಅದಕ್ಕಾಗಿ ಅವನಿಗೆ ನನ್ನ ಅನಂತ ವಂದನೆಗಳು”

ಸ್ಪೇನಿಯಾರ್ಡನ ಕಣ್ಣುಗಳು ತುಂಬಿದ ಕೊಳಗಳಾಗಿದ್ದವು. ತೊಟ್ಟಿಕ್ಕುತಿದ್ದ ಕಣ್ಣೀರಿಂದ ಕೆನ್ನೆಗಳು ಒದ್ದೆಯಾಗಿದ್ದವು. ತಲೆ ತಗ್ಗಿಸಿಕೊಂಡೆ ನಿಂತಿದ್ದ ಅವನಿಂದ ‘ಕ್ಷಮಿಸು ತಂದೆ’ ಎಂಬ ನುಡಿಗಳೆರಡು ಹೊರಬಂದಿದ್ದವು. ಮರುಕ್ಷಣದಲ್ಲೆ ಕುದುರೆ ಏರಿದ್ದ ಆತ ಕವಿದ ಕತ್ತಲಲ್ಲಿ ಕಣ್ಮರೆಯಾಗಿದ್ದ.

* * *

## ಮಹಾಸಾಹಸಿ ಮ್ಯಾಕ್ಸ್ವೆಲ್

ಜೇಮ್ಸ್ ಮ್ಯಾಕ್ಸ್‌ವೆಲ್ ಮಹಾಸಾಹಸಿ. ವೀರಯೋಧರ ಮನೆತನದಲ್ಲಿ ಹುಟ್ಟಿದ್ದ. ಉಗಿಹಡಗ ಒಂದರಲ್ಲಿ ಚಾಲಕನಾಗಿ ಆತ ದುಡಿಯುತ್ತಿದ್ದ. ಟರ್ನರ್ ಎಂಬ ದಕ್ಷ ಅಧಿಕಾರಿ ಹಡಗದ ನಾಯಕನಾಗಿದ್ದ.

ಒಂದು ದಿನ ಹಡಗವು ಇಂಗ್ಲೆಂಡಿನಿಂದ ಐರ್ಲೇಂಡಿನ ಪಶ್ಚಿಮ ಕರಾವಳಿಯ ಕಡೆಗೆ ಸಾಗುತ್ತಿತ್ತು. ಸುಮಾರು ಎಂಭತ್ತರಷ್ಟು ಗಂಡಸರೂ ಹೆಂಗಸರೂ ಹಡಗದಲ್ಲಿದ್ದರು.

ಹಡಗು ಸಾಕಷ್ಟು ದೂರ ಸಾಗಿತ್ತು. ಆಗ ಫಕ್ಕನೆ ಮ್ಯಾಕ್ಸ್‌ವೆಲನಿಗೆ ಹೊಗೆಯ ವಾಸನೆ ಬರತೊಡಗಿತು. ಹಡಗದ ಯಾವುದೋ ಭಾಗದಲ್ಲಿ ಬೆಂಕಿ ಹತ್ತಿಕೊಂಡಿದೆ ಎನಿಸಿತು ಅವನಿಗೆ. ತಕ್ಷಣ ಹಡಗದ ನಾಯಕನಿಗೆ ವಿಷಯ ತಿಳಿಸಿದ. ತನಗೂ ಹೊಗೆಯ ವಾಸನೆ ಬರುತ್ತಿದೆ ಎಂದು ಹೇಳಿದ ನಾಯಕ. ಇತರರೂ ಅದಕ್ಕೆ ದನಿಗೂಡಿಸಿದರು. ಆದರೆ ಅಷ್ಟರಲ್ಲಿ ಹೊಗೆಯ ವಾಸನೆ ನಿಂತುಬಿಟ್ಟಿತು. ಸ್ವಲ್ಪ ಹೊತ್ತು

ಹಾಗೇ ಕಳೆಯಿತು. ಕೆಲವೇ ಕ್ಷಣಗಳಲ್ಲಿ ಮತ್ತೊಮ್ಮೆ ಕಟ್ಟಿಗೆ ಸುಟ್ಟ ವಾಸನೆ! ತುಸು ಹೊತ್ತು ಅದು ಮುಂದುವರಿಯಿತು. ಇದ್ದಕ್ಕಿದ್ದಂತೆ ಅದು ಮತ್ತೆ ನಿಂತಿತು. ಎಲ್ಲೂ ಏನೂ ಆಗಿಲ್ಲ ಎನ್ನುವ ಭಾವನೆ ಅವರಲ್ಲಿ ಮೂಡಿತು. ನಿಶ್ಚಿಂತೆಯಿಂದ ಎಲ್ಲರೂ ನಿದ್ದೆ ಹೋದರು.

ಮಧ್ಯರಾತ್ರಿಯ ಸಮಯ ಮ್ಯಾಕ್ಸ್‌ವೆಲನಿಗೆ ಥಕ್ಕನೆ ಎಚ್ಚರಾಯಿತು. ಈಗ ಅವನಿಗೆ ಹೊಗೆಯ ವಾಸನೆ ಜೋರಾಗಿ ಬರತೊಡಗಿತು. ಹಡಗಿಗೆ ಬೆಂಕಿ ಬಿದ್ದಿದೆ ಎನ್ನುವುದು ಅವನಿಗೆ ಖಚಿತವಾಯಿತು. ಹಡಗದ ತಳ ಭಾಗದಲ್ಲಿ ಉರಿಯ ಕೆನ್ನಾಲಗೆ ಕಾಣಿಸಿಕೊಂಡಿತು.

ಮ್ಯಾಕ್ಸ್‌ವೆಲ್ ತಕ್ಷಣ ಹಡಗದ ನಾಯಕನನ್ನು ಎಬ್ಬಿಸಿದ. ಅವನಿಗೆ ವಿಷಯ ತಿಳಿಸಿ, ತನಗೇನು ಅಪ್ಪಣೆ ಎಂದು ಕಾತರದಿಂದ ವಿಚಾರಿಸಿದ.

“ಹಡಗು ಸಮುದ್ರ ಮಧ್ಯದಲ್ಲಿದೆ. ತೀರಪ್ರದೇಶ ದೂರದಲ್ಲಿದೆ. ಯಾವ ಸಂದರ್ಭದಲ್ಲೂ ಹಡಗನ್ನು ನಿಲ್ಲಿಸುವಂತಿಲ್ಲ. ಸಾಧ್ಯವಿದ್ದಷ್ಟು ಹಡಗನ್ನು ಮುನ್ನಡೆಸು” ಎಂದು ಆತ ಅಪ್ಪಣೆ ನೀಡಿದ.

ಮ್ಯಾಕ್ಸ್‌ವೆಲನಿಗೆ ಪರಿಸ್ಥಿತಿಯ ಅರಿವಾಯಿತು. ಯಾವ ಸಂದರ್ಭದಲ್ಲೂ ಸಾವು ಎದುರಾಗಬಹುದು. ಸಾಯುವುದು ತಾನೊಬ್ಬನೇ ಅಲ್ಲ. ಹಡಗದಲ್ಲಿದ್ದ ಎಂಬತ್ತು ಮಂದಿಯೂ ಸಾಯುತ್ತಾರೆ. ಅವರೆಲ್ಲರ ಪ್ರಾಣ ಉಳಿಸುವ ಹೊಣೆ ತನ್ನ ಮೇಲಿದೆ. ಹೀಗೆ ಯೋಚಿಸಿದ ಆತ ಬಾಗಿಲಿನತ್ತ ನೋಡಿದ. ಮತ್ತೆ ಕೈಮುಗಿದು ತಲೆಬಾಗಿ “ಓ ದೇವರೇ,ನನ್ನ ಕರ್ತವ್ಯ ನೆರವೇರಿಸಲು ನನಗೆ ಶಕ್ತಿ ಕೊಡು. ನನ್ನ ಅನಂತರ ನನ್ನ ಹೆತ್ತವರನ್ನೂ ಕುಟುಂಬವನ್ನೂ ರಕ್ಷಿಸು” ಎಂದು ದೇವರಿಗೆ ಮೊರೆಯಿಟ್ಟ.

ಹಡಗಿಗೆ ಹತ್ತಿದ ಬೆಂಕಿ ನಿಮಿಷ ನಿಮಿಷಕ್ಕೆ ದೊಡ್ಡದಾಗುತ್ತಿತ್ತು. ಒಂದರ ಅನಂತರ ಒಂದಾಗಿ ವಿವಿಧ ಭಾಗಗಳಿಗೆ ಅದು ಹರಡುತ್ತಿತ್ತು. ಮ್ಯಾಕ್ಸ್ವೆಲ್ ಅತ್ಯಂತ ವೇಗವಾಗಿ ಹಡಗು ನಡೆಸುತ್ತಿದ್ದ. ಆ ಹೊತ್ತಿಗಾಗಲೆ ಅಲ್ಲಿದ್ದ ಜನರೆಲ್ಲ ಎಚ್ಚರಗೊಂಡಿದ್ದರು. ತಮಗೊದಗಿರುವ ಅಪಾಯವನ್ನು ಅವರು ಮನಗಂಡಿದ್ದರು. ನಾಯಕನ ಸೂಚನೆಯಂತೆ ಅವರೀಗ ಹಡಗದ ಅತ್ಯಂತ ಸುರಕ್ಷಿತ ಭಾಗಕ್ಕೆ ಧಾವಿಸುತ್ತಿದ್ದರು. ಹಾಗೆ ಧಾವಿಸುವಾಗಲೂ ಕೆಲೊವರು ಕೂಗಾಡುತ್ತಿದ್ದರು, ಕೆಲವರು ದೇವರಿಗೆ ಮೊರೆಯಿಡುತ್ತಿದ್ದರು. ಮ್ಯಾಕ್ಸ್ ವೆಲ್ ಮಾತ್ರ ಚಾಲಕನ ಸ್ಥಾನದಲ್ಲಿ ಕುಳಿತೇ ಇದ್ದ. ಹಡಗುಒಂದೇ ಸವನೆ ಮುಂದೆ ಚಲಿಸುತಿತ್ತು. ಆದಷ್ಟು ಬೇಗನೆ ಅದನ್ನು ಸುರಕ್ಷಿತ ಸ್ಥಾನಕ್ಕೆ ತಲುಪಿಸುವುದೇ ಅವನ ಉದ್ದೇಶವಾಗಿತ್ತು. ಆದರೆ ಅಷ್ಟರಲ್ಲೇ ಉರಿಯ ಜ್ವಾಲೆಗಳು ಮೇಲೆ ಮೇಲೆ ಏರತೊಡಗಿದವು. ಅವನು ಕಾಲಿಡುವ ಜಾಗವೂ ಬಿಸಿಯೇರತೊಡಗಿತು. ಸುತ್ತ ಮುತ್ತಲೂ ಉರಿಯ ಬೇಗೆ ಹರಡಿತು. ನಿಮಿಷದಲ್ಲಿ ಅವನಿದ್ದ ಚಿಕ್ಕ ಕೋಣೆಗೂ ಬೆಂಕಿ ಹತ್ತಿಕೊಂಡಿತು. ಆದರೂ ಮ್ಯಾಕ್ಸ್ವೆಲ್ ಅತ್ತಿತ್ತ ನೋಡಲಿಲ್ಲ. ಕುಳಿತ ಜಾಗದಿಂದ ಒಂದಿಂಚು ಸಹ ಕದಲಲಿಲ್ಲ. ಅತ್ಯಂತ ವೇಗವಾಗಿ ಹಡಗನ್ನು ಮುನ್ನಡೆಸುತ್ತಲೇ ಇದ್ದ.

ಅಷ್ಟರಲ್ಲಿ ಹಡಗವು ತೀರಪ್ರದೇಶದ ಹತ್ತಿರಕ್ಕೆ ಬಂದಿತ್ತು. ಅಲ್ಲಿನ ಜನ ಬೆಂಕಿಹತ್ತಿ ಉರಿಯುತ್ತಿದ್ದ ಹಡಗನ್ನು ಕಂಡರು. ಒಡನೆ ಅವರು ದೊಡ್ಡ ದೊಡ್ಡ  ದೊಂದಿಗಳನ್ನು ಸಿದ್ಧಗೊಳಿಸಿದರು. ಕಡಲ ಕರೆಯ ಬಂಡೆಕಲ್ಲನ್ನು ಏರಿ, ಉರಿವ ದೊಂದಿಗಳನ್ನು ಎತ್ತಿ ಹಿಡಿದರು. ಹಡಗದಲ್ಲಿದ್ದವರಿಗೆ ತೀರಪ್ರದೇಶ ಹತ್ತಿರದಲ್ಲಿದೆ ಎನ್ನುವುದು ಈಗ ಖಚಿತವಾಯಿತು. ಬೆಳಕಿ ತೋರಿ ಬಂದ ಕಡೆ ಹಡಗು ಧಾವಿಸಹತ್ತಿತು.

ಮ್ಯಾಕ್ಸ್ವೆಲನ ಸುತ್ತಮುತ್ತ ಬೆಂಕಿ ಹಬ್ಬುತಿತ್ತು. ಹೊಗೆ ಆವರಿಸುತಿತ್ತು. ಅವನ ಪಾದಗಳ ಅಡಿಭಾಗದ ಚರ್ಮ ಸುಟ್ಟುಹೋಯಿತು. ಉರಿಯ ಬೇಗೆ, ಸುಟ್ಟ ನೋವು ಇವನ್ನು ಸಹಿಸುವುದೇ ಕಷ್ಟವೆನಿಸಿತು. ಆದರೂ ಅವನು ಕೂತಲ್ಲಿಂದ ಮಿಸುಕಾಡಲಿಲ್ಲ. ಕರ್ತವ್ಯವನ್ನು ಮರೆಯಲಿಲ್ಲ. ವೇಗವಾಗಿ ಹಡಗನ್ನು ಓಡಿಸುತ್ತಲೇ ಇದ್ದ. ಈಗ ಬೆಂಕಿ ಹಡಗದ ಮೇಲುಭಾಗವನ್ನೂ ಆವರಸಿತೊಡಗಿತು; ಇಂಜಿನಿನ ಕೊಠಡಿಗೂ ನುಗ್ಗಿತು. ಇಂಜಿನಿಗೆ ಧಕ್ಕೆ ಉಂಟಾಯಿತು. ಮರುಕ್ಷಣದಲ್ಲಿ ಹಡಗವು ಗಕ್ಕನೆ ನಿಂತುಬಿಟ್ಟಿತು. ಆದರೆ ಅಷ್ಟರಲ್ಲಿ ಅದು ಕಡಲ ಕರೆಯ ಬಂಡೆಕಲ್ಲಿಗೆ ತಾಗಿ ನಿಂತಿತ್ತು.

ಹಡಗು ನಿಂತುದೇ ತಡ, ಒಳಗಿದ್ದ ಜನ ಬಡಬಡನೆ ಕೆಳಗಿಳಿದರು. ಎಲ್ಲರೂ ಇಳಿದರೆಂಬುದು ಖಚಿತವಾದ ಬಳಿಕ ಮ್ಯಾಕ್ಸ್ವೆಲ್ ಇಳಿದು ಬಂದ. ಆಗಲೆ ಒಬ್ಬನು ಹಡಗದಲ್ಲಿ ತನ್ನ ಹಣದ ಪೆಟ್ಟಿಗೆ ಉಳಿದುಹೋಯಿತೆಂದು ಅಳತೊಡಗಿದ. ಇನ್ನೊಬ್ಬನು ತನ್ನ ಅಮೂಲ್ಯ ವಸ್ತುಗಳ

ಗಂಟು ಅಲ್ಲಿದೆ ಎಂದು ಗೋಳಾಡಿದ. ತಕ್ಷಣ ಮ್ಯಾಕ್ಸ್ವೆಲ್ ಮತ್ತೊಮ್ಮೆ ಹಡಗದ ಮೇಲೇರಿದ. ಪ್ರಯಾಣಿಕರ ಪೆಟ್ಟಿಗೆಗಳನ್ನೆಲ್ಲ ಬೇಗಬೇಗನೆ ಕೆಳಗೆಸೆದ. ಮತ್ತೆ ಬೆಂಕಿಯ ಮಧ್ಯದಿಂದಲೆ ಓಡಿ ಬಂದು ಕೆಳಕ್ಕೆ ಜಿಗಿದ.

ಮ್ಯಾಕ್ಸ್ವೆಲ್ ಎಂಬತ್ತು ಜನರ ಜೀವ ಉಳಿಸಿದ್ದ. ಆ ಯತ್ನದಲ್ಲಿ ಅವನು ಜೀವ ಕಳೆದುಕೊಳ್ಳಲಿಲ್ಲ ನಿಜ. ಆದರೆ ಅವನ ಪಾದಗಳು ಸಂಪೂರ್ಣ ಸುಟ್ಟುಹೋಗಿದ್ದವು. ಕಾಲುಗಳು ಶಕ್ತಿಗುಂದಿದ್ದವು. ಕೆಲವು ಅಂಗಾಂಗಗಳು ನಿರುಪಯುಕ್ತವಾಗಿದ್ದವು. ಸುಂದರವಾದ ಅವನ ದೇಹ ವಿರೂಪಗೊಂಡಿತ್ತು. ದುಡಿವ ಶಕ್ತಿಯನ್ನೆ ಅವನು ಕಳೆದುಕೊಂಡಿದ್ದ.

ಆದರೆ ಅವನ ದಕ್ಷತೆ ಮತ್ತು ಕರ್ತವ್ಯ ಪ್ರಜ್ಞೆಗಳನ್ನು ಜಗತ್ತು ಕೊಂಡಾಡಿತು. ಹಡಗದ ಮಾಲಿಕರು ಅವನಿಗೆ ನಿವೃತ್ತಿ ವೇತನ ಕರುಣಿಸಿದರು. ಅವನ ಸಹಾಯಾರ್ಥ ದಾನಗಳೂ ದೇಣಿಗೆಗಳೂ ಹರಿದು ಬಂದವು. ಏನಾದರೇನು? ಅವನ ತ್ಯಾಗಕ್ಕೆ, ಅವನ ಸಾಹಸಕ್ಕೆ, ಅವನ ನಿಸ್ವಾರ್ಥ ಸೇವೆಗೆ ಬೆಲೆಕಟ್ಟುವುದು ಸಾಧ್ಯವಾದೀತೆ?

* * *

## ಸತ್ಯವಂತನಾದ ಧರ್ಮಬೋಧಕ

ಒಂದು ಊರಲ್ಲಿ ಒಬ್ಬ ಧರ್ಮಬೋಧಕನಿದ್ದ. ಅವನು ತೀರ ಬಡವ. ಆದರೆ ತುಂಬ ಪ್ರಾಮಾಣಿಕ. ಅವನಿಗೆ ಒಬ್ಬಳು ಹೆಂಡತಿ ಮತ್ತು ಏಳು ಜನ ಮಕ್ಕಳು. ಸುಮರು ೪೦ ಪೌಂಡುಗಳು ವಾರ್ಷಿಕ ಆದಾಯ ಮಾತ್ರ ಅವನಿಗಿತ್ತು. ಬಹು ಕಷ್ಟದಲ್ಲೆ ಅವನ ಸಂಸಾರ ಸಾಗುತಿತ್ತು.

ಒಂದು ದಿನ ಧರ್ಮಬೋಧಕನು ಎಲ್ಲೋ ಹೋಗಿದ್ದ.  ಮನೆಗೆ ಹಿಂದಿರುಗುವ ದಾರಿಯಲ್ಲಿ ಅವನಿಗೊಂದು ಚೀಲ ಗೋಚರಿಸಿತು. ಅವನು ಅದನ್ನು ಎತ್ತಿಕೊಂಡ; ಸಾಕಷ್ಟು ಭಾರವಾಗಿತ್ತು ಅದು. ಒಳಗೆ ನೋಡಿದಾಗ ಅಮೂಲ್ಯ ಚಿನ್ನಾಭರಣಗಳು ಅದರಲ್ಲಿದ್ದವು. ಸುತ್ತಮುತ್ತ ಯಾರೂ ಕಾಣಿಸಲಿಲ್ಲ. ಹಾಗಾಗಿ ಅವನು ಅದನ್ನು ಮನೆಗೆ ತಂದ. ಹೆಂಡತಿಗೂ ಅದನ್ನು ತೋರಿಸಿದ. ಅದು ತನಗೆ ದೊರೆತ ಬಗೆಯನ್ನೂ ವಿವರಿಸಿ ಹೇಳಿದ.

ಗಂಡನಿಗೆ ಚಿನ್ನಾಭರಣಗಳ ಚೀಲ ದೊರೆತುದರಿಂದ ಹೆಂಡತಿಗೆ ಭಾರೀ ಸಂತೋಷವಾಯಿತು. ತಮ್ಮ ಕಷ್ಟ ನಿವಾರಣೆಗಾಗಿ ದೇವನೇ ಅದನ್ನು ದೊರಕಿಸಿಕೊಟ್ಟ ಎಂದು ಕೊಂಡಳು ಆಕೆ. ಗಂಡ ಅದನ್ನು ತಮ್ಮ ಕುಟುಂಬದ ಉಪಯೋಗಕ್ಕೆ ಬಳಸಿಕೊಳ್ಳುವಂತೆ ಒತ್ತಾಯಿಸಿದಳು. ಆದರೆ ಗಂಡ ಅದಕ್ಕೆ ಒಪ್ಪಲಿಲ್ಲ. “ಪರರ ಸೊತ್ತು ನಮಗೆ ಬೇಡ ಅದರ ಚಿಕ್ಕಾಸನ್ನೂ ನಾನು ಮುಟ್ಟುವುದಿಲ್ಲ. ಅದನ್ನು ಕಳೆದುಕೊಂಡವರನ್ನು ಹುಡುಕಬೇಕು. ಸತ್ಯಕ್ಕೆ ನಾನೆಂದಿಗೂ ದ್ರೋಹ ಬಗೆಯಲಾರೆ” ಎಂದು ಹೇಳಿದ.

ಕೆಲವು ಕಾಲ ಕಳೆಯಿತು. ಒಂದು ದಿನ ಒಬ್ಬ ಗೃಹಸ್ಥನು ಧರ್ಮಬೋಧಕನ ಮನೆಗೆ ಬಂದ. ತಾನು ಕಳೆದುಕೊಂಡ ಒಡವೆಗಳ ವಿವರಣೆ ನೀಡಿದ. ತಕ್ಷಣ ಧರ್ಮಬೋಧಕ ತನಗೆ ಸಿಕ್ಕಿದ ಚಿನ್ನಾಭರಣಗಳ ಚೀಲವನ್ನು ಅವನಿಗೆ ಒಪ್ಪಿಸಿದ “ತುಂಬ ಉಪಕಾರ ಮಾಡಿದಿರಿ” ಎನ್ನುತ್ತ ಬಂದವನು ಹೊರಟು ಹೋದ.

ಧರ್ಮಬೋಧಕನ ಹೆಂಡತಿಗೆ ಭಾರೀ ಕೋಪ ಬಂತು. ಚಿನ್ನಾಭರಣಗಳನ್ನು ಮರಳಿ ಪಡೆದ ಆ ಧನಿಕ ಅದರ ಸ್ವಲ್ಪ ಭಾಗವನ್ನಾದರೂ ತಮಗೆ ಕೊಡಬೇಕಿತ್ತು ಎಂದುಕೊಂಡಳು ಆಕೆ. ತನ್ನ ಗಂಡನ ಮಿತಿಮೀರಿದ ಸತ್ಯ ಸಂಧತೆಗಾಗಿ ಅವನನ್ನೂ ದೂರಿದಳು. ಆದರೆ ಗಂಡನು ಕೋಪಗೊಳ್ಳಲಿಲ್ಲ. “ಸತ್ಯ ಸಂಧತೆ ಯೇ ಸರ್ವ ಶ್ರೇಷ್ಠ ನೀತಿ. ಅದಕ್ಕೆ ತಪ್ಪಿ ನಡೆಯುವುದು ತರವಲ್ಲ. ಅದು ನನ್ನಿಂದಾಗದು. ಜನಕ್ಕೆ ನೀತಿ ಬೋಧಿಸುವವರೇ ಅನೀತಿಯ ಹಾದಿ ಹಿಡಿದರೆ, ಬೇಲಿಯೇ ಹೊಲ ಮೇದಂತೆ ಆಗುವುದಿಲ್ಲವೆ?” ಎಂದುಬಿಟ್ಟ.

ಇನ್ನೂ ಕೆಲವು ದಿನಗಳು ಸಂದುವು. ಅಷ್ಟರಲ್ಲಿ ಆ ಧನಿಕನು ಧರ್ಮಬೋಧಕನ ಮನೆಗೆ ಮತ್ತೆ ಬಂದ. ಧರ್ಮಬೋಧಕನು ತನ್ನ ಮನೆಗೊಮ್ಮೆ ಬರಲೇಬೇಕೆಂದು ಒತ್ತಾಯಿಸಿದ. ಧರ್ಮಬೋಧಕ ಒಪ್ಪಿಕೊಂಡ. ಹೇಳಿದ ಆ ಶ್ರೀಮಂತನ ಮನೆಗೆ ಹೋದ. ಭರ್ಜರಿಯಾಗಿ ಊಟೋಪಚಾರಗಳು ನಡೆದವು. ಧರ್ಮಬೋಧಕ ತನ್ನ ಮನೆಗೆ ಹೊರಟು ನಿಂತ ಆಗ ಆ ಶ್ರೀಮಂತನಿಂದ ೫೦ ಪೌಂಡುಗಳ ಒಂದು ಚೆಕ್ ಮತ್ತು ವಾರ್ಷಿಕವಾಗಿ ೩೦೦ ಪೌಂಡು ಆದಾಯ ತರಬಲ್ಲ ಚಿನ್ನಾಭರಣಗಳ ಕಾಣಿಕೆ ಆತನಿಗೆ ದೊರೆಯಿತು. ಉದಾರಿಯಾದ ಆ ಧನಿಕನಿಗೆ ತುಂಬುಹೃದಯದ ಕೃತಜ್ಞತೆ ಅರ್ಪಿಸಿ, ಧರ್ಮಬೋಧಕ ಹೊರಟು ಬಂದ. ಅಂದಿಗೆ ಅವನ ಬಡತನವೂ ನೀಗಿತು, ಕಷ್ಟ ಕಾರ್ಪಣ್ಯಗಳೂ ತೊಲಗಿ ಹೋದವು.

ಧರ್ಮಬೋಧಕನ ಸತ್ಯಸಂಧತೆ ಅವನನ್ನು ಕಾಪಾಡಿತು.



* * *

## ದಿಟ್ಟ ಹುಡುಗಿ

ಒಬ್ಬಳು ಕೆಲಸದ ಹುಡುಗಿ ಇದ್ದಳು. ಒಮ್ಮೆ ಆಕೆ ತೋಟದಲ್ಲಿ ನಡೆದಾಡುತ್ತಿದ್ದಳು. ಅವಳ ಕೈಯಲ್ಲಿ ಪುಟ್ಟ ಕೂಸು ಇತ್ತು. ಬಹಳ ಹೊತ್ತಿನಿಂದ ಆಕೆ ಅದನ್ನು ಹೊತ್ತುಕೊಂಡಿದ್ದಳು. ಕೈಗಳು ದಣಿದಿದ್ದವು. ಆದುದರಿಂದ ಆಕೆ ಆ ಕೂಸನ್ನು ಹುಲ್ಲುಹಾಸಿನ ಮೇಲೆ ಇರಿಸಿದಳು; ಬಳಿಯಲ್ಲೆ ನಿಂತುಕೊಂಡಳು.

ಆಗಲೇ ದೊಡ್ಡದೊಂಧು ರಣಹದ್ದು ಮಗುವಿನ ಮೇಲೆ ಎರಗಿತು. ಕ್ಷಣದೊಳಗೆ ಅದನ್ನು ಎತ್ತಿ ಒಯ್ಯುವುದರಲ್ಲಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಕಾರಣ ಬಳಿಯಲ್ಲಿದ್ದ ಹುಡುಗಿ ಥಕ್ಕನೆ ತಾನು ಹೊದ್ದುಕೊಂಡಿದ್ದ ಶಾಲನ್ನು ಹದ್ದಿನ ಮೇಲೆ ಹಾಕಿದಳು. ಮತ್ತು ಗಟ್ಟಿಯಾಗಿ ಅದನ್ನು ಹಿಡಿದುಕೊಂಡಳು. ಹದ್ದು ಕೊಸರಾಡಿತು. ಸಿಕ್ಕಿದ ಕಡೆ ಹುಡುಗಿಯನ್ನು ಕುಕ್ಕಿತು ಪರಚಿತು. ಆಕೆಯ ಮೈ ಕೈಗಳಲ್ಲಿ ಗಾಯವಾಗಿ ನೆತ್ತರು ಸುರಿಯತೊಡಗಿತು. ಆದರೂ ಅವಳ ಬಿಗಿ ಹಿಡಿತ ಸಡಿಲಲಿಲ್ಲ. ಹದ್ದಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹದ್ದನ್ನು ಹಿಡಿದಿಟ್ಟ ಹುಡುಗಿ ಸಹಾಯಕ್ಕಾಗಿ ಬೊಬ್ಬಿಟ್ಟಳು. ನೆರೆಕರೆಯ ಜನ ಓಡಿ ಬಂದರು. ಹುಡುಗಿಯ ಹಿಡಿತದಿಂದ ಹದ್ದನ್ನು ಬಿಡಿಸಿ, ಹಿಡಿದುಕೊಂಡರು. ಆಕೆಯ ಧೈರ್ಯ ಮತ್ತು ಸಮಯಪ್ರಜ್ಞೆಗಳನ್ನು ಬಾಯಿ ತುಂಬ ಹೊಗಳಿದರು. ಹದ್ದನ್ನು ಒಯ್ದು ಮೃಗಾಲಯಕ್ಕೆ ಒಪ್ಪಿಸಿದರು.



ವಿಷಯ ತಿಳಿದು ಮಗುವಿನ ಹೆತ್ತವರೂ ತೋಟದೆಡೆ ಓಡಿ ಬಂಧರು. ಮಗುವನ್ನೆತ್ತಿ ಮುದ್ದಾಡಿದರು. ಹುಡುಗಿಯ ಸಾಹಸಕ್ಕಾಗಿ ಅವಳನ್ನು ಕೊಂಡಾಡಿದರು. ಆಕೆಗೆ ಬಹುಮಾನ ನೀಡಿ ಕೃತಜ್ಞತೆ ಅರ್ಪಿಸಿದರು. ಅಪ್ಪುಗೆಯಲ್ಲಿದ್ದ ಮಗು ಮಾತ್ರ ಬೊಚ್ಚಬಾಯಿ ಬಿಟ್ಟು ನಗುತ್ತಲೇ ಇತ್ತು.

* * *

## ನ್ಯಾಯ ನಿರ್ಣಯ

ಒಬ್ಬ ರಷ್ಯನ್ನನು ಪಯಣ ಹೊರಟಿದ್ದ. ಯುರೋಪಿನ ದೇಶಗಳಲ್ಲಿ ಸುತ್ತಾಡುವುದು ಅವನ ಉದ್ದೇಶವಾಗಿತ್ತು. ಊರೂರು ಸುತ್ತಾಡುತ್ತ ಅವನು ವಾರ್ಸೋ ನಗರಕ್ಕೆ ಬಂದ. ಅವನ ಕೈಯಲ್ಲಿ ಒಂದು ಪತ್ರವಿತ್ತು. ಅವನ ಗೆಳೆಯ ಅದನ್ನು ಕೊಟ್ಟಿದ್ದ. ಅದರಲ್ಲಿ ಅವನು ಯಾರು, ಯಾವ ಉದ್ದೇಶದಿಂದ ಬಂದವನು ಎಂಬ ವಿವರಗಳಿದ್ದವು. ವಾರ್ಸೋ ನಗರದ ನಿವಾಸಿ ಒಬ್ಬನಿಗೆ ಬರೆದ ಪತ್ರವಿದು. ಪಯಣಿಗನು ಸಂಬಂಧಪಟ್ಟ ವ್ಯಕ್ತಿಯನ್ನು ಕಂಡುಹುಡುಕಿದ. ಅವನಿಗೆ ಪತ್ರವನ್ನು ತೋರಿಸಿದ ಒಡನೆ ವಾರ್ಸೋ ನಿವಾಸಿ ಆತನನ್ನು ಆದರದಿಂದ ಬರಮಾಡಿಕೊಂಡ. ಅವನಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟ.

ಪಯಣಿಗ ಅಲ್ಲಿ ಕೆಲವು ದಿನ ತಂಗಿದ. ನೋಡ ತಕ್ಕ ಸ್ಥಳಗಳನ್ನೆಲ್ಲ ನೋಡಿಕೊಂಡ. ಒಂದು ವಾರ ಕಾಲ ಬೇರೆ ಊರುಗಳಲ್ಲಿ ಸುತ್ತಾಡಿ ಮತ್ತೆ ಪುನಃ ಆ ನಗರಕ್ಕೆ ಹಿಂದೆ ಬಂದು ಪಯಣ ಮುಂದುವರಿಸಲು ನಿಶ್ಚಯಿಸಿದ. ಹಾಗೆ ಹೋಗುವಾಗ ತನ್ನಲ್ಲಿದ್ದ ಒಂದು ಪೆಟ್ಟಿಗೆಯನ್ನು ವಾರ್ಸೋ ನಿವಾಸಿಯ ವಶ  ಒಪ್ಪಿಸಿದ. "ಒಂದು ವಾರ ಬಿಟ್ಟು ನಾನು ಹಿಂದಿರುಗಿ ಬರುತ್ತೇನೆ. ಅಲ್ಲಿಯವರೆಗೆ ಈ ಪೆಟ್ಟಿಗೆ ನಿಮ್ಮಲ್ಲಿರಲಿ. ಅಮೂಲ್ಯವಾದ ಮುತ್ತು ರತ್ನಗಳು ಇದರಲ್ಲಿವೆ. ಇನ್ನೊಬ್ಬರಿಗೆ ಸಲ್ಲಬೇಕಾದ ವಸ್ತುಗಳಿವು. ದಯವಿಟ್ಟು ಇದನ್ನು ನಿಮ್ಮ ವಶ ಇರಿಸಿಕೊಳ್ಳಿ. ಮುಂದಿನ ವಾರ ನಾನು ಇದನ್ನು ಕೊಂಡೊಯ್ಯುವೆ" ಎಂದು ಕೇಳಿಕೊಂಡ. ಮನೆಯ ಯಜಮಾನ ಅವನ ಮಾತಿಗೆ ಒಪ್ಪಿದ. ಪೆಟ್ಟಿಗೆಯನ್ನು ತನ್ನಲ್ಲಿ ಇರಿಸಿಕೊಂಡ.

ಒಂದು ವಾರ ಕಳೆಯಿತು. ಪಯಣಿಗೆ ಹಿಂದಿರುಗಿ ಬಂದ. ತನ್ನ ಪೆಟ್ಟಿಗೆಯನ್ನು ಹಿಂದೆ ಕೊಡುವಂತೆ ಮನೆಯಾತನನ್ನು ಬೇಡಿಕೊಂಡ . ಅವನ ಮಾತು ಕೇಳಿದ ಯಜಮಾನನೂ ಅವನ ಹೆಂಡತಿಯೂ ಆಶ್ಚರ್ಯ ನಟಿಸಿದರು. "ಯಾವ ಪೆಟ್ಟಿಗೆ? ಯಾರು ಕೊಟ್ಟದ್ದು? ಯಾವಾಗ? ನಮಗೆ ಯಾವ ಸಂಗತಿಯೂ ಗೊತ್ತಿಲ್ಲವಲ್ಲ!" ಎಂದರು.

ಪಯಣಿಗನಿಗೆ ದಿಕ್ಕೇ ತೋಚದಂತಾಯಿತು. ಅವನು ಊರವರಲ್ಲಿ ದೂರು ಕೊಟ್ಟ. ಅವರು ಬಂದರು. ಮನೆಯಾತನನ್ನು ಪ್ರಶ್ನಿಸಿದರು. "ಈ ಪಯಣಿಗನಿಗೆ ತಲೆ ಕೆಟ್ಟಿದೆ. ಆದುದರಿಂದ ಏನೇನೋ ಮಾತಾಡುತ್ತಿದ್ದಾನೆ. ಅವನು ಪೆಟ್ಟಿಗೆ ಕೊಟ್ಟುದೂ ಇಲ್ಲ; ನಾವದನ್ನು ಪಡೆದುದೂ ಇಲ್ಲ" ಎಂದು ಬಿಟ್ಟ ಮನೆಯಾತ.

ಪಯಣಿಗ ಪೋಲೀಸರಲ್ಲಿ ದೂರುಕೊಟ್ಟ. ಅವರು ಪೆಟ್ಟಿಗೆ ಕೊಟ್ಟ ಬಗ್ಗೆ ರುಜುವಾತು ಏನಿದೆ ಎಂದು ಅವನನ್ನು ಪ್ರಶ್ನಿಸಿದರು. ಪಯಣಿಗೆ ತನ್ನಲ್ಲಿದ್ದ ಕೀಲಿಕೈ ತೋರಿಸಿದ. ಆದರೆ ಪೋಲೀಸರು ಒಪ್ಪಲಿಲ್ಲ. "ಸಾಕ್ಷಿಗಳಿಲ್ಲದೆ ಕೈಚೀಟ ಸಹ ಪಡೆಯದೆ ಅಷ್ಟು ಅಮೂಲ್ಯ ವಸ್ತುಗಳನ್ನು ಹೇಗೆ ಕೊಟ್ಟೆ? ನಾವೇನೀ ಮಾಡಲಾರೆವು" ಎಂದರು ಅವರು. ಆದರೂ ದೇಶದ ಗವರ್ನರರಲ್ಲಿ ಆತ ದೂರು ಕೊಡಬಹುದು ಎಂಬ ಸಲಹೆ ನೀಡಿದರು ಅವರಲ್ಲಿಗೆ ಅವನನ್ನು ಕರೆದೊಯ್ದರು.

ಗವರ್ನರರು ಪಯಣಿಗನ ದೂರನ್ನು ತಾಳ್ಮೆಯಿಂದ ಕೇಳಿಕೊಂಡರು. ಮತ್ತೆ ಕ್ಷಣಕಾಲ ಆ ಬಗ್ಗೆ ಯೋಚಿಸಿದರು. ಅನಂತರ ಆಪಾದಿತನಿಗೆ ಹೇಳಿ ಕಳಿಸಿದರು. ಅವನು ಬಂದಾಗ ಅವರು ಅವನನ್ನು ತಮ್ಮ ಎದುರುಗಡೆಯ ಕುರ್ಚಿಯಲ್ಲಿ ಕೂಡಿಸಿದರು. ಅವನ ಕೈಯಲ್ಲಿ ಒಂದು ಕಾಗದವನ್ನೂ ಲೇಖನಿಯನ್ನೂ ಕೊಟ್ಟರು. ತಾನು ಹೇಳಿದಂತೆ ಅವನು ಅದರಲ್ಲಿ ಬರೆಯಬೇಕೆಂದು ಸೂಚಿಸಿದರು. ಮತ್ತು "ಪ್ರೀತಿಯ ನನ್ನವಳೇ, ನನ್ನ ಗುಟ್ಟು ರಟ್ಟಾಗಿದೆ. ಈ ಚೀಟು ತರುವವರಲ್ಲಿ ಆ ಪೆಟ್ಟಿಗೆಯನ್ನು ಕೊಟ್ಟು ಕಳಿಸು" ಎಂದು ಬರೆದು ಅದರ ಕೆಳಗಡೆ ಅವನು ತನ್ನ ಸಹಿ ಹಾಕಬೇಕು ಎಂದು ಅಪ್ಪಣೆ ಕೊಟ್ಟರು ಬಂದವನು ಇದಕ್ಕೆ ಸಿದ್ಧನಿರಲಿಲ್ಲ. ತಾನು ಬರೆಯಲಾರೆ ಎಂದು ಹಠ ಹಿಡಿದ. "ಹಾಗಾದರೆ ನೀನೇ ಅಪರಾಧಿ ಎಂದು ಸಾಭೀತಾಯಿತು ನೀನು ಶಿಕ್ಷೆ ಅನುಭವಿಸಬೇಕಾಗುತ್ತದೆ" ಎಂದು ಗವರ್ನರರು ಎಚ್ಚರಿಕೆ ಕೊಟ್ಟಾಗ ಅವನು ಅವರು ಹೇಳಿದಂತೆ ಒಪ್ಪಲೇಬೇಕಾಯಿತು.



ಪತ್ರ ಬರೆದಾಯಿತು. ಪತ್ರಕ್ಕೆ ಅವನ ಸಹಿಯೂ ಬಿತ್ತು. ಸೇವಕನ ಮೂಲಕ ಅದನ್ನು ಅವನ ಮನೆಗೆ ಕಳಿಸಲಾಯಿತು. ಪತ್ರ ಕಂಡೊಡನೆ ಅವನ ಹೆಂಡತಿಯ ಮುಖ ಬಿಳಿಚಿಕೊಂಡಿತು. ನಡುಗುತ್ತ ಅವಳು ಒಳಹೋಗಿ ಪೆಟ್ಟಿಗೆಯನ್ನು ತಂದೊಪ್ಪಿಸಿದಳು. ಸೇವಕ ಅದನ್ನು ತಂದು ಗವರ್ನರರಿಗೆ ಒಪ್ಪಿಸಿದ. ಅವರು ಅದನ್ನು ಪಯಣಿಗನಿಗೆ ಕೊಟ್ಟರು. "ನಿನ್ನ ವಸ್ತುಗಳೆಲ್ಲ ಸುರಕ್ಷಿತವಾಗಿ ಇವೆಯೇ ನೋಡಿಕೊ" ಎಂದರು.

ವ್ಯಾಪಾರಿ ತನ್ನ ಕೀಲಿಕೈ ಬಳಸಿ ಪೆಟ್ಟಿಗೆಯ ಬಾಯಿ ತೆರೆದ. ಅವನ ವಸ್ತುಗಳೆಲ್ಲ ಸುರಕ್ಷಿತವಾಗಿದ್ದವು. ಸಂತೋಷದಿಂದ ಅವನು ಗವರ್ನರರಿಗೆ ವಂದಿಸಿ, ಅಲ್ಲಿಂದ ಹೊರಟು ಹೋದ.

ಅಪರಾಧಿ ತಕ್ಷಣ ದೇಶ ಬಿಟ್ಟು ಹೋಗುವಂತೆ ಗವರ್ನರರ ಅಪ್ಪಣೆಯಾಯಿತು.

* * *

# ಪ್ರಯಾಣಿಕ ಮತ್ತು ಡಕಾಯಿತಿ

ಅದೊಂದು ಕಗ್ಗತ್ತಲ ರಾತ್ರಿ. ಇಂಗ್ಲಿಷ್ ಗೃಹಸ್ಥನೊಬ್ಬ ಸಾರೋಟನಲ್ಲಿ ಪಯಣ ಹೊರಟಿದ್ದ. ರಸ್ತೆ ನಿರ್ಜನವಾಗಿತ್ತು. ಫಕ್ಕನೆ ಡಕಾಯಿತನೊಬ್ಬ ಅಲ್ಲಿ ಪ್ರತ್ಯಕ್ಷನಾದ ಅವನು ಕುದುರೆಯ ಮೇಲೆ ಕೂತಿದ್ದ. ಅವನ ಕೈಯಲ್ಲಿ ಪಿಸ್ತೂಲು ಇತ್ತು. ಅದನ್ನು ಅವನು ಪ್ರಯಾಣಿಕನ ಎದೆಗೆ ಗುರಿಯಿಟ್ಟಿದ್ದ. ಜೀವದಾಸೆಯಿದ್ದರೆ ಪ್ರಯಾಣಿಕನು ತನ್ನ ಹಣವನ್ನೆಲ್ಲ ಕೊಟ್ಟುಬಿಡಬೇಕೆಂದು ಅವನು ಬೆದರಿಕೆ ಹಾಕಿದ್ದ "ಒಬ್ಬಂಟ ದರೋಡೆಗಾರ ನಿನ್ನನ್ನು ಎಂದಿಗೂ ದೋಚಲಾರನೆಂದು ಬಡಾಯಿಕೊಚ್ಚು ತಿದ್ದೆಯಲ್ಲಾ? ಅದು ನನ್ನ ಗಮನಕ್ಕೆ ಬಂದಿದೆ. ಇಗೋ ನಾನೊಬ್ಬ ಸುಲಿಗೆಗಾರ ಒಬ್ಬಂಟಿಯಾಗಿ ಬಂದಿದ್ದೇನೆ. ನಿನ್ನನ್ನೀಗ ದೋಚುವೆನೊ ಇಲ್ಲವೋ ನೋಡುತ್ತಿರು. ನಿನ್ನ ಬಡಾಯಿ ಅದೆಷ್ಟು ನಿರರ್ಥಕ ಎಂಬುದು ನನಗೀಗ ತಿಳಿಯುವುದು" ಎಂದು ಆತ ಘರ್ಜಿಸಿದ.



ಪಯಣಿಗ ಒಂದಿಷ್ಟೂ ವಿಚಲಿತನಾಗಲಿಲ್ಲ. ತನ್ನಲ್ಲಿರುವ ಹಣವನ್ನು ಹೊರತೆಗೆಯಲೆಂಬಂತೆ ಅವನು ಕೋಟನ ಕಿಸೆಗೆ ಕೈತೂರಿದ "ನಿನ್ನ ಹಿಂದೆಗಡೆಯವನ ಸಹಾಯವಿಲ್ಲದಿದ್ದರೆ ಈಗಲೂ ನನ್ನನ್ನು ದೋಚುವುದು ನಿನಗೆ ಸಾಧ್ಯವಿಲ್ಲ" ಎನ್ನುತ್ತ, ಡಕಾಯಿತ ಹಿಂದಿರುಗಿ ನೋಡುತ್ತಿದ್ದಾಗ, ಪಯಣಿಗ ಮಿಂಚಿನ ವೇಗದಲ್ಲಿ ತನ್ನ ಪಿಸ್ತೂಲು ಹೊರ ತೆಗೆದು ಗುಂಡು ಹಾರಿಸಿಬಿಟ್ಟ. ಡಕಾಯಿತ ಸತ್ತು ಬಿದ್ದ. ಬಂದ ಗಂಡಾಂತರ ದೂರವಾಯಿತು. ಗೃಹಸ್ಥನ ಪ್ರಯಾಣ ಮುಂದುವರಿಯಿತು.

ಧೈರ್ಯ ಮತ್ತು ಪ್ರಸಂಗಾವಧಾನತೆಗಳು ಅವನನ್ನು ಗಂಡಾಂತರದಿಂದ ಪಾರು ಮಾಡಿದ್ದವು.

* * *

# ನಗರದಲ್ಲಿ ಪುಟ್ಟಿ

## (ಮಕ್ಕಳಲ್ಲಿ ರಸ್ತೆ ನಿಯಮಗಳ ತಿಳಿವಳಿಕೆಯನ್ನೂ, ರಸ್ತೆ ನೈರ್ಮಲ್ಯ ಮತ್ತು ಸುರಕ್ಷತೆಗಳ ಬಗ್ಗೆ ಜಾಗೃತಿಯನ್ನೂ ಮೂಡಿಸುವ ಪುಸ್ತಕ)

"ಅಮ್ಮಾ, ನಾನು ಮತ್ತು ಪುಟ್ಟಿ ಸ್ವಲ್ಪ ಸುತ್ತಾಡಿ ಬರುತ್ತೇವೆ" ಕಿಟ್ಟ ಕೂಗಿ ಹೇಳಿದ.


"ಆಗಲಿ ಮಗೂ, ಪುಟ್ಟಿ ಹಳ್ಳಿಯ ಹುಡುಗಿ. ಮೊದಲ ಬಾರಿಗೆ ನಗರಕ್ಕೆ ಬಂದಿದ್ದಾಳೆ. ರಸ್ತೆ ನಿಯಮಗಳು ಅವಳಿಗೆ ತಿಳಿದಿಲ್ಲ. ಜಾಗ್ರತೆ ಹೋಗಿ ಬನ್ನಿ" ಎನ್ನುತ್ತ ಕಿಟ್ಟನ ಅಮ್ಮ ಹೊಸ್ತಿಲಲ್ಲಿ ಬಂದು ನಿಂತರು.

"ಆಗಲಿ ಅಮ್ಮಾ... ನಾನು ಇದ್ದೇನಲ್ಲ? ಅವಳಿಗೆ ಎಲ್ಲವನ್ನೂ ತಿಳಿಸಿ ಹೇಳುತ್ತೇನೆ" ಕಿಟ್ಟ ಭರವಸೆ ನೀಡಿದ.

"ಬರುತ್ತೇವೆ ದೊಡ್ಡಮ್ಮಾ. ಟಾಟಾ..." ಪುಟ್ಟಿ ಕೈಯಾಡಿಸಿದಳು.

"ಒಳ್ಳೆಯದು. ಹೋಗಿ ಬನ್ನಿ" ಎಂದು ಕೈಯಾಡಿಸುತ್ತ, ಮಕ್ಕಳನ್ನು ಬೀಳ್ಕೊಟ್ಟರು, ಕಿಟ್ಟನ ಅಮ್ಮ.

ಪುಟ್ಟಿ, ದೂರದ ಹಳ್ಳಿಯಲ್ಲಿ ಹುಟ್ಟಿದವಳು; ಹಳ್ಳಿಯಲ್ಲೇ ಬೆಳೆದವಳು. ನಿನ್ನೆ ತಾನೇ ಅವಳು ನಗರಕ್ಕೆ ಬಂದಿದ್ದಳು. ಇಲ್ಲಿ ಅವಳ ದೊಡ್ಡಮ್ಮನ ಮನೆ ಇತ್ತು. ಕಿಟ್ಟ, ದೊಡ್ಡಮ್ಮನ ಮಗ. ಪುಟ್ಟಿಗೆ ನಗರವನ್ನು ತೋರಿಸುವುದಾಗಿ ಅವನು ಹೇಳಿದ್ದ. ಅದಕ್ಕೆಂದೆ ಅವರು ಈಗ ಹೊರಟಿದ್ದರು.



ಕಿಟ್ಟ ಮತ್ತು ಪುಟ್ಟಿ ಮುಖ್ಯ ಬೀದಿಗೆ ಬಂದರು. ಬೀದಿ ಅಗಲವಾಗಿತ್ತು. ಅದರ ಎರಡೂ ಬದಿಗಳಲ್ಲಿ ಕಾಲು ಹಾದಿಗಳಿದ್ದವು. ಪುಟ್ಟಿ ಅವುಗಳನ್ನು ನೋಡಿದಳು. ಅವಳಿಗೆ ಆಶ್ಚರ್ಯವಾಯಿತು.

"ಕಿಟ್ಟಣ್ಣಾ, ಇದೇನು, ಇಲ್ಲಿ ಒಂದೇ ಕಡೆ ಮೂರು ಬೀದಿಗಳಿವೆ?" ಅವಳು ಕೇಳಿದಳು.

"ಪುಟ್ಟೀ, ಇವುಗಳಲ್ಲಿ ನಡುವಿನದು ಮುಖ್ಯ ಬೀದಿ,
ಇದು **ವಾಹನಗಳ ಓಡಾಟಕ್ಕೆ. ಆ ಕಡೆ ಈ ಕಡೆ ಇರುವವು ಕಾಲು ಹಾದಿಗಳು. ಇವು ಜನರ ಸಂಚಾರಕ್ಕೆ".** ಕಿಟ್ಟ ವಿವರಿಸಿದ.

"ನಮ್ಮೂರಲ್ಲಿ ರಸ್ತೆ ಮಾತ್ರ ಇದೆ. ಅದರ ಎರಡೂ ಬದಿಗಳಲ್ಲಿ ಕಾಲು ಹಾದಿಗಳಿಲ್ಲ. ಆಗ?"

**"ಕಾಲು ಹಾದಿ ಇಲ್ಲದ ಕಡೆ ಜನರು ರಸ್ತೆಯ ಬಲಬದಿಯಿಂದಲೇ ನಡೆಯಬೇಕು. ವಾಹನಗಳು ರಸ್ತೆಯ ಎಡಬದಿಯಿಂದಲೇ ಓಡಾಡಬೇಕು. ಇದು ರಸ್ತೆ ನಿಯಮ."**

"ಹಳ್ಳಿಯ ಜನಕ್ಕೆ ಇದು ತಿಳಿದಿಲ್ಲ. ಅವರು ರಸ್ತೆಯ ಎಡಬದಿಯಲ್ಲೂ ನಡೆಯುತ್ತಾರೆ.

ಕಿಟ್ಟ – ಆಗ ಹಿಂದಿನಿಂದ ಬರುವ ವಾಹನಗಳು ಅವರಿಗೆ ಡಿಕ್ಕಿ ಹೊಡೆವ ಸಾಧ್ಯತೆ ಹೆಚ್ಚು. ಏಕೆ ಗೊತ್ತೇ? ಆ ವಾಹನಗಳು ಸಹ ರಸ್ತೆಯ ಎಡ ಮಗ್ಗುಲಲ್ಲೇ ಓಡಾಡುತ್ತವೆ. ಅವು ಹಿಂದಿನಿಂದ ಬರುತ್ತವೆ. ನಡೆಯುವವರಿಗೆ ಅವು ಕಾಣಿಸುವುದಿಲ್ಲ.

ಪುಟ್ಟಿ – ಅಂತೂ ರಸ್ತೆಯ ಬಲಬದಿಯಲ್ಲೇ ನಡೆಯಬೇಕು. ಒಪ್ಪಿಕೊಳ್ಳೋಣ. ಆದರೆ ಒಂದು ಸಂದೇಹ.

ಕಿಟ್ಟ– ಏನದು? ಕೇಳಿ ಬಿಡು.

ಪುಟ್ಟಿ– ಎದುರಗಡೆಯಿಂದ ಬರುವ ವಾಹನಗಳು ನಮ್ಮ ಪಕ್ಕದಲ್ಲೇ ಓಡಾಡುತ್ತವೆ. ಅವು ಸಹ ನಮಗೆ ಡಿಕ್ಕಿ ಹೊಡೆಯ ಬಹುದಲ್ಲ?

ಕಿಟ್ಟ – ಎದುರಗಡೆಯಿಂದ ಬರುವ ಅವುಗಳನ್ನು ನಾವು ನೋಡುತ್ತಲೇ ಇರುತ್ತೇವಲ್ಲ? ಸ್ವಲ್ಪ ಎಚ್ಚರ ಇದ್ದರಾಯಿತು. ಅವಘಡಗಳಿಂದ ತಪ್ಪಿಸಿಕೊಳ್ಳಬಹುದು.

ಹೀಗೆ ಮಾತಾಡುತ್ತಲೆ ಅವರು ನಡೆದು ಬರುತ್ತಿದ್ದರು. ಒಂದೆಡೆ ಮುಖ್ಯ ಬೀದಿ ಮತ್ತು ಕಾಲು ಹಾದಿಗಳ ನಡುವೆ ಬೇಲಿ ಕಾಣಿಸಿತು. ಪುಟ್ಟಿ ಅದನ್ನು ಗಮನಿಸಿದಳು. ಅದು ಏನು? ಏಕೆ ಅಲ್ಲಿದೆ? ಅವಳಿಗೆ ಅರ್ಥವಾಗಲಿಲ್ಲ. "ಅಯ್ಯೋ, ಇದೇನು, ರಸ್ತೆ ಮತ್ತು ಕಾಲು ಹಾದಿಗಳ ಮಧ್ಯೆ ಬೇಲಿ ಇದೆಯಲ್ಲಾ! ಅವಳು ಪ್ರಶ್ನಿಸಿದಳು.

ಕಿಟ್ಟ– ಹೌದು ಪುಟ್ಟೀ. ಇದನ್ನು **ಅಡ್ಡ ಕಂಬಿ (Railing)** ಎನ್ನುತ್ತಾರೆ.

ಪುಟ್ಟಿ – ಇದು ಯಾಕೆ ಬೇಕು?

ಕಿಟ್ಟ – **ಜನ ಮುಖ್ಯ ರಸ್ತೆಗೆ ಇಳಿಯದಂತೆ ತಡೆಯಲು ಇದು ಸಹಾಯ ಮಾಡುತ್ತದೆ.**

ಪುಟ್ಟಿ – ಆದರೆ, ಅಲ್ಲಿ ನೋಡು. ಯಾರೋ ಒಬ್ಬ ಅಡ್ಡ ಕಂಬಿ ಹಾದು, ರಸ್ತೆಗೆ ಇಳಿಯುತ್ತಿದ್ದಾನೆ!

ಕಿಟ್ಟ – ಅದು ತಪ್ಪು. ಸಂಚಾರಿ ಪೋಲಿಸರು ನೋಡಿದರೆ ಅವನನ್ನು ಹಿಡಿದು ಬಿಡುತ್ತಾರೆ. ಅವನಿಗೆ ಶಿಕ್ಷೆಯೂ ಆಗಬಹುದು.

ಕಿಟ್ಟ ಮತ್ತು ಪುಟ್ಟಿ ಈಗ ನಗರದ ಮುಖ್ಯ ಭಾಗಕ್ಕೆ ಬಂದಿದ್ದರು. ಅಲ್ಲಿ ರಸ್ತೆ ಬಹಳ ಅಗಲವಾಗಿತ್ತು. ಅದರ ಎರಡೂ ಕಡೆಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳಿದ್ದವು. ಎಂಟು-ಹತ್ತು ಮಾಳಿಗೆಯ ಕಟ್ಟಡಗಳೂ ಅಲ್ಲಿದ್ದವು. ಕಣ್ಣು ಹಾಯಿಸಿದಲ್ಲೆಲ್ಲ ಅಂಗಡಿಗಳು, ಹೋಟೆಲುಗಳು, ಕಚೇರಿಗಳು, ಶಾಲಾ ಕಾಲೇಜುಗಳು, ಕಾರ್ಖಾನೆ, ಆಸ್ಪತ್ರೆ ಇತ್ಯಾದಿಗಳು ಕಂಡು ಬರುತ್ತಿದ್ದವು. ರಸ್ತೆಯಲ್ಲಿ ಎಡೆಬಿಡದೆ ವಾಹನಗಳ ಓಡಾಟ! ಕಾಲು ಹಾದಿಗಳಲ್ಲಿ ಜನಗಳ ದಿಬ್ಬಣ! ಎಲ್ಲೆಲ್ಲೂ ಬಗೆ ಬಗೆಯ ನೋಟಗಳು! ಕಿವಿಗಡಚಿಕ್ಕುವ ಸದ್ದುಗಳು! ಪುಟ್ಟಿ ಬೆರಗಾಗಿ ಹೋದಳು.



“ಅಬ್ಬಾ ಇಲ್ಲಿ ಎಂಥ ದೊಡ್ಡ ದೊಡ್ಡ ಕಟ್ಟಡಗಳು! ಅದೆಷ್ಟು ವಾಹನಗಳು! ಎಷ್ಟು ಬಗೆಯ ಜನಗಳು!” ಅವಳು ಉದ್ಗಾರ ತೆಗೆದಳು. ಮತ್ತೆ ಕಿಟ್ಟನ ಕಡೆಗೆ ತಿರುಗಿ, “ಕಿಟ್ಟಣ್ಣಾ, ಇಲ್ಲಿ ರಸ್ತೆ ದಾಟುವುದಾದರೂ ಹೇಗೆ?” ಅವಳು ಪ್ರಶ್ನಿಸಿದಳು.

ಕಿಟ್ಟ - ಹೌದು ಪುಟ್ಟೀ, ಇಲ್ಲಿ ಜನ ಸಂಚಾರ ಹೆಚ್ಚು. ವಾಹನಗಳ ಓಡಾಟವು ಅಧಿಕ. ಹಾಗಾಗಿ ರಸ್ತೆ ದಾಟುವುದು ಬಹಳ ಕಷ್ಟ.

ಪುಟ್ಟಿ - ಹಾಗಾದರೆ ರಸ್ತೆ ದಾಟುವವರು ಏನು ಮಾಡಬೇಕು? ಎಲ್ಲಿ ದಾಟಬೇಕು?

ಕಿಟ್ಟ - ಇಲ್ಲಿ ಅದಕ್ಕೆ ನಿಶ್ಚಿತವಾದ ಸ್ಥಳವಿದೆ, ಪುಟ್ಟೀ. ನಾವು ಸಹ ಅಲ್ಲಿಗೇ ಹೋಗಬೇಕು. ಸ್ವಲ್ಪ ತಾಳು. ನಿನಗೆ ಎಲ್ಲವನ್ನೂ ತೋರಿಸುತ್ತೇನೆ.

ಅವರು ಇನ್ನಷ್ಟು ಮುಂದೆ ನಡೆದರು. ಅಲ್ಲಿ ಒಂದು ಕಡೆ ರಸ್ತೆಯ ಮೇಲೆ ಕಪ್ಪು-ಬಿಳುಪು ಪಟ್ಟಿಗಳಿದ್ದವು. ಜನ ಎಚ್ಚರಿಕೆಯಿಂದ ರಸ್ತೆ ದಾಟುತ್ತಿದ್ದರು. ಅಲ್ಲೇ ಒಬ್ಬ ಯುವಕ ನಿಂತಿದ್ದ. ಗಟ್ಟಿಮುಟ್ಟಾಗಿದ್ದ ಅವನು ಊರುಗೋಲನ್ನು ಹಿಡಿದುಕೊಂಡಿದ್ದ. ಪುಟ್ಟಿಗೆ ಆಶ್ಚರ್ಯವಾಯಿತು. ಅವಳು ಕಿಟ್ಟನ ಕಡೆ ತಿರುಗಿದಳು. ಅವಳು ಪ್ರಶ್ನೆ ಕೇಳುವ ಮೊದಲೇ ಕಿಟ್ಟ ಆ ಯುವಕನ ಬಳಿ ಸಾರಿದ್ದ.

“ಏನಣ್ಣಾ? ರಸ್ತೆ ದಾಟಬೇಕಿತ್ತೇ?” ಅವನು ಯುವಕನನ್ನು ಪ್ರಶ್ನಿಸಿದ.

“ಹೌದಪ್ಪಾ. ರಸ್ತೆಯ ಆ ಬದಿಗೆ ಹೋಗಬೇಕಿತ್ತು. ಆದರೆ ಧೈರ್ಯ ಬರಲಿಲ್ಲ. ಹಾಗಾಗಿ ಇಲ್ಲೇ ನಿಂತು ಕೊಂಡಿದ್ದೇನೆ.’ ಯುವಕ ಹೇಳಿದ.

“ಅಷ್ಟೇ ತಾನೆ? ಬನ್ನಿ ಹೋಗೋಣ. ನಿಮ್ಮ ಜೊತೆ ನಾನು ಬರುತ್ತೇನೆ.” ಕಿಟ್ಟ ಭರವಸೆ ನೀಡಿದ. ಬಳಿಕ ಅವನು,

“ಪುಟ್ಟೀ, ಒಂದು ನಿಮಿಷ ನೀನು ಇಲ್ಲೇ ನಿಂತಿರು. ಇವರನ್ನು ರಸ್ತೆ ದಾಟಿಸಿ, ಈಗ ಬಂದು ಬಿಡುತ್ತೇನೆ.” ಎಂದು ಅವನು ಯುವಕನ  ಕಯಹಿಡಿದ. ಎಚ್ಚರಿಕೆಯಿಂದ ಅವರು ರಸ್ತೆ ದಾಟಿದರು.

“ರಸ್ತೆಯ ಈ ಬದಿಗೆ ಬಂದು ಬಿಟ್ಟೆವು, ಅಣ್ಣಾ-ನಾನಿನ್ನು ಬರಲೇ?” ಕಿಟ್ಟ ಯುವಕನನ್ನು ಕೇಳಿದ.

“ತುಂಬ ಉಪಕಾರ ಮಾಡಿದೆ ತಮ್ಮಾ. ನೀನಿನ್ನು ಹೋಗಬಹುದು” ಕೃತಜ್ಞತೆ ಸೂಚಿಸುತ್ತ ಹೇಳಿದ ಯುವಕ. ಕಿಟ್ಟ, ಪುಟ್ಟಿ ಇದ್ದಲ್ಲಿಗೆ ಹಿಂದಿರುಗಿದ.

‘ಕಿಟ್ಟಣ್ಣಾ, ಅವನು ಕುರುಡನೇ? ಮೊದಲು ನನಗದು ಗೊತ್ತೇ ಆಗಲಿಲ್ಲ.” ಪುಟ್ಟಿ ಹೇಳಿದಳು.

"ಹೌದು ಪುಟ್ಟೀ, ಅವನು ಕುರುಡ. ಆದುದರಿಂದಲೇ ಅವನು ಆ ಬಿಳಿಕೋಲು ಹಿಡಿದುಕೊಂಡಿದ್ದಾನೆ. ಅವನ ಹಾಗಿನ **ಕುರುಡರಿಗೆ, ಮುದುಕರಿಗೆ, ಅಶಕ್ತರಿಗೆ ರಸ್ತೆ ದಾಟಲು ನಾವು ಸಹಾಯ ಮಾಡಬೇಕು.** ಅದು ನಮ್ಮ ಕರ್ತವ್ಯ." ಕಿಟ್ಟ ವಿವರಿಸಿದ. ಬಳಿಕ ರಸ್ತೆಯ ಮೇಲಿನ ಗುರುತುಗಳನ್ನು ತೋರಿಸುತ್ತ,

"ಇಲ್ಲಿ ನೋಡು ಪುಟ್ಟೀ, **ಈ ಕಪ್ಪು–ಬಿಳುಪು ಪಟ್ಟಿಗಳು (ಜೀಬ್ರಾ ಕ್ರಾಸ್), ರಸ್ತೆ ದಾಟಲು ಇರುವ ಸ್ಥಳವನ್ನು ಸೂಚಿಸುತ್ತವೆ. ಎಲ್ಲರೂ ಇಲ್ಲೇ ರಸ್ತೆ ದಾಟಬೇಕು. ಚಲಿಸುವ ವಾಹನಗಳ ಬಗ್ಗೆ ಎಚ್ಚರವಹಿಸಬೇಕು.** ಇಂಥ ಕೆಲವು ಕಡೆ, ಮತ್ತು ಮೂರು ನಾಲ್ಕು ರಸ್ತೆಗಳು ಸೇರುವಲ್ಲಿ ಸಂಚಾರೀ ಪೋಲಿಸರು ಇರುತ್ತಾರೆ. ಅವರು ವಾಹನಗಳನ್ನು ನಿಲ್ಲಿಸುತ್ತಾರೆ. ರಸ್ತೆ ದಾಟಲು ಜನರಿಗೆ ನೆರವಾಗುತ್ತಾರೆ.

ಕೆಲವೆಡೆ ಈ ಕೆಲಸಕ್ಕಾಗಿ ಕೆಂಪು-ಹಸಿರು ದೀಪಗಳ ವ್ಯವಸ್ಥೆ ಇರುತ್ತದೆ. ನಿನಗೆ ಇದನ್ನೆಲ್ಲ ವಿವರಸಬೇಕಲ್ಲ? ಅದಕ್ಕೆಂದೇ ನಿನ್ನನ್ನು ಇಲ್ಲಿ ನಿಲ್ಲಿಸಿ ಹೋಗಿದ್ದೆ. ಬಾ, ರಸ್ತೆ ದಾಟೋಣ, ಇನ್ನೂ ಸ್ವಲ್ಪ ಮುಂದೆ ಹೋಗೋಣ. ನಿನಗೆ ಇನ್ನೊಂದು ವಿಶೇಷ ತೋರಿಸುತ್ತೇನೆ." ಪುಟ್ಟ ವಿವರಣೆ ನೀಡಿದ. ಅವರು ಎಚ್ಚರಿಕೆಯಿಂದ ರಸ್ತೆ ದಾಟಿದರುಇ. ಹರಟುತ್ತಲೇ ಅವರು ಇನ್ನಷ್ಟು ಮುಂದೆ ನಡೆದರು.

ಅಷ್ಟರಲ್ಲಿ ಮುದ್ದಾದ ನಾಯಿಯೊಂದು ಅವರ ಕಣ್ಣಿಗೆ ಬಿತ್ತು. ಉತ್ತಮ ತಳಿಯ ನಾಯಿ ಅದು. ಹುಡುಗನೊಬ್ಬ ಸರಪಳಿ ಹಾಕಿ ಅದನ್ನು ಹಿಡಿದುಕೊಂಡಿದ್ದ. ನಾಯಿ ಮುಂದೆ ಮುಂದೆ ಓಡುತ್ತಿತ್ತು. ಹುಡುಗ ಅದನ್ನು ಹಿಂಬಾಲಿಸುತ್ತಿದ್ದ. ಆಗ ಒಮ್ಮೆಲೇ ನಾಯಿ ವಿಚಿತ್ರ ರೀತಿಯಲ್ಲಿ ಕೂಗಿಕೊಂಡಿತು. ಹುಡುಗನಿಗೆ  ಅದರ ಅರ್ಥ ತಿಳಿದಿರಬೇಕು. ಅವನು ತತ್‌ಕ್ಷಣ ಸ್ವಲ್ಪ ಬದಿಗೆ ಸರಿದು ನಿಂತುಕೊಂಡ. ನಾಯಿ ಅಲ್ಲೇ ಮಲವಿಸರ್ಜನೆ ಮಾಡಿತು. ಕೆಲಸ ಮುಗಿದುದೇ ತಡ, ಹುಡುಗ ಬಂದ ಹಾದಿಯಲ್ಲೇ ಹಿಂದಿರುಗಿದ ನಾಯಿ ಅವನ ಜೊತೆಯಲ್ಲೇ ಇತ್ತು.

"ನೋಡು ಪುಟ್ಟೀ, **ಕೆಲವರು ಜಾನುವಾರುಗಳನ್ನು ರಸ್ತೆಯಲ್ಲಿ ತಿರುಗಾಡಲು ಬಿಡುತ್ತಾರೆ. ಇದರಿಂದ ಅವಘಡಗಳು ಸಂಭವಿಸುತ್ತವೆ. ಕೆಲವರು ಮಲ ವಿಸರ್ಜನೆಗಾಗಿ ತಮ್ಮ ನಾಯಿಗಳನ್ನು ರಸ್ತೆಗೆ ತರುತ್ತಾರೆ. ಇನ್ನು ಕೆಲವರು ಮನೆಯ ಕಸವನ್ನು ತೊಟ್ಟಿಗೆ ಹಾಕುವುದಿಲ್ಲ. ಅದರ ಬದಲು ರಸ್ತೆ ಬದಿಯಲ್ಲಿ ಸುರಿಯುತ್ತಾರೆ. ಇದರಿಂದ ರಸ್ತೆ ಹೊಲಸಾಗುತ್ತದೆ. ಪರಿಸರ ಕೆಡುತ್ತದೆ. ದಾರಿ ಹೋಕರಿಗೂ ತೊಂದರೆ ಆಗುತ್ತದೆ.** ಕೆಲವು ಕಿಡಿಗೇಡಿಗಳು ರಸ್ತಗೆ ದೀಪವನ್ನು ಒಡೆದು ಹಾಕುತ್ತಾರೆ.ಇದರಿಂದಾಗಿ ದಾರಿಹೋಕರು ಕತ್ತಲಲ್ಲಿ ಪರದಾಡಬೇಕಾಗುತ್ತದೆ. ಕೆಲವು ಅನಾಹುತಗಳೂ ನಡೆದು ಹೋಗುತ್ತವೆ. ಇವೆಲ್ಲ ನಮ್ಮ ತಪ್ಪು ಕೆಲಸದ ಪರಿಣಾಮಗಳು." ಪುಟ್ಟ ಭಾಷಣವನ್ನೇ ಮಾಡಿದ್ದ ಕಿಟ್ಟ.

"ಹೌದು ಕಿಟ್ಟಣ್ಣಾ, ನಮ್ಮೂರ ಜನರೂ ಇಂಥ ಕೆಲಸ ಮಾಡುತ್ತಾರೆ. ನಮ್ಮ ಹಳ್ಳಿ ಶಾಲೆಯ ಹುಡುಗರಂತೂ ಮಾರ್ಗದ ಬದಿಯೇ ಮೂತ್ರ ಮಾಡುತ್ತಾರೆ. ಉಗುಳುತ್ತಾರೆ. ಚಾಕಲೇಟು ಕಾಗದ, ನೆಲ ಕಡಲೆ ಸಿಪ್ಪೆ, ಪ್ಲಾಸ್ಟಿಕ್ ಚೀಲಗಳನ್ನು ಸಹ ರಸ್ತೆಗೇ ಎಸೆಯುತ್ತಾರೆ" ಪುಟ್ಟಿ ದನಿಗೂಡಿಸಿದಳು.



“ಇಂಥ ಕೆಲಸ ಯಾರೂ ಮಾಡಬಾರದು ಪುಟ್ಟೀ. ಆದರೂ ನಿಮ್ಮದು ಹಳ್ಳಿಯ ಶಾಲೆ, ಮಕ್ಕಳು ಚಿಕ್ಕವರು, ಬುದ್ಧಿಯಿಲ್ಲದವರು. ಅಂಥವರಿಗೆ ಗುರು ಹಿರಿಯರು ಬುದ್ಧಿ ಹೇಳಬೇಕು.” ದಾರಿ ಸಾಗುತ್ತಿದ್ದ ಹಾಗೇ ಕಿಟ್ಟನ ಮಾತು ಸಾಗಿತ್ತು. ಅಷ್ಟರಲ್ಲಿ ಅವರು ಸುರಂಗ ಮಾರ್ಗದ ಎದುರಿಗೆ ಬಂದಿದ್ದರು. ಆಗ ಪುಟ್ಟಿ ಕೇಳಿದಳು,

“ಅಯ್ಯೋ, ಇದೇನು, ನಾವು ನೆಲ ಮಾಳಿಗೆಗೆ ಹೋಗುತ್ತಿದ್ದೇವೆಯೇ?”

“ಇದು ನೆಲ ಮಾಳಿಗೆ ಅಲ್ಲ ಪುಟ್ಟೀ, ನೆಲದಡಿಯ ಮಾರ್ಗ. ಎಂದರೆ ಸುರಂಗ ಮಾರ್ಗ (Sub way). **ರಸ್ತೆಯ ಮೇಲೆ ವಾಹನಗಳ ಓಡಾಟ ಜಾಸ್ತಿ ಇರುವ ಕಡೆ ಸುರಂಗ ಮಾರ್ಗ ನಿರ್ಮಿಸುತ್ತಾರೆ. ಜನಕ್ಕೆ ಸುರಕ್ಷಿತವಾಗಿ ರಸ್ತೆ ದಾಟಲು ಇದು ಸಹಾಯಕ.** ನೋಡುತ್ತಿರು, ಇನ್ನೊಂದು ಕ್ಷಣದಲ್ಲಿ ನಾವು ರಸ್ತೆಯ ಆ ಬದಿಗೆ ತಲುಪುರುತ್ತೇವೆ.

ಪುಟ್ಟಿ – ‘ರಾತ್ರಿ ಸಹ ಜನ ಇದರಲ್ಲೇ ಬರಬೇಕೆ?’

ಕಿಟ್ಟ – ‘ಹೌದು. ಆಗ ಇಲ್ಲಿ ದೀಪ ಉರಿಸುತ್ತಾರೆ. ಸಾಕಷ್ಟು ಬೆಳಕು ಇರುತ್ತದೆ’.

ಪುಟ್ಟಿ – ‘ನಾವು ಆ ಕಡೆಯಿಂದ ಮೆಟ್ಟಲು ಇಳಿದು ಬಂದೆವು. ಈ ಕಡೆಯಲ್ಲಿ ಮೆಟ್ಟಲು ಏರಬೇಕು ಅಲ್ಲವೆ?”

ಕಿಟ್ಟ – ‘ಹೌದು ಪುಟ್ಟೀ, ಎದುರುಗಡೆಯ ಮೆಟ್ಟಲುಗಳನ್ನು ಏರಿದರಾಯಿತು……ಹೂಂ, ಈಗ ನೋಡು. ನಾವು ಎಲ್ಲಿದ್ದೇವೆ, ಹೇಳು.

ಪುಟ್ಟಿ – ‘ರಸ್ತೆ ದಾಟಿ ಈ ಬದಿಗೆ ಬಂದೇ ಬಿಟ್ಟೆವು. ಅದಿರಲಿ, ನಾವೀಗ ಎಲ್ಲಿಗೆ ಹೋಗುತ್ತಿದ್ದೇವೆ?

ಕಿಟ್ಟ – ‘ನಗರದಲ್ಲಿ ಸುತ್ತಾಡುವವರಿಗೆ ರಸ್ತೆ ನಿಯಮಗಳು ತಿಳಿದಿರಬೇಕು. ಅದಕ್ಕಾಗಿಯೇ ನಿನ್ನನ್ನು ಇಂದು ಕರೆ ತಂದುದು. ಅಂತೂ ಇಷ್ಟು ದೂರ ಬಂದಿದ್ದೇವಲ್ಲ? ಇಲ್ಲೆ ಮುಂದುಗಡೆ ನಗರದ ಪುಸ್ತಕ ಭಂಡಾರವಿದೆ. ವಾಚನಾಲಯವೂ ಅಲ್ಲೇ ಇದೆ. ಅವುಗಳನ್ನು ಈಗ ನೋಡೋಣ, ವಾಚನಾಲಯದಲ್ಲಿ ಕೂಡೋಣ, ಸ್ವಲ್ಪ ಹೊತ್ತು ಪತ್ರಿಕೆ ಓದಿ ಮತ್ತೆ ಮನೆಗೆ ಹೋಗೋಣ.’



‘ಸರಿಯಪ್ಪ. ನೀನು ಹೇಳಿದ ಹಾಗೇ ಆಗಲಿ’

ಪುಟ್ಟಿ ಒಪ್ಪಿಗೆ ಸೂಚಿಸಿದಳು. ಅವರು ಅಡ್ಡ ರಸ್ತೆಗೆ ತಿರುಗಿದರು.

ಕಿಟ್ಟ ಮತ್ತು ಪುಟ್ಟಿ ಸುಮಾರು ಅರ್ಧ ಕಿಲೋಮೀಟರ್ ದೂರ ನಡೆದಿರಬೇಕು. ಅಷ್ಟರಲ್ಲಿ ಅವರಿಗೆ ಏಳೆಂಟು ಮಂದಿ ಮಕ್ಕಳು ಕಾಣಸಿಕ್ಕಿದರು. ರಸ್ತೆಯಲ್ಲಿ ಗುಂಪಾಗಿ ಅವರು ನಡೆದು ಬರುತ್ತಿದ್ದರು. ಗಟ್ಟಿಯಾಗಿ ಅವರು ಮಾತಾಡಿಕೊಳ್ಳುತ್ತಿದ್ದರು. ಕೆಲವರು ಪುಸ್ತಕ ಓದುತ್ತ ನಡೆಯುತ್ತಿದ್ದರು. ಓಡಾಡುತ್ತಿದ್ದ ವಾಹನಗಳ ಕಡೆಗೂ ಅವರ ಲಕ್ಷ್ಯವಿರಲಿಲ್ಲ. ಆ ಮಕ್ಕಳನ್ನು ತೋರಿಸುತ್ತ ಕಿಟ್ಟ ಹೇಳಿದ,

**“ನೋಡು ಪುಟ್ಟೀ, ರಸ್ತೆಯಲ್ಲಿ ಗುಂಪಾಗಿ ನಡೆಯಬಾರದು, ಮಾತಾಡುತ್ತ ನಿಲ್ಲಬಾರದು. ಹಾಗೆಯೆ ಓದುವುದು, ಆಡುವುದು, ಎದುರು ರಸ್ತೆ ಕಾಣದಂತೆ ಛತ್ರಿ ಹಿಡಿದು ನಡೆಯುವುದು – ಇವೆಲ್ಲ ತುಂಬ ಅಪಾಯಕಾರಿ. ಕೆಲವರು ರಸ್ತೆಯ ಮೇಲೆ ಬಾಳೆಹಣ್ಣಿನ ಸಿಪ್ಪೆ ಇತ್ಯಾದಿಗಳನ್ನೂ ಎಸೆಯುತ್ತಾರೆ. ಅವುಗಳ ಮೇಲೆ ಕಾಲಿಟ್ಟವರು ಜಾರಿ ಬೀಳುತ್ತಾರೆ, ಸೊಂಟ ಮುರಿದುಕೊಳ್ಳುತ್ತಾರೆ. ಇಂಥ ಕೆಲಸ ನಾವೆಂದೂ ಮಾಡಬಾರದು.”**

ಪುಟ್ಟಿ – ‘ಇದೆಲ್ಲ ಈ ಮಕ್ಕಳಿಗೆ ಗೊತ್ತಿಲ್ಲವೆ ಕಿಟ್ಟಣ್ಣಾ? ಇವರೆಲ್ಲ ನಗರದವರೇ ಅಲ್ಲವೆ?’

ಕಿಟ್ಟ – ‘ನಗರದವರೇ ಇರಲಿ, ಹಳ್ಳಿಯವರೇ ಇರಲಿ, ಕೆಲವರು ಗೊತ್ತಿದ್ದು ತಪ್ಪು ಮಾಡುತ್ತಾರೆ. ಕೆಲವರು ಗೊತ್ತಿಲ್ಲದೆ ತಪ್ಪು ಮಾಡುತ್ತಾರೆ.’

ಪುಟ್ಟಿ –‘ಈಗ ಶಾಲೆಗೆ ರಜೆ ಇದೆ ತಾನೇ? ಇವರು ಇಷ್ಟು ಮಂದಿ ಎಲ್ಲಿಗೆ ಹೋದವರು?’

ಕಿಟ್ಟ – ‘ಇವರೆಲ್ಲ ವಾಚನಾಲಯಕ್ಕೆ ಹೋಗಿರಬೇಕು. ಈಗ ಅಲ್ಲಿಂದ ಬರುತ್ತಿದ್ದಾರೆ.’

ಪುಟ್ಟಿ – ‘ವಾಚನಾಲಯ ಎಲ್ಲಿದೆ? ಇನ್ನೆಷ್ಟು ದೂರದಲ್ಲಿದೆ?’

ಕಿಟ್ಟ – ‘ಏನು ಪುಟ್ಟೀ, ನಡೆದು ನಡೆದು ಸೋತು ಹೋಯಿತೆ ನಿನಗೆ?’

ಪುಟ್ಟಿ – ‘ಇಲ್ಲ, ಇಲ್ಲ. ಹಾಗೇನೂ ಸೋತು ಹೋಗಲಿಲ್ಲ. ಸುಮ್ಮನೆ ಕೇಳಿದೆ ಅಷ್ಟೆ.’



ಕಿಟ್ಟ - 'ಇನ್ನು ಸ್ವಲ್ಪ ಮುಂದೆ ಹೋದರಾಯಿತು. ಅಲ್ಲಿ ನೋಡು, ಎಡಗಡೆ ದೊಡ್ಡ ಕಟ್ಟಡ ಕಾಣಿಸುತ್ತಿದೆಯಲ್ಲ? ಅದೇ ಗ್ರಂಥಾಲಯ ಕಟ್ಟಡ. ವಾಚನಾಲಯವೂ ಅದರಲ್ಲೇ ಇದೆ.

ಅವರು ಹಲವು ಹೆಜ್ಜೆ ಮುಂದೆ ನಡೆದರು. ಆಗಲೇ **"ನಗರದ ಗ್ರಂಥಾಲಯ ಮತ್ತು ವಾಚನಾಲಯ"** ಎಂಬ ಹಲಗೆ ಅವರಿಗೆ ಕಾಣಿಸಿತು. ದೊಡ್ಡ ಕಟ್ಟಡ ಅದು. ಅವರು ಒಳಗೆ ಹೋದರು. ಪುಸ್ತಕ ತುಂಬಿದ ಹಲವಾರು ಬೀರುಗಳು ಅಲ್ಲಿದ್ದವು. ಎದುರುಗಡೆ ಸಾಲಾಗಿ ಮೇಜು-ಕುರ್ಚಿಗಳನ್ನು ಇರಿಸಿದ್ದರು. ಮೇಜುಗಳ ಮೇಲೆ ಬಗೆ ಬಗೆಯ ಪತ್ರಿಕೆಗಳು ಹರಡಿದ್ದವು. ನೂರಾರು ಮಂದಿ ಹಿರಿಯರೂ ಮಕ್ಕಳೂ ಅಲ್ಲಿದ್ದರು. ಕೆಲವರು ಪತ್ರಿಕೆ ನೋಡುತ್ತಿದ್ದರು. ಇನ್ನು ಕೆಲವರು ಪುಸ್ತಕ ಓದುತ್ತಿದ್ದರು. ಅವರ ಜೊತೆ ಈ ಮಕ್ಕಳೂ ಸೇರಿಕೊಂಡರು. ಕಿಟ್ಟ, ಅಂದಿನ ದಿನಪತ್ರಿಕೆ ಓದಿದ. ಪುಟ್ಟಿ, ಚಂದಮಾಮ ಕೈಗೆತ್ತಿಕೊಂಡಳು. ತಾಸು ಹೊತ್ತು ಅವರು ಅಲ್ಲಿದ್ದರು.

"ಇನ್ನು ಹೊರಡೋಣ ಪುಟ್ಟೀ. ಊಟದ ಹೊತ್ತಿಗೆ ನಾವು ಮನೆ ಸೇರಬೇಕು. ಇಂದು ಸಂಜೆ ನಾವು ಪಾರ್ಕಿಗೆ ಹೋಗೋಣ' ಕಿಟ್ಟ ಹೇಳಿದ. ಇಬ್ಬರೂ ಅಲ್ಲಿಂದ ಹೊರಟರು. ಅಡ್ಡ ರಸ್ತೆಯಲ್ಲಿ ನಡೆದು, ಅವರು ಮುಖ್ಯ ಬೀದಿಗೆ ಬಂದರು. ಆಗ ಕಿಟ್ಟ ಇನ್ನೊಂದು ಕಡೆಗೆ ತಿರುಗಿದ. ಅದು ತಾವು ಬಂದ ದಾರಿಯಲ್ಲ ಎನಿಸಿತು ಪುಟ್ಟಿಗೆ. ಅವಳು ಕೇಳಿದಳು.

"ಇದೇನು, ಹಿಂದೆ ಹೋಗುವ ಬದಲು ನಾವು ಮುಂದೆ ಹೋಗುತ್ತೀದ್ದೇವಲ್ಲ?"

ಕಿಟ್ಟ - "ಹೌದು ಪುಟ್ಟೀ. ಈಗ ಬೇರೆ ದಾರಿಯಿಂದ ಮನೆಗೆ ಹೋಗೋಣ. ನಿನಗೆ ನಡೆದು ನಡೆದು ಸೋತು ಹೋಗಿದೆಯಲ್ಲ? ಅದಕ್ಕಾಗಿ ಬಸ್ ಹಿಡಿದು ಮನೆ ಸೇರೋಣ.

ಪುಟ್ಟಿ - "ಹಾಗೇ ಆಗಲಿ. ಬಸ್ ನಿಲ್ದಾಣ ಎಲ್ಲಿದೆ ಹೇಳು".

ಕಿಟ್ಟ - "ಸ್ವಲ್ಪ ದೂರದಲ್ಲಿದೆ. ಅಲ್ಲಿಗೆ ಹೋಗಲು ಇನ್ನೊಮ್ಮೆ ರಸ್ತೆ ದಾಟಬೇಕು".



ಪುಟ್ಟಿ –"ಎಂದರೆ ಮತ್ತಗೆ ಸುರಂಗ ಮಾರ್ಗದಲ್ಲಿ ಹೋಗಬೇಕೆ?"

ಕಿಟ್ಟ – "ಇಲ್ಲ. ಈಗ ಮೇಲ್ ಸೇತುವೆಯಲ್ಲಿ ಹೋದರಾಯಿತು".

ಪುಟ್ಟಿ – "ಮೇಲ್ ಸೇತುವೆ! ಎಂದರೆ?"

ಕಿಟ್ಟ – "ಅಲ್ಲಿ ನೋಡು. ಮುಂದುಗಡೆ ರಸ್ತೆಯ ಮೇಲೆ ಸೇತುವೆ ಕಾಣಿಸುವುದಿಲ್ಲವೆ?"

ಪುಟ್ಟಿ – "ಹಾಂ, ಹೌದು. ನಮ್ಮೂರಲ್ಲಿ ಹೊಳೆಯ ಮೇಲುಗಡೆ ಸೇತುವೆ ಇದೆ. ಅಲ್ಲಿ ರಸ್ತೆಯ ಮೇಲಿದೆ".

ಕಿಟ್ಟ – "ಹೌದು
ಪುಟ್ಟೀ. **ನಗರದಲ್ಲಿ ವಾಹನಗಳ ಓಡಾಟ ಬಹಳ ಹೆಚ್ಚು ಇರುವಲ್ಲಿ ಮೇಲ್ ಸೇತುವೆ ನಿರ್ಮಿಸುತ್ತಾರೆ; ಇಲ್ಲವೆ ಸುರಂಗ ಮಾರ್ಗ ರಚಿಸು ತ್ತಾರೆ.** ಬಾ, ಈಗ ನಾವು ಮೇಲ್ ಸೇತುವೆ ಮೂಲಕ ರಸ್ತೆ ದಾಟೋಣ".

ಇಬ್ಬರೂ ಎದುರುಗಡೆ ಇದ್ದ ಮೆಟ್ಟಲುಗಳನ್ನು ಏರಿದರು; ಸೇತುವೆ ದಾಟಿದರು. ಮತ್ತೆ ಆ ಕಡೆಗೆ ಇಳಿದರು. ಅವರು ಈಗ ದೊಡ್ಡ ರಸ್ತೆಯ ಇನ್ನೊಂದು ಬದಿಗೆ ಬಂದಿದ್ದರು. ಅಲ್ಲಿಂದ ಅವರು ಬಸ್ ನಿಲ್ದಾಣಕ್ಕೆ ಹೋಗಬೇಕಿತ್ತು. ಸುಮರು ನೂರು ಮೀಟರ್ ಗಳಷ್ಟು ದೂರ ಅವರು ನಡೆದರು. ಅಲ್ಲಿ ಅವರು ಬಲಗಡೆಗೆ ತಿರುಗಿದರು. ಕಿಟ್ಟ ಹೇಳಿದ, "ನಮ್ಮ ಮನೆ ಕಡೆಗೆ ಹೋಗುವ ಬಸ್ಸುಗಳು ಇಲ್ಲಿ ನಿಲ್ಲುವುದಿಲ್ಲ. ಅದಕ್ಕಾಗಿ ನಾವು ಈ ಅಡ್ಡರಸ್ತೆಗೆ ತಿರುಗಬೇಕಾಯಿತು. ಈಗ ನಾವು ಹತ್ತು ಹೆಜ್ಜೆ ಮುಂದೆ ನಡೆದು, ಇನ್ನೊಮ್ಮೆ ರಸ್ತೆ ದಾಟಬೇಕು."

ಅವರು ಮುಂದೆ ನಡೆದರು. ಅಲ್ಲಿ ಅವರು ರಸ್ತೆ ದಾಟಬೇಕಿತ್ತು. ಆದರೆ ಅಲ್ಲಿ ಸುರಂಗ ಮಾರ್ಗವಿರಲಿಲ್ಲ, ಮೇಲ್ ಸೇತುವೆಯೂ ಇರಲಿಲ್ಲ. ಹಾಗೆಂದು ಕಪ್ಪು-ಬಿಳಿ ಪಟ್ಟಿಗಳೂ ಅಲ್ಲಿ ಕಾಣಿಸಲಿಲ್ಲ. ಆದರೆ ವಾಹನಗಳು ಮಾತ್ರ ಅತ್ತಿತ್ತ ಓಡಾಡುತ್ತಲೇ ಇದ್ದವು. ಇಂಥ ಕಡೆ ರಸ್ತೆ ದಾಟುವ ಕ್ರಮ ಹೇಗೆ? ಅದನ್ನು ತಿಳಿಯುವ ಕುತೂಹಲ ಪುಟ್ಟಿಗೆ. ಆದರೆ ಅವಳು ಪ್ರಶ್ನೆ ಕೇಳಲಿಲ್ಲ. ಕಿಟ್ಟಣ್ಣ ತನ್ನನ್ನು ಹೇಗೆ ರಸ್ತೆ ದಾಟಿಸುತ್ತಾನೆ. ನೋಡೋಣ ಎಂದು ಕೊಂಡಳು ಅವಳು. ಅಲ್ಲಿ ಕಿಟ್ಟ ಏನು ಮಾಡಿದ?

ಅವನು ಪುಟ್ಟಿಯ ಕೈ ಹಿಡಿದುಕೊಂಡ. ರಸ್ತೆಯ ಅಂಚಿನಲ್ಲಿ ನಿಂತು, ಮೊದಲು ಬಲಕ್ಕೆ ನೋಡಿದ. ಮತ್ತೆ ಎಡಕ್ಕೆ ನೋಡಿದ. ಪುನಃ ಬಲ್ಕೆ ನೋಡಿದ. ಹತ್ತಿರದಲ್ಲಿ ವಾಹನಗಳು ಕಾಣಿಸಲಿಲ್ಲ. ಅವನು ಸರಸರನೆ ರಸ್ತೆ ದಾಟಿದ. ಪುಟ್ಟಿಯೂ ಜೊತೆಯಲ್ಲೆ ಇದ್ದಳು ತಾನೇ?

**"ಕಿಟ್ಟಣ್ಣಾ, ಕಪ್ಪು–ಬಿಳುಪು ಪಟ್ಟಿ, ಸುರಂಗ ಮಾರ್ಗ, ಮೇಲ್ ಸೇತುವೆ ಇವು ಇಲ್ಲದ ಕಡೆ ರಸ್ತೆ ದಾಟುವುದು ಹೇಗೆ?** ನಾನು ಹೇಳಬೇಕೇ?" ನಗುತ್ತ ಕೇಳಿದಳು ಪುಟ್ಟಿ.

ಕಿಟ್ಟ – "ಹೂಂ, ಹೇಳು ನೋಡೋಣ.

ಪುಟ್ಟಿ – **"ರಸ್ತೆ ಬದಿಯಲ್ಲಿ ನಿಂತು, ಮೊದಲು ಬಲಕ್ಕೆ ನೋಡಬೇಕು. ಮತ್ತೆ ಎಡಕ್ಕೆ ನೋಡಬೇಕು. ಪುನಃ ಬಲ್ಕೆ ನೋಡಬೇಕು. ವಾಹನಗಳು ಹತ್ತಿರದಲ್ಲಿ ಇಲ್ಲ ಎನ್ನುವುದನ್ನು ಖಾತರಿ ಪಡಿಸಿಕೊಂಡು, ರಸ್ತೆ ದಾಟಬೇಕು.** ಸರಿ ತಾನೆ?"

ಕಿಟ್ಟ – "ಓಹ್! ಜಾಣೆ ಪುಟ್ಟಿ ನೀನು. ವಿಷಯವನ್ನು ಚೆನ್ನಾಗಿ ತಿಳಿದು ಕೊಂಡಿದ್ದಿ"

ಪುಟ್ಟಿ – "ಆದರೆ ಒಂದು ಸಂದೇಹವಿದೆ, ಕಿಟ್ಟಣ್ಣ"

ಕಿಟ್ಟ – "ಏನದು ಸಂದೇಹ? ಕೇಳಿ ಬಿಡು".

ಪುಟ್ಟಿ – "ರಸ್ತೆ ದಾಟುವವರು ಮೊದಲು ಬಲಕ್ಕೇ ಏಕೆ ನೋಡಬೇಕು?

ಕಿಟ್ಟ – "ರಸ್ತೆ ದಾಟುವವರ ಬಲಗಡೆಯಿಂಧ ಬರುವ ವಾಹನಗಳು ಅವರು ನಿಂತಿರುವ ಬದಿಯಲ್ಲೇ ಧಾವಿಸಿ ಬರುತ್ತವೆ. ಅವರ ತೀರ ಹತ್ತಿರದಿಂದಲೇ ಅವು ಚಲಿಸುತ್ತವೆ. ಹಾಗಾಗಿ ಮೊದಲು ಆ ಕಡೆ ಗಮನಿಸಬೇಕು".

ಪುಟ್ಟಿ – ರಸ್ತೆ ದಾಟುವವರ ಎಡಗಡೆಯಿಂದ ಬರುವ ವಾಹನಗಳು ರಸ್ತೆಯ ಇನ್ನೊಂದು ಪಕ್ಕದಲ್ಲೆ ಓಡಾಡುತ್ತವೆ. ಸರಿ ತಾನೇ?".

ಕಿಟ್ಟ – 'ಹೌದು ಪುಟ್ಟೀ, ಸರಿಯಾಗಿ ಹೇಳಿದೆ'.

ಪುಟ್ಟಿ – 'ನೀನು ರಸ್ತೆ ದಾಟುವ ಮೊದಲು ಎರಡನೆಯ ಬಾರಿ ಬಲಕ್ಕೆ ನೋಡಿದೆ. ಅದೇಕೆ, ಹೇಳು.


ಕಿಟ್ಟ – 'ಅದಕ್ಕೆ ಕಾರಣವಿದೆ, ಪುಟ್ಟೀ. ಒಮ್ಮೆ ಬಲಕ್ಕೆ, ಒಮ್ಮೆ ಎಡಕ್ಕೆ ನೋಡಿ ನಾನು ಹೆಜ್ಜೆ ತೆಗೆಯುವಷ್ಟರಲ್ಲಿ ಬಲಗಡೆಯಿಂದ ಇನ್ನೊಂದು ವಾಹನ ಕಾಣಿಸಿಕೊಳ್ಳಬಹುದಲ್ಲ? ನಾನು ನಾಲ್ಕು ಹೆಜ್ಜೆ ತೆಗೆವಷ್ಟರಲ್ಲಿ ವಾಹನ ತೀರ ಸಮೀಪಕ್ಕೆ ಬಂದು ಬಿಡಬಹುದಲ್ಲ? ಅದು ಅಪಾಯ ತಾನೇ? ಅದಕ್ಕಾಗಿ ಮತ್ತೊಮ್ಮೆ ಬಲಬದಿಗೆ ನೋಡಿಕೊಳ್ಳಬೇಕು. ವಾಹನಗಳು ತೀರ ಹತ್ತಿರದಲ್ಲಿ ಇಲ್ಲ ಎನ್ನುವುದನ್ನು ಖಾತರಿಪಡಿಸಿಕೊಳ್ಳಬೇಕು'.

ಪುಟ್ಟಿ – 'ರಸ್ತೆ ದಾಟುವಾಗ ಇಷ್ಟು ವಿಷಯಗಳನ್ನು ನೆನಪಿಡಬೇಕು. ಅಲ್ಲವೆ?'

ಕಿಟ್ಟ – 'ಇಷ್ಟೇ ಅಲ್ಲ ಪುಟ್ಟೀ. ವಿಷಯ ಇನ್ನೂ ಇದೆ'.

ಪುಟ್ಟಿ – 'ಇನ್ನೂ ಇದೆ? ಏನದು?'

ಕಿಟ್ಟ – **ಏನನ್ನೋ ಯೋಚಿಸಿಕೊಂಡು ರಸ್ತೆ ದಾಟಬಾರದು, ಓಡುತ್ತ ಹೋಗಬಾರದು, ಅರ್ಧರಸ್ತೆಗೆ ಬಂದು, ಥಟ್ಟನೆ ಹಿಂದಿರುಗಬಾರದು. ಹಾಗೆ ಮಾಡುವುದು ಅಪಾಯಕಾರಿ. ತಿರುವುಗಳಲ್ಲಿ ರಸ್ತೆ ದಾಟುವಾಗಲೂ ಇಂಥ ಎಚ್ಚರಿಕೆ ಅಗತ್ಯ'**



ಕಿಟ್ಟ ಹೇಳುತ್ತಲೇ ಇದ್ದ. ಪುಟ್ಟಿ ಕೇಳುತ್ತಲೇ ಇದ್ದಳು. ಸಂದೇಹ ಬಂದಾಗ ಅವಳು ಪ್ರಶ್ನೆಗಳನ್ನೂ ಹಾಕುತ್ತಿದ್ದಳು. ಈಗ ಅವರು ಮತ್ತೊಮ್ಮೆ ರಸ್ತೆ ದಾಟಿ ಬಂದಿದ್ದರು. ಎದುರುಗಡೆ ಬಸ್ ನಿಲ್ದಾಣ ಕಾಣಿಸುತ್ತಿತ್ತು. ಮೂರು ಬಸ್ಸುಗಳು ಅಲ್ಲಿ ಸಾಲಾಗಿ ನಿಂತಿದ್ದವು. ಕಿಟ್ಟನ ಮನೆ ಕಡೆಗೆ ಹೋಗುವ ಬಸ್ಸು ಮಧ್ಯದಲ್ಲಿತ್ತು.

ಅದನ್ನು ಕಾಣುತ್ತಲೆ, "ನೋಡು ಪುಟ್ಟೀ, ನಮ್ಮ ಬಸ್
ನಡುವಿನಲ್ಲಿದೆ. **ಆದರೆ ವಾಹನಗಳ ಮಧ್ಯದಿಂದ ನಾವು ನುಸುಳಬಾರದು, ವಾಹನಗಳ ಹಿಂದುಗಡೆ ಮೈಮರೆತು ನಿಲ್ಲಬಾರದು.** ಬಾ ನಮ್ಮ ಬಸ್ಸಿನ ಬಳಿಗೆ ಹೋಗೋಣ" ಕಿಟ್ಟ ಹೇಳಿದ. ಆಗಲೆ ಪುಟ್ಟಿ ಮಧ್ಯೆ ಬಾಯಿ ಹಾಕಿದಳು-

'ಕಿಟ್ಟಣ್ಣಾ, ವಾಹನಗಳ ಮಧ್ಯದಿಂದ ನಾವು ನುಸುಳಬಾರದು . ಅದು ಅಪಾಯಕಾರಿ ಎಂದೆ ನೀನು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಚಲಿಸದೆ ನಿಂತಿರುವ ವಾಹನಗಳ ಹಿಂದೆ ನಾವೇಕೆ ನಿಲ್ಲಬಾರದು? ಅದರಿಂದ ನಮಗೇನು ತೊಂದರೆ?' ಅವಳು ಕೇಳಿದಳು.

"ತೊಂದರೆ ಇದೆ ಪುಟ್ಟೀ. ನಿಲ್ಲಿಸಿದ ವಾಹನ ಚಲಿಸುವಾಗ, ಒಮ್ಮೆ ಸ್ವಲ್ಪ ಹಿಂದಕ್ಕೆ ಸರಿದು, ಮತ್ತೆ ಮುಂದೋಡುತ್ತದೆ. ನಿನಗಿದು ಗೊತ್ತಿದೆಯೆ?" ಕಿಟ್ಟ ಅವಳನ್ನೆ ಪ್ರಶ್ನಿಸಿದ.

"ಗೊತ್ತಿಲ್ಲ ಕಿಟ್ಟಣ್ಣಾ." ಅವಳು ಒಪ್ಪಿಕೊಂಡಳು.

"ವಾಹನ ಹಿಂದೆ ಸರಿದಾಗ, ಅಲ್ಲಿ ಮೈಮರೆತು ನಿಂತವರು ಅಡಿಗೆ ಬಿದ್ದು ಬಿಟ್ಟಾರು. ಅನಾಹುತ ನಡೆದು ಹೋದೀತು. ವಾಹನ ದ ಎದುರು ನಿಂತರೂ ಇದೇ ಗತಿ. ಆದ ಕಾರಣವೇ ಹಾಗೆ ನಿಲ್ಲಬಾರದು ಎನ್ನುವುದು. ಈಗ ಅರ್ಥವಾಯಿತಷ್ಟೇ?" ಎನ್ನುತ್ತ ಕಿಟ್ಟ ಅವಳ ಮುಖ ನೋಡಿದ.

'ಆಯಿತು' ಎನ್ನುವಂತೆ ಅವಳು ತಲೆಯಾಡಿಸಿದಳು.

ಅವರು ಈಗ ತಮ್ಮ ಬಸ್ಸಿನ ಬಳಿಗೆ ಬಂದು ಬಿಟ್ಟಿದ್ದರು. ಅಲ್ಲಿ ಜನ ಬಸ್ ಹತ್ತಲು ಪೈಪೋಟಿ ನಡೆಸಿದ್ದರು. ಕಿಟ್ಟ ಪುಟ್ಟಿ ನುಗ್ಗಾಟಕ್ಕೆ ಹೋಗಲಿಲ್ಲ. "ಬಾ ಪುಟ್ಟೀ, **ನಾವು ಸರತಿಯ ಸಾಲಲ್ಲಿ (ಕ್ಯೂನಲ್ಲಿ) ನಿಂತೇ ಬಸ್ ಹತ್ತಬೇಕು"** ಎಂದು ಹೇಳಿ, ಕಿಟ್ಟ ಕ್ಯೂ ಸೇರಿಕೊಂಡ. ಪುಟ್ಟಿಯೂ ಅವನನ್ನು ಅನುಸರಿಸಿದಳು. ಅಂತೂ ಅವರು ಬಸ್ ಹತ್ತಿದರು. ಬಸ್ ಆಗಲೆ ಭರ್ತಿಯಾಗಿತ್ತು. ಪುಟ್ಟಿಗೆ ಮಾತ್ರ ಅಲ್ಲಿ ಕೂತುಕೊಳ್ಳಲು ಜಾಗ ಸಿಕ್ಕಿತು. ಕಿಟ್ಟ ಅವಳ ಪಕ್ಕದಲ್ಲೇ ನಿಂತುಕೊಂಡನು. ಬಸ್ ಮುಂದೆ ಓಡಿತು. ಮುಂದಿನ ನಿಲ್ದಾಣದಲ್ಲಿ ಇನ್ನಷ್ಟು ಜನ ಬಸ್ ಹತ್ತಿದರು. ಅವರಲ್ಲಿ ಒಬ್ಬ ಮುದುಕನೂ ಇದ್ದನು. ಕಿಟ್ಟನ ಬಳಿಯಲ್ಲೇ ಅವನು ನಿಂತುಕೊಂಡನು. ಅವನಿಗೆ ನಿಲ್ಲಲು ಕಷ್ಟವಾಗುತ್ತಿತ್ತು. ಪುಟ್ಟಿ ಅವನನ್ನು ನೋಡಿದಳು. ಒಡನೆ "ಅಜ್ಜಾ ನೀವು ಇಲ್ಲಿ ಕೂತುಕೊಳ್ಳಿರಿ. ನಾನು ನಿಂತಿರುತ್ತೇನೆ." ಎನ್ನುತ್ತ ಅವಳು ಎದ್ದು ನಿಂತಳು. ಅಜ್ಜ ಅಲ್ಲಿ ಕೂತುಕೊಂಡನು. ಅವನಿಗೆ ತುಂಬ ಸಂತೋಷವಾಗಿತ್ತು.

“ಉಪಕಾರವಾಯಿತು ಮಗೂ. ದೇವರು ನಿನ್ನನ್ನು ಕಾಪಾಡಲಿ” ಅವನ ಪುಟ್ಟಿಯನ್ನು ಹರಸಿದನು.

“ಒಳ್ಳೆಯ ಕೆಲಸ ಮಾಡಿದೆ. ಪುಟ್ಟೀ. **ಬಸ್ಸಿನಲ್ಲಿ ನಾವು ಮಕ್ಕಳಿಗೆ, ಮುದುಕರಿಗೆ, ಅಶಕ್ತರಿಗೆ ಪುಟ್ಟ ಮಕ್ಕಳ ತಾಯಂದಿರಿಗೆ ಸ್ಥಳಾವಕಾಶ ಮಾಡಿಕೊಡಬೇಕು.** ಅದು ನಮ್ಮ ಕರ್ತವ್ಯ. ನಾನು ಹೇಳುವ ಮೊದಲೇ ಅದನ್ನು ನೀನು ಮಾಡಿ ಬಿಟ್ಟೆ.” ಕಿಟ್ಟ ಮೆಚ್ಚುಗೆ ಸೂಚಿಸಿದ. ಅರ್ಧ ತಾಸಿನ ಪ್ರಯಾಣ ಸಾಗಿತು. ಅವರು ಇಳಿಯ ಬೇಕಾದ ನಿಲ್ದಾಣ ಬಂದಿತು.

“ಪುಟ್ಟೀ, ಇಲ್ಲಿ ನಾವು ಇಳಿಯಬೇಕು. ಆದರೆ ಗಡಿಬಿಡಿ ಬೇಡ. ಬಸ್ ನಿಲ್ಲಲಿ. **ಚಲಿಸುತ್ತಿರುವಾಗ ಬಸ್ ಹತ್ತುವುದು ಅಥವಾ ಇಳಿಯುವುದು ಅಪಾಯಕಾರಿ.”** ಕಿಟ್ಟ ಎಚ್ಚರಿಕೆ ನೀಡಿದ. ಬಸ್ ನಿಂತಿತು. ಹೆಚ್ಚು ಗಡಿಬಿಡಿಯವರು ಇಳಿಯಲು ಅವಸರಿಸಿದರು. ಕಿಟ್ಟ ಮತ್ತು ಪುಟ್ಟಿ ಸರಿದು ನಿಂತು, ಅವರಿಗೆ ದಾರಿ ಬಿಟ್ಟರು. ಅವರು ಇಳಿದು ಹೋದ ಬಳಿಕ ಇವರು ಕೆಳಗಿಳಿದರು. **“ಬಸ್ಸ್ ನಿಂದ ಇಳಿದೊಡನೆ ಅವಸರದಲ್ಲಿ ರಸ್ತೆ ದಾಟಬಾರದುಪುಟ್ಟೀ. ಎಚ್ಚರಿಕೆಯಿಂದ ಎಡಗಡೆ ಬಲಗಡೆ ನೋಡಿಕೊಂಡು, ರಸ್ತೆ ದಾಟಬೇಕು.** ಕಿಟ್ಟ ಕಿವಿಮಾತು ಹೇಳಿದ.” ನಿಧಾನವಾಗಿ ಅವರು ಮನೆಯ ಕಡೆ ನಡೆಯತೊಡಗಿದರು.

“ಅಂತೂ ಅರ್ಧ ದಿನ ಕಳೆದು ಹೋಯಿತು. ಒಂದು ಹೊತ್ತು ನಗರ ಸುತ್ತಿದಂತಾಯಿತು. ಅಲ್ಲವೇ ಪುಟ್ಟಿ?” ಕಿಟ್ಟ ಪ್ರಶ್ನಿಸಿದ. “ಹೌದು ಕಿಟ್ಟಣ್ಣಾ. ಈ ಹೊತ್ತು ನಾವು ನೋಡಿದ್ದು ಪುಸ್ತಕ ಭಂಡಾರ ಮತ್ತು ವಾಚನಾಲಯ ಮಾತ್ರ. ಆದರೆ ನನಗದು ಅಷ್ಟು ಮುಖ್ಯ ವಿಷಯ ಎನಿಸಲಿಲ್ಲ.” ಪುಟ್ಟಿ ಹೇಳಿದಳು.

“ಮತ್ತೆ?” ಆಶ್ಚರ್ಯದಿಂದ ಅವಳ ಮುಖ ನೋಡಿದ ಕಿಟ್ಟ.

ಪುಟ್ಟಿ ಹೇಳಿದಳು -” ಈ ಹೊತ್ತಿನ ಬಲು ದೊಡ್ಡ ಸಾಧನೆ ಯಾವುದು ಗೊತ್ತೇ? ಮುಖ್ಯವಾದ ರಸ್ತೆ ನಿಯಮಗಳ ಪರಿಚಯ ಮಾಡಿಕೊಂಡುದು. ಹಾಗೂ ರಸ್ತೆ ನೈರ್ಮಲ್ಯದ ಬಗ್ಗೆ, ಸುರಕ್ಷತೆಯ ಬಗ್ಗೆ ತಿಳಿದುಕೊಂಡುದು. ಇದು ಸ್ವತಹ ರಸ್ತೆಯಲ್ಲಿ ತಿರುಗಾಡಿ ಗಳಿಸಿದ ಅನುಭವ, ಕೆಲಸದ ಮೂಲಕ ಪಡೆದ ತಿಳಿವಳಿಕೆ. ಇನ್ನೆಂದೂ ಮರೆತು ಹೋಗದು”. ಅವಳ ಮಾತಿನಲ್ಲಿ ತೃಪ್ತಿಯಿತ್ತು. ಖುಷಿ ಇತ್ತು. “ಅದು ನಿಜ ಪುಟ್ಟೀ”. ಎನ್ನುತ್ತ ಕಿಟ್ಟನೂ ತಲೆದೂಗಿದ. ಆಗಲೇ ಅವರು ಮನೆ ಬಾಗಿಲಿಗೆ ಬಂದಿದ್ದರು.

“ಬನ್ನಿ ಮಕ್ಕಳೇ, ಬನ್ನಿ. ಆಗದಿಂದ ನಿಮಗಾಗಿ ಕಾಯುತ್ತಿದ್ದೇನೆ.” ಅವರನ್ನು ಬರಮಾಡಿಕೊಂಡರು, ಕಿಟ್ಟನ ಅಮ್ಮ.